# !!ಹರೇ ಶ್ರೀನಿವಾಸ!!



::: ಹರೇ ಶ್ರೀನಿವಾಸ :::

**ಶ್ರೀ ಗುರುಭ್ಯೋ ನಮಃ ಪರಮ ಗುರುಭ್ಯೋ ನಮಃ**

**ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ಗುರುಭ್ಯೋ ನಮಃ ||**

ಸಮಚರಣ ಸರೋಜಂ ಸಾಂದ್ರ । ನೀಲಾಂಬುದಾಭಂ ।
ಜಘನ ನಿಹಿತಪಾಣಿಂ ಮಂಡನಂ ಮಂಡನಾನಾಂ ॥
ತರುಣ ತುಲಸಿ ಮಾಲಾ ಕಂಧರಂ ಕಂಜನೇತ್ರಂ ।
ಸದಯ ಧವಲಹಾಸಂ ವಿಠ್ಠಲಂ ಚಿಂತಯಾಮಿ ॥

ಶ್ರೀ ಮದಾಚಾರ್ಯರ ಮತಾನುಗ ಧೀಮತಾಂ ವರರಂಘ್ರಿ ಕಮಲಕೆ ।
ಸೋಮಪಾನಾ ಹರಿಗೆ ತಾತ್ವಿಕ ದೇವತಾಗಣಕೆ ॥
ಹೈಮವತಿ ಶಣ್ಮಹಿಸಿಯರ ಪದ । ವ್ಯೋಮಕೇಶಗೆ ವಾಣಿ ವಾಯು।
ಸುತಾಮರಸ ಭವ ಲಕ್ಷ್ಮೀಽಽ ನಾರಾಯಣರಿಗೆ ಆನಮಿಪೆಽಽ॥

ಶ್ರೀಮತ್ ಸೌಭಾಗ್ಯಜನನೀಂ ಸ್ತೌಮಿ ಲಕ್ಷ್ಮೀಂ ಸನಾತನೀಂ ।
ಸರ್ವ ಕಾಮ ಫಲಾವಾಪ್ತೈ ಸಾಧನೈಕ ಸುಖಾವಹಂ ॥

ಪ್ರಥಮೋ ಹನುಮಾನ್ನಾಮ ದ್ವಿತೀಯೋ ಭೀಮ ಏವ ಚ ।
ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ ॥

ಮಿಥ್ಯಾಸಿದ್ಧಾಂತ ದುರ್ಧ್ವಾಂತ ವಿಧ್ವಂಸನ ವಿಚಕ್ಷಣಃ ।
ಜಯತೀರ್ಥಾಖ್ಯ ತರಣೀರ್ಭಾಸತಾಂ ನೋ ಹೃದಂಬರೇ ॥
ಪೂಜ್ಯಾಯ ರಾಘವೇಂದ್ರಾಯ ಸತ್ಯ ಧರ್ಮ ರತಾಯಚ ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೆ ॥

ಮನ್ಮನೋಽಭೀಷ್ಟವರದಂ ಸರ್ವಾಭೀಷ್ಟ ಫಲಪ್ರದಂ ।
ಪುರಂದರ ಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ ॥

ಅಜ್ಞಾನತಿಮಿರಚ್ಛೇದಂ ಬುದ್ಧಿ ಸಂಪತ್ಪ್ರದಾಯಕಂ ।
ವಿಜ್ಞಾನ ವಿಮಲಂ ಶಾಂತಂ ವಿಜಯಾಖ್ಯ ಗುರುಂ ಭಜೇ ॥

ಭೂಪಾಲನತ ಪಾದಾಬ್ಜಂ ಪಾಪಾಲಿ ಪರಿಹಾರಿಣಂ ।
ಗೋಪಾಲದಾಸಮೀಡೇಽಹಂ ಗೋಪಾಲ ಹರಿ ದರ್ಶನಂ ॥

ಜಲಜೇಷ್ಠನಿಭಾಕಾರಂ ಪಾಪಾಲಿ ಪರಿಹಾರಿಣಂ ।
ಜಗತೀತಲ ವಿಖ್ಯಾತಂ ಜಗನ್ನಾಥಗುರುಂ ಭಜೇ ॥

ಧ್ಯಾನವು ಕೃತಾಯುಗದಲ್ಲಿ ಯಜನ । ಯಜ್ಞವು ತ್ರೇತಾಯುಗದಲ್ಲಿ ।
ದಾನವಾಂತಕನ ದೇವತಾರ್ಚನೆಯು ದ್ವಾಪರಯುಗದಲ್ಲಿ ॥
ಕಲಿಯುಗದಿ ಗಾನದಿ ಕೇಶವನೆಂದರೆ ಕೈಗೂಡುವನು ಶ್ರೀ **ರಂಗವಿಠ್ಠಲ**

**1)** ಎಲ್ಲಿ ಹರಿ ಕಥಾ ಪ್ರಸಂಗವೋ । ಅಲ್ಲಿ ಗಂಗಾ ಯಮುನಾ ಗೋದಾ ಸಿಂಧುಸರಸ್ವತಿ । ಎಲ್ಲ ನದಿಗಳು ಬಂದು ಎಣೆಯಾಗಿ ನಿಲ್ಲುವವು । ವಲ್ಲಭ ಶ್ರೀ **ಪುರಂದರ ವಿಠ್ಠಲ** ಮೆಚ್ಚುವನು ॥

**2)** ಜಯ ಹರಿ ಎಂಬುವುದೇ ಸುದಿನವು ।ಜಯ ಹರಿ ಎಂಬುವುದೇ ತಾರಾಬಲವು । ಜಯ ಹರಿ ಎಂಬುವುದೇ ವಿದ್ಯಾ ಬಲವು । ಜಯ ಹರಿ ಎಂಬುವುದೇ ದೈವ ಬಲವು । ಜಯ ಹರಿ **ಪುರಂದರ ವಿಠಲ**ನ ಬಲವಯ್ಯ ಸಕಲ ಸುಜನರಿಗೆ ॥

**3) ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ|** ಮತಿಪ್ರೇರಿಸುವಳು ಪಾರ್ವತಿದೇವಿಯು | ಮುಕುತಿ ಪಥಕೆ ಮನವೀವ ಮಹರುದ್ರದೇವರು | ಹರಿಭಕುತಿ ದಾಯಕಳು ಭಾರತೀ ದೇವಿ ॥ ಯುಕುತಿ ಶಾಸ್ತ್ರಗಳಲ್ಲಿ ವನಜ ಸಂಭವನರಸಿ | ಸತ್ಕರ್ಮಗಳು ನಡೆಸಿ ಸುಜ್ಞಾನಮತಿಯಿತ್ತು | ಗತಿ ಪಾಲಿಸುವ ನಮ್ಮ ಪವಮಾನನು | ಚಿತ್ತದಲಿ ಆನಂದ ಸುಖವ ನೀವಳು ರಮಾ | ಭಕುತ ಜನರೊಡೆಯ ನಮ್ಮ **ಪುರಂದರ ವಿಠ್ಠಲನು** | ಸತತ ಇವರಲಿ ನಿಂತು ಕೃತಿಯ ನಡೆಸುವನು ॥

**4) ಸ್ಮರಿಸು ಗುರುಗಳ ಮನವೆ :-**

ಸ್ಮರಿಸು ಗುರುಗಳ ಮನವೆ | ಸ್ಮರಿಸು ಗುರುಗಳ - ॥ಪ॥
ಸ್ಮರಿಸು ಗುರುಗಳು ನಿಮಗೆ ಪರಮ ಮಂಗಳ ಬಂದ -೨
ದುರಿತ ಪರ್ವತಕೆ ಪವಿ ಎಂದು ತಿಳಿಯೊಽಽ ॥ಅಪ॥

ಉರಗ ವೃಶ್ಚಿಕ ವ್ಯಾಘ್ರ ಅರಸು ಚೋರಾಗ್ನಿ - ಕರಿ |
ಗರಳ ಜ್ವರ ಮೊದಲಾದ ಭಯಗಳಿಂದ -೨॥
ಪೊರೆದು ಮಂಗಳವೀವ ನರಹರಿಯ ದಾಸರ -೨|
ಚರಣ ಕಂಡೆನೊ ದುರಿತ ಪರಿಹಾರವಾಯಿತು - ॥೧॥

ಗುರು ಸ್ಮರಣೆಯಿಂದ ಸಕಲ ವಿಪತ್ತ ಪರಿಹಾರ |
ಗುರು ಸ್ಮರಣೆಯಿಂದ ಸಂಪದವು ನಮಗೆ-೨॥
ಗುರು ಸ್ಮರಣೆಯಿಂದ ವಿಶೇಷ ಧನ ದೊರಕುವುದು -೨|
ಗುರು ಸ್ಮರಣೆಯಿಂದ ಹರಿಒಲಿದು ಪೊರೆವ - ॥೨॥

ಗುರುಗಳಿಂದಧಿಕ ಇನ್ನಾರು ಆಪ್ತರು ನಿನಗೆ |
ಗುರುಗಳೇ ಪರಮ ಹಿತಕರರು ನೋಡು -೨||
ಗುರು ಸ್ವಾಮಿ ವರದ **ಗೋಪಾಲವಿಠ್ಠಲ** ಮಹಾ-೨|
ದುರಿತಗಳ ಕಳೆದು ಸುಖಗರೆವ ನೋಡು ||೩||

**5) ಗುರುಮಧ್ವರಾಯರಿಗೆ :-**

ಗುರುಮಧ್ವರಾಯರಿಗೆ ನಮೋ ನಮೋ ನಮ್ಮ ||ಪ||
ಗುರುಮಧ್ವಸಂತತಿಗೆ ನಮೋ ನಮೋ ನಮ್ಮ ||ಅಪ||

ಶ್ರೀಪಾದರಾಜರಿಗೆ ಗುರು ವ್ಯಾಸರಾಜರಿಗೆ |
ಗುರುವಾದಿರಾಜರಿಗೆ ನಮೋ ನಮೋ ||೧||

ರಾಘವೇಂದ್ರ ರಾಯರಿಗೆ ವೈಕುಂಠದಾಸರಿಗೆ |
ಪುರಂದರದಾಸರಿಗೆ ನಮೋ ನಮೋ ||೨||

ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ |
ಶ್ರೀರಂಗ ಒಲಿದ ದಾಸರಿಗೆ ನಮೋ ನಮೋ ||೩||

ಪರಮ ವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ |
ಹುಂಡೇಕಾರ ದಾಸರಿಗೆ ನಮೋ ನಮೋ ||೪||

ಗುರು **ಶ್ರೀಷ ವಿಠ್ಠಲ**ನ ಪರಮ ಭಕ್ತರ ಚರಣ |
ಸರಸಿಜಯುಗಗಳಿಗೆ ನಮೋ ನಮೋ ||೫||

# ಶ್ರೀ ಜಗನ್ನಾಥ ದಾಸರಾಯರು

## 6) ಎಂತು ಪೊಗಳಲಿ ಜಗನ್ನಾಥ ದಾಸರನಾ :-

ಎಂತು ಪೊಗಳಲಿ ಜಗನ್ನಾಥ ದಾಸರನಾ ||ಪ||
ಕಂತು ಪಿತ ಒಲಿದಿವರ | ಅಂತರಂಗದಿ ಪೊಳೆವ ||ಅ.ಪ||

ಶ್ರೀ ರಮಾದೇವಿ ಪತಿ-| ಯೊಡನೆ ಇವರಲಿ ನಿಂತು -೨|
ಈರೆರಡು ದೇಹ ಅವ್ಯಽಽಕ್ತ ಸಹಿತಾ ||
ಆರು ನಾಲಕುತತ್ವದ-| ಭಿಮಾನಿಗಳ ಕೂಡಿ -೨|
ಮೂರು ಗುಣ ಕಾರ್ಯಗಳ ಮಾಡಿ ತೋರ್ಪಳು | ಸುಖವಾ ||೧||

ಚತುರ ಮುಖ ವಾಯು ನಿಜ | ಸತಿಯರಿಂದೊಡಗೂಡಿ - ೨|
ಇತರ ದೇವತೆಗಳು ಸತತಯಿದ್ದು ||
ವಿತತ ಮಹಿಮನ ಸೇವಿ-| ಸುತಲಿ-ಸುಜ್ಞಾನವನು -೨|
ಹಿತದಿಂದವರಗಿತ್ತು ಅತಿ ತೋಷ | ಪಡಿಸುವರ ||೨||

ಈ ಸುಮನಸರ ಮಹಿಮೆ | ಸೂಸಿರಲಿ ತಿಳಿದವನ -೨|
ದಾಸನಾದವನ ಅಘಽಽನಾಶಬಹುದು ||
ಕಾಸಿನಾಸೆಗೆ ಪರರ ದಾಸನಾದವನು ಗುರು -೨|
ಶ್ರೀಶ ವಿಠಲನ ನಿಜದಾಸರನು | ಬಲ್ಲನೇ ||೩||

## 7) ರಂಗ ಒಲಿದ ದಾಸರಾಯ :-

ರಂಗ ಒಲಿದ ದಾಸರಾಯ ||ಪ||

ಸಾದು ಸಂಗ ವಿಡಿಸಿ ಕರುಣದಿ ಪಿಡಿ ಕೈಯ ||ಅ.ಪ||

ಹರಿಕಥೆ ಸುಧಸಾರ ಸುರಸ ಗ್ರಂಥವ ಜಗದಿ ವಿರಚಿಸಿರುವ ನಿನ್ನ|
ವರ ಉಪಕಾರ ವರ್ಣಿಸಲಪಾರ |ಪರಮೋಧ್ಧಾರ ಪರಮೋಧ್ಧಾರ ||೧||

ಕುಂಬಿಣಿ ಸುರನಾಥ ನಂಬಿದೆ ನಿನ್ನ ಪಾದ ಬೆಂಬಿಡದಲೆ ಕಾಯೋ|
ಸ್ತಂಬ ಮಂದಿರ ಕಂಬುಕಂದರ ಭಕ್ತ ಮಂದಾರ ಭಕುತ ಮಂದಾರ ||೨||

ಸಾಮಗಾನ ವಿಲೋಲ **ಶ್ಯಾಮಸುಂದರ ವಿಠಲನ** ಸ್ವಾಮಿಯ ಭಕುತ|
ನಿಸ್ಸೀಮ ಪ್ರಲ್ಹಾದ ಅನುಜ ಸಲ್ಹಾದ ನೀಡೆಮಗಲ್ಹಾದ ||೩||

**8) ಕರುಣಿಸಿ ಪಿಡಿಯೊ ಕೈಯಾ :-**

ಕರುಣಿಸಿ ಪಿಡಿಯೊ ಕೈಯಾ | ಗುರು ರಂಗ ಒಲಿದ ರಾಯ ||ಪ||

ನಂಬಿದೆ ನಿನ್ನ ಚರಣ | ಬೆಂಬಿಡದೆ ಕಾಯೋ ಸತತ -೨ |
ಸ್ತಂಭದಲಿ ನೆಲೆಸಿದಂಥ -೨ | ಕುಂಭಿಣಿ ದಾಸವರ್ಯ್ಯ ||1||

ದೀನರಿಗೆ ದಿವಿಜಧೇನು | ನೀನೆಂದು ಕ್ಷೋಣಿ ತಳದಿ -೨ |
ಜ್ಞಾನಿಗಳು ಪೇಳಿದಂಥ -೨ | ವಾಣಿಯನು ಸತ್ಯ ಮಾಡು ||2||

ನಿನ್ನ ಸ್ಥಳವು ಪುಣ್ಯಕ್ಷೇತ್ರ | ನಿನ್ನಲ್ಲಿ ಸಕಲ ತೀರ್ಥ -೨ |
ನಿನ್ನ - ಕವನ ಮಧ್ವಶಾಸ್ತ್ರ -೨ | ನಿನ್ನವನು ನಿಜ ಕೃತಾರ್ಥ ||3||

ಹರಿದಾಡುವಂಥ ಮನಸು | ಹರಿಯಲ್ಲಿ ಸ್ಥಿರವ ಗೊಳಿಸು -೨ |
ಹರಿನಾಮ ಸುಧೆಯ ಕುಡಿಸು -೨ | ಹರಿವರನ ಮತವ ಪಿಡಿಸು ||4||

ಮತಿ ಭ್ರಷ್ಟನಾಗಿ ನಿನ್ನ । ಕೃತಿಗಳನು ಪಾಡದ್ಹೋದೆ -೨ ।
ಕ್ಷಿತಿ ಭಾರನಾದೆ ಮುಂದೆ -೨ । ಗತಿ ತೋರಿ ಸಲಹೋ ತಂದೆ ॥5॥

ಹೆತ್ತವರು ಸುತನ ದೋಷ । ಕೃತ್ಯಗಳ ಕ್ಷಮಿಸದಿಹರೇ -೨ ।
ಚಿತ್ತೈಸಿ ಎನ್ನ ಮಾತಾ -೨ । ಉತ್ತಮರ ಸಂಗವಿತ್ತು ॥6॥

ತಳೆದೆನು ಜನುಮಗಳಲಿ । ಇಳೆಯೊಳಗೆ ಚರಿಪ ಸಮಯ -೨ ।
ಸುಳಿದಾಡು ಮತ್ತೊಮ್ಮೆ ಘೋರ -೨ । ಕಲಿ ಬಾಧೆ ತಪ್ಪಿಸಯ್ಯಾ ॥7॥

ಮಾನವೀಯ ಸ್ಥಾನದಲ್ಲಿ । ನೀನಿರಲು ನಿನ್ನ ಮರೆತು - ೨।
ತಾನಲ್ಲಿ ಪೋದರೇನು -೨ । ಆ ನರಗೆ ಉಂಟೆ ಮೋದ ॥8॥

ಕಂದರ್ಪ ಜನಕ **ಶ್ಯಾಮ । ಸುಂದರನ** ಮೂರ್ತಿ ಹೃದಯ -೨ ।
ಮಂದಿರದಿ ತೋರೋ ದಾತ -೨ । ವಂದಿಸುವೆ ನಿನ್ನ ಪದಕೆ ॥9॥

**ಶ್ರೀ ಗೋಪಾಲ ದಾಸರಾಯರು**

**9) ಗೋಪಾಲ ದಾಸರಾಯ :-**

ಗೋಪಾಲ ದಾಸರಾಯ
ನಿನ್ನೆಯ ಪಾದ ನಾ ಪೊಂದಿದೆನೋ ನಿಶ್ಚಯ ॥ಪ॥
ಈ ಪೀಡಿಸುವ ತ್ರಯ ತಾಪಗಳೋಡಿಸಿ ।
ಕೈ ಪಿಡಿದೆನ್ನನು ನೀ ಪಾಲಿಸನುದಿನ ॥ಅ.ಪ॥

ಘೋರ ವ್ಯಾಧಿಗಳ ನೋಡಿ ವಿಜಯರಾಯ ಭೂರಿ ಕರುಣವ ಮಾಡಿ ।
ತೋರಿದರಿವರೇ ಉದ್ಧಾರಕರೆಂದಂದಿ । ನಾರಭ್ಯ ತವ ಪಾದ ಸಾರಿದೆ

ಸಲಹೆಂದು ॥ ಸೂರಿಜನ ಸಂಪ್ರೀಯ ಸುಗುಣೋದ್ಧಾರ ದುರುಳನ
ದೋಷನಿಚಯವ-। ದೂರಗೈಸೊ ದಯಾಂಬುಧಿ
ನಿವಾರಿಸಿದೆ-ಕರಪಿಡಿದು ಬೇಗದಿ ॥೧॥

ಅಪಮೃತ್ಯುವಿನ ತರಿದೆ ಎನ್ನೊಳಗಿದ್ದ ಅಪರಾದಂಗಳ ಮರೆದೆ ।
ಚಪಲ ಚಿತ್ತನಿಗೊಲಿದು ವಿಪುಳ ಮತಿಯನಿತ್ತು ನಿಪುಣನೆಂದೆನಿಸಿದೆ
ತಪಸಿಗಳಂದಲಿ ॥ ಕೃಪಣ ವತ್ಸಲ ನಿನ್ನ ಕರುಣಗೆ ಉಪಮೆಗಾಣೆನೋ
ಸಂತತವು-।ಕಾಶ್ಯಯೋಳಗೆ ಬುಧರಿಂದ
ಜಗದಾಧಿಪನ ಕಿಂಕರನೆನಿಸಿ ಮೆರೆದೆ ॥೨॥

ಎನ್ನ ಪಾಲಿಸಿದಂದದಿ ಸಕಲ ಪ್ರಪನ್ನರ ಸಲಹೋ ಮೋದಿ ।
ಅನ್ಯರಿಗೀಪರಿ ಬಿನ್ನಪಗೆಯ್ಯೆ **ಜಗನ್ನಾಥ ವಿಠಲನ** ಸನ್ನುತಿಸುವ ಧೀರ ॥
ನಿನ್ನ ನಂಬಿದ ನರರಿಗೀಪರಿ ಬನ್ನವೇ ಭಕ್ತಾನುಕಂಪಿ । ಶರಣ್ಯ -
ಬಂದೊದಗೀ ಸಮಯದಿ ಅಹರ್ನಿಶಿ ಧ್ಯಾನಿಸುವೆ ನಿನ್ನ ॥೩॥

**10) ಗೋಪಾಲ ದಾಸರಾಯ ಮಾಂ ಪಾಲಯ :-**

ಗೋಪಾಲ ದಾಸರಾಯ ಮಾಂ ಪಾಲಯ ॥ಪ॥
ಗೋಪಾಲ ದಾಸರಾಯ ಆಪಾರ ಮಹಿಮ ।
ತಾಪಗಳೋಡಿಸಿ ಕಾಪಾಡು ಗುರುರಾಯ ॥ಅ.ಪ॥

ಗಜಮುಖ ನಮಿಸುವೆ । ಸುಜನ ಪಾಲಕ ಶ್ರೀಮದ್ -೨
ವಿಜಯ ದಾಸರಿಗೆऽ ನಿಜ ಶಿಷ್ಯರೆನಿಸಿದೆ ॥೧॥

ಧನ್ವಂತರಿ ಜಪದಿ | ಜಗನ್ನಾಥ ದಾಸರ -೨

ಬನ್ನವ ಬಿಡಿಸಿದ | ಘನ್ನ ಮಹಿಮ ಗುರು ||೨||

ಏನುಕರುಣವೋ | ಶ್ರೀ ಮಾನವಿ ದಾಸರಿಗೆ -೨

ಸಾನುರಾಗದಿ ಆಯುರ್ದಾನವ ಮಾಡಿದೆ ||೩||

ಶರಣ ಜನರಿಗೆ ಸುರತರುವೆನಿಸಿ ಧರೆಯೊಳಗೆ -೨

ಮೆರೆವ ಕಾರ್ಪರ ನರಹರಿಯ ಒಲಿಸಿದಂಥ ||೪||

**<u>ಶ್ರೀ ವಿಜಯದಾಸರಾಯರು (ಚಿಪ್ಪಗಿರಿ)</u>**

**11) ಚಿಪ್ಪಗಿರಿಯ ನಿಲಯಾ :-**

ಚಿಪ್ಪಗಿರಿಯ ನಿಲಯಾ ಸಲಹೋ | ಅಪ್ಪ ವಿಜಯರಾಯಾ ||ಪ||

ಸರ್ಪಶಯನ ಕಂದರ್ಪ ಪಿತನ ದಯ -೨|

ತಪ್ಪದೆ ಪೊಂದಿಹ ಅಪ್ರತಿಮಾರ್ಯನೆ ||ಅ.ಪ||

ಹರಿಸೇವೆಯ ಬಯಸಿ | ಜನಿಸಿದೆ ಪರಿ ಪರಿ ಅವತರಿಸಿ -೨||

ಕರುಣದಿಂದ ಹರಿಯ | ಶರಣರ ಪೊರೆಯಲು-೨||

ಧರೆಯೊಳು ಚೀಕಲ ಪರಿವಿಲಿ ಉದಿಸಿದೆ ||೧||

ಗುರುಕಾರ್ಯವನೆಸಗೆ ಧರೆಯೊಳು | ಸರಿಯಾರೈ ನಿಮಗೆ -೨

ಹರುಷದಿಂದ ಪುರಂದರ ಗುರು ಸೂಚಿಸೆ -೨

ಭರದಿ ಶ್ರೀಪಾದವನರಿತು ಪೂರೈಸಿದೆ ||೨||

ಶ್ರೀಪತಿ **ರಮಾಕಾಂತ ವಿಠಲನ** | ಶ್ರೀಪದ ಹೃದಯಂದ -೨

ಕೂಪನೋಳ್ವ ಮುನಿ ತಾಪವಳಿದು ಭವ -೨|

ಕೂಪಕೆ ತರದಿರು ತಾಪಸರೊಡೆಯನೆ ||೩||

## 12) ಸ್ಮರಿಸಿ ಬದಕಿರೋ :-

ಸ್ಮರಿಸಿ ಬದಕಿರೋ | ದಿವ್ಯ ಚರಣ ಕೆರಿಗಿರೋ ||ಪ||

ದುರಿತ ತರಿದು ಪೊರೆವ ವಿಜಯಗುರುಗಳೆಂಬರ ||ಅ.ಪ||

ದಾಸರಾಯನ ದಯವ ಸೂಸಿ ಪಡೆದನ |

ದೋಷ ರಹಿತನ ಸಂತೋಷ ಭರಿತನ ||೧||

ಜ್ಞಾನವಂತನ ಬಲು ನಿಧಾನಿ ಶಾಂತನ |

ಮನ್ಯವಂತನ ಬಹುವ ಧಾನ್ಯದಾಂತನ ||೨||

ಹರಿಯ ಭಜಿಸುವ ನರಹರಿಯ ಯಜಿಸುವ |

ದುರಿತ ತ್ಯಜಿಸುವ ಜನಕೆ ಹರುಷ ಸುರಿಸುವ ||೩||

ಮೋದ ಭರಿತನ ಪಂಚ ಭೇದವರಿತನ |

ಸಾಧು ಚರಿತನ ಮನವಿಷಾದ ಮರೆತನ ||೪||

ಇವರ ನಂಬಿದ ಜನಕೆ ಭವ ವಿದೆಂಬುದು |

ಹವಣವಾಗದೋ ನಮ್ಮವರ ಮತವಿದು ||೫||

ಪಾಪಕೋಟಿಯ ರಾಶಿ ಲೇಪವಾಗದೊ |

ತಾಪ ಕಳೆವನೊ ಬಲು ದಯಾಪಯೋನಿಧಿ ||೬||

ಕವನ ರೂಪದಿ ಹರಿಯಸ್ತವನ ಮಾಡಿದ |

ಭುವನ ಬೇಡಿದ ಮಾಧವನ ನೋಡಿದ ||೭||

ರಂಗನೆಂದರೆ ಭವವು ಹಿಂಗಿತೆಂದನ |

ಮಂಗಳಾಂಗನಾ ಅಂತರಂಗ ವರಿತನ ||೮||

ಕಾಶಿ ನಗರದಲ್ಲಿದ್ದ ವ್ಯಾಸದೇವನ-| ದಯವ

ಸೂಸಿಪಡೆದನ ಉಲ್ಹಾಸತನದಲಿ ||೯||

ಚಿಂತೆ ಬ್ಯಾಡಿರೋ ನಿಶ್ಚಿಂತರಾಗಿರೋ |

ಶಾಂತ ಗುರುಗಳ ಪಾದವಂತು ನಂಬಿರೋ ||೧೦||

ಖೇದವಾಗದೋ ನಿಮಗೆ ಮೋದ ವಾಹುದೋ |

ಆದಿದೇವನ ಸುಪ್ರಸಾದವಾಹುದೋ ||೧೧||

ತಾಪ ತಡೆವನೋ ಬಂದ ಪಾಪ ಕಡೀವನೊ |

ಶ್ರೀಪತಿಯ ಪಾದದಾ ಸಮೀಪವಿಡುವನೊ ||೧೨||

ಗಂಗೆ ಮಿಂದರೆ ಮಲವು ಹಿಂಗಿತಲ್ಲದೇ |

ರಂಗ ನೊಲಿಯನೊ ಭಕ್ತರ ಸಂಗದೊರೆಯದೆ ||೧೩||

ವೇದ ಓದಲು ಬರಿದೆ ವಾದಮಾಡಲೂ |

ಹಾದಿ ದೊರೆಯದೋ ಬುಧರ ಪಾದನಂಬದೆ ||೧೪||

ಲೆಕ್ಕ ವಿಲ್ಲದ ದೇಶ ಸುತ್ತಿ ಬಂದರೊ |

ದು:ಖವಲ್ಲದೇ ಲೇಶ ಭಕುತಿ ದೊರಕದು ||೧೫||

ದಾನಮಾಡಲು ದಿವ್ಯಗಾನಪಾಡಲು |

ಜ್ಞಾನ ದೊರೆಯದೋ ಇವರಧೀನವಾಗದೆ ||೧೬||

ಇಷ್ಟೆಯಾತಕೆ ಕಂಡ ಕಷ್ಟವ್ಯಾತಕೆ |

ದಿಟ್ಟಗುರುಗಳ ಪಾದ ಮುಟ್ಟಿ ಭಜಿಸಿರೋ ||೧೭||

ಪೂಜೆ ಮಾಡಲು ಕಂಡ ಗೋಜ ಬೀಳಲು |

ಬೀಜಮಾತಿನ ಫಲ ಸಹಜ ದೊರಕದೊ ||೧೮||

ಸುರರು ಎಲ್ಲರೂ ಇವರ ಕರವ ಪಿಡಿವರೊ |

ತರಳ ರಂದದಿ ಹಿಂದೆ ತಿರುಗುತಿಪ್ಪರೊ ||೧೯||

ಗ್ರಹಗಳೆಲ್ಲವೂ ಇವರ್ಗೆ ಸಹಾಯ ಮಾಡುತ |

ಅಹೋ ರತ್ರೀಲಿ ಸುಖದ ನಿವಹ ಕೊಡವವು ||೨೦||

ವ್ಯಾಧಿಬಾರದೋ ದೇಹ ಭಾದೆತಟ್ಟದೋ |

ಆದಿದೇವನ ಸುಪ್ರಸಾದ ವಾಹುದೋ ||೨೧||

ಪತಿತಪಾಮರ ಮಂದಮತಿಯ ನಾ ಬಲು |

ತುತಿಸಲಾಪೆನೆ ಇವರ ಅತಿಶಯಂಗಳ ||೨೨||

ಕರುಣದಿಂದಲಿ ಎಮ್ಮ ಪೊರೆವನಲ್ಲದೆ |

ದುರಿತಕೋಟಿಯ ಬೇಗ ತರಿವ ದಯದಲಿ ||೨೩||

ಮಂದಮತಿಗಳು ಇವರ ಚಂದವರಿಯದೆ |

ನಿಂದೆ ಮಾಡಲು ಭವದ ಬಂದ ತಪ್ಪದೊ ||೨೪||

ಇಂದಿರಾಪತಿ ಇವರ ಮುಂದೆ ಕುಣಿವನೊ |

ಅಂದವಚನವ ನಿಜಕೆ ತಂದು ಕೊಡುವನೊ ||೨೫||

ಉದಯಕಾಲದಿ ಈ ಪಠವ ಪಠಿಸಲು |

ಮದಡನಾದರೂ ಜ್ಞಾನ ಉದಯವಾಹುದೊ ||೨೬||

**ಸಟೆಯಿದಲ್ಲವೋ ವ್ಯಾಸವಿಠಲ ಬಲ್ಲನು |**

**ಪಠಿಸಬಹುದಿದೋ ಕೇಳಿ ಕುಟಿಲ ರಹಿತರು ||೨೭||**

## 13) ವಿಜಯರಾಯರ ಪಾದವಾ :-

ವಿಜಯರಾಯರ ಪಾದವಾ ನೀ ಭಜಿಸಿ ಬದುಕೆಲೋ ಮಾನವಾ ||ಪ||
ವೃಜನವೆಲ್ಲವ ಕಳೆದು ಕರುಣದಿ ಅಜನ ನಯ್ಯನ ತೋರುವಾ|ಅಪ||

ಜಗಕೆ ಹರಿಪರ ನೆಂದು ತಾಭುಜ ಯುಗಗಳೆತ್ತಿಸಾರಿದಾ -೧|
ಭೃಗುಮುನಿ ಇವರೆಂದು ಭಾವಿಸೆ  ಮಿಗಿಸು ಭಕ್ತಿಲಿ ಸರ್ವದಾ ||
ವರಹಜಾ ತಟದಲ್ಲಿ ಚೀಕಲ ಪರವಿಗ್ರಾಮದಿ ಜನಿಸಿದಾ-೧ |
ಪರಿಪರಿಯಲನುಭವಿಸಿ|ಬಡತನವ|ಜರೆದು ಭವ ವೈರಾಗ್ಯ ತಾ ಧರಿಸಿದ|1|

ಭಕುತಿ ಪೂರ್ವಕವಾಗಿ ಬಿಡದಲೆ ಸಕಲ ಕ್ಷೇತ್ರವ ಚರಿಸಿದಾ -೧|
ಮುಕುತಿ ಸುಖದಾತಾರ ನಾದ ಶ್ರೀ ಲಕುಮಿರಮಣನ ಸ್ತುತಿಸಿದಾ||
ತಾನು ಸೊಪ್ನದೊಳಂದು ದಿನದಿ | ವ್ಯಾಸ ಕಾಶಿಗೆ ತೆರಳಿದಾ-೧ |
ವಾಸುದೇವನ ಕಂಡು ನಮಿಸಿ |ಲೇಸು ವರವ ಸ್ವೀಕರಿಸಿದಾ ||೧||

ಬಾಲೆಯೊರ್ವಳು ಬಂದು ಪ್ರಾರ್ಥಿಸೆ ಕೇಳುತಾಕೆಯ ಪತಿಯನು -೧|
ಕಾಲಪಾಶವ ಬಿಡಿಸಿ ಕರುಣದಿ | ಪಾಲಿಸಿದ ಸುಮಹಾತ್ಮನಾ ||
ಶ್ರೀ ಮನೋಹರ **ಶ್ಯಾಮಸುಂದರ** ,ನಾಮ ಮಹಿಮೇಯು ವಿಧ ವಿಧ-೧|
ಭೂಮಿಸುಮನಸ ಸ್ತೋಮಕನುದಿನ | ನೇಮದಿಂದಲಿ ಬೀರಿದಾ ||೨||

## ಶ್ರೀ ಪುರಂದರ ದಾಸರಾಯರು

## 14) ದಾಸರೆಂದರೆ :-

ದಾಸರೆಂದರೆ ಪುರಂದರ ದಾಸರಯ್ಯ ||ಪ||
ವಾಸುದೇವ ಕೃಷ್ಣನ್ನ ಸೂಸಿಪೂಜಿಸುವಂಥ ||ಅ.ಪ||

ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು-೨ ।
ದಾಸನೆಂದು ತುಲಸಿ ಮಾಲೆ ಧರಸಿ-೨॥
ಬೆಸರಿಲ್ಲದೆ ಅವರ ಕಾಡಿ ಬಳಲಿಸುತ-೨ ।
ಕಾಸುಗಳಿಸುವ ಪುರಷ ಹರಿದಾಸನೇ ॥೧॥

ಡಂಭಕದಿ ಹರಿ ಸ್ಮರಣೆ ಮಾಡಿ ಜನರ ಮುಂದೆ-೨ ।
ಸಂಭ್ರಮದಿ ತಾನುಂಬ ಊಟ ಬಯಸಿ-೨॥
ಅಂಬುಜೋದ್ಭವಪಿತನ ಆಗಮಗಳರಿಯದೇ-೨ ।
ತಂಬೂರಿ ಮೀಟಲವ ಹರಿದಾಸನೇ ॥೨॥

ಯಾಯಿವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ-೨ ।
ಪ್ರೀಯದಲಿ ತಾನೊಂದು ಕೊಡದ ಲೋಭಿ -೨॥
ಮಾಯಸಂಸಾರದಲಿ ಮಮತೆ ಹೆಚ್ಚಾಗಿಟ್ಟು -೨ ।
ಗಾಯನವ ಮಾಡದವ ಹರಿದಾಸನೇ ॥೩॥

ನೀತಿ ಎಲ್ಲವನರಿತು ನಿಗಮವೇದ್ಯನ ನಿತ್ಯ-೨ ।
ಮಾತು ಮಾತಿಗೆ ಬಿಡದೆ ವರ್ಣಿಸುತಲಿ -೨ ॥
ಗೀತ ನರ್ತನದಿಂದ **ಕೃಷ್ಣನ್ನ** ಪೂಜಿಸುವ -೨ ।
ಪೂತಾತ್ಮ ಪುರಂದರದಾಸರಿವರಯ್ಯ ॥೪॥

**15) ಬೇಸರದೆ ಭಜಿಸಿರೊ :-**

ಬೇಸರದೆ ಭಜಿಸಿರೊ । ಪುರಂದರ ದಾಸರಾಯರಾ ॥ಪ॥
ಶ್ರೀಶ ನಿಮ್ಮನುದಾಸೀನ ಮಾಡದೆ

ಪೋಷಿಸುವ ತೋಷದಿಂದಲಿಽಽ ||ಅಪ||

**ಪುರಂದರ ಗಡದೊಳಗೆ ಹಿರಿಯ ಸಾಹುಕಾರನೆನಿಸಿ | ಪರಿಪರಿಯ ಸಂಸ್ಥೆಗಳ ಸುರಿಸುತ್ತಾ ||** ಇರುತಿರಲು ನರಹರಿ | ಕರುಣದಿಂದಲಿ ಬ್ರಾಹ್ಮಣನಾಗುತ್ತಾ | ನಾಯಕರ ತೆನದಲಿ ಹರುಷದಿಂದಅಂಗಡಿಗೆ ಹೋಗುತ್ತ || ಯಜಮಾನ ಕಂಡು | ಜರಿದು ಬ್ರಾಹ್ಮಣನ್ನೊರಗೆ ಹಾಕಲು ಮರುದಿವಸ ಮತ್ತೋಗಿ ನಿಂತಽಽ ||೧||

**ಬಾರಿ ಬಾರಿಗೆ ಸಾಹುಕಾರನ ಮೋರೆಹತ್ತಿ ಮೇರೆಇಲ್ಲದೆ | ಆರು ತಿಂಗಳ ಬೆನ್ನು ಬೀಳುತ್ತ ||**ನಾಯಕರು ಕಂಡಿವನಾರ ಬಿಡುತಾರೆಂದು ಬೈಯುತ್ತ | ಬೇಸತ್ತು ಎರಡು ಸೆರು ರೊಕ್ಕ ಮುಂದೆ ಸುರಿಯುತ್ತಾ | ಇದರೊಳಗೆ ಒಂದು | ದುಡ್ಡಾರಿಸಿಕೊ ಎಂದು ಪೇಳಲು |
ನಾರಾಯಣ ಬಿಟ್ಹೋದ ನಗುತ ||೨||

**ಹಿತ್ತಲ ಬಾಗಿಲಿಗೆ ಹೋಗಿ ಮತ್ತೆ ಆತನ ಮಡದಿಯ | ಬೆನ್ಹತ್ತಿ ಬಿದ್ದನು ವಿತ್ತ ತಾರೆನುತ ||**ತನ್ನ ಮಗನ ಮುಂಜೆಂದತ್ಯಅಧಿಕಂ ಬಾಯಿ ತೆರೆಯುತ್ತ | ಆ ಸಾಧ್ವಿ ನುಡಿದಳು ಎತ್ತಣ ದ್ರವ್ಯವು ತನಗೆನುತ | ನಿನ್ನ ಮೂಗಿನ | ಮುತ್ತಿನ ಮೂಗುತಿಯ
ಕೊಡುಯೆನೆ ಉತ್ತಮಳು ತೆಗೆದಿತ್ತಳಾಕ್ಷಣಽಽ ||೩||

**ಜೋಕೆಯಿಂದಾಭರಣ ತಂದು ಆಕೆ ಗಂಡನ ಕಣ್ಣೆನೆದುರಿಗೆ | ಹಾಕಿದನು ತಾ ಬಾಕಿ ಕೊಡುಯೆನುತ |** ಅದು ಕಂಡು ಇದು ನಮ್ಮಾಕೆಯದ ಎಂದಾತ ನುಡಿಯುತ | ಅನ್ಯರದು ಇಂಥಾದ್ಯಾಕೆ ಇರಬ್ಯಾಡಽ-

ದೆನ್ನುತ್ತಾ | ಬೆಲೆ ಪೇಳು ಎನಲು| ನಾಲ್ಕುನೂರು ಶುಭ್ರ ಕೊಡು ಎಂದ್ಹಾಕಿ ಹೋದನು ತಿರುಗಿ ಬಾರದೆ ||೪||

**ತಿರುಗಿ ಬ್ರಾಹ್ಮಣ ಬಾರದಿರಲು ಕರೆದು ತನ್ನ ಹೆಂಡತಿಯ | ಬರಿಯ ನಾಸಿಕವನ್ನೇ ಕಂಡನು ||**ಮೂಗುತಿಯು ಎಲ್ಲಿದೆ ಮುರಿದಿಹುದು ಎಂದಾಕೆ ಪೇಳಿದಳು |ಒಳಗ್ಹೋಗಿ ತರೆದಿರೆ | ಅರಿವೆ ನಿನ್ನ ಜೀವವೆಂದಳು | ವಿಷಕೊಂಬೆನೆಂದು | ಕರದಿ ಬಟ್ಟಲ ಧರಿಸಲಾಕ್ಷಣ ನರಹರಿಯು ಮೂಗುತಿಯನಿಟ್ಟ ||೫||

**ಹರುಷದಿಂದಾಭರಣ ತಂದು ಪುರುಷನ ಕೈಯಲ್ಲಿ ಇಡಲು | ಕರದಿ ತನ್ನೊಳಗಿದ್ದ ಪೆಟ್ಟಗೆಯ |** ಅದು ಕಾಣದಿರೆ ಬೆರಗಾಗಿ ನೋಡಿದ ತನ್ನ ಮಡದಿಯ | ನಿಜ ಪೇಳುಯೆನಲು | ಅರಸಿ ಪೇಳ್ದಳು ಕೊಟ್ಟ ಸುದ್ದಿಯ | ಅಭಿಮಾನಕಂಜಿ ಅರೆದು ವಿಷವನು
ಕುಡಿವೆನೆನಲು ಸಿರಿರಮಣ ತಾ ಕೊಟ್ಟ ಕರೆಯ ||೬||

**ದೇವ ದೇವ ಎನ್ನ ಮನದ ಭಾವವನ್ನು ತಿಳಿಯೊವದಕೆತಾ | ವೃದ್ಧ ಬ್ರಾಹ್ಮಣನಾಗಿ ಬಂದಿದ್ದ |** ಪರಿಪಕ್ವ  ಎನಗಿನ್ನಾವಕಾಲಕಾಗ ಬೇಕೆಂದ | ವೈರಾಗ್ಯಭಾವದಿ ಜೀವಿಸಿಕೊಂಡಿರುವುದೇ ಛಂದ | ಹೀಗೆಂದು ಮನೆಧನ | ಕೋವಿದರ ಕರೆದಿತ್ತು ಹರುಷದಿ |
ಕಾವನಯ್ಯನ ದಾಸನಾದಾ ||೭||

**ಲಕ್ಷ್ಮೀಪತಿಯ ಪಾದದಲ್ಲಿ ಲಕ್ಷ್ಯವಿಟ್ಟು ವ್ಯಾಸರಾಯರ |**
**ಶಿಕ್ಷೆಯಿಂದಂಕಿತವ ಕೊಳ್ಳುತ್ತ |** ಪದ ಕೊರತೆ ಐದು ಲಕ್ಷ್ಯ ಪದ
ಸುಳಾದಿ ಹೇಳುತ್ತ | ಪ್ರತಿಽದಿವಸದಲಿ ಪಕ್ಷಿವಾಹನ ನಾಟ್ಯವಾಡುತ್ತ |
ಅಪರೋಕ್ಷ ಪುಟ್ಟಲು ಮೋಕ್ಷಸ್ಥಾನಕೆ
ಕರೆದೊಯ್ದು ಅಧೋಕ್ಷಜ ಸಂರಕ್ಷಿಸಿದ ||೮||

**ಘೋರನರಕದಲ್ಲಿ ಬಿದ್ದಅಪಾರ ಜನರು ಚೀರುತಿರಲು | ಉದ್ಧಾರ**
**ಮಾಡಿದ ನಾರದಽರಿವರು |**ಅವತಾರ ಮಾಡಿ ಮತ್ತೆ ಧಾರುಣಿಯೊಳು
ಬಂದರು | ನಾರಾಯಣನೆ ಸರ್ವೋತ್ತಮನೆಂದು ಸಾರಿದರು |
ಹೀಗೆಂದು ತಿಳಿಯಲು | ಮಾರಜನಕ
**ವಿಜಯವಿಠ್ಠಲ** ಆರಿಗಾದರು ಒಲಿವಕಾಣಿರೋ ||೯||

**16) ಅಡಿಗಡಿಗೊಂದಿಪೆ :-**

ಅಡಿಗಡಿಗೊಂದಿಪೆ ನಾ ಪುರಂದರ ಗುರುವೆ ||ಪ||
ಕಡುಜ್ಞಾನ ಭಕ್ತಿ ವೈರಾಗ್ಯದ ನಿಧಿಯೇ ||ಅ.ಪ||

ವರಮಧ್ವಮತ ಕ್ಷೀರಾಂಬುಧಿಗೆ ಚಂದ್ರಮನಾಗಿ |
ಗುರುವ್ಯಾಸರಾಯರಿಂದ'ಉಪದೇಶಗೊಂಡೆ ||
ಎರಡೆರೆಡು ಲಕ್ಷ ಎಪ್ಪತ್ತೈದು ಸಾವಿರ |
ವರನಾಮಾವಳಿ ಮಾಡಿ ಹರಿಗೆ ಅರ್ಪಿಸಿದೆ ||೧||

ಗಂಗಾಧಿ ಸಕಲ ತೀರ್ಥಂಗಳ ಚರಿಸಿತು | ರಂಗವದನ
ವೇದವ್ಯಾಸರಾ | ಹಿಂಗದೆ ಮನದಲಿ ನೆನೆದು ಮೆರೆಯುವ |

ಮಂಗಳ ಮಹಿಮನ ತುತಿಸಿ ತುತಿಸಿ ನಾ ||೨||

ನಿನ್ನತೀಶಯಗುಣ ವರ್ಣಿಸಳಲವಲ್ಲಾ | ನಿನ್ನ ಸೇವಕರ ಸೇವಕನೆಂದು
ಪನ್ನಂಗ ಶಯನ ಮುಕುಂದ ಕರುಣ
ಪ್ರಸನ್ನ **ವಿಜಯವಿಠಲ**ನ್ನ ಸಂಪನ್ನ ||೩||

**17) ಗುರು ಪುರಂದರ ದಾಸರೆ :-**

ಗುರು ಪುರಂದರ ದಾಸರೆ | ನಿಮ್ಮ | ಚರಣ ಕಮಲವೆ ನಂಬಿದೆ ||ಪ||
ಗರ್ವ ರಹಿತನು ಮಾಡಿ ಎನ್ನನು | ಪೊರೆವ ಭಾರವು ನಿಮ್ಮದೇ ||ಅಪ||

ಒಂದು ಅರಿಯದ ಮಂದಮತಿ ನಾ | ಇಂದು ನಿಮ್ಮನು ನಂಬಿದೆ||
ಇಂದಿರೇಶನ ಪಾದ ತೋರಿಸೋ | ತಂದೆ ಮಾಡೆಲೊ ಸತ್ಕೃಪೆ ||೧||

ಮಾರಜನಕನ ಸನ್ನಿಧಾನದಿ | ಸಾರಗಾನವ ಮಾಡುತ -೨||
ನಾರದರೆ ಈ ರೂಪದಿಂದಲಿ -೨ | ಕೋರಿ ದರಶನ ತೋರಿದ ||೨||

ಪುರಂದರಾಲಯ ಘಟ್ಟದೊಳು | ನೀ ನೀರುತ ಧನವಗಳಿಸಲು -೨||
ಪರಮ ಪುರುಷನು ವಿಪ್ರನಂದದಿ -೨ | ಕರವ ನೀಡಿ ಯಾಚಿಸೆ ||೩||

ಪರಮ ನಿರ್ಗುಣ ಮನವನರಿತು | ಸರುವ ಸೂರೆಯಗೊಳಿಸಿದ -೨||
ಅರಿತುಮನದಲಿ ಜರಿದುಭವಗಳ | ತರುಣಿ ಸಹ ಹೊರಗ್ಹೊರಟನೆ ||೪||

ಅಜಭವಾದಿಗಳರಸನಾದ **ವಿಜಯ ವಿಠಲನ** ಧ್ಯಾನಿಪ -೨||
ನಿಜ ಸುಜ್ಞಾನವ ಕೊಡಿಸಬೇಕೆಂದು| ಭಜಿಪೆನೋ ಕೆಳ್ ಗುರುವರ ||೫||

## ಶ್ರೀ ಸತ್ಯಧ್ಯಾನತೀರ್ಥರು

### 18) ಪಾಲಯಮಾಂ ಶ್ರೀ

ಪಾಲಯಮಾಂ ಶ್ರೀ ಸತ್ಯಧ್ಯಾನತೀರ್ಥ ||ಪಲ್ಲ||

ಶ್ರೀ ಸತ್ಯಜ್ಞಾನಾರ್ಯ ಕರಕಮಲ ಸಂಜಾತ -೨|
ವ್ಯಾಸಮತಾಬ್ಧಿಯೊಳ್ ಈಸಾಡುವ ಧೀರ ||ಅಪ||

ತರ್ಕತಾಂಡವ ಪ್ರೀಯ | ನಿನ್ನನು ಮೊರೆಹೊಕ್ಕ ಜನರ ನೋಯ |
ಗೊಡದೆ ಶುಭದರ್ಕ ಸುಂದರಕಾಯಾ | ಛಾತ್ರರ ಸೌಖ್ಯ ದಿಕ್ಕೇ
ನಿರ್ಜಿತ ಮಾಯಾ || ಅರ್ಕಾಭ ನಿನ್ನಯ ವಾಖ್ಯಾರ್ಥ ರಭಸಕೆ -೨ |
ಸೊಕಿದ ಮಾಯ್ಗಳು ಹೊಕ್ಕರು ಮೂಲೆಯ ||೧||

ವಾಧೀಭ ಪಂಚಾಕ್ಷ | ನಿನ್ನಯ ತತ್ವ|-ವಾದಿ ಜನಾಬ್ದಿ ಭೆಷಾ |
ಮೃಷ್ಟಾನ್ನದಿಂ ಭೂದಿವಿಜರ ಸಂತೋಷ| ಗೈಸೆದೈಸಿ
ಯಾದವೇಂದ್ರನ ದಾಸಾ || ಬಾದರಾಯಣ ಕೃತ | ವೇದಾಂತ
ಶಾಸ್ತ್ರಾರ್ಥ -೨ | ಬೋದಿಸಿ ಸಲುಹಿದಿ ಸಾಧು ಜನಾರಾದ್ಯ ||೨||

ಪರಮ ಹಂಸೌಘರನ್ನ | ನಿನ್ನಯ ದಿವ್ಯ ಸರಸ ಸುಧಾ ಪ್ರವಚನ|-ವನೆ
ಕೇಳು ಸುರರು ಹರ್ಷೋದ್ಭನ್ನ | ಪುಲಕರಾಗಿ ಸುರಿದು ಹೊಗಳನ್ನ |
**ಗುರುಮಧ್ವ** ಮುನಿಗಳ ವರಪೀಠ ಸ್ಥಾರ್ಯ್ಯರು -೨ ದೊರೆ
ಇವರೆಂದೆಂಧ್ಬರಿದಾಗಿ ನಲಿದರಂದು ||೩||

## ಶ್ರೀ ವಿಷ್ಣುತೀರ್ಥರು

### 19) ವರದ ವಿಷ್ಣುತೀರ್ಥ

ವರದ ವಿಷ್ಣುತೀರ್ಥ | ಕರುಣದಿ ನೀ ಕೊಡು ಪುರುಷಾರ್ಥ ||ಪ||
ವರದ ಅಭೀಷ್ಟೆಯ ಕರೆದು ಎನಗೆ ನೀ -೨
ವರದನೆಂಬ ನಿನ್ನ ಬಿರುದು ಕಾಯಬೇಕು ||ಅ.ಪ||

ಅಜನ ಜನಕನಲ್ಲಿ ಇರುವಿಯೊ ವಿಜನದೇಶದಲ್ಲಿ |
ಸುಜನರು ಇದ್ದಲ್ಲಿ ಬರುವಿಯೋ ಭಜನೆ ಮಾಡುವರಲ್ಲಿ ||
ಸುಜನರ ತಾಪಕೆ ವ್ಯಜನನು ನೀನು -೨
ಸುಜನಕಲ್ಪತರು ಕುಜನಕುಠಾರ ||೧||

ನಂದನಂದನವನು ಅವ ನಿನ್ನ ಬಂಧನದಲ್ಲಿಹನು |
ಅಂಧನಾಗಿ ನಾನು ಸಂಸೃತಿ ಬಂಧನದೊಳಗಿಹೆನು ||
ನೊಂದೆನು ಬೆಂದೆನು ಬಂದೆನು ನಿನ್ನಲ್ಲಿ -೨
ಬಂಧನ ಬಿಡಿಸೋ ಬಂದಿಹೆ ಬಿಡದೆ ||೨||

ಮರೆತೆನು ನಾ ನಿನ್ನ | ಎನ್ನವಗುಣ | ಮರೆತು ಪಾಲಿಸೆನ್ನ |
ಪರತರ ಗುಣ ನಿನ್ನ ಹೊರತು ಅನ್ಯ ಗತಿಇಲ್ಲಮುನ್ನ ||
ಅರಿತು ಅನಂತಾದ್ರಿನಿಲಯನ ತೋರಿಸೋ-೨
ತ್ವರಿತ ಮೋದ ಪುರನಿರತ ಸದ್ಗುರುವೇ ||೩||

**ಶ್ರೀ ಸತ್ಯಬೋಧತೀರ್ಥರು (ಸವಣೂರು)**

### 20) ವಾದಿವರಣ ಪಂಚವದನ :-

ವಾದಿವಾರಣ ಪಂಚ ವದನ । ಸತ್ಯಬೋಧ ಸದ್ಗುರು ಜಿತಮದನ॥ಪ॥

ಬಾದರಾಯಣ ರಾಮ ವೈದೇಹಿ ಚರಣಾಬ್ಜ -೨।

ಆರಾಧಕ-ನೆನಿಪ ಸುಮೋದವಿತ್ತು ಕಾಯೋ ॥ಅಪ॥

ಶ್ರೀ ಮಧ್ವ ವಾರಿಧಿ ಸೋಮ । ದ್ವಿಜಸ್ತೋಮ ಸದ್ಗುಣ ಗಣಧಾಮ-೨॥

ಕಾಮಿತ ಜನಕಲ್ಪ ಭೂಮಿಜ ವಿಬುಧ ಸುಪ್ರೇಮಿ -। ಸಂಯಮಿ

ಕುಲೋದ್ಧಾಮ ದಯಾನಿಧೆ ॥ ಗೋಮಿನೀ ವಲ್ಲಭನ ಪದಯುಗ ।

ತಾಮರಸವನು ದಿನದಿ ಬಿಡದಲೆ । ನೇಮದಿಂದಲಿ ಭಜಿಸುತಿಪ್ಪ ।

ಮಹಾಮಹಿಮ ನಿನ್ನ ತುತಿಸಲಾಪನೆ ॥೧॥

ದೀನ ಜನರು ಬಂಧು ನಿನ್ನ । ಪಾದಃಕಾನಮಿಸುವೆ ಸುಪ್ರಸನ್ನ-೨।

ದಾನಾಮಾನಗಳಿಂದ । ಜ್ಞಾನಿ ಜನರಿಗೆ ಆನಂದಃಪಡಿಸುತ್ತಃ ।

ಸಾನುರಾಗದಿ ನಿತ್ಯ ॥ ಶ್ರೀನಿಕೇತನ ಪರಮ ಕಾರುಣ್ಯಾ ನಿವಾಸ-

ಸ್ಥಾನನೆನಿಪ ಮಹಾಮಹಿಮ ।

ಭವತ್ಪಾದಾಂಭೋ-ಜಾಣುಗರ ಅಣುವೆಂದು ರಕ್ಷಿಸು ॥೨॥

ಸತ್ಯಪ್ರೀಯರ ಕರಕಮಲ । ಜಾತಃ ನಿತ್ಯ ನಿರ್ಜಿತ ಘೋರಶಮಲಾ೨।

ಚಿತ್ತಃಜಪಿತ **ಜಗನ್ನಾಥ ವಿಠಲನ್ನ** -೨। ಚಿತ್ತಾನು ವೃತ್ತಿಗಳಂತೆ

ಸಂತೈಸುತ್ತಾ॥ ಅತ್ಯಧಿಕ ಸಂತೋಷದಿಂದಲಿ ಪ್ರತ್ಯರ್ಥಿಗಳಿಗುತ್ತರಿಸಿ

ಮಿಗೆ ಪುರು- । ಷೋತ್ತಮನೆ ಪರನೆಂದು ।

ಡಂಗುರವೆತ್ತಿ ಹೊಯ್ಸಿ ಕೃತಾರ್ಥನೆನಿಸಿದೆ ॥೩॥

**21) ನಾ ಧನ್ಯ ನಾದೆನಿಂದು:-**

ನಾ ಧನ್ಯ ನಾದೆನಿಂದು ||ಪ||

ಸತ್ಯಭೋದರಾಯರ | ದಿವ್ಯ ಪಾದ ಪದುಮ ಕಂಡು

ನಾ ಧನ್ಯ ನಾದೆನಿಂದು ||ಅಪ||

ಹಿಂಗೀದಖಿಳ ದೋಷಂಗಳು ಈ ಮುನಿ -೨| ಪುಂಗವರಂಘ್ರಿಯ

ಸಂದರ್ಶನದಿ | ಗಂಗಾದಿ ಮೊದಲಾದ ಮಂಗಳಯುತವಾದ -೨

ತುಂಗಯಾತ್ರೆಯ ಫಲ ತಾ ಸಮ ಎನಿಸಿದಕೆ ||೧||

ಆವ ಮುನಿಗಳೋ ಮತ್ತಾವ ದೇವತೆಗಳೊ -೨| ಆವರು ಬಲ್ಲರು

ಇವರ ಮಹಿಮೆ | ಸೇವಿಪ ಸುಜನತ ಕೃಪಾವಲೋಕನದಿಂದ -೨

ಪಾವನ ಮಾಡುವ ಕೋವಿದಾರ್‍ಯ್ಯರು ಕಂಡು ||೨||

ಸೀತಾರಮಣ **ಜಗನ್ನಾಥ ವಿಠಲರೇಯ |** ಭೂತಳದಿ ಈ

ಮಹಾತ್ಮರನ್ನು | ಪ್ರೀತಿಯಿಂಭಜಿಸಿದಕೆ ಅಖಿಳ ಜೀವರ

ಪುನೀತರ ಮಾಡುವ-ರಾದುದಕೆ ಈ ಕ್ಷಣದಿ ||೩||

<u>ಶ್ರೀ ರಾಘವೇಂದ್ರ ಗುರುಸಾರ್ವಭೌಮರು</u>

**22) ರಾಯ ಬಾರೋ :-**

ಜೀಯ ನೀನಲ್ಲದೆ | ಇನ್ನಾರು ಕಾಯ್ವರು ||ಪ||

ರಾಯ ಬಾರೋ ರಾಘವೇಂದ್ರ ಬಾರೋ |

ಸಲ್ಹಾದಣ್ಣನೆ ಬಾರೋ | ಪ್ರಲ್ಹಾದರಾಯ ಬಾರೋ -೨

ಬಾಲ್ಹೀಕರಾಜನಾಗಿ ಮೆರೆದಂಥ ಪ್ರಭುವೆ ಬಾರೋ-೨ ||೧||

ತುಂಗಾನಿವಾಸ-ಮುನಿ | ಪುಂಗವ ನೀ ಭಕ್ತ -೨

ಜಂಗುಳಿ ಪಾಲಿಸಲು | ಸಂಗೀತ ಪ್ರೀಯನೆ ಬಾರೋ -೨ ||೨||

ನೀ ಕರುಣಾಸಿಂಧು ಬಾರೋ | ಸಾಕಬೇಕಯ್ಯ ಬಂಧೋ -೨

ಶ್ರೀ ಕರ **ಶ್ರೀಧ ವಿಠ್ಠಲನ** ತೋರೊ ಬಾರೋ ||೩||

**23) ಮಾಯಿಗಳ ಮರ್ಧಿಸಿದ :-**

ಮಾಯಿಗಳ ಮರ್ಧಿಸಿದ ರಾಘವೇಂದ್ರ | ರಾಯ ಬಾರೋ

ತಂದೆತಾಯಿ ಬಾರೋ | ನಮ್ಮನ್ನು ಕಾಯಿ ಬಾರೋ ||ಪ||

ವಂದಿಪ ಜನರಿಗೆ | ಮಂದಾರ| ತರುವಂತೆ | ಕುಂದದಭೀಷ್ಟೆಯ

ಸಲಿಸುತಿಪ್ಪ - ರಾಯಬಾರೋ | ಕುಂದದಭೀಷ್ಟೆಯ ಸಲಿಸುತಿಪ್ಪ

ಸುರಮುನಿ | ಮಂದನ ಮತಿಗೆ ರಾಘವೇಂದ್ರ ||೧||

ಆರುಮುರು ಏಳುನಾಲ್ಕು | ಎಂಟು ಗ್ರಂಥದ | ಸಾರಾರ್ಥ | ತೋರಿದೆ

ಸರ್ವರಿಗೆ ನ್ಯಾಯದಿಂದ - ರಾಯಬಾರೋ | ತೋರಿಸೀದಿ ಸರ್ವರಿಗೆ

ನ್ಯಾಯದಿಂದ | ಸರ್ವಜ್ಞ ಸೂರಿಗಳರಸನೆ ರಾಘವೇಂದ್ರ ||೨||

ಭಾಸುರ ಚರೀತನೆ | ಭೂಸುರ ವಂದ್ಯನೆ | ಶ್ರೀ ಸುಧೀಂದ್ರಾರ್ಯ್ಯರ

ವರಪುತ್ರ - ರಾಯಬಾರೋ | ಶ್ರೀ ಸುಧೀಂದ್ರಾರ್ಯ್ಯರ ವರಪುತ್ರ

ವರಯೋಗಿ | ದೇಶಿಕರೋಡೆಯನೆ ರಾಘವೇಂದ್ರ ||೩||

ರಾಮ ಪದಾಂಬುಜ ಸದ್ ಬೃಂಗ| ಕೃಪಪಾಂಗ | ಭ್ರಾಮಕ ಜನರ

ಮಾನಭಂಗ - ರಾಯಬಾರೋ | ಭ್ರಾಮಕ ಜನರ ಮಾನಭಂಗ

ಮಾಡಿದ | ಧೀಮಂತರೊಡೆಯನೆ ರಾಘವೇಂದ್ರ ||೪||

ಭೂತಳನಾಥನ l ಭೀತಿಯ ಬಿಡಿಸೀದಿ l ಪ್ರೇತತ್ವ ಕಳೆದಿ ಮಹಿಷಿಯ-
ರಾಯಬಾರೋ। ಪ್ರೇತತ್ವ ಕಳೆದಿ ಮಹಿಷೀಯ l ಮಹಾಮಹೀಮ
**ಜಗನ್ನಾಥ ವಿಠ್ಠಲನ** ಪ್ರೀತಿ ಪಾತ್ರ ||೫||

**24) ಗುರುರಾಯ ಗುರು ರಾಘವೇಂದ್ರ :-**

ಗುರುರಾಯ ಗುರು ರಾಘವೇಂದ್ರ ಬಾ ||ಪ||
ನಮಿಸುವೆ ನಿಮ್ಮಡಿ ಗಮಿತ ವಿಧದಿ l ಮಮ l
ಕರ್ಮಗಳು ಕಳೆಯೋ ಹೇ ವಿಮಲಸು ತೇಜ ||ಅಪ||

ಅರ್ಥ ಜನರ ಇಷ್ಟಾರ್ಥಗಳಽಽನ್ನೆಲ್ಲಾ l
ಪೂರ್ತಿಗೊಳಿಸಿ ಕೃಥಾರ್ಥರ ಮಾಡುವಿ ||೧||

ಪವನನ ವರ ಮತ ಪ್ರವರ ನೆಂದೆನೆಸಿ l
ಶ್ರೀವರನರ್ಚಿಸುತಿಹ ಯತಿಕುಲತಿಲಕ ||೨||

ನೀನೇ ಗತಿಯೋ ಹೇ ದೀನ ವತ್ಸಲನೆ l
ಜ್ಞಾನವನ್ನು ಕೊಡು ನಾನೆಂಬದು ಕಳೆ ||೨||

ಪತಿತನು ನಾ ನಿಮ್ಮತೀಶಯ ಗುಣಗಳ l
ತುತಿಸ ಲಾಪೆನೇ ಯತಿಕುಲವರ್ಯ್ಯಾ ||೩||

ಮಾರುತಿ ವರದ **ರಮಾಪತಿ ವಿಠಲನ** l
ತಾರತಮ್ಯ ತಿಳಿಸ್ಯಾರಾಧನೆ ಕೊಡು ||೫||

## 25) ಬಾರೋ ರಾಘವೇಂದ್ರ ಬಾರೋ :-

ಬಾರೋ ರಾಘವೇಂದ್ರ ಬಾರೋ ಕಾರುಣ್ಯ ವಾರಿಧಿ ಬಾರೋ |ಪ|
ಆರಾಧಿಪ ಭಕ್ತರಭೀಷ್ಟ -೨| ಪೂರೈಸುವ ಪ್ರಭುವೇ ಬಾರೋ ||ಅ.ಪ||

ರಾಜವಂಶೋದ್ಭವನ ಪಾದ | ರಾಜೀವ ಭೃಂಗನೆ ಬಾರೋ
ರಾಜಾಧಿ ರಾಜರೊಳು -೨ | ವಿರಾಜಿಸುವ ಚಲುವ ಬಾರೋ ||೧||

ವ್ಯಾಸರಾಯನೆನಿಸಿ ನೃಪನ | ಕ್ಲೇಶ ಕಳೆದವನೆ ಬಾರೋ
ಶ್ರೀ ಸುಧೀಂದ್ರ ಕರಸಂಜಾತ | ವಾಸು-ದೇವಾರ್ಚಕನೆ ಬಾರೋ ||೨||

ಸನ್ಯಾಸ ಕುಲದೀಪ ಬಾರೋ | ಸನ್ನುತ ಮಹಿಮನೆ ಬಾರೋ
ಮಾನ್ಯ **ಜಗನ್ನಾಥ ವಿಠಲ** -೨ | ಪ್ರಸನ್ನ ಜನರ ಪ್ರೀಯ ಬಾರೋ ||೩||

## 26) ಕೋರಿ ಕರೆವೆ ಗುರು :-

ಕೋರಿ ಕರೆವೆ ಗುರು ಶ್ರೀ ರಾಘವೇಂದ್ರನೆ | ಬಾರೋ ಮಹಾ
ಪ್ರಭುವೇ ||ಪ|| ಚಾರು ಚರಣಯುಗ್ಮಸಾರಿ ನಮಿಪೆ ಬೇಗ | ಬಾರೋ
ಹೃದಯ ಸುಖಸಾರ ರೂಪವ ತೋರೋ ||ಅಪ||

ಎಲ್ಲಿ ನೋಡಲು ಹರಿ ಅಲ್ಲೇ ಕಾಣುವನೆಂದು | ಕಲ್ಲು ಕಂಬವ ನೊಡೆದು
| ನಿಲ್ಲದೆ ನರಹರಿ ಚೆಲ್ವಕೆ ತೋರಿದ -೨|
ಪುಲ್ಲಲೋಚನೆ ಶಿಶು ಪ್ರಲ್ಹಾದನಾಗಿ ಬಾರೋ ||೧||
ದೋಷವ ಕಳೆದು ಸಿಂಹಾಸನವೇರಿದ| ದಾಸ ಕುಲವ ಪೊರೆದ|
ಶ್ರೀಶನರ್ಚಕನಾಗಿ ಪೋಷಿಸಿ ಹರಿಮತ-೨|

ವ್ಯಾಸತ್ರಯವಗ್ಗೈದ ವೇಷ ತಳಿದು ಬಾರೋ ||೨||

ಮೂರ್ಜಗ ಮಾನಿತ ತೇಜೋ ವಿರಾಜಿತ | ಮೂರ್ಜಗ ಮಹಾಮಹಿಮ

ಓಜೆಗೊಳಿಸಿ ಮತಿ ರಾಜೀವ ಬೋಧದಿ-೨ || ಪೂಜೆಗೊಂಬುವ

ಗುರುರಾಜ ರೂಪದಿ ಬಾರೋ ||೩||

ಮಂತ್ರಾಸದನದೊಳು ಸಂತ ಸುಜನರಿಗೆ | ಸಂತೋಷ ಸಿರಿಽಗರೆದಾ

ಕಂತು ಪಿತನ ಪದ ಸಂತತ ಸೇವಿಪ -೨ ||

ಶಾಂತ ಮೂರುತಿ ಎನ್ನ ಅಂತರಂಗದಿ ಬಾರೋ ||೪||

ಈ ಸಮಯದಿ ನನ್ನಾಸೆ ನಿನ್ನೊಳು ಬಲು | ಸೂಸಿ ಹರಿಯುತಿಹುದೋ

ಕೂಸಿಗೆ ಜನನಿ ನಿರಾಶೆಗೊಳಿಸದಲೇ-೨||

ತೋಷ ತಳೆದು **ವಿಠಲೇಶ** ಹೃದಯ ಬಾರೋ ||5||

**27) ಬಾರೋ ಗುರು ರಾಘವೇಂದ್ರ:-**

ಬಾರೋ ಗುರು ರಾಘವೇಂದ್ರ ಬಾರಯ್ಯ ಬಾ ಬಾ ||ಪ||

ಹಿಂದು ಮುಂದಿಲ್ಲೆನಗೆ ನೀ ಗತಿ ಎಂದು ನಂಬಿದೆ ನಿನ್ನ ಪಾದವ |

ಬಂಧನವ ಬಿಡಿಸೆನ್ನ ಕರಪಿಡಿ ನಂದಕಂದ ಮುಕುಂದ ಬಂಧೋ ||

ಸೇವಕನಲೊ ನಾನು |ಧಾವಿಸಿ ಬಂದೆನು |ಸೇವೆಯ ನೀಡೋ ನೀನು

ಸೇವಕನ ಸೇವೆಯನು ಸೇವಿಸಿ |ಸೇವ್ಯಸೇವಕ ಭಾವವೀಯುತ |

ರಾವುಗಾಣಿಸಿ ಪೊರೆಯೊ ಧರೆಯೊಳು |

ಪಾವನಾತ್ಮಕ ಕಾಯ್ವ ಕರುಣಿ |೧||

ಕರೆದರೆ ಬರುವಿ ಎಂದು । ಸಾರುವುದ ಡಂಗುರ । ತ್ವರಿತದಿ ಒದಗೋ
ಬಂದು । ಜರಿಯಬೇಡವೊ ಬರಿದೆ ನಿನ್ನಯ । ವಿರಹ ತಾಳದೆ ಮನದಿ
ಕೊರಗುವೆ । ಹರಿಯ ಸ್ಮರಣೆಯ ನಿರುತದಲಿ
ಎನಗ್ಹರುಷದಲಿ ನೀ ನಿರುತ ಕೊಡುತಲಿ ॥ ೧ ॥

ನರಹರಿ ಪ್ರೀಯನೆ ಬಾ । **ಗುರು ಶ್ರೀಶವಿಠಲನ** ಕರುಣ ಪಾತ್ರನೆ ಬೇಗ
ಬಾ। ಗುರುವರನೆ ಪರಿಪೋಷಿಸೆನ್ನನು । ಮರೆಯದಲೆ ತವ ಚರಣ
ಕೋಟಿಯಲಿರಿಸಿ ಚರಣಾಂಬುಜವ ತೋರುತ
ತ್ವರಿತದಲಿ ಓಡೋಡಿ ಬಾ ಬಾ ॥೩॥

**28) ಸತತ ಮಾರ್ಗದಿ :-**

ಸತತ ಮಾರ್ಗದಿ ಸಂತತ ಸೇವಿಪರಿಗೆ
ಅತಿ ಹಿತದಲಿ ಮನೋರಥವ ಕೊಡುವೆನೆಂದು ॥ಪ॥
ರಥವನೇರಿದ ರಾಘವೇಂದ್ರ - ಸದ್ಗುಣಗಣಸಾಂದ್ರಾ ॥ಅ.ಪ॥

ಚತುರ ದಿಕ್ಕುವಿದಿಕ್ಕುಗಳಲ್ಲಿ । ಚರಿಪ ಜನರಲ್ಲಿ ।
ಮಿತಿಯಿಲ್ಲದೆ ಬಂದೋಲೈಸುತಲಿ । ವರವ ಬೇಡುತಲಿ ॥
ನುತಿಸುತ ಪರಿಪರಿ ನತರಾಗಿಹರಿಗೆ -೨
ಗತಿಪೇಳದೆ ಸರ್ವಥಾ ನಾಽ ಬಿಡೆನೆಂದು ॥೧॥

ಅತುಳ ಮಹಿಮನ ದಿನದಲ್ಲಿ । ದಿತಿಜ ವಂಶದಲಿ ।
ಉತ್ಪತ್ತಿಯಾಗಿ ಉಚಿತದಲ್ಲಿ । ಉತ್ತಮ ರೀತಿಯಲಿ ॥
ಅತಿಶಯವಿರುತಿರೆಪಿತನ ಬಾಧೆಗಳು -೨

ಮನ್ಮಥ ಪಿತನೊಲಿಸಿದ ಜಿತ ಕರುಣದಲಿ ||೨||

ಪ್ರಥಮ ಪ್ರಲ್ಹಾದ ವ್ಯಾಸಮುನಿಯೆ | ಯತಿರಾಘವೇಂದ್ರ
ಗುರುರಾಘವೇಂದ್ರ |ಪತಿತೋದ್ಧಾರೆಯೇ ಪಾವನಕಾಽಽರಿಯೆ |
ಕರಮುಗಿವೇನು ದೊರೆಯೇ |ಕ್ಷೀತಿಯೊಳು **ಗೋಪಾಲ ವಿಠ್ಠಲನ**
ಸ್ಮರಿಸುತ -೨| ಪ್ರತಿ ಮಂತ್ರಾಲಯದೊಳು ಅತಿ ಮೆರೆವ ||೩||

**29) ತೇರನೇರಿ ಮೆರೆದು ಬರುವ :-**

ತೇರನೇರಿ ಮೆರೆದು ಬರುವ | ಭೂಸುರವಂದ್ಯ ಯಾರಕ್ಕ ||ಪ||
ಗುರುರಾಘವೇಂದ್ರ ರೆಂತೇಂಬೋ | ಯತಿ ಕುಲತಿಲಕ ಕೇಳ್ತಂಗಿ |ಅಪ||

ಚಂದದಿ ಕುಂದಣ ಮುಕುಟವ ಧರಿಸಿದ ಸುಂದರನೀತ ಯಾರಕ್ಕ -೨
ತಂದೆಯ ಅಘಹರಿದು ನರಹರಿಯ ತೋರಿದ |
ಪ್ರಲ್ಹಾದರಾಯಾ ಕೇಳ್ತಂಗಿ ||೧||

ವಿಪ್ರರು ದಾಸರು ಯತಿಪತಿಗಳು ಕೂಡಿ |ಬರುತಿಹನೀತ ಯಾರಕ್ಕ-೨
ಕಪ್ಪು ಕೃಷ್ಣನ ಒಪ್ಪಿಸಿ ಕುಣಿಸಿದ | ವ್ಯಾಸರಾಯ ಕೇಳ್ತಂಗಿ ||೨||

ವರಹಜ ನದಿಯ ತೀರದಲ್ಲಿದ್ದು | ಭಕುತರ ಪೊರೆವವ ಯಾರಕ್ಕ -೨
ಹರುಷದಿ ಆನಂದ ವಿಠ್ಠಲನ ಸಾರಿದ ಪರಿಮಳಾರ್ಯ್ಯ ಕೇಳ್ತಂಗಿ ||೩||

**30) ಆಡಿ ಪಾಡಿ ಕುಣಿದಾಡಿ :-**

ರಥವನ್ನೇರಿದ ಚಂದ್ರ | ಶ್ರೀರಾಘವೇಂದ್ರ ||ಅ||
ಆಡಿ ಪಾಡಿ ಕುಣಿದಾಡಿ ಭಜನೆ ಮಾಡು ಬೇಡಿದ ವರ ಕೊಡುವ ||ಅ.ಪ||

ಕಂಬದಿ ನರಹರಿ ಒರಿಸಿದ ಕಂದ । ಕುಂಬಣಿ ಪತಿ ಕುಹಯೋಗವ
ಕಳೆದ -೨॥ ನಂಬಿದವರ ಪೊರೆವಽಽ ॥೧॥

ಆದ್ಯ ಸತ್ಯಗ್ರಹಿ ಭಕ್ತ ಶಿರೋಮಣಿ । ಉದ್ಗ್ರಂಥಗಳನು ರಚಿಸಿದ
ದಿನಮಣಿ -೨॥ ಮಧ್ವ ಮತೋದ್ಧಾರಾ ಽಽಽ ॥೨॥

**ಭೂಪತಿ ವಿಠ್ಠಲನ** ಪ್ರೀತಿ ವಿಖ್ಯಾತ । ಆಪದ್ಬಾಂದವ ಅನಾಥ ನಾಥ-೨
ರಥೋತ್ಸವದಿ ಮೆರೆವ ಽಽಽ ॥೩॥

### 31) ಕರೆದರೆ ಬರಬಾರದೆ :-

ಕರೆದರೆ ಬರಬಾರದೆ । ರಾಘವೇಂದ್ರ ಬರಬಾರದೆ ॥ಪ॥

ವರ ಮಂತ್ರಾಲಯ ಪುರ ಮಂದಿರ ತವ ।
ಚರಣ ಸೇವಕರು ಕರವ ಮುಗಿದು ॥ ೧ ॥

ಹರಿದಾಸರು ಸುಸ್ವರ ಸಮ್ಮೇಳದಿ ।
ಪರವಶದಲಿ ಬಾಯಿ ತೆರೆದು ಕೂಗಿ ॥ ೨ ॥

ಪೂಶರ ಪಿತ **ಕಮಲೇಶ ವಿಠಲನ** ।
ದಾಸಾಗ್ರೇಸರ ಈ ಸಮಯದಿ ॥ ೩ ॥

### 32) ಎದ್ದು ಬರುತಾರೆ :-

ಎದ್ದು ಬರುತಾರೆ ನೋಡೆ । ರಾಯ । ಎದ್ದು ಬರುತಾರೆ ನೋಡೆ ॥ಪ॥
ಮುದ್ದು ವೃಂದಾವನ ಮಧ್ಯದೊಳಗಿಂದ ।
ತಿದ್ದಿ ಹಚ್ಚಿದ ನಾಮ ಮುದ್ರೆಗಳೊಪ್ಪುತಲಿ ॥ಅಪ॥

ಗಳದೊಳು ಶ್ರೀ ತುಳಸಿ ನಳಿನಾಕ್ಷಮಾಲೆಗಳು ।
ಚೆಲುವ ಮುಖದೊಳು ಹೊಳೆವ ದಂತಗಳಿಂದ ॥ ೧ ॥

ಹೃದಯ ಸದನದಲ್ಲಿ ಪದುಮನಾಭನ ಭಜಿಸಿ ।
ಮುದಮನದಿಂದ ನಿತ್ಯಸದಮಲ ರೂಪ ತಾಳಿ ॥ ೨ ॥

ದಾತ ಗುರು **ಜಗನ್ನಾಥ ವಿಠಲನ** ।
ಪ್ರೀತಿಯ ಪಡಿಸುತ ದೂತರ ಸಲಹುತ ॥ ೩ ॥

**33) ಬಂದಾನೊ ರಘವೇಂದ್ರ :-**

ಬಂದಾನೊ ರಾಘವೇಂದ್ರ ಇಂದಿಲ್ಲಿಗೆ ॥ಪ॥
ಕಂದನ ಮೊರೆ ಕೇಳಿ ಜನನಿಯು ಬರುವಂತೆ ॥ಅ.ಪ॥

ಗಜವೇರಿ ಬಂದ ಜಗದಿ ತಾ ನಿಂದ -೨ ।
ಅಜಪಿತ ರಾಮನ ಪಾದಾಬ್ಜ ಸ್ಮರಿಸುತಲಿ ॥೧॥

ಹರಿಯ ಕುಣಿಸುತ ಬಂದ । ನರಹರಿ ಪ್ರೀಯ ಬಂದ -೨
ಶರಣಾಗತರನು ಕರವ ಪಿಡಿವೆನೆಂದು ॥೨॥

ಪ್ರಲ್ಹಾದ ವ್ಯಾಸ ಮುನೀಂದ್ರ ರಾಘವೇಂದ್ರ -೨
ನಿಲಿಸುತ ಮನವ **ಮಧ್ವೇಶ ವಿಠ್ಠಲನಲ್ಲಿ** ॥೩॥

**34) ಗುರು ರಾಘವೇಂದ್ರ :-**

ಗುರು ರಾಘವೇಂದ್ರ ನೀ ಧಣಿ ॥ಪ॥
ಪರಮಭಾಗವತರ ಮರೆಯದೆ ಸಲುವಂತ ಧಣಿ ॥ಅಪ॥

ಆದಿಯುಗದಿ ಪ್ರಲ್ಹಾದರಾಜ ನೆನೆಸಿ ।
ಮಾಧವ ಉತ್ತಮನೆಂದು ಸಾಧಿಽಽಸಿ ದಂಥಾ ಧಣಿ ॥೧॥

ತ್ರೇತಾಯುಗದಿ ಮತ್ತೆ ಜಾತ ಲಕ್ಷ್ಮಣನಾಗಿ ।
ಪ್ರೀತಿಯಿಂದಲಿ ರಘುನಾಥನ ಭಜಸಿದಂಥ ಧಣಿ॥೨॥

ದ್ವಾಪರಯುಗದಿ ಮತ್ತೆ ಭೂಪ ಬಾಲಿಕನಾಗಿ ।
ಶ್ರೀಪತಿ ಕೃಷ್ಣಪದ ಈ ಪರಿ ಭಜಿಸಿದಂಥಾ ಧಣಿ ॥೩॥

ಕಲಿಯುಗದೊಳು ಮತ್ತೆ ಚೆಲುವ ವ್ಯಾಸನಾಗಿ ।
ಒಲಿಸಿ ಹರಿಯಪಾದ ಜಲಜ ಭಜಿಸಿದಂಥಾ ಧಣಿ ॥೪॥

ಭೂತಳದೊಳು ಯತಿ ನಾಥ ಶ್ರೀರಾಘವೇಂದ್ರ ।
ದಾತ **ಗುರು ಜಗನ್ನಾಥ ವಿಠಲ** ಧೂತ ಧಣಿ ॥೫॥

**35) ರೋಗಹರನೆ ಕೃಪಾ**

ರೋಗಹರನೆ ಕೃಪಾ ಸಾಗರ ಶ್ರೀ ಗುರು ।
ರಾಘವೇಂದ್ರ ಪರಿಪಾಲಿಸೋ ॥ಪ॥

ಸಂತತ ದುರ್ಮತ । ಧ್ವಾಂತ ದಿವಾಕರ ।
ಸಂತವಿನುತ ಮಾತ ಲಾಲಿಸೋ ॥೧॥

ಪಾವನಗಾತ್ರ ಸುದೇವ-ವರನೆ ತವ ।
ಸೇವಕ ಜನರೊಳಗಾಡಿಸೊ ॥೨॥

ಘನ್ನ ಮಹಿಮ **ಜಗನ್ನಾಥವಿಠಲ**ರೇಯ ।ನಿನ್ನಾರಾಧನೆ ಮಾಡಿಸೊ ॥೩॥

**36) ನಿನ್ನ ಅಂಗಳದೊಳಗೆ :-**

ನಿನ್ನ ಅಂಗಳದೊಳಗೆ ಹಿಡಿ ಅನ್ನಹಾಕೋ ।
ಘನ್ನ ಶ್ರೀಗುರು ರಾಘವೇಂದ್ರ ಸಂಪನ್ನ ॥ಪ॥

ವರುಷ ವರುಷಕೆ ನಿನ್ನ । ದರುಶನವ ದಯಮಾಡು -೨ ।
ದುರಿತ ನಾಶನಗೈದು । ಪರಿಶುದ್ಧಗೊಳಿಸೊ ॥
ಅರಿತು ಅರಿಯದೆ ಗೈದ । ಪಾಪಕರ್ಮವ ಕಳೆದು - ೨।
ಪರಿಶುದ್ಧ ಮಾಡ ಎನ್ನ ಪರಮ ಗುರುವೆ ॥ ೧ ॥

ನಿನ್ನ ಭಕುತರ ಪಾದ । ರಜ ದೊಳೀಡಾಡಿಸೋ -೨ ।
ನಿನ್ನ ಗುಣಕೀರ್ತನೆಯ ಕಿವಿಗಳಲಿ ನಿಲಿಸೋ ॥
ನಿನ್ನ ಪಾದೋದಕದಿ ಪಾವನ್ನ ಮಾಡೆನ್ನ -೨ ।
ನಿನ್ನ ರಘುಪತಿ ದಿವ್ಯ । ದರುಶನವ ಕೊಡಿಸೊ ॥ ೨ ॥

ಏನು ಬೇಡಲಿ ನಾನು ದಾನಿಕರ್ಣನೆ ನಿನ್ನ -೨ ।
ಜ್ಞಾನಿ ಸದ್ಗುರು ಕಲ್ಪವೃಕ್ಷ ಸುರಧೇನು ॥
ದೀನ ರಕ್ಷಕ **ವಿಠಲೇಶ** ಕರುಣಾಭರಣ -೨ ।
ಸಾನುರಾಗದಿ ನಿನ್ನ ಸೇವಕರೊಳಿರಿಸೋ ॥೩॥

**37) ಯಾಕೆ ಮೂಕನಾದ್ಯೋ**

ಯಾಕೆ ಮೂಕನಾದ್ಯೋ ಗುರುವೇ ನೀ ।
ಯಾಕೆ ಮೂಕನಾದಿ ಲೋಕಪಾಲಕ ಎನ್ನ ।
ಸಾಕುವರಾರಯ್ಯ ಶ್ರೀಕರ ರಾಘವೇಂದ್ರ ॥ಪ॥

ಹಿಂದಕ್ಕೆ ನೀ ಎನ್ನ ಮುಂದೆ ಸುಳಿದಾಡಿದಿ ।
ಮಂದಿಯೊಳಗೆ ಎನ್ನ ಮಂದನ್ನ ಮಾಡಿದೆ ಈಗ ॥
ಬೇಕಾಗದಿದ್ದರೆ ಇನ್ನ್ಯಾಕೆ ಕೈಯನು ಪಿಡಿದೆ ।
ಕಾಕುಜನರೊಳೆನ್ನ ನೂಕಿ ಬಿಟ್ಟು ನೀನು ॥೧॥

ಈಗ ಪಾಲಿಸದಿರೆ ಯೋಗಿಕುಲವರ್ಯ-೨ ।
ರಾಘವೇಂದ್ರನೆ ಭವ ಸಾಗುವದ ಹ್ಯಾಂಗಯ್ಯ ॥
ನಿನ್ನಂಥ ಕರುಣಿಲ್ಲ ಎನ್ನಂಥ ಕೃಪಣಿಲ್ಲ ।
ಘನ್ನ ಮಹಿಮ ನೀ ಎನ್ನನು ಬಿಟ್ಟೀಗ ॥೨॥

ಜನನಿಯು ನೀ ಎನಗೆ ಜನಕನು ನೀನಯ್ಯ ।
ಮನ್ನಿಸೋ ನೀ ನಿತ್ಯ ಅನನ್ಯ ಶರಣನಯ್ಯ ॥

ಎಂದಿಗಾದರೂ ನಿನ್ನ ಪೊಂದಿಕೊಂಡವನಲ್ಲೋ ।
ಇಂದು ನೀ ಬಿಟ್ಟರೆನ್ನ ಮುಂದೆ ಕಾಯುವರಾರೋ ॥
ನಾಥನು ನೀ ಅನಾಥನು ನಾನಯ್ಯ ।
ನಾಥೋಜ ಗುರು **ಜಗನ್ನಾಥವಿಠ್ಠಲ** ಪ್ರೀಯ ॥೩॥

**38) ನೋಡೋಣ ಬಾ**

ನೋಡೋಣ ಬಾ ಗುರು ರಾಘವೇಂದ್ರರ ॥ಪ॥
ಬೇಡಿದ ವರಗಳ ನೀಡುವರ ॥ಅಪ॥

ತುಂಗ ತುಂಗ ತರಂಗ ಶುಭಾಕರ ।

ಮಂಗಳ ಮಂತ್ರಾಲಯದಲ್ಲಿಹರ-೨॥
ರಂಗನ ಮಹಿಮೆಯ ಹಿಂಗದೆ ಪೊಗಳುತಾ-೨ ।
<u>ಸಂಗದೊಳಿರುತಲಿ</u> ನಗುತಿಹರ ॥೧॥

ಕರದೊಳು ದಂಡ ಕೊರಳೊಳು ತುಳಸಿ ।
ಸರಸಿಜಾಕ್ಷ ಮಣಿ ಮಾಲೆಗಳು ॥
ಸಿರಿವರನಂಘ್ರಿಯ ಹರುಷದಿ ಸ್ಮರಿಸುತ-೨ ।
<u>ಶರಣಾಗತರನು</u> ಪೊರೆಯುವರ ॥೨॥

**ಗುರುರಾಜವಿಠ್ಠಲನ** ಚರಣಾಬ್ಜದಿ ಮಧು । ಕರಣ ತೆರದಿ
ಸಂಚರಿಸುವರ ॥ ಪರಮ ಕರುಣಿ ಸತ್ಪರಿಮಳಕಾರರು-೨ ।
<u>ಹರುಷದಿ ಹರಿಯ</u> ಸ್ಮರಿಸುವರ ॥೩॥

**39) ಗುರುರಾಘವೇಂದ್ರರ**

ಗುರುರಾಘವೇಂದ್ರರ ಚರಣಕಮಲವನ್ನು ಸ್ಮರಿಸುವ ಮನುಜರಿಗೆ ॥ಪ॥
ಕರೆಕರೆಗೊಳಿಸುವ ದುರಿತ ದುಷ್ಕೃತ್ಯವೆಲ್ಲ -೨ ।
ಕರಿಯ ಸಿಂಹನ ಕಂಡ ತೆರೆ-ನಾಗುವುದಯ್ಯಾ ॥ಅಪ॥
ಅಂಧಕರಿಗೆ ಚಕ್ಷು ಬಂಜೆಯರಿಗೆ ಸುತರು ।
ಬಂದಬಂದವರಿಗೆ ಅಭೀಷ್ಟವ ಕೊಡುತಾ-೨॥
ಒಂದಾರುನೂರು ಸಂವತ್ಸರ ವೃಂದಾವನದಿ-೨।
ಚಂದಾಗಿ ಮೆರೆದು ಬರುವ ಕೃಪಾಸಿಂಧು ॥೧॥

**ರಾ** ಎನ್ನಿ ರಾಷಿ ದೋಷಗಳೆಲ್ಲಾ ದಹಿಸುವಾ ।

**ಘ** ಎನ್ನಿ ಘನ ಜ್ಞಾನ ಭಕ್ತಿಯೀವ -೨॥
**ವೇಂ** ಎನ್ನಿ ವೇಗದಿ ಜನನ ಮರಣದೂರ-೨।
**ದ್ರ** ಎನ್ನಿ ದ್ರವಿಣಾರ್ಯ್ಯ ಶ್ರುತಿ ಪಾದ್ಯದ ಕಾಂಬ ॥೨॥

ದೇವಂಶರಾಗೀ ತುಂಗಾ ತೀರದಿ ನಿಂತು ।
ಸೇವೆ ಬಹು ಸುರರಿಂದ ಬಹುಗೊಳ್ಳುತ್ತಾ -೨॥
ಭಾವಜನಯ್ಯಾ **ಗೋಪಾಲ ವಿಠ್ಠಲ**ನ -೨।
ಸೇವಿಸುತಿಹ ವರ ಶೀಖಾಽಽಮಣಿಯಾದ ॥೩॥

## 40) ರಾಘವೇಂದ್ರ ಗುರುರಾಯರಂಘ್ರಿಯ

ರಾಘವೇಂದ್ರ ಗುರುರಾಽಯರಂಘ್ರೀಯ । ಆರಾಧಿಸಿರೋ ವಿಮಲಾ।ಪ॥
ಯತೀವರ ಸುಧೀಂದ್ರ ಕರಜಾತ । ಕ್ಷಿತಿಸುರಽ ಪೂಜಿತ ಯತಿ ಈತ೨॥
ಸ್ತುತಿಪರ-ಘವ ನೀಮಿಷದಿ ತಾ ಕಳೆವಾ। ಕರೆದಲ್ಲಿಗೆ ತಾ ಬರುವ ॥
ಶೃತಿ-ಸುಮೃತಿ-ಗತ ಸಮ್ಮ್ಮತವಾದ ಗ್ರಂಥಗಳ।
ರಚಿಸಿದ ಧೀಮಂತ । ಬಲು ಶಾಂತನೀತ ॥೧॥
ಮಧ್ವಮತ ದುಗ್ಧಾಬ್ಧೀ ಉಡುರಾಜ । ಧರಣಿಽಽ ಸಮತೇಜ -೨ ॥
ಸದ್ವೈಷ್ಣವರಿಗೆ ಸತತ ಸುಧಾಽರಸವಾ । ಮಳೆಗಽರೇಽವ ನೀತಾ॥
ಪೂಜ್ಯದ್ಭವ ಸಮ ಬುದ್ದಿ ಶಾಲ್ಯನೀತಾ-೨।
ಜಗದೋಳಗೇ ಅತಿ ಪ್ರೀತ ॥2॥

ಸ್ಮರಿಸುವ ಜನರಿಗೆ ಸುಖಕರ ಕರನೀತಾ। ಸುಜನರ ಅನುಭವ
ವೇದ್ಯ-೨॥ ಕುರುಡ ಕಿವುಡ ಮೂಽಕರ ಮನದಾ ಭೀಷ್ಟಾ।

ಕೊಡುವದರಲಿ ತಾ ಶ್ರೇಷ್ಠ ‖ ದೊರೆ ಶ್ರೀಶ ವಿಠಲನ ಚರಣಾಗ್ರಜ

ನೀತಾಽಽ-೨‖ ಶ್ರೀಹರಿಗೆಽಽ ಅತಿ ಪ್ರೀತ ‖3‖

**41) ತುಂಗಾ ನದೀ ತೀರದಿ**

ತುಂಗಾ ನದೀ ತೀರದಿ ರಾಜಿಪ ಯತಿಯ । ನೀರೆ ನೋಡೋಣ ಬಾ

ಬಾ ಬಾ ನೀರೆ ನೋಡೋಣ ಬಾ ‖ಪ‖

ವೃಂದಾಽಽವನದೊಳಗಿರುವ । ವೃಂದಾರಕರನು ಪೊರೆವ ।

ವೃಂದಗುಣಗಳಿಂ ಮೆರೆವ-೨।ವೃಂದಾರಕತರು ಎನಿಸಿದ ಸುಜನಕೆ‖೧‖

ಮರುತ ಮತಾಂಬುಧಿ ಚಂದ್ರ । ದಿನಕರ ಅಘತಮಕೆ ರವೀಂದ್ರ ।

ದುರುಳ ಮತಾಹಿ ಖಗೇಂದ್ರ-೨ ।

ಗುರು ಕರುಣಾಕರ ಶ್ರೀರಾಘವೇಂದ್ರರ ‖೨‖

ರವಿ ಶಶಿ ಕುಜ ಬುಧ ಗುರುವೇ । ಕವಿ ರಾಹು ಧ್ವಜ ಗುರುಬಲವೇ ।

ಇವರ ದರುಶನದ ಫಲವೇ -೨।

ಗುರು **ಅಭಿನವ ಜನಾರ್ದನವಿಠಲನ** ದಯವೆ‖೩‖

**42) ವೃಂದಾವನದಲಿ ಅಂದದಿ**

ವೃಂದಾವನದಲಿ ಅಂದದಿ ಕುಳತಿಹ ಸುಂದರಯತಿವರನ್ಯಾರೆ ‖ಪ‖

ಇಂದಿರೆಯರಸನ ಛಂದದಿ ಭಜಿಸುವ -೨ ।

ಸುಂದರ ಗುರು ರಾಘವೇಂದ್ರ ಕಣಮ್ಮ ‖ ಅ.ಪ ‖

ಮಂತ್ರಾಲಯ ಕೃತ ಮಂದಿರನೆನಿಸುವ ।

ತಂತ್ರ ದೀಪಕೆ ಮುಖ್ಯ ಗ್ರಂಥ ವಿರಚಿಸಿದ -೨ ||
ಕಂತುಪಿತನ ಗುಣ ಚಿಂತಿಪನ್ನಾರೆ ಪೇಳಮ್ಮ |
ಶಾಂತ ಮೂರುತಿ ಮಹಾಂತ ಶಕ್ತ ದಯ -೨ | ವಂತ
ನೀತ ರಾಘವೇಂದ್ರ ಕಣಮ್ಮ ||೧||

ಶ್ರೀಸುಧೀಂದ್ರ ಕರಕಮಲಜ ನೆನಿಸುವ ತಾ ಸ್ವಪ್ನದಿ
ಮಂತ್ರಾಕ್ಷತೆ ಕೊಡುತಿಹ -೨ || ಅಶುಗಮನ ಮತ | ಸ್ಥಾಪಕನ್ಯಾರೆ
ಪೇಳಮ್ಮ | ಭಾಸುರ ಚರಿತ ವಿಷೇಶವಾದ ಹರಿ -೨ |
ದಾಸ್ಯವ ಪಡೆದ ಯತೀಶ ಕಣಮ್ಮ || ೨ ||

ಧಾರುಣಿಪತಿಜ ತೀರದಿ ನೆಲಸಿಹ | ಸಾರುವ ಭಕುತರ
ಬಿಡದೆ ಸಲಹುವ -೨ | ಕಾರುಣ್ಯನಿಧಿ ಅಪಾರ ಮಹಿಮನ್ಯಾರೆ ||
ನಾರಾಯಣ ತಂದೆ **ಶ್ರೀಪತಿ ವಿಠಲನ** -೨ |
ಆರಾಧಿಪ ರಾಘವೇಂದ್ರ ಕಣಮ್ಮ || ೩ ||

**43) ತುಂಗಾತೀರದಿ ನಿಂತ :-**

ತುಂಗಾತೀರದಿ ನಿಂತ ಸುಯತಿವರನ್ಯಾರೇ ಪೇಳಮ್ಮಯ್ಯ ||ಪ||
ಸಂಗೀತಪ್ರಿಯ ಮಂಗಳ ಸುಗುಣಿತ ರಂಗ-
ಮುನಿಕುಲೋತ್ತುಂಗಾ ಕಣಮ್ಮಾ ||ಅ.ಪ||

ಚೆಲ್ವ ಸುಮುಖ ಫಣಿಯಲ್ಲಿ ತಿಲಕನಾಮಗಳು ಪೇಳಮ್ಮಯ್ಯ |
ಜಲಜ ಮಣಿಯು ಕೊರಳೊಳು ತುಳಸಿ ಮಾಲೆಗಳು ಪೇಳಮ್ಮಯ್ಯ ||
ಸುಲಲಿತ ಕುಂಡಲ ದಂಡವನ್ನೇ ಧರಿಸಿಹನೆ ಪೇಳಮ್ಮಯ್ಯ |

ಖುಲ್ಲ ಹಿರಣ್ಯಕನಲ್ಲಿ ಜನಿಸಿದ ಪ್ರಲ್ಹಾದನು ತಾನಿಲ್ಲಿಹನಮ್ಮ ||೧||

ಸುಂದರ ಚರಣಾರವಿಂದ ಸುಭಕುತಿಯಲಿಂದ ಪೇಳಮ್ಮಯ್ಯ |
ವಂದಿಸಿ ಸ್ತುತಿಸುವ ಭೂಸುರರು ಬಲುವೃಂದ ಪೇಳಮ್ಮಯ್ಯ ||
ಚಂದದಲಂಕೃತದಿ ಶೋಭಿಸುವ ಆನಂದ ಪೇಳಮ್ಮಯ್ಯ |
ಹಿಂದೆ ವ್ಯಾಸಮುನಿ-ಯೆಂದೆನಿಸಿದ
ಕರ್ಮಂದಿಗಳರಸಃಫ-ದಿಂದ ರಹಿತನೆ ||೨||

ಅಭಿನವ **ಜನಾರ್ದನವಿಠಲ**ನ ಧ್ಯಾನಿಸುವ ಪೇಳಮ್ಮಯ್ಯ |
ಅಭಿವಂದಿತರಿಗೆ ಅಖಿಳಾರ್ಥವ ಸಲ್ಲಿಸುವ ಪೇಳಮ್ಮಯ್ಯ ||
ನಭಮಣಿಯಂದದಿ ಭೂಮಿಯಲ್ಲಿ ರಾಜಿಸುವ ಪೇಳಮ್ಮಯ್ಯ |
ಶುಭಗುಣ ನಿಧಿ ಶ್ರೀರಾಘವೇಂದ್ರ ಯತಿ-೨ |
ಅಂಬುಜ-ಭವಾಂಡದೊಳು ಪ್ರಬಲ ಕಣಮ್ಮ ||೩||

**44) ರಾಘವೇಂದ್ರ ಗುರು ರಾಯರ :-**

ರಾಘವೇಂದ್ರ ಗುರು ರಾಯರ ಸೇವಿಸಿರೋ|ಸೌಖ್ಯದಿ ಜೀವಿಸಿರೋ|ಪ|
ತುಂಗಾ ತೀರದಿ ರಘು ರಾಮನ ಪೂಜಿಪರೋ
ನರಸಿಂಗನ ಭಜಕರೋ ||ಅಪ||

ಶ್ರೀ ಸುಧೀಂದ್ರ ಕರ ಸರೋಜ ಸಂಜಾತಾ ಜಗದೊಳಗೆ ಪುನೀತಾ |
ದಾಶರಥಿಯ ದಾಸ್ಯತ್ವವ ತಾ ವಹಿಸಿ ದುರ್ಮತಗಳ ಜಯಿಸಿ ||
ಈ ಸಮೀರ ಮತ ಸಂಸ್ಥಾಪಕರಾಗಿ ನಿಂದಕನು ನೀಗಿ |
**ಭೂಸುರರಿಗೆ ಸಂಸೇವ್ಯಸದಾ ಚರಣಿ ಕಂಗೊಳಿಸುವ ಕರುಣಿ ||೧||**

ಕುಂದದೆ ವರಮಂತ್ರಾಲಯದಲ್ಲಿರುವಾ ಕರದಲ್ಲಿಗೆ ಬರುವಾ ।
ವೃಂದಾವನಗತ ಮೃತ್ತಿಕೆ ಜಲಪಾನಾ ಮುಕುತಿಗೆ ಸೋಪಾನಾ ॥
ಸಂದರ್ಶನ ಮಾತ್ರದಲಿ ಮಹಾತ್ಪಾಪಾ ಬಡಿದೋಡಿಸಲಾಪಾ ।
**ಮಂದ ಭಾಗ್ಯರಿಗೆ ದೊರೆಯದಿವರ ಸೇವಾ ಶರಣರ ಸಂಜೀವಾ ॥೨॥**

**ಶ್ರೀಧ ವಿಠಲನ** ಸನ್ನಿಧಾನ ಪಾತ್ರಾ ಸಂಸ್ತುತಿಸಲು ಮಾತ್ರಾ ।
ಮೋದಬಡಿಸುತಿಹ ತಾನಿಹ ಪರದಲ್ಲಿ ಈತಗೆ ಸರಿಯಲ್ಲಿ ॥
ಮೆದಿನಿಯೊಳಗಿನ್-ರಸಲು ನಾ ಕಾಣೆ ಪುಸಿಯಲ್ಲೆನ್ನಾಣೆ ।
**ಪಾದಸ್ಮರಣೆಯ ಮಾಡದವನೆ ಪಾಪಿ । ನಾ ಪೇಳುವೆ ಸ್ಥಾಪಿ ॥೩॥**

**45) ನೀ ಪಾಲಿಸು ಗುರುರಾಯಾ**

ನೀ ಪಾಲಿಸು ಗುರುರಾಯಾ । ಎನ್ನ ಕಾಪಾಡೀಗ ಮಹಾರಾಯ ॥ಪ॥
ಭೂಪತಿ ನೀ ಎನ್ನ ಆಪತ್ತುಬಾಂದವ ।
ಶ್ರೀಪತಿ ಪದ ಪ್ರೀಯ ಈ ಪರಿ ಮಾಳ್ಪರೆ ॥ಅ.ಪ॥

ಪಾಪಿಗಳೊಳಗೆ ಹಿರಿಯನು ನಾನಯ್ಯ । ನಿಷ್ಪಾಪಿಗಳರಸೆ
ಗುರುರಾಯಾ -೨। ಆಪಾರ ಜನ್ಮವೆತ್ತಿ ಬಂದಿಹೆ ನಾನು -೨ ॥
ತಾಪತ್ರಯ ಕಳೆ ಮಹಾರಾಯಾ -೨ ॥೧॥

ನೀಚರ ಒಳಗೆ ನೀಚನು ನಾನೈ । ಪಾಪ ವಿಮೋಚನೆ ಮಾಡು
ಗುರುರಾಯಾ -೨। ಯೋಚನೆ ಇಲ್ಲದೇ ಅನ್ಯರ ಅನುದಿನ -೨॥
ಯಾಚಿಸಿಕೆಟ್ಟೆನು ಮಹಾರಾಯಾ -೨ ॥೨॥

ನಿನ್ನನೇ ನಂಬಿ ಅನ್ಯರ ಬೇಡೊದು | ಘನತೆಯು ನಿನಗೆ
ಗುರುರಾಯಾ -೨| ಅನ್ನವು ಇಲ್ಲದೇ ಅನ್ಯರ ಮನೆಯಲ್ಲಿ -೨||
ಕುನ್ನಿಯಾದೆನೊ ಮಹರಾಯಾ -೨ ||೩||

ದೀನರ ಒಳಗೆ ದೀನನು ನಾನೈ | ಜ್ಞಾನಿಗಳರಸೆ ಗುರುರಾಯಾ -೨|
ಜ್ಞಾನವು ಇಲ್ಲದೆ ನಾನು ನನ್ನದು ಎಂಬೊ -೨||
ಹೀನಮತ್ಯಯಾದೆನೊ ಮಹಾರಾಯಾ-೨ ||೪||

ದಾತನು ನೀನು ಪೋತನು ನಾನೈ | ಈ ಪರಿ ಮಾಳ್ಪರೇ
ಗುರುರಾಯಾ-೨| ದಾತಗುರು **ಜಗನ್ನಾಥ ವಿಠಲ** ಪ್ರೀಯ -೨||
ದೂತನು ನೀನೆ ಮಹರಾಯಾ ||೫||

**46) ಭೋಯತೀ ವರದೇಂದ್ರ :-**

ಭೋಯತೀ ವರದೇಂದ್ರ | ಶ್ರೀಗುರು ರಾಯ ರಘವೇಂದ್ರ ||ಪ||
ಕಾಯೋ ಎನ್ನ ಶುಭ ಕಾಯ ಭಜೀಸುವೇನು -೨ |
ಕಾಯೋ ತವಕ ಚಂದ್ರ | ಶ್ರೀಗುರು ರಾಯ ರಾಘವೇಂದ್ರ ||ಅಪ||

ನೇಮವು ಎನಗಲ್ಲಿ | ಇರುವದು ಕಾಮಧಮನಲ್ಲಿ -೨ |
ಶ್ರೀ ಮಹಾಮಹೀಮನೆ ಪಾಮರ ನಾ ನಿಮ್ಮ -೨||
ನಾಮ ಒಂದೆ ಬಲ್ಲೆ ||೧||

ಕಂಡ ಕಂಡ ಕಡಗೆ | ತೀರುಗಿ ಬೆಂಡಾದೆನೋ ಕೊನೇಗೆ -೨|
ಕಂಡ ಕಂಡವರ ಕೊಂಡಾಡುತ್ತ ನಿಮ್ಮ -೨ ||
ಕಂಡ ಕಟ್ಟ ಕಡೆಗೆ ||೨||

ಮಂತ್ರವ ನಾ ನರೀಯೆ | ಶ್ರೀ ಮನ್ ಮಂತ್ರಲಯ ದೊರೆಯೆ -೨|
ಅಂತರಂಗದೋಳ್ ಇತ್ತು ಪ್ರೇರಿಸೋ -೨||
ಅನಂತಾದ್ರೀಷ ಧರೆಯೆ ||೩||

**47) ಸತತ ಪಾಲಿಸೋ ಎನ್ನ:-**

ಸತತ ಪಾಲಿಸೋ ಎನ್ನ ಯತಿ ರಾಘವೇಂದ್ರ ||ಪ||
ಪತಿತ ಪಾವನ ಪವನ ಸುತಮತಾಂಬುಧಿ ಚಂದ್ರಾಽಽ ||ಅ.ಪ||

ಕ್ಷೋಣಿಯೊಳಗೆ ಕುಂಭಕೋಣ ಕ್ಷೇತ್ರದಿ ಮೆರೆದೆ |
ವೀಣಾವೆಂಕಟ ಅಭಿದಾನದಿಂದಾ -೨ ||
ಸಾನುರಾಗದಿ ದ್ವಿಜನ ಪ್ರಾಣವುಳುಹಿದ ಮಹಿಮೆ -೨ |
ಎನೆಂದು ಬಣ್ಣಿಸಲಿ ಜ್ಞಾನಿಗಳ ಕುಲತಿಲಕ ||೧||
ನಂಬಿದೆನೊ ನಿನ್ನ ಚರಣಾಂಬುಜವ ಮನ್ಮನದ |
ಹಂಬಲ ಪೂರೈಸೊ ಬೆಂಬಿಡದಲೆ -೨||
ಕುಂಭಿಣಿ ಸುರನಿಕುರುಂಬವಂದಿತ ಜಿತ -೨ |
ಶಂಭರಾಂತಕ ಶಾತ ಕುಂಭಕಶ್ಯಪ ತನಯ ||೨||

ಮಂದಮತಿಗಳ ಸಂಗದಿಂದ ನಿನ್ನಯ ಪಾದ |
ಇಂದಿನ ತನಕ ನಾ ಪೊಂದಲಿಲ್ಲಾ -೨ ||
ಕುಂದುಎಣಿಸದೆ ಕಾಯೊ ಕಂದರ್ಪಪಿತ **ಶ್ಯಾಮ** -೨ |
**ಸುಂದರದಾಸ** ಕರ್ಮಂದಿಗಳ ಕುಲವರ್ಯಽಽಽ ||೩||

**48) ರಾಘವೇಂದ್ರ ದಯ ತೋರೋ :-**

ರಾಘವೇಂದ್ರ ದಯ ತೋರೋ ||ಪ||

ಬಾಗಿ ಭಜಿಪೆ ಮೌನಿ ಚಂದ್ರ ||ಅಪ||

ರಾಗ ಭರೀತಾ ಜೀವನ ವೆಂಬೊ | ಸಾಗರದೊಳುನಾ

ಮುಳುಗುತ್ತೀಹೆನು-೨ || ಬೇಗ ಸುಮತಿ ದಡವ ನಿಕ್ಕಿ -೨ |

ಸಾಗಿಸ್ಯೆಯ್ಯಾ ಭವದ ನೌಕೆ ||೧||

ಭಂಗಗೊಳಿಸ್ಯೆ ಸರ್ವಪಾಪಾ | ಹಿಂಗೀಸ್ಯೆಯ್ಯಾ ಭವದತಾಪ -೨ ||

ರಂಗ ಶ್ರೀ **ಕಮಲೇಶನ ಪೊರೆವಾ** -೨|

ಮಂಗಲ ಪಥವಾ ತೋರಿಸಯ್ಯಾ ||೨||

**49) ತುಂಗಾತೀರ ವಿರಾಜಂ :-**

ತುಂಗಾತೀರ ವಿರಾಜಂ ಭಜಮನ ||ಪ||

ರಾಘವೇಂದ್ರ ಗುರುರಾಜಂ ಭಜಮನ ||ಅ.ಪ||

ಮಂಗಲಕರ ಮಂತ್ರಾಲಯ ವಾಸಂ -೨ |

ಶೃಂಗಾರಾನನ ವಿರಾಜಿತ ಹಾಸಂ ||೧||

ಕರಧೃತ ದಂಡ | ಕಮಂಡಲ ಮಾಲಂ -೨ |

ಸುರಚಿರ ಸೇವಿತ ಧೃತಮಣಿ ಮಾಲಂ ||೨||

ನಿರುಪಮ ಸುಂದರ ಕಾಽಽಯ ಸುಶಿಲಂ -೨ |

**ವರ ಕಮಲೇಷಾಽಽರ್ಪಿತ** ನಿಜ ಸಕಲಂ ||೩||

**50) ನಮಿಸಿ ಬೇಡವ ವರಗಳ :-**

ನಮಿಸಿ ಬೇಡವ ವರಗಳ ನಿಮ್ಮ ||ಪ||
ಸಂಯಮೀಕುಲೋತ್ತಮ | ರಘವೇಂದ್ರರನ್ನುನಾ ||ಅ.ಪ||

ವಿಮಲ ಸುಮತಿ ಜನರತಿಪ್ರೀಯಽಽ | ಪಾದ ಕಮಲಗಳಿಗೆರಗುವೆನು
ಜಿಯಾ -೨| ಶಮಲ ಮಾರ್ಗದಲಿ ಮತಿಯ ನೀಡದಿರೋ -೨ |
ಅಮಿತ ಕರುಣದಿ ಪಿಡಿಯೋ ಕೈಯ್ಯಾ ||೧||

ಕಂಡವರ ಬೇಡಿ ನೊಂದೆ ಽಽ | ಕಮಂಡಲ ದಂಡಧಾರಿ
ನಿನೇಗತಿಯಂದೆ -೨|ಪಂಡಿತಾಗ್ರಗಣ್ಯ ಇನ್ನಾದರು ಮುಂದೆ -೨ |
ಕೋದಂಡ ಪಣಿಪಾದವ ತೋರಿಸು ತಂದೆ ||೨||
ಶ್ರೀಸುಧಿಂದ್ರ ಕರಸಂಜಾತಽಽ | ತುಂಗಾಸುನದಿ ನಿಲಯಾಂಭುದಿ
ಪೋತಾ -೨ | ವಾಸುಕಿಶಯನ ಗುರು **ಜಗನ್ನಾಥ ವಿಠ್ಠಲನ** -೨ |
ದಾಸರ ಪೋಷಕ ಲಾಲಿಸೆನ್ನ ಮಾತ ||೩||

**51) ಗುರು ರಾಘವೇಂದ್ರ ತೀರ್ಥ :-**

ಗುರು ರಾಘವೇಂದ್ರ ತೀರ್ಥ ನೀತಾ ||ಪ||
ರಾಜಿಸುವಾತ ವಿರಾಜಿಸುವಾತ ||ಅ.ಪ||

ಬಣ್ಣಬಣ್ಣದಿಂದ ಬಹಳ ಬೋದಿಸುವಾತ | ನಮಗೆ
ಸಣ್ಣ ದೊಡ್ಡ ಅಭೀಷ್ಟಗಳನು ಸಾಧಿಸುವಾತ -೨
ಪೂಣ್ಯವಂತರಿಂದ ಬಹಳ ಪೂಜೆಗೊಂಬಾತ -೨
ನಮಗೆ ಕಣ್ಣು ಹಬ್ಬವಾಗುವಂತೆ ಕಾಣಿಸುವಾತ ||೧||

ಕಾಮ ಕ್ರೋಧಾದಿಗಳನು ಕಾಲಿಲ್ಲೊದ್ದಾತ । ಈತ
ವ್ಯೋಮಕೇಶನಂತೆ ನಾಲ್ಕು ವೇದ ವಿಖ್ಯಾತ -೨
ಭೂಮಿಯೊಳ್ ದುರ್ವಾದಿಗಳನೆ ದೂರಗೆದ್ದಾತ -೨
ಶ್ರೀಯೋಗಿಂದ್ರ ತೀರ್ಥರ ಶಿಷ್ಯನೆಂಬಾತ ॥೨॥

ಸಿದ್ಧ ವಿದ್ಯೆಗಳಲಿ ಬಹು ಪ್ರಸಿದ್ಧನಾದಾತ । ನಮಗೆ
ಮಧ್ವಶಾಸ್ತ್ರಗಳನೆ ತಾ ಹೇಳಿಕೊಟ್ಟಾತ -೨
**ಮಧ್ವೇಶ ವಿಠ್ಠಲನ** ಧ್ಯಾನದಲ್ಲಿರುವ -೨
ತುಂಗಭದ್ರೆಯs ತೀರದಲಿ ವಾಸವಾದಾತ ॥೩॥

**52) ಮಂತ್ರಾಲಯ ನಿವಾಸ:-**

ಮಂತ್ರಾಲಯ ನಿವಾಸ ಉತ್ತಮ ಹಂಸ ।
ಸಂತಾಪ ಪರಿಹರಿಸಿ ಕೊಡು ಜನಕೆ ಲೇಷ ॥ಪ॥

ಯತೀಗಳ ಶಿರೋರನ್ನ ಯೋಗ ಸಂಪನ್ನ ।
ಕ್ಷಿತಿಯೊಳಗೆ ನಿನಗೆ ಸರಿಗಾಣೆನೊ ॥
ಸ್ತುತಿಸುವೆ ಭಕ್ತಿಯಲಿ ಬೇಡದೆ ।ಮುಕುತಿಯಲಿ ಸತತಾನಂದದಲ್ಲಿಪ್ಪ॥

ಕಪಿಲ ತೀರ್ಥದಲ್ಲಿ ಕರಣ ಶುಧಿಯಲ್ಲಿ -೨ ।
ತಪವ ಮಾಡುವ ಜ್ಞಾನಿ ಸೌಮ್ಯಜ್ಞಾನೀ ॥
ಜಪ ಶೀಲಗುಣಗಳಾಂಬುದಿ ಪೂಣ್ಯಾದ ಬುಧ್ಧಿ ।
ಕೃಪೆಮಾಡಿ ಕೊಡು ಗುರುವೆ । ಶಿಷ್ಯಸುರ ತರುವೆ ॥೨॥

ವರಹಜ ತೀರದಲ್ಲಿದ್ದ ಸುಪ್ರಸಿದ್ಧ -೨।
ಮರುತ ಮತಾಂಬುದಿ ಸೋಮನಿಸ್ಸಿಮ -೨ ॥
ಸರಸಿಜಾಪತೀ ನಮ್ಮ **ವಿಜಯವಿಠಲ**ನಂಘ್ರೀ -೨।
ಸ್ಮರೀಸುವೆ ಸುಧೀಂದ್ರಸುತ ರಾಘವೇಂದ್ರ ॥೩॥

**53) ವೃಂದಾವನ ನೋಡಿರೋ :-**

ವೃಂದಾವನ ನೋಡಿರೋ ಗುರುಗಳ ॥ಪ॥
ವೃಂದಾವನ ನೋಡಿ ಆನಂದ ಮದವೇರಿ ।
ಚಂದದಿ ದ್ವಾದಶ ಪುಂಡ್ರಾಂಕಿತ ಗೊಂಬ ॥ಅ.ಪ॥

ತುಂಗಭದ್ರನದಿಯ ತೀರದಿಯಿದ್ದ । ತುಂಗ ಮಂಟಪ ಮಧ್ಯದಿ ।
ಶೃಂಗಾರ ತುಳಸಿ ಪದುಮಾಕ್ಷ ಸರಗಳಿಂದ -೨ ॥
ಮಂಗಳಕರ ಮಹಾ ಮಹಿಮೆಯಿಂದೊಪ್ಪುವ ॥೧॥

ದೇಶದೇಶದಿ ತಿರುಗುತ ಇಲ್ಲಿಗೆ ಬಂದು । ವಾಸವಾಗಿ ಸೇವಿಪ ।
ಬಾಷೆಕೊಟ್ಟಂದದಿ ಬಹು ವಿಧ ವರಗಳ -೨ ॥
ಸೂಸುವ ಕರ ಮಹಾ ಮಹಿಮೆಯಿಂದೊಪ್ಪುವ ॥೨॥

ನಿತ್ಯ ಸನ್ನಿಧಿ ಸೇವಿಪಾ ಭಕ್ತರಿಗೆಲ್ಲ ಮತ್ತ ಭೀಷ್ಟವ ಕರೆವ ।
ಸತ್ಯಾದಿ ಗುಣಸಿಂಧು **ವೆಂಕಟ ವಿಠ್ಠಲ**ನ್ನ -೨ ॥
ನಿತ್ಯ ಸನ್ನಿಧಿಯಿಂದ ನಿರುತ ಪೂಜೆಯ ಗೊಂಬ ॥೩॥

**54) ಏಕೆ ಬೃಂದಾಽವನದಿ**

ಏಕೆ ಬೃಂದಾಽವನದಿ ನೆಲೆಸಿರುವೆ ಗುರುವೆ ॥ಅ॥

ಶ್ರೀಕಾಂತ ನೊಲಿಸಿದುದು । ಸಾಕಾಗಲ್ಲಿಽಲ್ಲೆಂದು ।
ಏಕಾಂತ ಬಯಸಿದಿಯಾ ಶ್ರೀ ರಾಘವೇಂದ್ರ ॥ಅಪ॥

ಹಿಂದೆ ನಿನಗಾಽಗಿ ನರಹರಿಯು ಕಂಽಭದಿ ಬಂಽದ -೨।
ಮುಂದೆ ನಂದಽನ ಕಂಽದ । ನಿನ್ನೆದುರು ಕುಣಿದಾ॥
ಒಂದು ಕ್ಷಣ । ನಿನ್ನಬಿಡದೆಽ ಹರಿಯು ನಲಿಯುತಿರೆ ।
ಯಿಂದಾರವಲಿಸಲಿಂದ ಇಲ್ಲಿ ತಪ ಗೈದೆಽಽ ॥೧॥

ಇಷ್ಟವಿಲ್ಲದ। ರಾಜ್ಯವಾಽಳಿ ಬಹು ವರುಷಗಳ-೨ ।
ಶಿಷ್ಟ ನೀ ಬಹುಬಳಲೀ । ಆಯಾಸಗೊಂಡೆಯಾ ॥
ದುಷ್ಟವಾದಿಗಳ । ವಾಽಘ್ಯೊಧದಲಿ ಜೈಸುತಲಿ ।
ಶ್ರೇಷ್ಠ ಗ್ರಂಥವ ಬರೇದು । ಬರೇದು ಸಾಕಾಯ್ತೇ ॥೨॥

ಪರಿಪರೀಯ ಭೀಷ್ಟಗಳ । ನೀಡೆಂದು ಜನಕಾಡೆ -೨।
ವರವಿತ್ತು । ಸಾಕಾಯ್ತೇ **ಕಮಲೇಶ ದಾಸ**॥
ಧರೇಗೆ ಮರೆಯಾಗಿ । ಬೃಂದಾವನವ ಸೇರಿದೊಡೆ ।
ಚರಣ ದಾಸರು ನಿನ್ನ ಬಿಡುವರೇನೋಽಽಽ ॥೩॥

**ಶ್ರೀ ವೇದೇಶತೀರ್ಥರು (ಮಣೂರ)**

**55) ಮನುಜಾ ವೇದೇಶರ :-**

ಮನುಜಾ ವೇದೇಶರ ಸ್ಮರಣೆಯಮಾಡೋ । ಮಾಡುತಾ
ನಲಿದಾಡೋ । ಮನುಜಾ ಈ ಗುರುಗಳ ಸ್ಮರಣೆಯಮಾಡೋ ॥ಪ॥

ವೇದವ್ಯಾಸತೀರ್ಥ ವರಕುವರೆನಿಸಿದ । ಬಾದರಾಯಣ ನಮ್ಮ
ಪಾದಾಂಬುಜ ಷಡ್ಪಜ ||ಅಪ||

ವರಭೀऽऽಮಾ ನದಿಯ ತೀರದಲ್ಲಿರುವಾ । ವರ ಭೀಮ ಅಘಗಳಳೆವಾ
ಶರಣಾऽಗತ। ಕಾಮಿತ ಸುರತರ ವೆನಿಸುವಾ || **ದುರಿತಾಂಬುದಿ**
**ನಾವಾ** । ವಾರವಾರದೊಳು ಭೂಸುರ ವೃಂದದಿ-೨।
ಸೇವೆಯನುತ ಮೋದದಿ ಸ್ವಿಕರಿಸುವ ||೧||

ಮುಂಬಾऽऽಗದಿ ನರಹರಿರೂಪದಲ್ಲಿದ್ದು । ಶ್ರೀಹರಿಯು ತಾನು ।
ಸುಜನऽರ ದುರಿತಾವಳಿಗಳ ಕಳೆವಾ|| **ಮಾಹಾನುಭಾವಾ** ।
ಹಿಂಬಾಗದಿ ಗೋಪಾಲ ರೂಪದಿಂದ-೨ ।
ಭಜಕರ ಸಂತತಿ ವೃಧಿ ಗೋಳಿಸುವ ||೨||

ರಾಮऽಲಕ್ಷಮಣ ರೂಪದಲಿ ಹರಿಯು । ಇವರೆಡಬಲದಲ್ಲಿದ್ದು ।
ಸುಜನರಾ ಅರಿಭಯ ಓಡಿಸುತ್ತಿರುವ || **ಮಣಿಪುರದಲಿ ಮೆರೆವಾ** ।
ಭಾರತೀಶ ಪತಿ **ಚೆನ್ನಕೇಶವನು** -೨।
ಇವರಲಿ ನಿಂತಖಿಲ ಕಾರ್ಯ ನೆಡೆಸುವ ||೩||

**56) ವೇದೇಶತೀರ್ಥರ ಚರಣವ :-**

ವೇದೇಶತೀರ್ಥರ ಚರಣವ ಭಜಿಸುತ।
ಮೋದದಿ ಭವ ದಾಟಿರೋ ||ಪ||
ವೇದವ್ಯಾಸ ತೀರ್ಥ ಕರಕಮಲ ಸಂಜಾತ ।
ವೇದವ್ಯಾಸರ ಚರಣ ಕಮಲರಾಧಕರಾದ ||ಅಪ||

ಗುರು ರಘೋತ್ತಮರಿಂದ ಸದ್ ಭಕ್ತ್ಯಾಮೃತ ।

ಸವಿದು ಅಮರರೆಂದೆನಿಕೊಂಡು॥

ಶ್ರೀಮದಾನಂದ ತೀರ್ಥರ ಸದ್ ಗ್ರಂಥಗಳಿಗೆ

ವ್ಯಾಖ್ಯಾಮಾಡಿ ಶ್ರೀ ಹರಿಲೋಹ ವಿಹ ಪಡೆದ ॥೧॥

ನ್ಯಾಯ ಸುದಾರ್ಥ ಸುಲಭದಿ ಬೋಧಿಸಿ ।

ಯಾದುಪತ್ಯವೆಂಬ ಟಿಪ್ಪಣೆ ಕೃಜರೆನಿಸಿದ ॥

ಯಾದವಾರರಿಗೆ ಪರ ವಿದ್ಯಾ । ಬೋಧಿಸಿ ಕೃತಾರ್ಥರೆನಿಸಿದ ॥೨॥

ಕುಸುಮೂರ್ತಿ ಎಂಬ ಕ್ಷೇತ್ರದಲಿ ಇವ । ಇರುತಿರ್ಪ ಯತಿವರ್ಯ್ಯರಿಗೆ

ಸಚ್ಛಾಸ್ತ್ರ ಸುಲಭದಿ॥ ಬೋಧಿಸಿ ಅವನಿಯೋಳ್ ಮಣಿಪೂರ ।

ನಿಲಯ **ಶ್ರೀ ಚೆನ್ನಕೇಶವ** ದಾಸರೆನಿಸಿದ ॥೩॥

**ಶ್ರೀ ವಾದಿರಾಜತೀರ್ಥರು (ಸೋದೆ)**

**57) ಸೋದೆ ವಾದಿರಾಜ :-**

ಸೋದೆ ವಾದಿರಾಜ । ವಾದಿರಾऽऽऽಜ ಮದ್ ಗುರುರಾಯ॥ಪ॥

ಮಾಧವನಂಘ್ರಿಯ ಆರಾಧಿಪ ಧೀರ ॥ಅಪ॥

ಮಂಗಳಾಂಗ-ನಂತ ರಂಗದಿ ನೋಡುತ-೨ ।

ಸಂಗೀತದಿ ಪಾಡೆ ಭಂಗ ಓಡಿಸುವಂಥ-೨ ॥೧॥

ಬುಧರ ಮಧ್ಯದಿ ಸುಹೃದಯ ನೆನೆಸುವಂಥ-೨ ।

ಸದಯ-ಹೃದಯ ಹಯವದನನ ಪೂಜಿಪ-೨ ॥೨॥

**ರಘುಪತಿ ವಿಠಲ** ಸಮ್ಮೊಗನಾಗಿ ನಿಮಗಿಪ್ಪ-೨ ।
ಅಗಣಿತ ಗುಣದವನ ಅಗಲದ ಮನವುಳ್ಳ-೨ ॥೩॥

**58) ಕಂಡೆ ಕಂಡೆ ವಾದಿರಾಜರ:-**

ಕಂಡೆ ಕಂಡೆ ವಾದಿರಾಜರ ॥ಪಲ್ಲ॥
ಶ್ರೀ ಹಯವದನನಪಾದ ಪುಂಡಲೀಕ ಪೂಜಿಸುವವರ ॥ಅಪ॥

ಭಂಡ ಮತಗಳ ತುಂಡು ಮಾಡಿ ಭೂಮಂಡಲವ ಜಯಿಸಿ -೨
ಚಂಡ ಪ್ರಚಂಡ ಶ್ರೀ ಪಾಂಡುರಂಗನ-೨। ಕೀರ್ತಿ ಪಡೆದವರಾ ॥೧॥
ಅನೇಕ ಶಾಸ್ತ್ರವ ಅನಾಯಾಸದಿಂದ ಸನಾತರಿಗೆ ಪೇಳಿ-೨।
ಅನಾಕೂಲವರ ಗೋಕುಲ ವಾಸಗೆ-೨।ಪ್ರಣಾಮ ಮಾಡಿದ ಧೀರರಾ।2।

ಶೂರ ತನದಲಿ ವೀರಸೇನನ ಗರ್ವವನೆ ಮುರಿದ -೨
**ಧೀರ ಲಕ್ಷ್ಮೀನಾರಸಿಂಹನ** -೨ । ಸಾರಿ ಪೊಗಳಿದ ಧೀರರಾ ॥೩॥

**<u>ಶ್ರೀ ರಘೋತ್ತಮರು (ತಿರಕೊಯ್ಲೂರು)</u>**

**59) ನೋಡಿದೆ ಗುರುಗಳ :-**

ನೋಡಿದೆ ಗುರುಗಳ ನೋಡಿದೆ ॥ಪಲ್ಲ॥ ನೋಡಿದೆನು ಗುರುಗಳ
ಪದಾಬ್ಜವ ಪಾಡಿದೆನು ತನ್ಮಹಿಮೆಗಳ ನಾ । ಬೇಡಿದೆನು। ಮನದಣಿಯ
ವರಗಳ ಈಡು ಇಲ್ಲದೆ ಕೊಡುವ ಪ್ರಭುಗಳ ॥ಅಪ॥

ಪಂಚಕೃಷ್ಣಾರಣ್ಯ ಕ್ಷೇತ್ರ ಪಿನಾಕಿನಿ ತೀರದಲಿ ನಿಂತು । ಮಿಂಚುತಿಹ ।
ಕಾಷಾಯದಂಡ ಕಮಂಡಲವ ಧರೆಸುತ್ತ ಧರೆಯೊಳು ॥
ಪಂಚ ಬಾಣನ ಪಿತನ ಗುಣಗಳ ಅಂಚೆಯದಿ ಪೊಗಳುತ್ತ ಹರುಷದಿ ।

ಸಂಚಿತಾಗಾಮಿಗಳ ಕಳೆದು ಪ್ರಪಂಚದಲಿ ಮೆರೆವಂತ ಗುರುಗಳ ||೧||

ಹಲವ ಬೋಧರ ಭಾಷ್ಯಟೀಕಾಭಾವವನು ಸುಜನರಿಗೆ ಬೋಧಿಸಿ |
ಕಲುಷ ಮತಗಿರಿ ಸಮುದಯಂಗಳ | ಕುಲುಷದಿಂದಲಿ ಖಂಡಿಸುತಲಿ ||
ಮೂಲರಾಮ ದಿಗ್ವಿಜಯರಾಮರ ಪಾದ ಕಮಲಕೆ ಭೃಂಗನೆನೆಸುತ |
ಶೀಲ ಭಕ್ತಿ ವಿರಕ್ತಿ ಮತಿಗಳ ಪಾಲಿಸುವ ಯತಿ ಮೌಳಿರತುನವ ||೨||

ಕಾಮಧೇನು ಸುಕಲ್ಪತರು ಚಿಂತಮಣಿsಯೊಳು ಕಾಮಿತಾರ್ಥವ|
ಪ್ರೇಮದಲಿ ಬೀರುತ್ತ ಅಧ್ಯಾತ್ಮದಿಯ ತಾಪತ್ರಯವ ಕಳೆಯುವ||
ಸ್ವಾಮಿ ಶ್ರೀಹರಿ **ಶ್ರೀಧ ವಿಠಲನ|** ದಾಸರಾಗ್ರಣಿಯೆನಸಿ ಮೆರೆಯುವ |
ನೇಮದಿಂದಲಿ ಶ್ರೀ ರಘೋತ್ತಮ| ಮೌನಿವರ್ಯರ ಕರುಣ ಬಯಸುತ||

**ಶ್ರೀ ವ್ಯಾಸರಾಯರು (ನವವೃಂದಾವನ)**

**60) ಚಂದ್ರಿಕಾಚರ್ಯರ :-**

ಚಂದ್ರಿಕಾಚಾರ್ಯ್ಯರ ಪಾದ ದ್ವಯಕೆ ನಾ ಎರಗುವೆ ಪ್ರತಿವಾಸರದಿ||ಪ||

ನವವೃಂದಾವನ ಮಧ್ಯದಿ ಶೋಭಿಪ | ನವವಿಧ ವರಗಳ ನೀಡುವ
ಸತತ-೨|| ನವಮಣಿ ಮುಕುಟ ಮಸ್ತಕ ರಾಜಿಪ-೨|
ನsವ್ಯ ಜೀವನs ಶುಭ ಪದ ತೋರುತ ||
ನಂಬಿದ ಭಕ್ತರ ದೋಷಗಳೆಣಿಸದೆ |
ಸುಂದರ ರಘುಪತಿ ರಾಮನ ಪೂಜಿಪ||೧||

ವಿಜಯ ಮೂsರ್ತಿ ಶ್ರೀರಾಮನ ಧ್ಯಾನಿಸಿ | ವಿಜಯನಗರs
ಸಮ್ರಾಜ್ಯ ಉದ್ಧರಿಸಿ-೨|| ವಿಜಯಸಿ ವಾದಿಪ ಮಧ್ವಮತದದಿ- |

ವಿಜಯ ಸಾಧಿಸಿದ ವಿಜಯ ಮೂರುತಿ ॥
ಅಕಳಂಕ ಚರಿತ ರಾಮಚಂದಿರನ ।
ಮಹಿಮೆಯ ಇಳೆಯೊಳು ಸಾಧಿಸಿ ತೋರಿದಾ॥೨॥

ಯಾಂತ್ರಿಕತನದಿಲಿ ಪ್ರಾಣಽನೆನಿಸಿದ । ಯಂತ್ರೋದ್ಧಾರ ಮೂರ್ತಿಯ ನಿಲ್ಲಿಸಿ-೨॥ ಮಂತ್ರಾಕ್ಷತೆಯ ಮಹಿಮೆಯ ತೋರಿಸಿ-೨। ಚಿತ್ತದಲ್ಲಿಽಟ್ಟು ಚಂದ್ರಿಕೆ ರಚಿಸಿ॥ ಪಂಚಮುಖದ **ಪ್ರಾಣೇಶ ವಿಠ್ಠಲನ** । ಪಂಚಮಂತ್ರದಿ ಪೂಜಿಸಿ ರಚಿಸಿದ ॥೩॥

**61) ಗುರುವ್ಯಾಸರಾಯಾ ಪಾಲಿಸೋ:-**

ಗುರುವ್ಯಾಸರಾಯಾ ಪಾಲಿಸೋ ಮೊರೆಹೊಕ್ಕ ನಿನ್ನ । ಶರಣೆನ್ನ ಮಾತು ಲಾಲಿಸೋ ॥ಪ॥ ಕರುಣಾಕರ ಭವ ಕರಿಕರಗಾಣದೆ । ಕರವ ಪಿಡಿದು ಮೊರೆಯೆಂದು ।ನಿನ್ನ ನಾ ಕರೆವೆ । ಬಾಯಿ ತೆರೆವೆ । ಆಲ್ಪರಿವೆ । ನತಜನ-ಸುರತರುವೇ ॥ಅಪ॥

ಮಧ್ವಮುನಿ ಸುಮತೋದ್ಧಾರಕ । ಯತಿಕುಲ ತಿಲಕ । ಅದ್ವೈತಾರಣ್ಯ ಪಾವಕ । ವಿದ್ವದ್ಜನತದಿ ಸುದ್ದಿನುತನೆ ಪಾದ ಪದ್ಮಕೆ ನಮಿಸುವೆ ಶುದ್ಧ ಸ್ಮಜ್ಞಾನವ ನೀಡೋ ।ಅವದುಡೊ ।
ಕೃಪೆ ಮಾಡೋ । ಸುತನೆಂದು ನೋಡೋ ॥೧॥

ವಿರಚಿಸಿ ಗ್ರಂಥತ್ರಯವ । ಬೋಧಿಸಿ ಭೇದ । ಪೊರೆದು ದ್ವಿಜ ಪರಿವಾರವ । ನೆರೆನಂಬಿದ ಭೂವರಗೆ ಧಾವಿಸುತ । ಭರದಿ ಬರುವ

ಕುಹಯೋಗ ಕಂಠದವ ದಯದಿ ನೀ ತರೆದಿ । ಸುಖಗರೆದಿ ।
ಧಾರುಣಿಯೋಳ್ ಮೆರೆದಿ ॥೨॥

ವಂದಿಪೆ ಸುಗತಿದಾಯಕ । ಶ್ರೀವರ **ಶ್ಯಾಮ । ಸುಂದರ ।**
ಕೃಷ್ಣೋಪಾಸಕ। ತಂದೆ ಎಂದು । ನಿನ್ನ ಪೊಂದಿಪಾರ್ಥಿಸುವೆ ಬಂದು
ಪೊರೆಯೋ । **ಪುರಂದರ ದಾಸರ** ಪ್ರಿಯ ।
ಕವಿಗೇಯ ಶುಭಕಾಯೋ ಸತ್ಯವಿಜನಗೇಯಾ ॥೩॥

**62) ವಾಸುದೇವನ ಚರಣ**

ವಾಸುದೇವನ ಚರಣ । ವನಜ ವಂದಿಪನೆ ।
ಸನ್ಯಾಸ ರತ್ನಾಕರನೆ ವ್ಯಾಸಮುನಿರಾಽಽಯ ॥ಪ॥

ವಾದಿಗಜ ಸಿಂಹ । ದುರ್ವಾದಿ ಮೃಗ ಬೇರುಂಡ ।
ಮಾಯವಾದಿ ಪಣಿಗರುಡ ತತ್ವಾದಿ ರಚಿತ-೨ ॥
ವಾದೀ ಭಯಂಕರ । ದುರ್ವಾದಿ ಕೊಲಾಹಲ-೨।
ವಾದೀ ಮಸ್ತಕಶೂಽಲ । ಮಧುರಗುಣ ಶೀಲ ॥೧॥

ವೈಷ್ಣವೊತ್ತಮನೆ ಸದ್ವೈಷ್ಣವ ವೃಜಾನಂದ ।
ವೈಷ್ಣವಗಮ ಭರಿತ । ವೈಷ್ಣವ ಸುಪ್ರೀಽತ-೨॥
ವೈಷ್ಣವ ಕಮಲ ಸೂರ್ಯ್ಯ । ವೈಷ್ಣವ ಕುಮುದ ಚಂದ್ರ-೨।
ವೈಷ್ಣವ ಕುಲೋತ್ ಕೃಷ್ಟಾ । ವೈಷ್ಣವ ವಿಶಿಽಽಷ್ಟ ॥೨॥

ಹರಿಇಲ್ಲದಾ ಕ್ಷೇತ್ರವ । ಅರಿಯದ ಮಾಹಮಹಿಮ ।
ಹರಿ ಕೃಷ್ಣ ಚರಣ । ಸರಸಿರು ಹ್ರಾದ್ ಭೃಂಗ -೨॥

ಗುರು **ಪುರಂದರ ವಿಠಲನೆ** । ಪರದೈವೆಂದ ಅರುಹಿ-೨।

ಸುಜನರ ಪೊರೆವಾ । ವ್ಯಾಸಮುನಿರಾಯ ॥೩॥

**ಶ್ರೀ ಶ್ರೀಪಾದ ರಾಜರು (ಮುಳಬಾಗಿಲು)**

**63) ಮಹಿಮೆ ಸಾಲದೆ ಇಷ್ಟೆ :-**

ಮಹಿಮೆ ಸಾಲದೆ ಇಷ್ಟೆ ಮಹಿಮೆ ಸಾಲದೆ ॥ಪ॥

ಅಹಿಶಯನನ ಒಲುಮೆಯಿಂದ ।

ಮಹಿಯೊಳೆಮ್ಮ ಶ್ರೀಪಾದರಾಯರ ॥ಅಪ॥

ಮುತ್ತಿನ ಕವಚ ಮೇಲ್ ಕುಲಾಯಿ -2। ನವರತ್ನ ಕೆತ್ತಿದ ಕರ್ಣ

ಕುಂಡಲ ॥ ಕಸ್ತೂರಿ ತಿಲಕ ಶ್ರೀಗಂಧ ಲೇಪನ-2 ॥

ವಿಸ್ತಾರದಿಂದ ಮೆರೆದು ಬರುವ ॥೧॥

ವಿಪ್ರಗೆ ಬ್ರಹ್ಮಹತ್ಯ ದೋಷ ಬರಲು-2। ಕ್ಷಿಪ್ರ ಶಂಖೋದಕದಿ ಕಳೆಯೇ

॥ ಅಪ್ರಬುದ್ದರು ದೂಶಿಸೆ ಗೇರಣ್ಣೆ-2।ಕಪ್ಪು ವಸನ ಹಸನ ಮಾಡಿದ ॥೨॥

ಹರಿಗೆ ಸಮsऽರ್ಪಿಸಿದ ನಾನಾ-2।ಪರಿಯ ಶಾಖಂಗಳನು ಭುಂಜಿಸಿ॥

ನರರು ನಗಲು **ಶ್ರೀಶ ಕೃಷ್ಣ**ನ-2 ।ಕರುಣದಿಂದ ಹುಸಿಯ ಮಾಡಿದ ॥೩॥

**ಶ್ರೀ ಜಯತೀರ್ಥರು (ಮಳಖೇಡ)**

**64) ದಯದಿ ಪಾಲಿಸೋ ಜಯತೀರಥರಾಯಾ:-**

ದಯದಿ ಪಾಲಿಸೋ ಜಯತೀರಥರಾಯಾ ।ಅಕ್ಷೋಭ್ಯರ ತನಯ ॥ಪ॥

ಅತ್ಯಂತ್ವರುಷದಿ ಎತ್ತಾಗಿರುತಿರಲು । ಆನಂದತೀರ್ಥರು ।

ನಿತ್ಯಪಠಿಸುವ ಪುಸ್ತಕ ಹೊರುತಿರಲು । ಗುರುರಾಯರು ಪೇಳಿದ ।

ತತ್ವಗ್ರಂಥಗಳ ಕಿವಿಯಲಿ ಕೇಳುತಲಿ । ತಲೆಯ ತೂಗುತಲಿ । **ಮತ್ತೆ ಪುಟ್ಟಿದ್ಯೋ ಮಂಗಳವೇಢೆಯಲಿ** । ಅತಿ ಮತಿವಂತರಲಿ ॥೧॥

ದೇಶಪಾಂಡೇಯರ ಕೂಸಾಗಿ ಜನಿಸಿ । ಘನ ರಾಹುತನೆನಿಸಿ ದೇಶದೇಶದೊಳ್ ಸೈನ್ಯವನೆ ಚಲಿಸಿ । ಹಣವನ್ನೇ ಗಳಿಸಿ । ವಾಸುಕಿ ಎಂಬೋ ಗುರುತನೆ ತಪ್ಪಿಸಿ । ನದಿಗೆ ನೀರಡಿಸಿ । **ಶ್ರೀಶನಾಜ್ಞೆಯಿಂ ಇವರನೆ ಕರೆ ತರಿಸಿ** । ಶಿಖಿ ಸೂತ್ರವ ತೆಗೆಸಿ ॥೨॥

ಹಿಂಡುಹಿಂಡುಜನ ಆಂಡಲೆಯುತಬಂದು । ಅಕ್ಷೋಭ್ಯತೀರ್ಥರ ಕಂಡು ಭೇಟಿಯ ಮಾಡುತಲೆ ನಿಂದು। ಧೊಂಡೋರಘುನಾಥನ ಹೆಂಡತಿ ಗಂಡನ । ಕೂಡಿಸಬೇಕೆಂದು । ಸುಮ್ಮನೆ ಕರೆತಂದು। **ಪ್ರಚಂಡ ಸರ್ಪದ ರೂಪವ ತಾಳ್ದಂದು ।** ಭಯಪಟ್ಟರಂದೂ ॥೩॥

ಮಧ್ವಶಾಸ್ತ್ರಗಳ ಉದ್ಧರಿಸುತಲದಕೆ । ಟೀಕೆಯನೆ ಮಾಡಿ । ವಿದ್ವಜ್ಜನರಿಗೆ ತಿದ್ದಿಯೆ ಪೇಳುತಲಿ । ನಾನಾ ಬಗೆಯಲ್ಲಿ। ಪದ್ಧತಿ ತಿಳಿಸಿದ ಗುರುರಾಯರು ನೀವು । ಯತಿವರಸುರಧೇನು । **ಅದ್ವೈತರ ಗುರು ವಿದ್ಯಾರಣ್ಯನ । ಗೆದ್ದಸಿಂಹ ನೀವು ॥೪॥**

ಆಷಾಢ ಬಹುಳ ಪಂಚಮಿಯು ಬರುತ । ಕಳೆಬರವನೆ ಬಿಡುತಾ । **ವ್ಯಾಸವಿಠ್ಠಲನ** । ಪಾದದಲೇ ನಿರುತಾ । ಮಳಖೇಡದಿ ನಿರುತಾ । ವಾಸಿಪ ಹಾವಿನ ತೆರೆದೊಳ್ ಪ್ರಖ್ಯಾತಾ। ನಿಜಗುಣಗಣನೀತಾ । **ಬೇಸರದಲೆ ಕೊಂಡಾಡಿದರೆ ನಿತ್ಯ । ಇಷ್ಟಾರ್ಥವನಿತ್ತ ॥೫॥**

**65) ಸಾರಿಭಜಿಸಿರೋ:-**

ಸಾರಿಭಜಿಸಿರೋ ಟೀಕಾರಯರಂಘ್ರಿಯ ।
ಘೋರಪಾತಕಾಂಬುಧಿಯ ಪಾರುಮಾಳ್ಪರಾ ॥ಪ॥
ಮೋದತೀರ್ಥರ ಮತವಸಾಧಿಸುವರಾ ।
ಪಾದಸೇವ್ಯರಾ ದುರ್ಬೋಧದ ಕಳೆವರಾ ॥೧॥
ಭಾಷ್ಯತತ್ವವ ವಿಸ್ತಾರಮಾಳ್ಪರಾ ।
ದೋಷ ದೂರರಾ ಆದಿಶೇಷಾವೇಶರಾ ॥೨॥
ಕಾಮ ಗೆದ್ದರಾ ಹರಿಗೆ ಪ್ರೇಮ ಪೂರ್ಣರಾ ।
ನೇಮನಿತ್ಯರಾ ನಿಷ್ಕಾಮನಾಪರಾ ॥೩॥
ಮೋಕ್ಷದಾತರಾ ಅಕ್ಷೋಭ್ಯತೀರ್ಥರಾ ।
ಸಾಕ್ಷಿಲಿಪ್ಪರಾ ಅಪೇಕ್ಷೆರಹಿತರಾ ॥೪॥
**ವಿಜಯವಿಠಲ**ನಾ ಅಂಘ್ರಿ ಭಜನೆಮಾಳ್ಪರಾ ।
ಕುಜನಭಂಜರಾ ದಿಗ್ವಿಜಯರಾಯರಾ ॥೫॥

**66) ಯತಿಕುಲ ಮುಕುಟ:-**

ಯತಿಕುಲ ಮುಕುಟ ಶ್ರೀ ಜಯತೀರ್ಥ । ಸದ್ಗುಣಗಣ ಭರಿತ ॥ಪ॥
ಅತಿಸದ್ಭಕುತಲಿ ನುತಿಪಜನರ ಸಂತತ
ಪಾಲಿಸುತಲಿ ಪೃಥ್ವಿಲಿ ಮೆರೆವ ॥ಅ.ಪ॥

ಶ್ರೀಮಧ್ವಮತ ವಾರಿಧಿ ನಿಜಸೊಮ । ಅಗಣಿತ ಸನ್ಮಹಿಮ ।
ಆ ಮಹಾ ಹೊತ್ತಾರ್ತಿಹ ನಿಷ್ಕಾಮಾ।

ಮುನಿಸಾರ್ವಭೌಮ-೨। ರಾಮಪದಾರ್ಚಕ ಈ ಮಹೀಸುರರನು

ಪ್ರೇಮದಿ ಪಾಲಿಪ ಕಾಮಿತ ಫಲದಾ ||೧||

ಮಧ್ವಮುನಿಗಳ ಗ್ರಂಥಕೆ ವ್ಯಾಖ್ಯಾನ । ರಚಿಸಿದ ಸುಜ್ಞಾನ ।

ವಿದ್ಯಾರಣ್ಯನ ತತ್ತ್ವಾದದಿ । ನಿಧನ ಗೈಸಿದ ಸುಖ ಕದನಾ -೨

ಅದ್ವೈತಾಣದಿ ದಗ್ಧಕೃತಾನನ।ಸದ್ವೈಷ್ಣವರ ಹೃತ್ಪದ್ಮ ಸುನಿಲಯಾ ||೨||

ಲಲಿತ ಮಂಗಳವೇಡಿಪ ರಘುನಾಥಾ । ವನಿತ ಸಂಜಾತಾ । ನಿಲಯ

ಮಳಖೇಡ ಕಾಗಿಣಿತೀರ ನಿವಾಸಾ । ಮಾಡಿದ ಮೌನೀಶ -೨ । ಅಲವ

**ವರದೇಶ ವಿಠ್ಠಲನ** ಒಲುಮೆಯಲಿ

ಇಳೆಯೊಳು ಬೋಧಿಪ ಅಲವ ಬೋಧಾಪ್ತ ||೩||

**67) ದಯದಿ ಸಲಹೋ:-**

ದಯದಿ ಸಲಹೋ ಜಯರಾಯ |ಪ|

ಕಾಗಿಣಿ ನಿಲಯ ಕವಿಜನ ಗೇಯಾ । ಯೋಗಿವರ್ಯ ಕೃಪ ಸಾಗರ

ಸತತ ||೧|| ಮರುತ ಸುಶಾಸ್ತ್ರಕೆ ವಿರಚಿಸಿ ಟೀಕೆಯ ।

ಮುರಿದು ಕುಭಾಷ್ಯವ ಮೆರೆದ ಮಹಾತ್ಮ ||೨||

ಭೀಮಭವಾಟವಿಧೂಮಧ್ವಜ ।

ಸುತ್ರಾಮಜಸಖ **ಶ್ರೀಶ್ಯಾಮಸುಂದರ** ಪ್ರಿಯ ||೩||

**68) ಜಯತೀರ್ಥ ಜಯತೀರ್ಥ :-**

ಜಯತೀರ್ಥ ಜಯತೀರ್ಥ ||ಪ||

ದಯವಾರಿಧಿ ಭವ । ಭಯಹರ ಗುರುವರ ||ಅಪ||

ಕಾಗಿಣಿ ತಟಸ್ಥಿತ । ಮೇಘನಾತ ಪೂರ -೨।
ಆಗರ ವೆನಿಸಿದ ಯೋಗಿ ವರೇಣ್ಯ -೨॥೧॥

ತತ್ವಗಳಽರ್ಥದ ಪುಸ್ತಕ ಭಾರವ -೨।
ಎತ್ತಿನ ರೂಽಪದಿ ಹೊತ್ತ ಮಹಾತ್ಮ -೨॥೨॥

ಮರುತ ಶಾಸ್ತ್ರಕೆ ವಿರಚಿಸಿ ಟೀಕೆಯ -೨॥
ಮುರಿದುಕ ಭಾಽಷ್ಯವ ಮೆರೆದ ಮಹಾತ್ಮ-೨॥೩॥

ನೆರೆ ನಂಬಿದ ಶ್ರೀ ನರಹರಿ ನಾಮವ -೨ ।
ನಿರುತ ಗರೆದುಽ ಪೊರೆ ನರನವತಾರಿ ॥೪॥
ಭೀಮ ಭವಾಟವಿ । ಧೂಮಕೇತು ಶ್ರೀ -೨।
**ಶ್ಯಾಮ ಸುಂದರನ**ಽ । ಪ್ರೇಮದ ದಾಸ ॥೫॥

**69) ಎದುರಾರ್ೈ ಗುರುವೆ :-**

ಎದುರಾರ್ೈ ಗುರುವೆ ಸಮರಾರ್ೈ ||ಪ||
ಮದನ ಗೊಪಾಲನ ಪ್ರೀಯ ಜಯರಾಯಾ ||ಅ.ಪ.||

ಕಡುಗರ್ಜಿಸುವಕೇ ಸರಿಯಂತೆ ನಿಮ್ಮ ವದಾ |
ವಡನೆಯ ಕೇಳದೆ ನುಡಿಮುಂದೊಡದೆಽಽ-೨ ॥
ಗಡ ಗಡ ನಡಗುತ ಮಾಯಿಗೋ-ಮಾಯ್ಗಳು |
ಅಡವಿಯಲ್ಲಡಗೋರು ನಿಮ್ಮ ಭೀತಿಯಲಿ ॥೧॥

ಕುಟಿಲ ಮತಗಳೆಂಬೋ ಚಟಲಾಂಧಕಾರಕೆ ।

ಪಟುತರ ತತ್ವ ಪ್ರಕಾಶಿಕೆಯೆಂಬಽಽ-೧ ॥
ಚಟುಲಾತಪದಿಂದ ಖಂಡಿಸಿ ತೇಜೋ। -
ತ್ಕಟದಿ ಮೆರೆದೆ ಬುಧಕಟಕಾಬ್ಜಮಿತ್ರ ॥೨॥

ಅಮಿತ ದ್ವಿಜಾವಳಿ ಕುಮುದಗರಳಿಸಿ ।
ವಿಮತರ ಮುಖಕಮಲಂಗಳ ಬಾಡಿಸಿ-೧॥
ಸ್ವಮತರ ಹೃತ್ಸಂತಾಪಗಳೋಡಿಸಿ।
ವಿಮಲ ಸುಕೀರ್ತಿಯ ಪಡೆದೆಯೋ ಚಂದ್ರ ॥೩॥

ವ್ಯಾಸಸೂತ್ರಗಳೆಂಬ ಮಂದರವನು ।
ವೇದ ರಾಶಿಯೆಂಬವಾ ರಾಶಿಯೊಳಿಟ್ಟು-೧॥
ಶ್ರೀ ಸರ್ವಜ್ಞರ ವಾಕ್ಯಪಾಶದಿ ಸುತ್ತಿ ।
ಭಾಸುರ ನ್ಯಾಯಸುಧಾ ಪಡೆದ ಚಂದ್ರ ॥೪॥

ಅರ್ಥಿಮಂದಾರ ವೇದಾರ್ಥವಿಚಾರ ।
ಸಮರ್ಥ **ಶ್ರೀಕೃಷ್ಣ** ಪಾದಾಂಬುಜಭೃಂಗ-೧ ॥
ಪ್ರತ್ಯರ್ಥಿ ಮತ್ತೇಭಕಂಠೀರವಕ್ಷೋಭ್ಯ ।
ತೀರ್ಥ ಕರಜ ಜಯತೀರ್ಥ ಯತೀಂದ್ರ ॥೫॥

**70) ಜಯರಾಯರ ನೋಡಿರೋ :-**

ಜಯರಾಯರ ನೋಡಿರೋ ಸಜ್ಜನರೆಲ್ಲ ಜಯರಾಯರ ಪಾಡಿರೋ।ಪ॥
ಜಯರಾಯರ ನೋಡಿ ಜಪಿಸಿ ಮನದಿ ಪಾಡಿ ।
ಜಯವಾಗುವುದು ನಿಮಗೆ ಭಯ ನಾಶ ಸಂತತ ॥ ಅ.ಪ ॥

ದುರುಳ ಮತವೆಂಬೊ ಕರಿಗೆ ಅಂಕುಶವಿತ್ತು ।
ಸುರಸಾದ ಗ್ರಂಥ ಆನಂದ ಮುನಿ ॥
ವಿರಚಿಸಿ ಇರಲಾಗಿ ಪರಮ ಭಕ್ತಿಯಿಂದ ।
ವಿಸ್ತಾರವ ಮಾಡಿದ ಕರದ ಕನ್ನಡಿಯಂತೆ ॥ ೧ ॥

ವಾದಿಗಳನೆಲ್ಲ ಜಯಿಸಿ ಡಂಗುರ ಹೊಯ್ಸಿ ।
ಭೇದಾರ್ಥ ಜ್ಞಾನ ಸತ್ಯವೆನಿಸಿ ॥
ಈ ಧರೆಯೊಳು ಹರಿ ಪರ ದೈವವೆಂದು ।
ಸಾಧಿಸಿ ಮೆರೆದ ಉದ್ದಂಡನಾದ ಗುರುತಿಲಕ ॥ ೨ ॥

ಅಕ್ಷೋಭ್ಯ ತೀರ್ಥರ ಕರದಿಂದ ಜನಿಸಿ ।
ಮೋಕ್ಷಕೆ ಜಯ ಪತ್ರಿಕೆ ಕೊಡಿಸಿ ॥
ಪಕ್ಷಿವಾಹನ ಸಿರಿ ವಿಜಯ ವಿಠಲನ್ನ ।
ಈಕ್ಷೀಸುವದಕುಪದೇಶ ಕೊಡುವ ಋಷಿ ॥ ೩ ॥

## ಶ್ರೀ ಮಾಧವರ್ಯ್ಯರು

### 71) ಮಾಧವರ್ಯ್ಯರು ಭಜಿಸೊ:-

ಪೂರ್ಣಪ್ರಜ್ಞರ ಕೃಪಾ ಪೂರ್ಣರೆಂದೆನಿಸಿದ ।
ಮಾಧವರ್ಯ್ಯರ ಭಜಿಸೊ ॥ಪ॥
ಮಧ್ವೇಶ ಮಾಧವ ತಾನೆಯುಗದೊಳು ನಿಂತು।
ಭಜಕರಿಗ್ ಪ್ರೀಯನೆಂದು ಮೆರೆಯುತ್ತಿಹರೆಂದು॥ಅಪ॥

ಶ್ರೀಪತಿ ವಾಹನನಾದ ಗರುಡ ದೇವ । ಮಧ್ವರಾಯರ ಮುಖದಿ ॥

ಭಾಶ್ಯಭಾವನ ಕೆಳೆ ಲಾಸುಗ ಮಹಿಯೊಳು।
ಮಾಧವರ್‍ಯ್ಯರ ನಾಮ ದಿಂದ ಪುಟ್ಟಿಹರಯ್ಯಾ ॥

ಇವರ ಕೃಪೆಯು ನರಹರಿಯ ಕೃಪೆಯು ।
ಇವರ ಕೋಪವೆ ನರಹರಿಯ ಕೋಪ ॥
ಇವರ ಚರಣ ಕಮಲ ನಂಬಿದ ಜನಗಳು
ಯಮರಾಯರ ಕಾಂಬೊರಲ್ಲಾ ಎಂದದಿಗೂ

ಭೀಮಗಗಽಳನ್ನು ಬಿಸಾಡುವಂತೆಂದು।
ಭೀಮಾತೀರದಲಿ ನಿಂತಿಹರು ॥
**ಚನ್ನಕೇಶವ**ನೆಂಬ ಅನರ್ಘ್ಯದ ಮಣೀಯ।
ಖಣಿಯಾದ ಮಣಿಪೂರದಲ್ಲಿ ನಿಂತಿಹರಯ್ಯಾ

**ಶ್ರೀ ಪದ್ಮನಾಭತೀರ್ಥರು (ನವವೃಂದಾವನ)**

**72) ಒದಗಿ ಪಾಲಿಸೋ :-**

ಒದಗಿ ಪಾಲಿಸೋ ಭವಾಂಬುಧಿಯ ದಾಟಿಸೋ ॥ಪ॥
ಮದನ ಜಿತ ಭೂಽಸುರ ಶರಣ್ಯ। ಪದುಮನಾಭ ಯತಿವರೇಣ್ಯ ॥ಅಪ॥

ಸದ್ಯ ದೊಡ್ಡ ಮಾತು ಅಪ್ರ । ಬುದ್ಧರ ನುಡಿಯ ಕೇಳು ।
ಮಧ್ವ ದ್ವೇಷಿಗಳಲಿಯನ್ನ-೨ । ವಿದ್ಯೆ ತೋರಿ ಬದುಕದಂತೆ ॥೧॥

ಒಡಲಿನಾಸೆಗಾಗಿ ಕಂಡ । ಕಡೆಗೆ ತಿರುಗೆ ಪ್ರಾಪ್ತಿಯೆಂದು ।ದುಡುಗಿ
ಪೋಗಿ ಕೊನೆಗೆ ಮನೆಗೆ-೨।ಮಿಡುಕಿ ಕೊಳುತ ಬರುವ ಅಧಮನ ॥೨॥

ಹಾನಿಲಾಭ ಕ್ಲೇಶ ಮೋದ । ವೇನು ಆಽವಕ್ಷಣಕೊದಗಲು ।
**ಪ್ರಾಣೇಶವಿಠಲ** ಕರುಣೆಯಿಂದ-೨ । ತಾನೆ ಕೊಟ್ಟನೆಂಬ ಸುಮತಿ ॥೩॥

## ಶ್ರೀ ಮಧ್ವರಾಯರು

### 73) ಮಧ್ವರಾಯ ಗುರು :-

ಮಧ್ವರಾಯ ಗುರು ಮಧ್ವರಾಯ ॥ಪ॥
ನಮ್ಮ ಮಧ್ವರಾಯ ಗುರು ಮಧ್ವರಾಯ ॥ಅಪ॥

ರಾಮವತಾರದೊಳಮ್ಮ ಮಧ್ವರಾಯ ।
ಆ ಮಹಾ ಹನುಮನಾದ್ಯೊ ಮಧ್ವರಾಯ ॥
ವಾಮನ ಕುಟ್ಟಿ ರಾವಣ ಗೆಲಿದ್ಯೊ ಮಧ್ವರಾಯ ।
ಕಾಮಿತಾರ್ಥವ ಪುರದೊಳ್ ಇತ್ಯೊ ಮಧ್ವರಾಯ ॥೧॥

ಕೃಷ್ಣವತಾರದೊಳಮ್ಮ ಮಧ್ವರಾಯ ।
ದಿಟ್ಟ ಕುಲಕೆ ಭಿಮನಾದ್ಯೊ ಮಧ್ವರಾಯ ॥
ಕುಟ್ಟಿದ್ಯೊ ಕೌರವರನೆಲ್ಲ ಮಧ್ವರಾಯ ।
ಶ್ರೀ ಕೃಷ್ಣನ ಹಿತವ ಪಡಿದ್ಯೊ ಮಧ್ವರಾಯ ॥೨॥

ಧರೆಯೊಳು ಯತಿಯಾಗಿ ಜನಿಸಿದ್ಯೊ ಮಧ್ವರಾಯ ।
ದುರುಳ ಮಾಯಮತವ ಮುರಿದ್ಯೊ ಮಧ್ವರಾಯ ॥
ಗುರು ವ್ಯಾಸರ ಹಿತವ ಪಡದ್ಯೊ ಮಧ್ವರಾಯ ।
**ಶ್ರೀಪುರಂದರವಿಠಲನ** ದಾಸನಾದ್ಯೊ ಮಧ್ವರಾಯ॥೩॥

## 74) ಮಧ್ವರಾಯರ ಕರುಣಾ

ಮಧ್ವರಾಯರ ಕರುಣಾ ಪಡೆಯದವ I
ಧರೆಯೊಳಗೆ ಇದ್ದರೇನು I ಇಲ್ಲದ್ದಿದ್ದರೇನು IIಪII

ಮಧ್ವಮತವೆ ಮತವು I ಸಕಲ ಶ್ರುತಿ ಸಮ್ಮತವು I
ಮಧ್ವರಾಯರ ಧ್ಯಾನ ಅಮೃತ ಪಾನ -೨II
ಮಧ್ವಾರಾಯರ ಲೀಲೆ ನವರತುನದ ಮಾಲೆ -೨II
ಮಧ್ವರಾಯರ ಸ್ಮರಣೇ ಕುಲಕೋಟಿ ಉದ್ಧಾರ II೧II

ಮಧ್ವರಾಯರ ಕಥೆ ಕೆಳಲದೂ ದುರಿತ ಹತI
ಮಧ್ವರಾಯರ ಭಕುತಿ ಮಾಡೆ ಮುಕುತಿ -೨II
ಮಧ್ವರಾಯರ ಸ್ತೋತ್ರ ಮಾಡಿದವ ಸತ್ಪಾತ್ರ -೨I
ಮಧ್ವರಾಯರ ಭಜನೆ ದುಷ್ಕರ್ಮ ತ್ಯೆಜನೆ II೨II

ಮಧ್ವರಾಯರ ದಾಸನಾದವನೆ ನಿರ್ದೋಷ I
ಮಧ್ವರಾಯರ ಬಂಟ ಜಗಕೆ ನೆಂಟ -೨II
ಮಧ್ವರಮಣ ನಮ್ಮ **ವಿಜಯವಿಠಲ**ನಾದ -೨I
ಮಧ್ವೇಶನ ಕರುಣ I ಪಡೆದವನೆ ಶರಣII೩II

## 75) ಆನಂದತೀರ್ಥರೆಂಬೊ

ಆನಂದತೀರ್ಥರೆಂಬೊ ಅರ್ಥಿಯ ಪೆಸರುಳ್ಳ I ಗುರುಮಧ್ವ
ಮುನಿರಾಯಾ I ಏನೆಂಬೆ ನಾ ನಿನ್ನ ಕರುಣಕ್ಕೆ ಎಣೆಗಾಣೆ I

ಗುರುಮಧ್ವ ಮುನಿರಾಯಾ ||ಪ||

ಬೇಸರದೆ ಸರ್ವರೊಳು ಶ್ವಾಸ ಜಪಗಳ ಮಾಡಿ-೨ | ಗುರುಮಧ್ವ ಮುನಿರಾಯಾ | ಶ್ರೀಶಗರ್ಪಿಸುತ ಸರ್ವರೊಳು ಶ್ವಾಸ ಜಪಗಳ ಮಾಡಿ-೨| ಗುರುಮಧ್ವ ಮುನಿರಾಯಾ ||೧||

ಅಂದು ಹನುಮಂತನಾಗಿ ಬಂದು ಸುಗ್ರೀವಗೆ -೨| ಗುರುಮಧ್ವ ಮುನಿರಾಯಾ || ಅಂದವಾದ ಪದವಿತ್ತಾನಂದದಿಂದ ಸಲಹಿದೆ -೨| ಗುರುಮಧ್ವ ಮುನಿರಾಯಾ ||೨||

ಕುಂತಿಯ ಕುಮಾರನಾಗಿ ಹಂತ ಕೌರವರ ಕೊಂದೆ | ಗುರುಮಧ್ವ ಮುನಿರಾಯಾ || ಅನಂತ ಪುಣ್ಯವಗಳಿಸಿ ಶ್ರೀಕಾಂತನಿಗರ್ಪಿಸಿದೆ | ಗುರುಮಧ್ವ ಮುನಿರಾಯಾ ||೩||

ಅದ್ವೈತರನ್ನು ಕಾದಿ ಗೆದ್ದು ನಿನ್ನ ಭಕ್ತರಿಗೆ |ಗುರುಮಧ್ವ ಮುನಿರಾಯಾ || ಶುದ್ಧತಾತ್ಪರ್ಯ ವಾಕ್ಯ ಪದ್ಧತಿಯ ತೋರಿಸಿದೆ | ಗುರುಮಧ್ವ ಮುನಿರಾಯಾ ||೪||

ಗುರು **ಪ್ರಾಣೇಶ ವಿಠಲ** ಪರನೆಂದು ಡಂಗುರವ | ಗುರುಮಧ್ವ ಮುನಿರಾಯಾ || ಸಾರಿ ಸಜ್ಜನರಿಗೆ ಹರಿಯ ಲೋಕ ತೋರಿಸಿದಿ | ಗುರುಮಧ್ವ ಮುನಿರಾಯಾ ||೫||

**76) ಮಧ್ವರಾಯರ ದೇವತಾರ್ಚನೆಯ:-**

ಮಧ್ವರಾಯರ ದೇವತಾರ್ಚನೆಯ ||ಪ||

ಪ್ರಸಿದ್ಧ ರಘುನಾಥರು ಪೂಜಿಸುವ ಸೊಬಗು ||ಅಪ||

ಮೂಲ ರಘುಪತಿ ಒಂದು | ಮುದ್ದು ಜಾನಕಿ ಒಂದು |

ಲೀಲೆ ದಿಗ್ವಿಜಯ ರಾಮ ಮೂರ್ತಿ ಒಂದು -೨||

ಸಾಲಿಗ್ರಾಮ ಹಯಗ್ರೀವ ಮೊದಲಾದವು ನಾಲ್ಕು |

ಚಲುವ ಸುದರ್ಶನ ಮೂರು | ಚಕ್ರಾಂಕಿತಗಳು ಐದು-೨||೧||

ಅಭೀಷೇಕ ಶಂಖ ಒಂದು | ಅಕ್ಷಯ ಪಾತ್ರೆಯ ಒಂದು |

ಉಭಯ ಪಶ್ಚಿಮ ಧೇನು ಎರಡು -೨||

ಶುಭನಿಧಿ ಬಲಮುಡಿ | ಶಂಖ ಒಂದು |

ರಾಮ ಟಂಕಿಯು ಒಂದು | ರಾಮ ಬಾಣಗಳೆರೆಡು-೨||೨||

ವರವ್ಯಾಸ ಮುಟ್ಟಿ ನಾಲ್ಕು | ಕ್ಷೀರದಲಿ ಲೋಲಾಡುವ ಕೂರ್ಮ ಒಂದು

| ಸ್ಮರೀಸಿ ಇಪ್ಪತ್ತೆಂಟು ಮೂರ್ತಿಗಳನಾ -೨||

ಪೂಜಿಸುವ **ಪುರಂದರ ವಿಠಲನ** ಪೂರ್ಣ ಭಕ್ತರು|

ಈ ರಘುನಾಥತೀರ್ಥರು ಎಷ್ಟು ಪುಣ್ಯವಂತರು-೨|ನಮ್ಮ ||೩||

**<u>ಶ್ರೀ ವೇದ ವ್ಯಾಸದೇವರು</u>**

**77) ಮಧ್ವಾಂತರ್ಗತ ವೇದ ವ್ಯಾಸ :-**

ಮಧ್ವಾಂತರ್ಗತ ವೇದ ವ್ಯಾಸ | ಕಾಯೋ ಶುದ್ಧ ಮೂರುತಿಯೇ

ಸರ್ವೆಶಾ ||ಪ|| ಶ್ರದ್ಧೆಯಿಂದಲಿ ನಿಮ್ಮ ಭಜಿಸುವ ಭಕುತರಿಗೆ |

ಬುದ್ಧ್ಯಾದಿಗಳು ಕೊಟ್ಟುದ್ಧರಿಸೋ ದೇವರ ದೇವ ||ಅಪ||

ದ್ವಾಪರದಲಿ ಒಬ್ಬ ಮುನಿಪ । ತನ್ನ ಕೋಪದಿಂದಲಿ ಕೊಟ್ಟ ಶಾಪ ।
ಶಾಪಿಸಲು ಜ್ಞಾನ-ಲೋಪ । ವಾಗೆ ಅಪಾರ ತತ್ತ್ವ ಸ್ವರೂಪ ॥
ಶ್ರೀಪತಿಯೆ ಕಾಯೆಂದು ಮೊರೆಯಿಡೆ । ಪಾಪ ವಿರಹಿತಳಾದ
ಯಮುನೆಯೆ । ದ್ವೀಪದಲಿ ಅಂಬಿಗರ
ಪೆಣ್ಣಿನ ರೂಪಗೊಲಿದವನಲ್ಲಿ ಜನಿಸಿದೆ ॥೧॥

ವೇದ ವಾದಿಗಳಲ್ಲ ಕೆಡಲು । ತತ್ತ್ವ ವಾದಿ ಜನರು ಬಾಯಿ ಬಿಡಲು ।
ಮೇದಿನಿ ಸುರರು ಮೊರೆಯಿಡಲು । ನಾನಾ ವೇದ ವಿಭಾಗ
ವಿರಚಿಸಲು ॥ ಮೋದದಿಂದ ತದರ್ಥ ಬೋಧಕವಾದ ಸೂತ್ರ ಪುರಾಣ
ವಿರಚಿಸಿ-ವಾದಿಗಳ ನಿರ್ವಾದ ಮಾಡಿದ ।
ಸಾಧುವಂದಿತ ಬಾದರಾಯಣ ॥೨॥

ಸುಮತಿಗಳಿಗೆ ನೀ ಬೋಧಿಸಿದೆ । ಮಿಕ್ಕ ಕುಮತಗಳನು ನೀ
ಛೇದಿಸಿದೆ । ಕ್ರಿಮಿಯಿಂದ ರಾಜ್ಯವಾಳಿಸಿದೆ । ಜಗತ್ ಸ್ವಾಮಿಚರ್ಯವ
ನೀ ತೋರಿಸಿದೆ ॥ ವಿಮಲ ರೂಪನೆ ಕಮಲನಾಭನೆ । ರಮೆಯ
ಅರಸನೆ ರಮ್ಯ ಚರಿತನೆ । ಮಮತೆಯಲಿ ಕೊಡು ಕಾಮಿತಾರ್ಥವ ।
ನಮಿಸುವೆನು **ಹಯವದನ ಮೂರುತಿ** ॥೩॥

**:: ದೇವತಾ ತಾರತಮ್ಯ ಸ್ತೋತ್ರ ::**

**78) ಸತ್ಯ ಜಗತಿದು ಪಂಚಭೇದವು:-**

ಸತ್ಯ ಜಗತಿದು ಪಂಚಭೇದವು ನಿತ್ಯ ಶ್ರೀ ಗೋವಿಂದನ ॥ ಪ ॥
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ ॥ ಅ.ಪ ॥

ಜೀವ ಈಶಗೆ ಭೇದ ಸರ್ವತ್ರ । ಜೀವ ಜೀವಕೆ ಭೇಧವು ।
ಜೀವ ಜಡದೊಳ್ ಜಡ ಜಡಕೆ ಭೇದ । ಜೀವಜಡ ಪರಮಾತ್ಮಗೆ ॥೧॥

ಮಾನಷೋತ್ತಮಗಧಿಪ  ಕ್ಷಿತಿಪರು । ಮನುಜದೇವ ಗಂಧರ್ವರು
ಜ್ಞಾನಪಿತ್ರಾ ಅಜನಕರ್ಮಜ ದಾನವಾರಿ ತತ್ವಾತ್ಮರು ॥೨॥

ಗಣಪಮಿತ್ರರು ಸಪ್ತಋಷಿಗಳು । ವಹ್ನಿನಾರದ ವರುಣನು
ಇನಜಗೆ ಸಮ ಸೂರ್ಯ್ಯಚಂದ್ರರು। ಮನುಸತಿಯು ಹೆಚ್ಚು ಪ್ರವಹನು॥

ದಕ್ಷಸಮ ಅನಿರುದ್ಧ ಗುರುಶಚಿ । ರತಿ ಸ್ವಾಯಂಬುವರಾರ್ವರು
ಪಕ್ಷಪ್ರಾಣನಿಗಿಂತ ಕಾಮನು । ಕಿಂಚಿದಧಿಕನು ಇಂದ್ರನು ॥೪॥

ದೇವೇಂದ್ರನಿಗಿಂsತ ಅಧಿಕ ಮಹಾರುದ್ರ । ದೇವ ಸಮ ಶೇಷ
ಗರುಡರು ಕೇವಲಧಿಕರು ಶೇಷ ಗರುಡಗೆ ।ದೇವಿ ಭಾರತಿ ಸರಸ್ವತಿ।೫॥

ವಾಯುವಿಗೆ ಸಮರಿಲ್ಲ ಜಗದೊಳು । ವಾಯು ದೇವರೆ ಬ್ರಹ್ಮರು
ವಾಯು ಬ್ರಹ್ಮಗೆ ಕೋಟಿ ಗುಣದಿಂದ । ಅಧಿಕ ಶಕ್ತಳು ಶ್ರೀರಮಾ ॥೬॥

ಅನಂತಗುಣದಿಂದ ಲಕುಮಿಗೆ ಅಧಿಕನು । **ಶ್ರೀ ಪುರಂದರ ವಿಠಲನು**
ಘನಸಮರು ಇವಗಿಲ್ಲ ಜಗದೊಳು । ಹನುಮಹೃತ್ಪದ್ಮವಾಸಿಗೆ ॥೭॥

## <u>ಶ್ರೀ ಗಣಪತಿ ದೇವರು</u>

### 79) ಶರಣು ಸಿದ್ಧಿ ವಿನಾಯಕ:-

ಶರಣು ಸಿದ್ಧಿ ವಿನಾಯಕ ಶರಣು ವಿದ್ಯಾ ಪ್ರದಾಯಕ ॥ಪ॥
ಶರಣು ಪಾರ್ವತಿ ತನಯ ಮೂರುತಿ-೨।

ಶರಣು ಮೂಷಿಕ ವಾಹನ ||ಅಪ||

ನಿಟಿಲ ನೇತ್ರನ ದೇವಿ ಸುತನೆ | ನಾಗಭೂಷಣ ಪ್ರೀಯನೆ-೨||
ಕಟಿಕಟಾಂಕದ ಕೋಮಲಾಂಗನೆ | ಕರ್ಣಕುಂಡಲ ಧಾರನೆ-೨||೧||

ಬಟ್ಟ ಮುತ್ತಿನ ಪದಕ ಹಾರನೆ | ಬಾಹುಹಸ್ತ ಚತುಷ್ಟನೆ-೨||
ಇಟ್ಟ ತೊಡುಗೆಯ ಹೇಮ ಕಂಕಣ| ಪಾಶ ಅಂಕುಶ ಧಾರನೆ-೨||೨ ||

ಕುಕ್ಷಿ ಮಹಾ ಲಂಬೋಽಽದರನೆ | ಇಕ್ಷುಚಾಪನ ಗೆಲಿದನೆ -೨||
ಪಕ್ಷಿವಾಹನ **ಸಿರಿ ಪುರಂದರ-** | **ವಿಠಲ**ನ ನಿಜ ದಾಸನೆ-೨||೩||

**80) ಗಜಮುಖ ಗಣಪನೆ :-**

ಗಜಮುಖ ಗಣಪನೆ ನಮೋ ನಮೋ |
ಸಿದ್ಧಿವಿನಾಯಕ ನಮೋ ನಮೋ ||ಪ||

ಸಿದ್ಧಿ ವಿನಾಯಕ ನಮೋ ನಮೋ | ವಿದ್ಯಪ್ರದಾಯಕ ನಮೋ ನಮೋ |
ಲಡ್ಡುಗೆ ಮೊದಕ ನಮೋ ನಮೋ -೨ |
ನೈವೇದ್ಯಕರ್ಪಿಸುವೆ ನಮೋ ನಮೋ ||೧||

ಹರನ ಕುಮಾರನೆ ನಮೋ ನಮೋ | ಗಿರಿಜೆಯ ವರಪುತ್ರ ನಮೋ
ನಮೋ | ವರಕಥೆಗಳ ಪೇಳ್ವೆ ನಮೋ ನಮೋ |
ಪಾಲಿಸೋ ಮತಿಯ ನಮೋ ನಮೋ ||೨||

ಆಕಾಶಗಭಿಮಾನಿ ನಮೋ ನಮೋ|ಮೂಷಕ ವಾಹನ ನಮೋ ನಮೋ
**ಭೀಮೇಶಕೃಷ್ಣ**ನ ಕಥೆ ನಮೋ |

ಸಂತೋಷದಿ ಪೇಳ್ವೆನು ನಮೋ ನಮೋ ||೩||

**81) ಮೊದಲೊಂದಿಪೆ ನಿನಗೆ :-**

ಮೊದಲೊಂದಿಪೆ ನಿನಗೆ ಗಣನಾಥ |ಪ|

ಬಂದ ವಿಘ್ನ ಕಳೆಯೋ ಗಣನಾಥಾ ||ಅಪ||

ಹಿಂದೆ ರಾವಣನು ಮುದದಿಂದ ನಿನ್ನ ಪೂಜಿಸದೆ |

ಸಂದರಣದಲ್ಲಿ ಗಣನಾಥ ||೧||

ಆದಿಯಲ್ಲಿ ಧರ್ಮರಾಜ ಪೂಜಿಸಿ ನಿನ್ನಯ ಪಾದ |

ಸಧಿಸಿದ ರಾಜ್ಯ ಗಣನಾಥ ||೨||

ಮಂಗಳಮೂರುತಿ ಗುರು **ರಂಗ ವಿಠ್ಠಲನ್ನ** |

ಪಾದ ಭೃಂಗನೆ ಪಾಲಿಸೊ ಗಣನಾಥ

**82) ಗಣಪತಿ ಎನ್ನಪಾಲಿಸೋ :-**

ಗಣಪತಿ ಎನ್ನಪಾಲಿಸೋ | ಗಂಭೀರಾ ||ಪ||

ಪಾರ್ವತಿ ನಂದನ ಸುಂದರ ವದನಾ

ಶರ್ವಾದಿ ಸುರವಂದ್ಯ ಶಿರಬಾಗುವೆ ನಾ ||೧||

ಆದಿ ಪೂಜಿತ ನೀನು ಮೋದ ಭಕ್ತರಿಗಿತ್ತು |

ಮಾಧವನಲಿ ಮನ ಸದಾ ನಿಲಿಸು ನೀ ||೨||

ಪಂಕಜನಯನ **ಶ್ರೀ ವೆಂಕಟ ವಿಠಲನ** |

ಕಿಂಕರ ನೆನಿಸೆನ್ನ ಶಂಕರ ತನಯನೆ ||೩||

# ಶ್ರೀಪಾರ್ವತಿ ದೇವಿಯರು

## 83) ಉಮಾ ಕಾತ್ಯಾಯನಿ :-

ಉಮಾ ಕಾತ್ಯಾಯನಿ ಗೌರಿ ದೇವಿ| ಹಿಮವಂತ ಗಿರಿಯ ಕುಮಾರಿ||ಪ||

ರಮೆಯರಸನ-ಪದಕಮಲ ಮಧುಪೆ ನಿತ್ಯ |

ಅಮರವಂದಿತೆ ಗಜಗಮನ ಭವಾನಿ ||ಅ.ಪ||

ಪನ್ನಂಗಧರನ ರಾಣಿ ಪರಮ ಪಾವನಿ | ಪುಣ್ಯಫಲ ಪ್ರದಾಯಿನಿ |

ಪನ್ನಂಗ ವೇಣಿ ಶರ್ವಾಣಿ ಕೋಕಿಲವಾಣಿ |ಉನ್ನಂತ ಗುಣಗಣ ಶ್ರೇಣಿ |

**ಎನ್ನಮನದ ಅಭಿಮಾನಿದೇವತೆ ಸ್ವರ್ಣಗಿರಿಸಂಪನ್ನೆ ಭಾಗ್ಯನಿಧಿ |**

**ನಿನ್ನ ಮಹಿಮೆಯನು ಬಿನ್ನಾಣದೆನಾ ಬಣ್ಣಿಸಲಳವ ಪ್ರಸನ್ನವದನಳೇ |1|**

ಮುತ್ತಿನಪದಕ ಹಾರ ಮೋಹನ್ನಸರ | ಉತ್ತಮಾಂಗದಲಂಕಾರ |

ಜತ್ತಗಿಯಿಟ್ಟ ಪಂಜರಽಽದೋಲೆವಯ್ಯಾರ | ರತ್ನ ಕಂಕಣದುಂಗರ ||

**ತೆತ್ತಿಸಕೋಟಿ ದೇವತೆಗಳು ಪೊಗಳುತ ಸತ್ತಿಗೆ ಚಾಮರವೆತ್ತಿ**

**ಪಿಡಿಯುತಿರೆ | ಸುತ್ತಲು ಆಡುವ ನರ್ತನ**

**ಸಂದಣಿ ಎತ್ತ ನೋಡಿದರತ್ತ ತತ್ಥೈವಾದ್ಯ ||೨||**

ಪೊಳೆವ ವಸನ ಕಂಚುಕ ಕಸ್ತೂರಿ ತಿಲಕ | ಥಳಿಪ ಮೂಗುತಿ ನಾಸಿಕ |

ತಳಿತ ಮಲ್ಲಿಗೆ ಗಂಧಿಕ ಮುಡಿದ ಸೂಸುಕ |ಸಲೆ ಭುಜಕೀರ್ತಿ ಪಾಶಕ |

**ಇಳೆಯೊಳು ಮಧುರಪುರದೊಳುವಾಸಳೆ | ಅಳಗಿರಿ ವಿಜಯವಿಠ್ಠಲನ**

**ಕೊಂಡಾಡುವ ಸುಲಭ-ಜನರಿಗೆಲ್ಲ | ಒಲಿದು-ಮತಿಯ ನೀವೆ ಗಿಳಿಕರ**

**ಶೋಭಿತೆ ಪರಮ ಮಂಗಳೆ ಹೇ ||**

**84) ಪಶುಪತಿಯ ತೋರಮ್ಮ:-**

ಪಶುಪತಿಯ ತೋರಮ್ಮ ||ಪ|| ವಿಷವ ಸವಿದ ರುಂಡ ಮಾಲನ |

ತ್ರಿಭುವನ ಪಾಲನ| ಹಸನಾಗಿ ತೋರಮ್ಮ ||ಅಪ||

ಮೈನಾಕ ನಂದಿನಿ ಮಾಡುವೆ ವಂದನೆ -೨ |

ಮನೋನಿಯಾಮಕನ ಮುನಿವಂದಿತನ-೨ ||೧||

ಮತಿಯ ಕೊಡುವ ಎನ್ನ ಹಿತದಿಂದ ನೋಡುವ -೨ |

ಪತಿತ ಪಾವನದಾತ ಮೃತ್ಯುಂಜಯನ-೨ ||೨||

ತ್ರಿಜಗ ಪೂಜಿತೆ ಉಮೆ ಪೊಗಳುವೆನಮ್ಮ -೨ |

**ವಿಜಯವಿಠಲನ** ನಿಜವನರಿತನ -೨ ||೩||

**85) ಮಾತಾಡೆ ಗೌರಿ**

ಮಾತಾಡೆ ಗೌರಿ ಮಾತಾಡೆ ||ಪ|| ಮಾತಾಡೆ ಎನ್ನ ಮೌನದ ಗೌರಿ |

ಯಾತಕ ಛಲ ಮನ ಸೋತವನೊಡನೆ ||ಅ.ಪ||

ನಸುನಗೆ ಮುಖವಿದು ಬಾಡಿ ಕೆಂದುಟಿಯು |ಎಸೆದಿರಲು ನಾ ನೋಡಿ |

ವಸುಧೆಯೊಳಗೆ ನಾ ಜೀವಿಸಲಾರೆ -೨ ||

ಗಸಗಸವ್ಯಾತಕೆ ತುಂಬಿಸು ಅರಗಿಣಿ ||೧||

ಕ್ಷಣಬಿಟ್ಟಿರಲಾರೆ ಅಮ್ಮ ಷಣ್ಮುಖಗಣಪರ |ತಾಯೇ ನೀ ಬಾರೆ |

ಎನ್ನವಗುಣಗಳೆಣಿಸಲಪಾರೇ೨|ನಿನ್ನನು ಬಿಟ್ಟರೇ ಗತಿ ಎನ್ಯಾರೇ ||೨||

ಕ್ರೋಧವ್ಯಾತಕೆ ಎನ್ನೊಳು ಗೌರಿ |ಏನಪರಾಧವ ಇದ್ದದು ಕಾಣೆ |

**ಶ್ರೀಧವಿಠಲನಾ** ಪಾದ ಕಿಂಕಿಣಿಯೇ -೨ ||
ಆದರಿಸುವೆನಾ ಆದರಿಸುವೆನೇ ||೩||

**86) ಪಾರ್ವತಿ ಪಾಲಿಸೆನ್ನ :-**

ಪಾರ್ವತಿ ಪಾಲಿಸೆನ್ನ ಮಾನಿನಿರನ್ನ ||ಪ||
ಪಾರ್ವತಿ ಭಕುತರ ಸಾರಥಿ ವಂದಿಪೆ |
ಸುರಪತಿ ಗಜಮುಖ ಮೂರುತಿ ಮಾತೆ ||ಅ.ಪ||

ಮನದಭಿಮಾನಿಯೆ ನೆನೆವೆನು ನಿನ್ನನು |
ಅನುಗ್ರಹಿಸೆನ್ನನು ಅಂಬುಜಾ ಪಾಣಿ ||೧||
ಮಂಗಳೆ ಮೃಡನಂತರಂಗಳೆ ಹರಿಪಾದ |
ಭೃಂಗಳೆ ತುಂಗಳೇ ಪನ್ನಂಗವೇಣಿ ||೨||

ಗುಣಪೂರ್ಣ **ವೇಣುಗೋಪಾಲವಿಠಲನ** |
ಕಾಣಿಸಿಕೊಡುವಂಥ ಶೂಲಿಯರಾಣಿ ||೩||

**ಶ್ರೀ ರುದ್ರದೇವರು**

**87) ಲಿಂಗಾ ಎನ್ನಂತರಂಗಾ :-**

ಲಿಂಗಾ ಎನ್ನಂತರಂಗಾ ||ಪ||
ಮಂಗಳಾಂಗನೆ ಸರ್ವೋತ್ತಮ ರಾಮ ಲಿಂಗ ||ಅ.ಪ||

ಮಂದಾಕಿನೀ ಧರಗೆ | ಗಂಗಾಂಬು ಮಜ್ಜನವೆ |
ಚಂದ್ರ ಮೌಳಿಗೆ ಗಂಧ ಕುಸುಮದರ್ಪಣೆಯೆ -೨ ||
ಇಂದು ರವಿನೇತ್ರನಿಗೆ | ಕರ್ಪೂರದಾರತಿಯೆ -೨ |

ಕಂದರ್ಪಜೀತಗೆ | ಮಿಗಿಲಾಪೇಕ್ಷೆಯೆ ||೧||

ಘನ ವಿದ್ಯಾತೂರನಿಗೆ | ಮಂತ್ರ ಕಲಾಪವೆ |
ಧನಪತಿಯ ಸಖಗೆ | ಧನ ಕಾಣಿಕಿಯೆ -೨ ||
ಮನರಜತ ಪರ್ವತಗೆ | ಫಣಿಯ ಆಭರಣವೆ -೨ |
ಮನೋನಿಯಾಮಗೆ | ಎನ್ನ ಭಿನ್ನಪವೆ ||೨||

ವೈರಾಗ್ಯ ನಿಧಿಗೆ ಈ ವಿಷಯ ಪರಾರ್ತವೆ |
ಗೌರಿಯ ರಮಣಗೆ | ಈ ಸ್ತೋತ್ರವೆ -೨ ||
ವೀರ ರಾಘವ **ವಿಜಯ | ವಿಠಲನ** ನೀಜ ಹಸ್ತ -೨ |
ವಾರಿಜ ದಳದಿಂದ ನೆಲಿಸಿದ ಶಿವ ಮಾಹಾ ||೩||

**88) ನಮಃ ಪಾರ್ವತಿಪತಿನುತ :-**

ನಮಃ ಪಾರ್ವತಿಪತಿನುತ ಜನಪರ ನಮೋ ವಿರೂಪಾಕ್ಷ ||ಪ||
ರಮಾರಮಣನಲಿ ಅಮಲ ಭಕುತಿ ಕೊಡು | ನಮೋ ವಿಶಾಲಾಕ್ಷ||ಅಪ||

ನೀಲಕಂಠ ತ್ರಿಶೂಲ ಡಮರು ಹಸ್ತಾಲಂಕೃತ ರಕ್ಷ |
ಫಾಲನೇತ್ರ ಕಪಾಲ ರುಂಡ ಮಣಿ ಮಾಲಾಧೃತ ವಕ್ಷ ||
ಶೀಲರಮ್ಯ ವಿಶಾಲ ಸುಗುಣ ಸಲ್ಲೀಲ ಸುರಾಧ್ಯಕ್ಷ |
ಶ್ರೀಲಕುಮೀಶನ ಓಲೈಸುವ ಭಕ್ತಾವಳಿಗಳ ಪಕ್ಷ ||೧||

ವಾಸವನುತ ಹರಿದಾಸ ಈಶ ಕೈಲಾಸ ವಾಸ ದೇವ |
ದಾಶರಥಿಯ ಔಪಾಸಕ ಸುಜನರ ಪೋಷಿಪ ಪ್ರಭಾವ ||
ಭಾಸಿಸುತಿಹುದು ಅಶೇಷ ಜೀವರಿಗೆ ಈಶನೆಂಬ ಭಾವ |

ಶ್ರೀಶನಲ್ಲಿ ಕೀಲಿಸುಮನವ ಗಿರಿಜೇಶ ಮಹಾದೇವ ||೨||

ಮೃತ್ಯುಂಜಯ ನಿನ್ನುತ್ತಮ ಪದಯುಗ ಭೃತ್ಯನೋ ಸರ್ವತ್ರ |
ಹತ್ತಿರ ಕರೆದು ಅಪತ್ಯನಂತೆ ಪೊರೆಯುತ್ತಿರೊ ತ್ರಿನೇತ್ರ ||
ತೆತ್ತಿಗನಂತೆ ಕಾಯುತ್ತಿಹೆ ಬಾಣನ ಸತ್ಯದಿ ಸುಚರಿತ್ರ |
ಕರ್ತೃ ಉಡುಪಿ ಸರ್ವೋತ್ತಮ **ಕೃಷ್ಣನ** ಪೌತ್ರ ಕೃಪಾ ಪಾತ್ರ ||೩||

**89) ಶಂಭೋ ಸ್ವಯಂಭೂ:-**

**!! ವಾಮದೇವ ವಿರಂಚಿತನಯ | ಉಮಾಮನೋಹರ ಉಗ್ರ ಧೂರ್ಜಟಿ | ಸಾಮಜಾಜಿನವಸನಭೂಷಣ ಸುಮನಸೋತ್ತಂಸ | ಕಾಮಹರ ಕೈಲಾಸಮಂದಿರ | ಸೋಮಸೂರ್ಯಾನಲವಿಲೋಚನ ಕಾಮಿತಪ್ರದ ಕರುಣಿಸೆಮಗೆ ಸದಾ ಸುಮಂಗಳವ !!** (ಹ.ಕ.ಸಾ.೧-೧೦-೧೧)

ಶಂಭೋ ಸ್ವಯಂಭೂ ಸಂಭವ |
ನಂಬಿದೆ ಕಾಯೋ ಜಂಬಾರಿನುತ ಭವ ||ಪ||
ಅಂಬರ ಪುರಹರ ಸಾಂಬ ತ್ರಿಯಂಬಕ |
ಶಂಭರಾರಿರಿಪು ಗಂಭೀರ ಕರುಣಿ ||ಅ.ಪ||

ಭಸಿತ ಭೂಷಿತ ಶರೀರ ಭಕ್ತರೋದ್ಧಾರ | ವಿಷಕಂಠ ದುರಿತ ಹರ -೨ |
ಪಶುಪತಿ ಫಣಿಪ ಹಾರ | ಪಾವನಕಾರಿ ತ್ರಿಶೂಲ ಡಮರುಗ ಧರ ||
**ನೊಸಲನಯನ ವಿಕಸಿತಾಂಬುಜ ವೊಕ | ಶಶಿಧರ ಮತ ರಕ್ಕಸ ಮದ ಮರ್ದನ | ಘಸಣಿಗೊಳಿಪ ತಾಮಸವ ಕಳೆದು ಮಾನಸದಲಿ ರಂಗನ ಬಿಸಜ ಪಾದವ ತೋರೋ ||೧||**

ರಜತ ಪರ್ವತ ನಿವಾಸ । ನಿರ್ಮಲ ಭಾಸ । ಗಜದೈತ್ಯ ನಾಶ ಗಿರೀಶ
-೨। ಸುಜನರ ಮನೋವಿಲಾಸ ವ್ಯೋಮಕೇಶ ।
ತ್ರಿಜಗದಲ್ಲಣ ಗೌರೀಶ ॥

**ಅಜಸುತನಧ್ವರ ಭಜನೆಯ ಕೆಡಿಸಿದೆ ।**
**ಅಜಗರ ಮಂದಿರ ಗಜಮುಖ ಜನಕನೆ ।**
**ಗಜಗಮನಾ ಮುನಿ ತನುಜರ ಕಾಯ್ದನೆ**
**ವೃಜಮುನಿ ವಂದಿತ ಭಜಿಸುವೆ ನಿನ್ನನು** *॥೨॥*

ಮಧುರಾಪುರ ನಿಲಯ ಮೃತ್ಯುಂಜಯ । ಸದಮಾಲ ಸಮನಗೇಯಾ ।
ಸದಾ ಸಮಿಪರ ಹೃದಯ-ದೊಳಗುಳ್ಳ । ಭಯ ಸದೆಯುತ್ತ ಕೊಡು
ಅಭಯ ॥ **ಸದಾಶಿವ ಜಾನ್ಹವೀಧರ ಕೃತ ಮಾಲಾ**
**ನದಿ ತೀsರದಿ ವಾಸವಾಗಿಪ್ಪ ಸೌಂದರ್ಯ**
**ಮಧುರಿಪು ವಿಜಯವಿಠಲನ ಪಾದಕೆ**
**ಮಧುಪ-ನೆನಿಪ ಪಂಚವದನ ಕೈಲಾಸದ** *॥೨॥*

**90) ಶಿವ ಶಿವ ಶಿವ ಎನ್ನಿರೋ :-**

ಶಿವ ಶಿವ ಶಿವ ಎನ್ನಿರೋ । ಮೂರ್ಜಗದವರೆಲ್ಲ ।
ಶಿವ ಶಿವ ಶಿವ ಎನ್ನಿರೋ ॥ಪ॥
ಆಗಮ ಸಿದ್ಧಾಂತ ಮೂಲದ ಜಪವಿದು ಶಿವ ಶಿವ ಶಿವ ಎನ್ನಿರೋ ।
ರೋಗದ ಮೂಲವ ಕೆಡಿಪ ಔಷಧವಿದು ಶಿವ ಶಿವ ಶಿವ ಎನ್ನಿರೋ ॥ಅಪ॥

ಮನುಜ ಜನ್ಮದಿ ಹುಟ್ಟಿ ಮೈಮರೆ-ದಿರಬೇಡಿ ಶಿವ ಶಿವ ಶಿವ ಎನ್ನಿರೋ

ತನುಮನ ಪ್ರಾಣವ ವ್ಯರ್ಥವ ಮಾಡದೆ ಶಿವ ಶಿವ ಶಿವ ಎನ್ನಿರೋ ॥
ಅಪರಾಧ ಕೋಟಿ ತ್ಯಜಿಸಬೇಕಾದರೆ-೨ ಶಿವ ಶಿವ ಶಿವ ಎನ್ನಿರೋ ।
ಉಪಮಿತರೋರ್ಮಿತರರಿಯದ ಜಪವಿದು ಶಿವ ಶಿವ ಶಿವ ಎನ್ನಿರೋ॥1॥

ಜವನ ಬಾಧೆಯ ನೀವು ಜಯಸಬೇಕಾದರೆ ಶಿವ ಶಿವ ಶಿವ ಎನ್ನಿರೋ ।
ಸುವಿಮಲ ಮುಕ್ತಿಯ ಪಡೆಯಬೇಕಾದರೆ ಶಿವ ಶಿವ ಶಿವ ಎನ್ನಿರೋ ॥
ಭುವನಕೆ ಬಲ್ಲಿದರಾಗಬೇಕಾದರೆ -೨ ಶಿವ ಶಿವ ಶಿವ ಎನ್ನಿರೋ ।
ಭುವನ ಪದವಿಯ ಪಡೆಯಬೇಕಾದರೆ ಶಿವ ಶಿವ ಶಿವ ಎನ್ನಿರೋ ॥

ಗುರುಲಿಂಗ ಜಂಗಮನ ಅರಿಯಬೇಕಾದರೆ ಶಿವ ಶಿವ ಶಿವ ಎನ್ನಿರೋ ।
ಪರಮಾತ್ಮನ ನೀವು ತಿಳಿಯಬೇಕಾದರೆ ಶಿವ ಶಿವ ಶಿವ ಎನ್ನಿರೋ ॥
ಪೃಥ್ವಿಗೆ ಸದ್ಗುರು ಆಗಬೇಕಾದರೆ -೨ ಶಿವ ಶಿವ ಶಿವ ಎನ್ನಿರೋ ।
ತತ್ವಪತಿ **ಆದಿಕೇಷವನ** ಬೇಕಾದರೆ ಶಿವ ಶಿವ ಶಿವ ಎನ್ನಿರೋ ॥

## 91) ಶಿವದರುಶನ ನಮಗಾಯಿತು :-

ಶಿವದರುಶನ ನಮಗಾಯಿತು ಕೇಳೆ । ಶಿವರಾತ್ರಿ ಜಾಗರಣೆ ॥ಪ॥
ಪಾತಾಳ ಗಂಗೆಯ ಸ್ನಾನವ ಮಾಡಲು । ಪಾಪಗಳೆಲ್ಲ ಪರಿಹಾರ ॥೧॥
ಜ್ಯೋತಿರ್ಲಿಂಗನ ಧ್ಯಾನವ ಮಾಡಲು । ದ್ಯೂತಿಗಳೆಲ್ಲ ಅನುದಿನ ॥೨॥
ಬೇಡಿದ ವರಗಳ ಕೊಡುವನು ತಾಯಿ ।ಬ್ರಹ್ಮಾರಾಧನೆ ಮಾಡುವನು।3।
ಆಡುತ ಪಾಡುತ ಏರುತ ಬಸವನ । ಆನಂದದಲಿ ನಲಿದಾಡುವನು।4।
ಶಿಖರವ ಕಂಡೆನು **ಪುರಂದರವಿಠ್ಠಲನ** ।ಹರಿನಾರಾಯಣ ಧ್ಯಾನದಲಿ।5।

**92) ಚಂದ್ರಚೂಡ ಶಿವಶಂಕರ :-**

ಚಂದ್ರಚೂಡ ಶಿವಶಂಕರ । ಪಾರ್ವತಿರಮಣ ನಿನಗೆ ನಮೋ -೨ ॥ಪ॥

ಸುಂದರ ಮೃಗಧರ ಪಿನಾಕ ಧನುಕರ ।
ಗಂಗಾ ಶಿರ ಗಜ ಚರ್ಮಾಂಬರಧರ ॥ಅ.ಪ॥

ನಂದಿವಾಹನಾದಂದಿನಿಂದ ಮೂರ್ಜಗದಿ ಮೆರೆವ ನೀನೇ -೨ ।
ಕಂದರ್ಪನ ಕ್ರೋಧದಿಂದ ಕಣ್ದೆರೆದು ಕೊಂದ ಉಗ್ರನು ನೀನೇ -೨ ॥
ಘಟದಿಂದುದಿಸಿದ ವಿಷ ತಂದು ಭುಂಜಿಸಿದವನು ನೀನೇ -೨ ।
ಇಂದಿರೇಶ ಶ್ರೀರಾಮ ನಾಮವ **ಚಂದದಿ ಪೊಗಳುವ ನೀನೇ** ॥೧॥

ಬಾಲ ಮೃಕಂಡನ ಕಾಲನು ಎಳೆವಾಗ ಪಾಲಿಸಿದವ ನೀನೇ -೨ ।
ಕಾಲಕೂಟವನು ಪಾನವ ಮಾಡಿದ ನೀಲಕಂಠನು ನೀನೇ -೨ ॥
ವಾಲಯದಿ ಕಪಾಲ ಪಿಡಿದು ಭಿಕ್ಷೆ ಬೇಡಿದ ದಿಗಂಬರ ನೀನೇ -೨ ।
ಜಾಲಮಾಡಿದ ಗೋಪಾಲನೆಂಬ **ಹೆಣ್ಣಿಗೆ ಮರುಳಾದವ ನೀನೇ** ॥೨॥

ಧರಗೆ ದಕ್ಷಿಣ ಕಾವೇರಿ ತೀರ ಕುಂಭ ಪುರವಾಸನೂ ನೀನೇ -೨।
ಕರದಲಿ ವೀಣೆಯ ಗಾನವ ಮಾಡುವ ಉರಗ ಭೂಷಣನು ನೀನೇ-೨॥
ಕೊರಳಲಿ ರುದ್ರಾಕ್ಷಿ ಭಸ್ಮ ಧರಿಸಿದ ಪರಮ ವೈಷ್ಣವನು ನೀನೇ -೨ ।
ಗರುಡಗಮನ **ಶ್ರೀಪುರಂದರ ವಿಠಲಗೆ ಪ್ರಾಣ ಪ್ರೀಯನು ನೀನೇ** ॥೩॥

**93) ಮಹಾದೇವ ಮಹಾದೇವ :-**

ಮಹಾದೇವ ಮಹಾದೇವ ಶಂಕರ ॥ಪ॥ಶಂಕರಽಽಽ ಶಂಕರಽಽಽಽ

ಅಸಮ ರಽಽಕ್ಕಸಗೆ । ವಶವಾಗ್ಯವಲನೋ-೨।
ಬಿಸಜಾಕ್ಷಗೆ ಒಪ್ಪಿಸಿಗೊಲಿಸಿದನೆ । ಮಹಾದೇವಽಽ ॥೧॥

ಭುಂಜಿಸಿ ವಿಷವಾ ನಂಜುಂಽಡನೆನೆಸಿದಿ-೨। ಪ್ರಭಂಜನಪ್ರೀಯ -೨।
ನಿನಗ ಅಂಜಲಿ ಮುಗಿವೆನಾ । ಮಹಾದೇವಽಽ ॥೨॥

ಸೂಸುವ ಭವ ಶರದಿಂಽಽದ ಧಾಟಿಸೊ-೨। **ಗುರುಪ್ರಾಣೇಶ ವಿಠ್ಠಲ**ನ-೨। ವಾಸವ ನೆಲೆಸೆನ್ನ । ಮಹಾದೇವಽಽ ॥೩॥

**94) ಶಿವನೇ ನಾ ನಿನ್ನ :-**

ಶಿವನೇ ನಾ ನಿನ್ನ ಸೇವಕನಯ್ಯ । ದುರ್ಮನ ಬಿಡಿಸಯ್ಯ ॥ಪ॥
ಭವಮೋಚಕ ಭಾಗವತ ಶಾಸ್ತ್ರವ ।
ಅವನೀಶಗೆ ಪೇಳ್ದವ ನೀನಲ್ಲವೇ ॥ಅಪ॥

ವೈಕಾರಿಕ ತೈಜಸ ತಾಮಸವೆಂಬ ತ್ರೈತತ್ವಗಳೆಂಬ । ಸಾಕಾರಿ
ಶಾರ್ವರಿಧವಧರ ಸಾಂಬ ॥ ಸುರಪಾದ್ಯರ ಬಿಂಬ -೨ ಽಽಽ
ವೈಕಲ್ಯಾಸ್ಪದವಾಕಳೆದೊಮ್ಮೆಗೆ
ವೈಕುಂಠಕೆ ಕರೆದೊಯ್ಯೆ ಕರಿಗೊರಳಾ ॥೧॥

ಮೃತ್ಯುಂಜಯ ಮುಪ್ಪುರ ಹರ ಮಹಾದೇವ ದೇವರ್ಕಳಕಾವಾ ।
ಸ್ತುತ್ಯಾದ್ರಿಜ ದಿತಿಜ - ತತೀವನದಾವಾ ॥ ದುರಿತಾಂಬುಧಿನಾವಾ -೨
ಕೃತ್ತಿವಾಸ ಎನ್ನತ್ಯಪರಾಧಗಳೆತ್ತೆಣಿಸದೆ ಕೃತಕೃತ್ಯನ ಮಾಡೈ ॥೨॥

ಸ್ಫಟಿಕಾಭ ಕಪಾರಿ ಕಾಮಿತ ಫಲದಾ ।

ಫಲ್ಗುಣ ಸಖ **ಶ್ರೀದವಿಠಲಾ** ವಿತ್ತಪಮಿತ್ರ ದ್ವಿರದಾ ||
ಚರ್ಮಾಂಬರನಾದಾ -೨ss | ಕುಟಿಲ ರಹಿತ ಧೂರ್ಜಟಿ ವೃಷಭದ್ವಜ
ನಿಟಿಲ ನಯನ ಸಂಕಟವ ನಿವಾರಿಸು||೩||

**95) ಕೈಲಾಸ ವಾಸ :-**

ಕೈಲಾಸ ವಾಸ ಗೌರೀಶ ಈಶ |
ತೈಲ ಧಾರೆಯಂತೆ ಮನಸು ಕೊಡು ಹರಿಯಲ್ಲಿ ||ಪ||
ಅಹೋ ರಾತ್ರಿಯಲಿ ನಾನು ಅನುಚರಾಗ್ರಣಿಯಾಗಿ -೨ |
ಮಹಿಯೊಳಗೆ ಚರಿಸಿದೆನೊ ಮಹದೇವನೆ ||
ಅಹಿಭೂಷಣನೆ ಎನ್ನ ಅವಗುಣಗಳೆಣಿಸದಲೆ |
ವಿಹಿತಧರ್ಮದಿ ವಿಷ್ಣುಭಕುತಿಯನು ಕೊಡೊ ಶಂಭೋ ||೧||

ಮನಸು ಕಾರಣವಲ್ಲ ಪಾಪ ಪುಣ್ಯಕ್ಕೆಲ್ಲ |
ಅನಲಾಕ್ಷ ನಿನ್ನ ಪ್ರೇರಣೆಯಿಲ್ಲದೆ ||
ದನುಜ ಮದ ಗಜ ಹಾರಿ ದಂಡಪ್ರಣಾಮವ ಮಾಳ್ಪೆ |
ಮಣಿಸೋ ಈ ಶಿರವ ಸಜ್ಜನ ಚರಣಕಮಲದಲಿ ||೨||

ಭಾಗೀರಥಿ ಧರನೆ ಭಯವ ಪರಿಹರಿಸಯ್ಯ |
ಲೇಸಾಗಿ ನೀ ಸಲಹೋ ಸಂತತ ಶರ್ವದೇವಾ ||
ಭಾಗವತ ಜನ ಪ್ರೀಯ **ವಿಜಯವಿಠ್ಠಲ**ನಂಘ್ರಿ |
ಜಾಗು ಮಾಡದೆ ಭಜಿಪ ಭಾಗ್ಯವನು ಕೊಡು ಶಂಭೋ ||೩||

**96) ವೃಷಭನೇರಿದ :-**

ವೃಷಭನೇರಿದ ವಿಷಧರನ್ಯಾರೇ ಪೇಳಮ್ಮಯ್ಯಾ ||ಪ||

ಹಸುಳೆ ಪಾರ್ವತಿ ತಪಸ್ಸಿಗೆ ಮೆಚ್ಚಿದ -೨|

ಜಟಾಮಂಡಲ ಧರ ಕಣಮ್ಮಾ ||ಅ.ಪ||

ಕೈಲಾಸವಾಸ ಧೊರೆಯಿವನಮ್ಮ | ಅದು ಅಲ್ಲದೆ ಪೇಳಿ |

ಬೈಲಸ್ಮಶಾನದ ಮನೆಯಿವಗಮ್ಮ | ಸಂಕರ್ಷಣನೆಂದು ||

ಮಹಿಯೊಳು ಇವನ ಪೊಗಳುವರಮ್ಮ | *ಇದು ಸೋಜಿಗವಮ್ಮ /*

**ಜಿವ್ವೆಸಹಸ್ರಫಣಿ ಭೂಷಣನಮ್ಮ -2|**

**ರಮ್ಮೆಯರಸಗಿವ ಮೊಮ್ಮಗನಮ್ಮ ||೧||**

ಬಾಲೆ ದಾಕ್ಷಾಯಣಿಪತಿ ಇವನಮ್ಮ | ಮಾವನಯಾಗದಲಿ|

ಬಹಳ ಕೃತ್ಯಗಳ ನಡೆಸಿದನಮ್ಮ | ಸಾಗರದಲಿ ಪುಟ್ಟಿಹ ||

ಕಾಳ್ಕೂಟ ವಾಯು ಭಕ್ಷಿಸಿದನಮ್ಮ | *ಇದು ಕೌತುಕವಮ್ಮ /*

**ಮೇಲೆ ಶೇಷಗರಳವ ತಾ ಬುಂಜಿಸಿ-೨ |**

**ನೀಲಕಂಠ ನೆಂದೆನಿಸಿಹನಮ್ಮ ||**

ಇರುತಿರೆ ವೈಕುಂಠಕೆ ನಡೆತರಲು | ತಾತಗೆ ವಂದಿಸಲು |

ತರುಣೀ ರೂಪವ ನೋಡೇಂದನಲು | ಹಠಹಿಡಿದು-ಕುಳ್ಳಿರಲು ||

ಹರಿತಾನು ನಸುನಗುತ್ತಿರಲು | *ಕರುಣೀವನಮ್ಮ /*

**ಕರುಣಿಗಳರಸನು ಹರನ ಮನವ ನೋಡಿ-೨ |**

**ಅರುಣೋದಕೆ ಬಾರೆಂದು ಕಳುಹಲು ||**

ಅರುಣೋದಕೆ ಗಂಗಾಧರ ತಾ ಬರಲು । ಹದಿನಾರು ವರುಷದ ।
ತರುಣೀ ರೂಪವು ವನದೋಳಿರಲು । ನಿಂತಿರುವಳ ಕಂಡು ॥
ಸೆರಗು ಪಿಡಿದೆನೆಂದೋಡುತ ಬರಲು । ಇದು ಮೋಸವೆನಲು ।
**ಕರದಲಿ ಗದೆ ಶಂಖ ಚಕ್ರವ ತೋರಲು-೨ ।**
**ಹರನು ನಾಚಿ ತೆಲೆ ಬಗ್ಗಿಸಿ ನಿಲ್ಲಲು ॥**

ಮಂಗಳಾಂಗನೆ ಮಾರಜನಕ । ನಾ ಮಾಡಿದ ತಪ್ಪು- ।
ಗಳೊಂದಣಿಽಽಸದಿರು ಯದುಕುಲ ತಿಲಕ । ವಕ್ಷಸ್ಥಂಗನೆಯು ॥
ಅರಿಯಽಽರು ನಖಾಗ್ರದ ಮಹಿಮೆಯ ಗುರುತ । *ಇದು ಸತ್ಯವೇನುತ*
**ರಂಗವಿಠಲನ** ಪದಗಳ ಪಿಡಿದು-೨ ।
ಸಾಷ್ಟಾಂಗವೆರಗಿ ಕೈಲಾಸಕೆ ನಡೆದ ॥

**97) ಬಲುರಮ್ಯವಾಗಿದೆ :- (ಶ್ರೀ ಶೇಷದೇವರು)**

ಬಲುರಮ್ಯವಾಗಿದೆ । ಶ್ರೀ ಹರಿಯ ಮಂಚ ।
ಯಲರುಣಿಕುಲ ರಾಜರಾಜೇಶ್ವರನ ಮಂಚ ॥

ವಾರುಣೀದೇವಿಗೆ ವರನೆನಿಸುವ ಮಂಚ ।
ಸಾರುವ ಭಕುತರ ಸಲಹೊಮಂಚ ॥
ಕಾರುಣ್ಯನಿಧಿ **ಜಗನ್ನಾಥವಿಠಲನ** ।
ವಿಹಾರಕ್ಕೆ ಯೋಗ್ಯವಾದ ಶೇಷಮಂಚ ॥

**98) ಅತಿಶೋಭಿಸುತಿದೆ :- (ಶ್ರೀ ಗರುಡದೇವರು)**

ಅತಿಶೋಭಿಸುತಿದೆ ಶ್ರೀಪತಿಯ ವಾಹನ ।

ಚತುರದಶಲೋಕಕ್ಕೆ- ಪ್ರತಿಮ ವಾಹನ ॥

ಪನ್ನಗಾಶನನಾದ ಪತಿತಪಾವನ ವಾಹನ ।
ಸನ್ನುತಿಪ ಸಜ್ಜನರ ಪೊರೆವ ವಾಹನ ॥
ಪನ್ನಗಾಚಲವಾಸ **ಜಗನ್ನಾಥವಿಠಲಗೆ** ।
ಉನ್ನತ ಪ್ರಿಯವಾದ ಗರುಡವಾಹನ ॥

**ಶ್ರೀ ಭಾರತಿ ದೇವಿಯರು**

**(ದಾಟಿ : ನರಸಿಂಹ ಪಾಹಿ ಲಕ್ಷ್ಮೀನರಸಿಂಹ)**

**99) ಭಾರತಿ ಮಜ್ಜನನೀ :-**

ಭಾರತಿ ಮಜ್ಜನನೀ ಭಾರತಿ ॥ಪ॥
ಭಾರತಿ ಭರತನರ್ಧಾಂಗಿ ಕರುಣಾರಸಪೂರಿತ ಪಾಂಗಿ ।ಆಹಾ।
ತಾರಕ್ಷ ಪ್ರಮುಖ ವೈಕಾರಿಕ ದೇವ-ಗಣಾರಾಧಿ-ತಾಂಘ್ರಿ
ಸರೋರುಹೆ ಪಾಲಿಸೆ ॥ಅ.ಪ॥

ವಿದ್ಯುನ್ನಾಮಕ ವಿಧಿಜಾತೆ । ಕೃತಿ ಪ್ರದ್ಯುನ್ಮ ಜಠರ ಸಂಭೂತೆ ।
ಅನವದ್ಯ ಸದ್ಗುಣಗಳ ವ್ರಾತೆ । ಬ್ರಹ್ಮ ವಿದ್ಯೆಯ ಪಾಲಿಸೋ ಮಾತೆ ॥
ಆಹಾ ॥ ಬುದ್ಧ್ಯಾಭಿಮಾನಿಯೆ ಸದ್ಯೋಜಾತನ ಪೆತ್ತ ಶ್ರದ್ಧನಾಮಕ
ಅನಿರುದ್ಧನ್ನ ತೋರೆಸೆ ॥೧॥

ಕಾಲಿ ದ್ರೌಪದಿ ಶಿವಕನ್ಯಾ । ಮನ್ಮನಾಲಯದೊಳು ನಿಲ್ಲೆ ಎನ್ನ । ಪ್ರಾಜ್ಞ ಮೌಳಿಮಣಿಯೆ ನಿತ್ಯ ಎನ್ನ । ಪರಿಪಾಲಿಸೋ ನಂಬಿದೆ ನಿನ್ನ ॥ ಆಹಾ ॥
ಶೈಲಜೆ ಶಾಮಲೆ ಪೌಲುಮೆ ಉಷೆರಿಂದ ।

ಉಲಗ ಕೈಕೊಂಬ ಕಾಲಾಭಿಮಾನಿಯೆ ‖೨‖

ವಂದಿಪ ನಿನಗಿಂದ್ರಶಯನ । ನಳ ನಂದಿನಿ ಕುರುಣಿಸುಜ್ಞಾನ ।
ಶ್ರೀಮುಕುಂದನ ಪರಮ ಕಲ್ಯಾಣ । ಗುಣ ಸಿಂದುವಿನೊಳಗೆ ಪಾಠೀಣ
‖ಆಹಾ‖ ನಂದದಿ ಚರಿಸುವೆ ಗಂಧವಾಹನ ರಾಣಿ ।
ಸಿಂಧೂರ ಗಮನೆ ಪುರಂದರ ರಾಧಿತೆ ‖೩‖

ಗುಣತ್ರಯಾತ್ಮಕವಾದ ಲಿಂಗ । ದೊಳು ಅನುರೂಪಳಾಗಿ ತುರಂಗ ।
ಮುಖ ಅನಿಲಾಂತರ್ಗತ ಪಾಂಡುರಂಗ । ಪಾದ ವನಜಯುಗಳ ಮತ್ತ
ಭೃಂಗ ‖ಆಹಾ‖ ಎನಿಸಿ ತತ್ವಕಾರ್ಯ ಅನಿರುದ್ಧ ದೇಹಸ್ಯ
ಅನಿಮಿಷರೊಳು ಪೊಕ್ಕು ದ್ವಿನವರೂಪದಿ ಮಾಳ್ಪೆ ‖೪‖

ನಿಗಮತತಿಗಳಿಗಭಿಮಾನಿ । ನಿನ್ನ ಪೊಗಳಲೆನ್ನೊಶವೆ ಕಲ್ಯಾಣಿ ।
ಆ ಪನ್ನಗರಾಜ ಸಹಸ್ರವಾಣಿ । ಯಿಂದ ಬಗೆಬಗೆತುತಿಪ ಸುಶ್ರೋಣಿ
‖ಆಹಾ‖ ಮುಗಿವೆ ಕರಗಳ ಎನ್ನವಗುಣವೆಣಿಸದೆ **ಜಗನ್ನಾಥ
ವಿಠ್ಠಲ**-ನಂಘ್ರಿಗಳ ಧ್ಯಾನವ ನೀಡೆ ‖೫‖

**ಶ್ರೀ ಸರಸ್ವತಿ ದೇವಿಯರು**

**100) ಪಾಲಿಸಮ್ಮ ಮುದ್ದು ಶಾರದೆ :-**

ಪಾಲಿಸಮ್ಮ ಮುದ್ದು ಶಾರದೆ । ಎನ್ನ ನಾಲಿಗೆ ಮೇಲೆ ನಿಲ್ಲಬಾರದೆ ‖ಪ‖
ಲೋಲಲೋಚನೆ ತಯಿ ನಿರುತ ನಂಬಿದೆ ನಿನ್ನ ‖ಅ.ಪ‖

ಅಕ್ಷರಕ್ಷರ ವಿವೇಕವ । ನಿನ್ನ । ಕುಕ್ಷಿಯೊಳೀರೇಳು ಲೋಕವ ।
ಸಾಕ್ಷಾತರೂಪದಿಂದ ಒಲಿದು ರಕ್ಷಿಸು ತಾಯೆ ‖೧‖

ಶೃಂಗಾರಪುರ ನೆಲೆವಾಸಿನಿ | ದೇವಿ | ಸಂಗೀತ ಗಾನ ವಿಲಾಸಿನಿ |
ಮಂಗಳೆ ಗಾತ್ರಳೆ ಭಳಿರೆ ಬ್ರಹ್ಮನ ರಾಣಿ ||೨||

ಸರ್ವಾಲಂಕಾರ ದಯಾ ಮೂರುತಿ ನಿನ್ನ ಚರಣವ ಸ್ತುತಿಸುವೆ
ಕೀರುತಿ | ಗುರುಮೂರ್ತಿ **ಪುರಂದರ ವಿಠಲ**ನ ಸ್ತುತಿಸುವೆ ||೩||

**101) ಮೂರೊಂದು ಮೊಗದವನ**

ಮೂರೊಂದು ಮೊಗದವನ |
ಮುದ್ದು ಮಡದೀಗೆ ಮುದದೀ ಪ್ರಣಾಮ ||ಪ||
ಅಸ್ವತಂತ್ರರೋಡೆಯ ಸ್ವತಂತ್ರ ಸ್ವಾಮಿ-೨ |
ನಿನ್ನಯ ಸೊಸೆಗೆ ಶುಭದ ಪ್ರಣಾಮ-೨ ||ಅಪ||

ಗಾನದಿ ಜಾಣೇ | ಹಸ್ತಽದಿ ವೀಣೆ |
ಸಕಲ ವಿಧ್ಯಗೆ ಜಾಣೇ ಚತುರಽನನ ರಾಣೇ-೨ ||
ತೋರಿಸೆನಗೆ ಪಂಚಽಭೇದದ ಕರುಣೆ-೨|
ಪಾಲಿಸೆನ್ನನು ಪರಮ ಕಲ್ಯಾಣೀ -೨||೧||

ಪರಮ ಪವಿತ್ರೆ | ಮಾಧವನ ಪ್ರೀತೆ |
ಮತ್ತೆ ಅವಗೆ ಸೂತೆ | ತಿಳಿಯದು ನಿನ್ನಯ ಖ್ಯಾತೆ-೨||
ಗುಣದೀ ವಿಸ್ತಾರೆ | ಜಗದೀ ಪ್ರಖ್ಯಾತೆ -೨|
ತಿಳಿಸೆನಗೆ ಜಗಽದೋಡೆಯನ ಕಿರ್ತೇ -೨ ||೨||

ಮೂರೊಂದು ಹಸ್ತದಿಂದ ಲಿಖಿತಽದೊಡೆಯನ |

ಸೇವೆಗೈಯುತಿಲರುವೆ-೨ ॥
ಹರಇಂದ್ರ ದ್ಯೆಖಿಳರಿಂದ ಸೇವೆ ಪಡೆಯಿತ್ತಿರುವೆ -೨।
ಮುದದೀ ರಂಗವಿಠ್ಠಲಗೆ ಸೊಸೆಯಾಗಿರುವೆ-೨॥೩॥

**102) ವಾಣಿ ಪರಮ ಕಲ್ಯಾಣಿ:-**

ವಾಣಿ ಪರಮ ಕಲ್ಯಾಣಿ ।ವಾರಿಜೋದ್ಭವನ ರಾಣಿ ನಾರಿ ಶಿರೋಮಣಿ ।
ಕ್ಷೋಣಿಯೊಳಗೆ ಸರಿಗಾಣೆನು ನಿನಗೆ
ಸುಪ್ವಾಣಯೇ ಹರಿಪದ ರೇಣು ಧರಿಪೆಸದಾ ॥ಅಪ॥

ಸರಸ್ವತಿ ನಿತ್ಯ ಸಾವಿತ್ರಿ ದೇವಿ ಗಾಯತ್ರಿ । ಸರಸಿಜದಳ ಸುನೇತ್ರಿ ।
ಸುರಮುನಿ ನಿಖರ ಸ್ತ್ರೋತ್ರಿ ಶೋಭನ ಗಾತ್ರಿ ಕರುಣಸಾಗರ ಪವಿತ್ರಿ ॥
ಚರಣದಂದಿಗೆ ಪಂಚ ಬೆರಳು ಭೂಷಣ ಧ್ವನಿ ಸರಕವು ಕರಕಗೆಜ್ಜೆ
ಸರಪಳಿ ಪೊಳೆವಾಂಭರಧರೆ ಸುಂದರಿ ಎರಗುವೆ ಎನ್ನನು।ಎರವು
ಮಾಡದೆ ತ್ರಿಕರಣ ಶುದ್ಧನ ಮಾಡೆ ॥೧॥

ಸರ್ವರಾತ್ಮಕೆ ಪ್ರಖ್ಯಾತೆ । ಧವಳಗೀತೆ ಸರ್ವರೀಗೂ ಮಾಹಾಪ್ರೀತೆ ।
ನಿರ್ವಾಹವಂತೆ ಪತಿವೃತೆ । ನಿರ್ಮಲ ಚರಿತೆ । ಪೂರ್ವ ದೇವತೆ
ಹಾರಿಜಾತೆ ॥ ಊರ್ವಿಯೊಳಗೆ ಮದಗರ್ವದ ಮತಿನಾ ನೊರ್ವನಲ್ಲದೆ
ಮತ್ತೋರ್ವರ ಕಾಣೆನು ಪೂರ್ವಜನ್ಮದ ಪಾಪ ಪರ್ವತದಂತಿದೆ
ನಿರ್ವಾಹವನು ಮಾಡೆ ದುರ್ವಾಂಕುರದಿ ॥೨॥

ನಗೆಮೊಗದಾ ಜಗದಂಬೆ । ನೀ ಗಂಧ ಲೇಪಿನಿ ನಿಗಮಾಭಿಮಾನಿ
ಸುಜ್ಞಾನಿ ಬಗೆಬಗೆ ವಿದ್ಯಾ ಭಾಸಿನಿ ಶುಭ ಲಕ್ಷಿಣೆ ಅಗಣಿತ

ಫಲದಾಯಿನಿ । ಝುಗಝುಗಿಸುವ ಕರಯುಗಳ ಭೂಷಿಣೆ  ಪನ್ನಗ ವೇಣಿ
ಕುಂಕುಮ ಮೃಗಮದ ಒಪ್ಪಲು ಜಗತ್ಪತಿ ಪ್ರದ್ಯುಮ್ನ **ವಿಜಯವಿಠಲನ**
ಮಗಳೆ ಸುಖಾತ್ಮಕೆ ಜಗದಿ ಸುಶ್ರೂಣಿ ॥೩॥

**103) ಶರಣೆಂಬೆ ವಾಣಿ :-**

ಶರಣೆಂಬೆ ವಾಣಿ । ಪೊರೆಯ ಕಲ್ಯಾಣಿ ॥ಪ॥
ವಾಗಭಿಮಾನಿ ವರಬ್ರಹ್ಮನ ರಾಣಿ ।
ಸುಂದರವೇಣಿ ಸುಚರಿತ್ರಾಣಿ ॥ಅಪ॥

ಜಗದೊಳು ನಿಮ್ಮ ಪೊಗಳುವೆನಮ್ಮ ।
ದಾರಿಯ ತೋರಿಸಿಂದು ಪ್ರಾರ್ಥಿಪೆನಮ್ಮಾ ॥೧॥

ಪಾಡುವೆ ಶ್ರುತಿಯ ಬೆಡುವೆ ಮತಿಯಾ।
**ಪುರಂದರ ವಿಠಲನ** ತೊರಿಸೆ ತಾಯೆ ॥೨॥

**ಶ್ರೀ ಮುಖ್ಯಪ್ರಾಣ ದೇವರು**

**104) ಪ್ರಾಣ ಬಾರೋ :-**

ಪ್ರಾಣ ಬಾರೋ ಜಗತ್ರಾಣ ಬಾರೋ ।
ಪ್ರಾಣಿಸಕಲ ಕರ್ಮ ಮಾಳ್ಪ ಜಾಣ ಬಾರೋ ॥ಪ॥
ಪಂಚರೂಪದಿ ಪ್ರಪಂಚ ವ್ಯಾಪ್ತ ಬಾರೋ ।
ಹಂಚೆ ಕೇಳೀದೈತ್ಯರ ವಂಚಕನೆ ಬಾರೋ ॥ಅ.ಪ॥

ವಾಯುಪಸ್ಥ ಕರ್ಮ ಗೈವ ವ್ಯಾನ ಬಾರೋ ।
ವಾಯುವ ನಿರೋಧಿಸಿ ಕಾಯ್ವ ಬಾರೋ ॥

ಗೋಣು ಮುರಿದ ಭಾರ ಹೊರೆವ ವ್ಯಾನ ಬಾರೋ ।
ಪ್ರಾಣಪಂಚ ವ್ಯೂಹ ಮುಖ್ಯಪ್ರಾಣ ಬಾರೋ ॥೧॥

ಉದಕ ಅನ್ನಕಾವ ಕಾಶುದಾನ ಬಾರೋ ।
ಮುದದಿ ಶ್ವಾಸ ಮಂತ್ರ ಜಪ ಜಾಣ ಬಾರೋ ॥
ವೈದಿಕ ಲೌಕಿಕ ಶಬ್ಧ ನುಡಿಸೆ ಬಾರೋ ।
ಊರ್ಧ್ವಗತಿ ಜಾತನೆ ಉದಾನ ಬಾರೋ ॥೨॥

ವ್ಯಾನ ಅನ್ನಂಗಳ್ಹಂಚೆ ಸಮಾನ ಬಾರೋ ।
ಧ್ಯಾನನಿಂತು ಈವ ಮುಖ್ಯಪ್ರಾಣ ಬಾರೋ ॥
ಕರುಣಾಸಾಗರ ದೇಹವೀಣೆ ಚರಿಸೆ ಬಾರೋ ।
**ಗುರುಗೋವಿಂದ ವಿಠ್ಠಲ** ದೀಕ್ಷಿತ ಗುರುವೆ ಬಾರೋ ॥೩॥

**105) ರಾಮ ನಾಮ ಧ್ವನಿಗೆ :-**

ರಾಮ ನಾಮ ಧ್ವನಿಗೆ । ಸೀತಾ ರಾಮ ನಾಮ ಧ್ವನಿಗೆ
ರಘುರಾಮ ನಾಮ ಧ್ವನಿಗೆ ॥ ಪ್ರಾಣ ಬಂದ ಮುಖ್ಯಪ್ರಾಣ ಬಂದ ॥ಪ॥

ಹನುಮ ಬಂದಾನೊ ಭೀಮ ಬಂದಾನೊ ।
ಭೀಮ ಬಂದಾನೊ ಮಧ್ವ ಬಂದಾ । ಮುಖ್ಯಪ್ರಾಣ ಬಂದ ॥ಅ.ಪ॥

ಕಾಲೋಳೊಂದಿಗೆ ಗೆಜ್ಜೆಯ ನಾದದಲಿ ಹನುಮಾ -೨ ।
ಝುಣಕು ಝುಣಕೆಂದು ಕುಣಿಕುಣಿದಾಡುತ -೨ । ಪ್ರಾಣ ಬಂದ ॥೧॥

ತುಂಬರು ನಾರದರು ವೀಣೆಯಬಾರಿಸುತ ಹನುಮಾ -೨ ।

ಆಡುತ ಪಾಡುತ ಕುಣಿಕುಣಿದಾಡುತ -೨ । ಪ್ರಾಣ ಬಂದ ॥೨॥

**ಪುರಂದರ ವಿಠ್ಠಲನ** ಪ್ರೇಮದಿ ಪಾಡುತಲಿ ಹನುಮಾ -೨ ।
ರಂಗನ ನೋಡುತ ಆಲಿಂಗನ ಮಾಡುತ -೨ । ಪ್ರಾಣ ಬಂದ ॥೩॥

**106) ಶರಣೆಂಬೆ ಗುರುರಾಯ ಸ್ವಾಮಿ :-**

ಶರಣೆಂಬೆ ಗುರುರಾಯ ಸ್ವಾಮಿ । ಶರಣ ಜನರಾಶ್ರಯಾ ॥ಪ॥
ಶರಣು ಸಮಿರ ಕುಮಾರ ಉದಾರನೆ ।
ಶರಣು ಪಾವನ ಕಾಯಾ । ಸ್ವಾಮಿ ॥ಅಪ॥

ಹರಿ ಪೂರ್ಣಂಶದಿ ಜನಿಸಿ । ಸ್ವಾಮಿ-2 ಹರಿಕುಽಽಲೋಽಽದ್ಭವ ನೆನಿಸಿ ॥
ಹರಿಪರನು ನಮಿಸಿ । ಹರಿ ಶತ್ವಜ ಗೊಳಿಸಿ-೨ ।
ಹರಿರುಹದಲಿ ತರಿದೆ ಸ್ವಾಮಿ। ಹರಿರೂಪದಲಿ ನಿಂದೆ ಸ್ವಾಮಿ ।
ಹರಿಮಂದಿರದಲಿ ನಲೆಸಿ । ಹರಿ ಬರಲು ನಮಿಸಿ ।
ಹರಿ ದಶ್ವಜಗಗೊಳಿಸಿ -೨॥ ಹರಿಹಯ ಜಗ ಮುನಿದೆ । ಸ್ವಾಮಿ ॥೧॥

ಗೋಪೇಂದ್ರ್ಽನಾಜ್ಞೆಯಲಿ ।ಸ್ವಾಮಿ-೨।ಗೋಽಽಪಽದಾಂಬುಜ ಪಡೇದೆ ॥
ಗೋಪನ ಲಂಘಿಸಿ । ಗೋಪುತ್ರಿಯ ಕಂಡು -೨। ಗೋಪೀಡಽಽ ಕರ
ಮುನಿದೆ । ಸ್ವಾಮಿ ॥ ಗೋಪರಿಽಗೆದರಾಗಿ ಸ್ವಾಮಿ । ಗೋಪಾಸ್ತ್ರ
ವಶನಾಗಿ । ಗೋಪುರ-ನ್ನುರಹಿ । ಗೋಪಾನ್ವಯ ಕಡುಹಿ -೨।
ಗೋಪದವಿಯ ಪಡೆದೆ । ಸ್ವಾಮಿ॥೨॥

ಮಹೀದರನೇಕ ತಂದು ಸ್ವಾಮಿ -೨ । ಮಹೋದಽಽದಿಯನೆ ಬಿಗಿದು ॥

ಮಹಿಬಾರಕೆ ಅಹಿ । ಮಹಿ ರಾವಣಽನ್ವಯ-೨।
ಮಹಿರುಹದಲಿ ತರಿದೆ ।ಸ್ವಾಮಿ ।ಮಹಿಯೊಳು ಮೂರವತಾರಿ ಸ್ವಾಮಿ ।
ಮಹಿಮಾನೇಕವ ತೋರಿ । **ಮಹಿಪತಿ ಸುತ** ಪ್ರಭು । ಮಹಿಜಳ
ಕೂಡಿಸಿ -೨। ಮಹಜಾಗ್ರಣಿ ಯಾದೇ । ಸ್ವಾಮಿ

**107) ಭೀಮಾನು ಸರ್ವ ಜನ (ಕಿಚಕ ವಧ):-**

ಭೀಮಾನು ಸರ್ವ ಜನ ಮೋಹಿಸುವಂಥ ।
ಕಾಮಿನಿ ರೂಪವ ತೊಟ್ಟನು ||ಪ||

**ಸೋಮಸಮಾನನ** ತಾಮರ ಸಾಂಬಕ ಹೇಮಾಂಬರ
ಕಂಠೀಮಣಿಗಣ ಸುಽತ್ರಾಮ ಕಾಮಿನಿ ಯಾಮೋಹಿಪ ।
ಅಭಿರಾಮರೂಪ ನಿಸ್ಸೀಮ ಬಲಾಢ್ಯ ||ಅಪ||

ಬಟಕುಚಪುಟ ಕರಪುಟದಿಂಚೆದ ಹಿಗ್ಗಿಸಿ ತೀಡುತ ।
ಅಂಗುಟತುಟ ದೆಳೆದುಟ ರಕ್ತದ ಮೆಯನು ನೋಡುತ||
ಕುಟಿಲಾಳಕ-ನ್ಯಾವರಿಸುತ ಪಟುಮಾತಾಡುತ ।
ವಿಟರಿಗೆ ಸ್ವರ ಸಂಗಟವನು ಹೃದಯದ ನೋಡುತ||
**ಪುಟಚಂಡ ಹಾರಿಸಿ** ನಟನೆ ಮಾಡುವ-2 ।
ಆರ್ಭಟಕಂಜಿಹ ಬಿಟುವಪಟು ಹಾಂಗಿರವದು । ವಟವೃದ್ಧರು ಯತಿ||
ಮಠಮಂದಿರ । ಲಂಪಟವ ಬಿಟ್ಟು ಮಿಟಿ ಮಿಟಿ ನೋಡುವರೋ ||೧||

ಕರಿಕಲಭಗಮನ ಸೊರಗಿದ ಕಟಿ ಕಂಠೀರವು ।
ವಿರಳನಯನಜಿತ ಎರಳೆಗಳ್ ಮನೆಯನು ಸೇರುವ||

ಸರಸ ಸ್ವರದಿಂದ ಪರಿಭ್ರಮಿಸಿತು ಕಲಕೀರವು ।
ಸುರನರಿಯರ ಸುಂದರಿಯರ ಚೆಲುವಿಗೆ ಮಾರವು ॥
**ಹೆರಳ್ ಭಂಗಾರವು** ಸರಳ್ ತರಳ್ಗಿಸರ್-2 ।
ಹರಳ್ ಕಂಕಣಬಳೆ ಸರಳ್ ಬೆರಳುಂಗುರ ॥
ಅರಳ್ ಮಲ್ಲಿಗೆಸರಳ್ ಕೊರಳ್ ಗಂಧವಕಂಡು ।
ಮರುಳ್ ಗೊಂಡ ಮನ ಹಗಲು-ಇರುಳು ಧೇನಿಪರೋ ॥೧॥

ಮೃಗಮದತಿಲಕವು ಮುಗುಳ್ ನಗೆಮೊಗ ಬಿಂಬಾಧರ ।
ಖಗಯುಗದಂದದಿ ಝಗ ಝಗಿಸುತಿಯ ಅಪಯೋಧರ ॥
ಅಘಹರ **ರಾಜ ಗೋಪಗೆ** ಸಖ ಪಾರ್ಥ ಸಹೋದರ ।
ಬಗೆ ಬಗೆಯಲಿ ಮನದಾಗ ಅಘಹರನ ಕೃತಾದರ ॥
**ಮುಗುಳ್ ಮಲ್ಲಿಗೆಸರ** ತೆಗೆ ತೆಗೆದ್ದಾಕುತ-2 ।
ಸೂಗುಣ ಸುಗುಣ ರೂಪ ತಗಿಲ ಭುಗುಲ ಲೆನುತಿರೆ ॥
ಜಗದ ಜನರ ಮನ ಭುಗಿಭುಗಿಲೆನುತಿರೆ ।
ಬಗೆ ಬಗೆಯಲಿ ಒಂದ್ದಗಲ ಯುಗವಾಗೆ ॥೨॥

**108) ಜಾಣ ನೀ ನಹುದೋ:-**

ಜಾಣ ನೀ ನಹುದೋ । ಮುಖ್ಯಪ್ರಾಣ ನೀ ನಹುದೋ ॥ ಪ ॥
ರಾಣಿ ಭಾರತಿ ರಮಣ ನಿನಗೆಣೆ । ಕಾಣೆ ತ್ರಿಭುವನದೊಳಗೆ ಸರ್ವ ।
ಪ್ರಾಣಿಗಳ ಹೃದಯದಲಿ ಮುಖ್ಯ । ಪ್ರಾಣನೆಂದೆನಿಸಿದೆಯೊ ಸ್ವಾಮಿ॥

ಧೀರ ನೀ ನಹುದೋ । ವಾಯು ಕುಮಾರ ನೀನಹುದೋ -೧ ।

ಸಾರಿದವರ ಮನೋರಥಂಗಳ । ಬಾರಿಬಾರಿಗೆ ಕೊಡುವೆನೆನುತಲಿ೨॥
ಕ್ಷೀರ ನದಿ ತೀರದಲಿ ನೆಲೆಸಿಹ । ಮರುತಾವತಾರ ಹನುಮ ॥೧॥

ದಿಟ್ಟ ನೀನಹುದೋ । ಬೆಟ್ಟ ತಂದಿಟ್ಟವ ನೀನಹುದೋ -೨।
ರಟ್ಟೆ ಹಿಡಿದು ಅಕ್ಷಕುಮಾರನ । ಕುಟ್ಟಿ ದೈತ್ಯರ ಕೆಡಹಿ ಬೇಗದಿ -೨ ॥
ಸುಟ್ಟು ಲಂಕೆಯ ಸೀತೆಗುಂಗುರ । ಕೊಟ್ಟ ಜಗದಲಿ ಜಟ್ಟಿ ಹನುಮ ॥೨॥

ಪ್ರಚಂಡ ನೀನಹುದೋ ।ದುರಿತ-ತಮ-ಮಾರ್ತಾಂಡ ನೀನಹುದೋ ।
ಕುಂಡಲವು ಕಿರಿ ಗಂಟೆ ಉಡಿಯಲಿ । ಪೆಂಡೆ ನೂಪುರ ಕಾಲಲಂದಿಗೆ॥
ತಂಡತಂಡದಿ **ಕೃಷ್ಣನಂಘ್ರಿ** ಪುಂಡರೀಕಗೆ ಕೈಯ ಮುಗಿದ ॥3॥

**109) ಹರುಷದಿಂದಲಿ ಕಾಯೋ :-**

ಹರುಷದಿಂದಲಿ ಕಾಯೋ ಹನುಮ ।
ಹಾಲ ಭಾವಿಯೊಳಿರುವಂತ ಭೀಮ ॥ಪ॥
ಗುರು ಮಧ್ವರಾಯರ ಚರಣಕೊಂದಿಪೆ ನಿತ್ಯ -೨ ।
ಹರಿ ಸರ್ವೋತ್ತಮನೆಂಬೊ ಸ್ಥಿರವಾದ ಮತಿ ಕೊಡು ಹನುಮ ॥ಅ.ಪ॥

ಅಂಜನದೇವಿ ಸಂಭೂತ । ಧನಂಜಯನಣ್ಣನೆಂದತಿ ಪ್ರಖ್ಯಾತ ।
ಕುಂಜರ ಬಲ ರಾಮದೂತ । ಕುರು ಭಂಜರೆ ಆನಂದತೀರ್ಥ ॥
**ಅಂಜಿಕಿನ್ಯಾತಕೆ ಸಂಜೀವರಾಯ -೨ ।**
ಸೌಗಂಧಿಕ ಪುಷ್ಪವ ತಂದಂಥ । ಭೀಮ ॥೧॥

ಸಾಗರ ದಾಟಿದ್ಯೊ ಧೀರ । ಧರ್ಮರಾಜನ ನಿಜ ವಂಶೋಧ್ಧಾರ ।

ಆ ಮಧ್ಯಗೇಹರ ಕುವರ | ಹನುಮ ಭೀಮರೆ ಮಧ್ವಾವತಾರ ||
**ಆ ಮನೋಹರ ದಿವ್ಯ ರಾಮ ನಾಮಾಮೃತ -೨ |**
ಪ್ರೇಮದಿ ಕರುಣಿಸೊ ಸ್ವಾಮಿ ದಯಾನಿಧೆ | ಹನುಮ ||೨||

ದೂರು ಮಾಡದಿರೊ ಹನುಮ | ಕರ ಜೋಡಿಸಿ ಪ್ರಾರ್ಥಿಪೆ ಭೀಮ |
ಆನಂದತೀರ್ಥರ ಪ್ರೇಮ | ದಿಂದ ವ್ಯಾಳ ವ್ಯಾಳಕೆ ರಾಮ ನಾಮ |
**ಪ್ರೇರಣೆ ಮಾಡಿಸೊ ಭಾರತಿ ರಮಣನೆ -೨ |**
**ಶ್ರೀಧ ನರಹರಿವಿಠ್ಠಲನ** ನಿಜ ದೂತ | ಹನುಮ ||೩||

**110) ದೇವಾ ಹನುಮ ಶೆಟ್ಟಿ:-**

ದೇವಾ ಹನುಮ ಶೆಟ್ಟಿ | ರಾಯಾ ಜಗಜಟ್ಟಿ |
ಕಾವೋದು ಭಾವಿ ಪರಮೇಷ್ಠಿ ||ಪ||

ಪಾವನ ಚರಿತ ಸಂಜೀವನ ಗಿರಿಧರ | ಪಾವಮಾನಿ ಕರುಣಾವ-
ಲೋಕನದಿ | ನೀ ಒಲಿಯುತ ಸದಾವಕಾಲ ತವ | ತಾವರೆ ಪದಯುಗ
ಸೇವೆಯ ಕರುಣಿಸೋ ||ಅ.ಪ||

ವಾನರ ಕುಲನಾಯಕ | ಜಾನಕಿಶೋಕ ಕಾನನ ತೃಣಪಾವಕ | ಹೀನ
ಕೌರವ ನಾಶಕ ಸನ್ಮೌನಿ ತಿಲಕ | ಆನಂದತೀರ್ಥ ನಾಮಕ ||
**ಕ್ಷೋಣಿಯೊಳಗೆ ಎಣೆಗಾಣೆ ನಿನಗೆ ಎನ್ನ | ಮಾಣದೆ ಅನುದಿನ ಪಾಣಿ**
**ಪಿಡಿದು ಪೊರೆ | ಸ್ಥಾಣುಜನಕ ಗೀರ್ವಾಣ ವಿನುತ ಜಗತ್ | ಪ್ರಾಣ**
**ರಮಣ ಕಲ್ಯಾಣ ಮೂರುತಿ ||೧||**

ಮರುತ ನಂದನ ಹನುಮ । ಪುರಹರರೋಮ । ಪರಮ ಪುರುಷ ಶ್ರೀಭೀಮಾ । ಕರುಣಾಸಾಗರ ಜಿತಕಾಮ । ಸದ್ಗುಣ ಭೌಮ । ಪರವಾದಿ ಮತವ ನಿರ್ನಾಮ ॥ **ಗಿರಿಸುತ ಪಾಲಕ ಜರಿಜ ವಿನಾಶಕ । ಹರಿಮತ ಸ್ಥಾಪಕ ದುರಿತ ವಿಮೋಚಕ । ಶರಣ ಜನರ ಸುರತರು ಭಾರತಿವರ ಮರೆಯದೆ ಪಾಲಿಸೋ ನಿರುಪಮ ಚರಿತ ||೨||**

ದಿಟ್ಟ ಶ್ರೀ **ಶ್ಯಾಮಸುಂದರ । ವಿಠಲ** ಕುವರ ದುಷ್ಟ ರಾವಣ ಮದಹರಾ । ಜಿಷ್ಣು ಪೂರ್ವಜ ವೃಕೋದರ । ರಣರಂಗ ಶೂರ । ಶಿಷ್ಟ ಜನರ ಉದ್ಧಾರ ॥ **ನಿಷ್ಠೆಯಿಂದ ಮನಮುಟ್ಟಿ ನಿನ್ನ ಪದ । ಥಟ್ಟನೆ ಪಾಡುವ ಶ್ರೇಷ್ಠ ಸುಜನರೊಳು । ಇಟ್ಟು ಸಲಹೋ ಸದಾ ಸೃಷ್ಟಿಮಂಡಲದಿ । ಪುಟ್ಟ ಗ್ರಾಮ ಬಲ್ಲಟಗಿ ವಾಸಾ || ೩ ||**

**111) ಎನ್ನ ಕಂದ ಹಳ್ಳಿಯ :-**

ಎನ್ನ ಕಂದ ಹಳ್ಳಿಯ ಹನುಮ ಚೆನ್ನಾಗಿಹರೆ ಲಕ್ಷ್ಮಣ ದೇವರು ॥ಪ॥
ಶ್ರೀಪತಿ ರಾಘವ ಕ್ಷೇಮದಲಿಹರೆ ॥ಅ.ಪ॥

ತುಪ್ಪ ಪಂಚಾಮೃತ ಅಂದು । ಅಡವಿ ಗಡ್ಡೆಗಳಿಂದು । ಕರ್ಪೂರ ವೀಳ್ಯೆ ಅಂದು ಕುರುಕುರು ಇಂದು ॥ ಸುಪ್ಪತ್ತಿಗೆ ಮಂಚ ಅಂದು ಹುಲ್ಲು ಹಾಸಿಗೆ ಇಂದು ।ಶ್ರೀಪತಿ ರಾಘವ ಕ್ಷೇಮದಲಿಹರೆ ॥೧॥

ನವ ವಸ್ತ್ರಗಳು ಅಂದು ನಾರು ಸೀರೆಗಳಿಂದು । ಹೂವಿನ ಗಂಟು ಅಂದು ಜಡೆಗಳಿಂದು ॥ ಜವ್ವಾಜಿ ಕಸ್ತೂರಿ ಅಂದು ಭಸಿತ ಧೂಳಿ ಇಂದು । ಶ್ರೀಪತಿ ರಾಘವ ಕ್ಷೇಮದಲಿಹರೆ ॥೨॥

ಕನಕ ರಥಗಳು ಅಂದು l ಕಾಲುನಡಿಗೆ ಇಂದು l ಘನ ಛತ್ರ
ಚಾಮರಂದು l ಬಿಸಿಲೂ ಇಂದು ಸನಕಾದಿ ಓಲೈಸುವ ಆದಿ ಕೇಶವ
ನಮ್ಮ ಹನುಮೇಶ ರಾಘವ ಕ್ಷೇಮದಲಿಹರೆ ||೩||

**112) ಪ್ರಾಣದೇವ ನೀನಲ್ಲದೆ :-**

ಪ್ರಾಣದೇವ ನೀನಲ್ಲದೆ ಕಾಯ್ವರ ಕಾಣೆನು ಜಗದೊಳಗೆ ||ಪ||
ಪ್ರಾಣ ಅಪಾನ ವ್ಯಾನೋದಾನ ಸಮಾನನೆನಿಪ ಮುಖ್ಯಪ್ರಾಣ ||ಅ.ಪ||

ವಾಸವ ಕುಲಿಷದಿ ಘಾಸಿಸೆ ಜೀವರ ಶ್ವಾಸ ನಿರೋಧಿಸಿದೆ -೨ l
ಆ ಸಮಯದಿ ಕಮಲಾಸನ ಪೇಳಲು ನೀ ಸಲಹಿದಿ ಜಗವ ||೧||

ಅಂಗದ ಪ್ರಮುಖ ಪ್ಲವಂಗರು ರಾಮನ ಅಂಗನೆಯಳ ಹುಡುಕೆ -೨l
ತಿಂಗಳು ಮೀರಲು ಕೆಂಗೆಡೆ ಕಪಿಗಳ ಜಂಗುಳಿ ಪಾಲಿಸಿದೆ ||೨||

ಪಾವಿನ ಪಾಶದಿ ರಾವಣಿ ನೀಲ ಸುಗ್ರೀವರ ಮುಖ ಬಿಗಿಯೇ -೨l
ಸಾವಿರದೈವತ್ತು ಗಾವುದದಲ್ಲಿಹ ಸಂಜೀವನ ತಂದೆ ||೩||

ಪರಿಸರ ನೀನಿರೆ ಹರಿ ತಾ ನಿಪ್ಪನು ಇರದಿರೆ ತಾನಿರನು -೨l
ಕರಣ ನಿಯಾಮಕ ಸುರರ ಗುರುವೇ ನೀ l ಕರುಣಿಸೆ ಕರುಣಿಸುವ ||೪||

ಭೂತೇಂದ್ರಿಯಂಗಳಧಿನಾಥ ನಿಯಾಮಕ ನಾತ್ಕೈಜಸಹರನ -೨l
ತಾತನೆನಿಪ **ಜಗನ್ನಾಥ ವಿಠಲನ** ಪ್ರೀತಿ ಪಾತ್ರನಾದೆ ||೫||

**113) ವಾತನ್ನ ಜಯ ಜಾತನ್ನ :-**

ವಾತನ್ನ ಜಯ ಜಾತನ್ನ । ಲೋಕ ಪ್ರೀತನ್ನ ।
ಸ್ತುತಿಸಿ ಖ್ಯಾತನ್ನ ಮುಖ್ಯಪ್ರಾಣನ್ನ ॥ಪಲ್ಲ॥
ವಾನರ ಕುಲದೊಳು ಧೈರ್ಯನ್ನ ।ಮುದ್ದು ಆನನ ಗೀರ್ವಾಣವರ್ಯನ್ನ
-೨ ।ಆನಂದ ವಿಜ್ಞಾನಾಚಾರ್ಯನ್ನ । ದುಷ್ಟ ದಾನವರಳಿದತಿ
ವೀರ್ಯನ್ನ ॥೧॥ ಮುಖ್ಯಪ್ರಾಣನ್ನ

ದ್ವಿಜರಾಜ ಕುಲಾಗ್ರಣಿ ಭೀಮನ್ನ।ಮಹ ದ್ವಿಜಕೇತನಂಘ್ರಿಗೆ ಪ್ರೇಮನ್ನ।
ದ್ವಿಜರ ಪಾಲಿಸಿದ ನಿಸ್ಸೀಮನ್ನ । ಕುರು ವಜ್ರವ ಸದೆದ
ಸಾರ್ವಭೌಮನ್ನ ॥೨॥ ಮುಖ್ಯಪ್ರಾಣನ್ನ

ಅದ್ವೈತಮತ ಕೋಲಾಹಲನ್ನ । ವೇದ ಸಿದ್ದಾಂತ ಶುಭಗುಣ ಶೀಲನ್ನ೨
ಸದ್ವೈಷ್ಣವರನ್ನ ಪಾಲನ್ನ ।
ಗುರು ಮದ್ವಮುನಿ ಗುಣಲೋಲನ್ನ ॥೩॥ ಮುಖ್ಯಪ್ರಾಣನ್ನ

ಚಾರುಚರಿತ ನಿರ್ದೋಷನ್ನ । ಲೋಕ ಮೂರರೊಳಗೆ ಪ್ರಕಾಶನ್ನ -೨ ।
ಧೀರ **ವಿಜಯ ವಿಠ್ಠಲೇಶನ್ನ** ।
ಬಿಡದೆ ಆರಾಧಿಪ ಭಾರತೀಶನ್ನ ॥೪॥ ಮುಖ್ಯಪ್ರಾಣನ್ನ

**114) ಪವಮಾನ ಪವಮಾನ :-**

ಪವಮಾನ ಪವಮಾನ ಜಗದಪ್ರಾಣ ಸಂಕರುಷಣ ।
ಭವಭಯಾರಣ್ಯ ದಹನಾ ಪವನಾ ॥ಪ॥

ಶ್ರವಣವೇ ಮೊದಲಾದ ನವವಿಧ ಭಕುತಿಯ |
ತವಕದಿಂದಲಿ ಕೊಡು ಕವಿಜನ ಪ್ರೀಯ ||ಅ.ಪ||
ಹೇಮಕಚ್ಚುಟ ಉಪವೀತ ಧರಿಪ ಮಾರುತ | ಕಾಮಾದಿ ವರ್ಗರಹಿತ |
ವ್ಯೋಮಾದಿ ಸರ್ವ ವ್ಯಾಪುತ ಸತತ ನಿರ್ಭೀತ | ರಾಮಚಂದ್ರನ
ನಿಜದೂತ | ಯಾಮ ಯಾಮಕೆ ನಿನ್ನಾರಾಧಿಪುದಕೆ | ಕಾಮಿಪೆ
ಎನಗಿದು ನೆಮಿಸಿ ಪ್ರತಿದಿನ | ಈ ಮನಸಿಗೆ ಸುಖ ಸ್ತೋಮವ
ತೋರುತ | ಪಾಮರ ಮತಿಯನು ನೀ ಮಾಣಿಪುದು ||೧||

ವಜ್ರ ಶರೀರ ಗಂಭೀರ ಮುಕುಟಧರ | ದುರ್ಜನ ವನ ಕುಠಾರ |
ನಿರ್ಜರ ಮಣಿ ದಯಾಪಾರ ವಾರ ಉದಾರ | ಸಜ್ಜನರಘಪರಿಹಾರ |
ಅರ್ಜುನಗೊಲಿದೊಂದು ಧ್ವಜವಾನಿಸಿನಿಂದು | ಮೂರ್ಜಗವರಿವಂತೆ
ಗರ್ಜನೆ ಮಾಡಿದಿ | ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜ ಪಾದದ ಧೂಳಿ |
ಮಾರ್ಜನದಲಿ ಭವ ವರ್ಜಿತನೆನಿಸೊ ||೨||

ಪ್ರಾಣ ಅಪಾನ ವ್ಯಾನೋದಾನ ಸಮಾನ | ಆನಂದ ಭಾರತಿ ರಮಣ |
ನೀನೇ ಶರ್ವಾದಿ ಗೀರ್ವಾಣಾದ್ಯಮರರಿಗೆ | ಜ್ಞಾನ ಧನ ಪಾಲಿಪ
ವರೇಣ್ಯ | ನಾನು ನಿರುತದಲಿ ಏನೇನೆಸಗಿದೆ | ಮಾನಸಾದಿ ಕರ್ಮ
ನಿನಗೊಪ್ಪಿಸಿದೆನೊ | ಪ್ರಾಣನಾಥ ಸಿರಿ **ವಿಜಯವಿಠ್ಠಲ**ನ ಕಾಣಿಸಿ
ಕೊಡುವದು ಭಾನು ಪ್ರಕಾಶ ||3||

**115) ಭಾರವೇ ಭಾರತಿರಮಣಾ :-**

ಭಾರವೇ ಭಾರತಿರಮಣಾ ನಿನಗೆ ನಾ|ಭಾರವೇ ಭಾರತಿರಮಣಾ ||ಪ||

ಲಂಕಾನಾಥನ ಬಿಂಕವ ಮುರಿದು ।
ಅಕಳಂಕ ಚರಿತನ ಕಿಂಕರ ನೆನಿಸಿದೆ -೨।
ಪಂಕಜಾಕ್ಷಿಗೆ ಅಂಕಿತದುಂಗುರವಿತ್ತು -೨ ॥
ಶಂಕೆಯಿಲ್ಲದೆನೀಲಂಕೆಯ ದಹಿಸಿದೆ ॥೧॥

ಸೋಮಕುಲದಿ ನಿಸ್ಸೀಮ ಮಹಿಮನೆನಿಸಿ ।
ತಾಮಸ ಬಕನ ನಿರ್ಧೂಮ ಮಾಡಿದೆ -೨।
ಕಾಮಿನಿ ಮೋಹಿಸೆ ಪ್ರೇಮದಿ ಸಲಹಿದೆ -೨ ॥
ತಾಮರಸಾಕ್ಷ್ಯನ ಸೇವೆಯ ಮಾಡಿದೆ ॥೨॥

ವೇದವ್ಯಾಸರ ಪೂಜೆಯ ಮಾಡಿ । ಮೋದದಿಂದ ಬಹುವಾದಗಳಾಡಿ೨।
ಅಧಮಶಾಸ್ತ್ರಗಳ ಹೋಮವ ಮಾಡಿ -೨ ॥
**ವಿಜಯ ವಿಠಲನ** ಸೇಽವಕನೆನಿಸಿದೆ ॥೩॥

## 116) ಹನುಮಂತ

ಹನುಮಂತಽಽ । ನೀ ಬಲು ಜಯವಂತ ॥ಪ॥
ಅನುಮಾನ ಯತಿಯೆ ಆನಂದಽತೀಽಥಾರ್ಯ್ಯ ॥ಅಪ॥

ರಾಮ ಸೇವಕನಾಗೀಽಽ । ರಾವಣನಽ ಪುರವ -೨।
ನಿಽಧುಮ ಮಾಡಿದ್ಯೋಽಽ । ಒಂದು ನಿಮಿಷದೊಳಗೆ -೨॥
ಭೂಮಿ ಪುತ್ರಿಗೆ । ಮುದ್ರೆ ಉಂಗರ ವಿತ್ತು ।
ಚೂಡಾಮಣಿಯ ರಾಮಪಾದಕರ್ಪಿಸಿದೆ ॥೧॥

ಕೃಷ್ಣವತಾರದಲೀऽऽऽ । ಭೀಮನಾಗ-ಅವತರಿಸಿ-೨।
ದೃಷ್ಟ ದೈತ್ಯರನೆಲ್ಲಾऽऽ । ಸಂऽಹರಿಸಿದೆ ನೀನು -೨॥
ದೃಷ್ಠಿಹೀನನಾದ ಧೃತರಾಷ್ಟ್ರವಂಶವನು ।
ಕಷ್ಟವಿಲ್ಲದೆ ಕೊಂದು ಕೃಷ್ಣಗರ್ಪಿಸಿದೆ ॥೨॥

ಪತಿತ ಮಾಯಿಗಳುऽऽ । ಕುಟ್ಟಿ ಮತವೆಲ್ಲ ಕೆಡಿಸಲು -೨।
ಮತಿಹೀನರಾಗೆऽऽ । ಸಜ್ಜನऽರೆಲ್ಲರು -೨॥
ಅತಿ ವೇಗದಲಿ ಮಧ್ವ ಯತಿಯಾಗಿ ಅವತರಸಿ।
ಗತೀಯ ತೋರಿದ **ಹಯವದನನ** ನಿಜऽದಾಸ ॥೩॥

## 117) ಅಪಮೃತ್ಯು ಪರಿಹರಿಸೋ

ಅಪಮೃತ್ಯು ಪರಿಹರಿಸೋ ಅನಿಲದೇವ ॥ಪ॥
ಕೃಪಣ ವತ್ಸಲನೆ । ಕಾಯ್ವರ ಕಾಣೆ ನಿನ್ನುಳಿದು ॥ಅಪ॥

ನಿನಗಿಂತ ಸಮರಾದ । ಅನಿಮಿತ್ಯ ಬಾಂಧವರು ।
ಎನಗಿಲ್ಲ-ಆವಾವ ಜನುಮದಲ್ಲಿ-೨ ॥
ಅನುದಿನವು ಯಮ್ಮ ಉದಾಸೀನऽ। ಮಾಡದಲೆ-೨ ।
ಅನುಚಿತವು-ಉಚಿತವೋ ಸಜ್ಜನ ಶಿಖಾಮಣಿ ॥೧॥

ಕರಣಾऽಭಿಮಾऽನಿಗಳು ಕಿಂಕರರು ಮುಲೋऽಕ ।
ದೊರೆಯ ನಿऽನ್ನೊಳಗಿಪ್ಪ ಸರ್ವಕಾಲ-೨ ॥
ಪರಿಸರನೇ ಈ ಭಾಗ್ಯ ದೊರೆತನಕೆ ಸರಿಯುಂಟೆ-೨ ।
ಗುರುವರನೆ । ನೀ ದಯಾಕರನೆಂದು ಪ್ರಾರ್ಥಿಸುವೆ ॥೨॥

ಭವರೋಗ ಮೋಚಕನೆ ಪವಮಾನರಾಯ ।
ನಿನ್ನವರವನು ನಾನು ಮಾಧವನ ಪ್ರೀಯನೇ-೨ ॥
ಜವನ ಬಾಧೆಯ ಬಿಡಿಸು ಅವನಿಯೊಳು ಸುಜನರಿಗೆ-೨।
ದಿವಿಜಗಣ ಮಧ್ಯದೊಳು ಪ್ರವರ।ನೀ।ನಹುದೋ ॥೩॥

ಜ್ಞಾನಾಯು।ರೂಪಕನೆ ನೀನಹುದೋ ವಾಯು ।
ಪಂಚಾಽನನಾಽದ್ಯಮರರಿಗೆ ಪ್ರಾಣದೇವಾ-೨ ॥
ದೀನವತ್ಸಲನೆಂದು ನಾ ನಿನ್ನ ಪ್ರಾರ್ಥಿಸುವೆ-೨ ।
ದಾನವಾರಣ್ಯ। ಕೃಶಾನು ಸಽರ್ವದಾ ಎಮ್ಮ ॥೪॥

ಸಾಧನ ಶರೀರವಿದು ನೀ ದಯದಿ ಕೊಟ್ಟದ್ದು ।
ಸಾಧಾರಣವಲ್ಲ ಸಾಧು ಪ್ರೀಯನೇ-೨ ॥
ವೇದವಾದೋದಿತ **ಜಗನ್ನಾಥವಿಠ್ಠಲ**ನ-೨ ।
ಪಾದ ಭಕುತಿಯನಿತ್ತು ಮೋದ ಕೊಡು ಸತತ ॥೫॥

**118) ಪಾಲಯ ಮಾಂ ಪವಮಾನ**

ಪಾಲಯ ಮಾಂ ಪವಮಾನ ॥ಪ॥ ಪಾಲಯ ಮಾಂ ಕರುಣಾಲಯ
ಹರಿಪದ-೨। ಕೀಲಾಲಜ ಮಧುಪ -೨॥ಅಪ॥

ಪ್ರಾಣೋಪಾನ ವ್ಯಾನೋದಾನ । ಸಮಾನ ಪೂರ್ಣಜ್ಞಾನ -೨।
ನೀನೊಲಿದೆನ್ನ ಸದಾನುರಾಗದಲೀ-೨। ಮಾಣದೆ ಪೊರೆಯೆನ್ನ -೨॥೧॥

ಹರಿಸುತ ಹರಪಿತ ಚರಾಚರಸ್ಥಿತ । ಶರಣಜನರ ಪಾಲಾ -೨।

ಹರಿಯಾಜ್ಞದಿ ಜೀವರಿಗೆ ತುದಿಯಲಿ-೨। ಅವರವರ ಗತಿ ಪ್ರದಾತಾ।೨॥

ಮುದ್ದು **ಅಭಿನವಜನಾರ್ಧನ ವಿಠಲನ** । ಪದ್ಮಪಾದಯುಗಳ -೨।

ಶುದ್ಧ ಭಕುತಿಯಲಿ ಪೊದ್ದಿ ಸುಖಿಪತೆರೆ-೨। ಉದ್ಧರಿಸುವುದೆನ್ನ -೨॥೩॥

## 119) ಸೂತ್ರನಾಮಕ ಸುಂದರನೇಕ

ಸೂತ್ರನಾಮಕ ಸುಂದರನೇಕ ಸೂತ್ರನಾಮಕ ॥ಪ॥

ಸೂತ್ರನಾಮಕ ಸತ್ಪಾತ್ರ ಗರುಡಶಿಖಿನೇತ್ರ

ವಿನುತ ಶುಭ ಗಾತ್ರ ಪವಿತ್ರ ॥ಅಪ॥

ರಾಮಪದಾಬ್ಜಭೃಂಗ ರಾವಣ ಭಂಗ ಕಾಮ ಗಜಾಸಿಂಗ । ತಾಮಸ

ಕುಲಕೆ ನೀ ಧೂಮಕೇತು ಬುಧ ।

ಸೌಮನಸಾಗ್ರಣಿ ಕಾಮಿತ ಫಲದಾ ॥೧॥

ಪಾಂಡು ನಂದನ ಪಾಲಿಸೋ ಎನ್ನಽಖಂಡ ಪಾವನ । ಅಂಡಜಾಧಿಪನ

ಕಂಡು ಭಜಿಸಿ ದೋರ್ದಂಡ ಖಳಕುಲಕೆ ಚಂಡಪ್ರಚಂಡ ॥೨॥

ಜ್ಞಾನದಾಯಕ ಆನಂಡತೀರ್ಥ ದೀನ ಪೋಷಕ । ಭಾನು ಕೋಟಿ

ತೇಜ **ವ್ಯಾಸವಿಠ್ಠಲನ** । ಧ್ಯಾನದೊಳಿಹ ಸನ್ಮಾನಸ ಹಂಸ ॥೩॥

## 120) ರಾಮದೂತನ ಪಾದ

ರಾಮದೂತನ ಪಾದ ತಾಮರಸವ ಕಂಡ।

ಆ ಮನುಜನೆ ಧನ್ಯನೋ ॥ಪ॥

ಶ್ರೀಮನೋಹರನಂಘ್ರಿ ಭಜಕ ಸ್ತೋಮ ಕುಮುದಕೆ ಸೋಮನೆನಿಸುವ।

ಭೂಮಿಯೊಳು ಯದುಗಿರಿಯ ಸೀಮೆಯ
ಕಾಮವರದೊಳು ಪ್ರೇಮದಿಂದಿಹ ||ಅಪ||

ಕೋತಿರೂಪದಿ ರಘುನಾಥನಾಜ್ಞೆಯ ತಾಳಿ | ಪಾಥೋಧಿಯ ಲಂಘಿಸಿ|
ಖ್ಯಾತ ಲಂಕೆಯ ಪೊಕ್ಕು ಶೋಧಿಸಿ | ಮಾತೆಯನು ಕಂಡೆರಗಿ
ದಶಮುಖ || ಪೋತ ಖಳಕುಲವ್ರಾತ
ಘಾತಿಸಿ ಸೀತೆ ವಾರ್ತೆಯ ನಾಥನಿಗರುಹಿದ ||೧||

ಪಾಂಡು ಸುತನೆ ಪ್ರಚಂಡ ಗದೆಯನು | ದೋರ್ದಂಡದಿ ಧರಿಸುತಲಿ |
ಮಂಡಲದೊಳು ಭಂಡಕೌರವ ಚಂಡರಿಪುಗಳ ಖಂಡಿಸಿ || ಶಿರ
ಚಂಡನಾಡಿ ಸತಿಗೆ ಕರುಳಿನ | ದಂಡೆ ಮುಡಿಸಿದುದ್ದಂಡ ವಿಕ್ರಮ ||೨||

ಧಾರುಣಿಯೊಳು ದ್ವಿಜ ನಾರಿಗರ್ಭದಿ ಬಂದು | ಮೂರೊಂದಾಶ್ರಮ
ಧರಿಸಿ |ಧೀರ ನೀऽನೇಳಧಿಕ ತ್ರಿದಶಸಾರ ಗ್ರಂಥಗಳ ವಿರಚಿಸುತ ||
ಮಹ ಶೂರ ಶ್ರೀ **ಗೋಪಾಲವಿಠಲನ** |
ಚಾರು ಚರಣಕೆ ಅರ್ಪಿಸಿದ ಗುರು ||೩||

## 121) ಕೈಯ್ಯ ಮುಗಿವೆನೋ

ಕೈಯ್ಯ ಮುಗಿವೆನೋ ಶ್ರೀ ಹನುಮರಾಯ |ಕೈಯ್ಯ ಮುಗಿವೆನೋ ||ಪ||
ಕೈಯಮುಗಿವೆ ನಿನಗೆ ನಾನು ಕಣ್ಣು ತೆರೆದು ನೋಡು ಎನ್ನ |
ಕಪಟತನವನ್ನೆ ಬಿಟ್ಟು ಕರುಣ ವಚನ ಪಾಲಿಸಯ್ಯ ||೧||

ಅಂಜನ ದೇವಿ ಪುತ್ರನಾಗಿ ಬಂಜೆತನವ ಹಿಂಗಿಸೀದಿ |

ಸಂಜೀವ ನಿನ್ನಂಘ್ರಿಯೊಳು ಎನಗೆ ವಚನ ಪಾಲಿಸಯ್ಯ ||೨||

ಸೀತೆಗೆಹೋಗೆ ಉಂಗುರಕೊಟ್ಟು ಶೀಘ್ರದಿಂದ ಲಂಕೆಯಸುಟ್ಟು |
ವೇಗದಿಂದಹೋಗಿ ರಾವಣನ ಸಂಹರಿಸಿದವಗೆ ||೩||

ಸೇತುಬಂಧನವ ಮಾಡಿ ರಾಮನಂಘ್ರಿಯನ್ನೆ ಪಾಡಿ |
ಸರ್ವಜನರ ಕಣ್ಣಿಲಿ ನೋಡ್ದ ಸರ್ವ **ಶ್ರೀ ರಂಗವಿಠಲ** ||೪||

**122) ಹನುಮ ನಮ್ಮ ತಾಯಿ ತಂದೆ :-**

ಹನುಮ ನಮ್ಮ ತಾಯಿ ತಂದೆ | ಭೀಮ ನಮ್ಮ ಬಂದು ಬಳಗ |
ಆನಂದ ತೀರ್ಥರೇ ನಮ್ಮ ಗತಿಗೋತ್ರವಯ್ಯ ||ಪ||

ತಾಯಿ ತಂದೆ ಹಸುಳೆಗಾಗಿ ಸಹಾಯ ಮಾಡಿ ಸಾಕುವಂತೆ -
ಆಯಾಸವಿಲ್ಲದೆ ಸಂಜೀವನ ತಂದೆ -೨ ||
ಗಾಯಗೊಂಡ ಕಪಿಗಳನ್ನು ಸಾಯದಂತೆ ಪೊರೆದ -೨|
ರಘು ರಾಯನಂಘ್ರಿಗಳೆ ಸಾಕ್ಷಿ | **ತ್ರೇತಾಯುಗದಿ** ||೧||

ಬಂದು ಬಳಗದಂತೆ ಆಪದ್ಬಾಂಧವನಾಗಿ ಪಾರ್ಥನಿಗೆ -
ಬಂದ ಬಂದ ದುರಿತಗಳ ಪರಿಹರಿಸಿ -೨|
ಅಂಧಕ ಜಾತರ ಕೊಂದು ನಂದ ಕಂದರ್ಪಣೆಂದ -೨ ||
ಗೋಽವಿಂದನಂಘ್ರಿಗಳೇ ಸಾಕ್ಷಿ | **ದ್ವಾಪರಯುಗದಿ** ||೨||

ಗತಿ ಗೋತ್ರರಂತೆ ಸಾಧು ತತಿಗಳಿಗೆ ಮತಿಯ ತೋರಿ -
ಮತಿಗೆಟ್ಟ ಇಪ್ಪತ್ತು ಒಂದು ಮತವ ಖಂಡಿಸಿ -೨|

ಗತಿಗೆಟ್ಟ ಸದ್ವೈಷ್ಣವರಿಗೆ ಸದ್ಗತಿಯ ತೋರಿದ -೨॥
ಪರಮಾತ್ಮ ಗತಿ **ಪುರಂದರ ವಿಠಲನೆ** ಸಾಕ್ಷಿ । **ಕಲಿಯುಗದಲ್ಲಿ** ॥೩॥

**123) ಜಯ ಜಯವೆಂದು :-**

ಜಯ ಜಯವೆಂದು । ಶರಣಎನ್ನಿ ಹನುಮಯ್ಯಗ ॥ಪ॥
ಜಯ ಭೀಮಸೇನ ಆನಂದ ತೀರ್ಥರಯಗ ॥ಅ.ಪ॥

ಆದಿಲಿ ಅಂಜನಿ ಉಧರದಿ ಬಂದಾ -೨ ।
ರಘುವರ ರಾಮನ ಸೇವೆಯಲಿ ನಿಂದಾ ।
ಶ್ರೀ ದೇವಿ ಸುದ್ದಿಯಾ ಶರದಿ ಧಾಟಿ ತಂದಾ ।
ಭೇದಿಸಿ ರಾವಣನ ದಳವೆಲ್ಲಾ ಕೊಂದಾ ॥೧॥

ಎರಡನೆ ರೂಪದಿ ಕುಂತಿ ಉದರದಿ ಬಂದಾ -೨ ।
ಪಿಡಿಯಾದವರಾಯನ ಭಕುತಿಗೆ ನಿಂದಾ
ತರಿತರಿ ದೊಡ್ಡತಾ ಕುರುಕುಲ ತ್ವಯವೃಂದ ।
ಅರಸ ಯುದಿಷ್ಟರನ ವಾರ್ತೆ ತಂದಾ ॥೨॥

ಮೂರನೆ ರೂಪದಿ ಮದ್ಯಗೇಹದಿ ಬಂದಾ -೨ ।
ನೆಲೆ ಭಾದರಾಯಣನ ಆಜ್ಞೆನೆಯಲಿ ನಿಂದಾ
ವರದ್ವರ ಹೇಳಿದಾ ತತ್ವಾರ್ಥ ಚಂದಾ ।
**ಗುರುವರ ಮಹಿಪತಿ** ನಂದನ ಮನಕಾನಂದ ॥೩॥

**124) ಘಟಿಕಾಚಲದಿ ನಿಂತಾ :-**

ಘಟಿಕಾಚಲದಿ ನಿಂತಾ ಶ್ರೀ ಹನುಮಂತ ||ಪ||

ಘಟಿಕಾಚಲದಿ ನಿಂತ ಪಟು ಹನುಮಂತನ -೨ |

ಪಠನೆಯ ಮಾಡಲು ಉತ್ಕಟದಿ ಪೊರೆವನೆಂದು ||ಅ.ಪ||

ಚತುರ ಯುಗದಿ ತಾನು ಮುಖ್ಯಪ್ರಾಣನು ಚತುರ್ಮುಖನಯ್ಯನ -೨

ಚತುರ ಮೂರುತಿಗಳನು ಚತುರ ತನದಿ ಭಜಿಸಿ -೨

ಚತುರ್ಮುಖನಾಗಿ ಜಗಕೆ ಚತುರ್ವಿಧ ಫಲ ಕೊಡುತ ||೧||

ಸರಸಿಜ ಭವಗೋಸ್ಕರ | ಕಲ್ಮಷ ದೂರ | ವರ ಚಕ್ರತೀರ್ಥಸರ -೨

ಮೆರೆವಾಚಲದಿ ನಿತ್ಯ ನರಹರಿಗೆದುರಾಗಿ -೨

ಸ್ಥಿರ ಯೊಗಾಸನದಿ ಕರೆದು ವರಗಳ ಕೊಡುತ ||೨||

ಶಂಖಚಕ್ರವ ಧರಿಸಿ | ಭಕ್ತರ ಮನದ | ಬಿಂಕವ ಪರಿಹರಿಸಿ -೨

ಪಂಕಜನಾಭ ಶ್ರೀ **ಪುರಂದರವಿಠಲನ** -೨

ಬಿಂಕದ ಸೇವಕ ಸಂಕಟ ಕಳೆಯುತ ||೩||

**125) ನಡೆನಡೆ ನಮ್ಮ ಮನೆಗೆ :-**

ನಡೆನಡೆ ನಮ್ಮ ಮನೆಗೆ | ಯಲಗುರದ ಹನುಮ ||ಪ||

ನಡೆನಡೆ ನಮ್ಮ ಮನೆಗೆ ಅಡಿಗಳಿಗೆ ಎರಗುವೆನಾನು -೨ |

ನಡೆಯದ ಬಗೆಏನು -೨ | ಎಡವಿದ ದಾಸನಾನು ||ಅ.ಪ ||

ರಾಮಧೂತನೆಂದು ರಾಕ್ಷಸರ ಕುಲವಕೊಂದು -೨ |

ರಾಮ ಮುದ್ರಿಕೆ ತಂದು -೨| ರಮಣಿಗೆ ದಯಾಸಿಂದು ||೧||

ಭೀಮ ಸೇನನಾಗಿ | ಕೌರವ ಕುಲವ ಸವರಿ -೨ |
ತೊಡೆಯ ಸೀಳಿದನೆಂಬೋ -೨ | ರಮಣಿಗೆ ದಯಾಸಿಂದು ||೨||

ವೇದವ್ಯಾಸರ ಪೂಜೆ ಆದರಲಿ ಮಾಡಿ -೨ |
ವೇದಪೂರಾಣ ಶಾಸ್ತ್ರ -೨| **ವಿಜಯ ವಿಠಲ** ದಾಸ ||೩||

### 126) ಬಿಡುವೆನೇನಯ್ಯ ಹನುಮ :-

ಬಿಡುವೆನೇನಯ್ಯ ಹನುಮ | ಬಿಡುವೆನೇನಯ್ಯ ಹನುಮ ||ಪ||
ಬಿಡುವೆನೇನೋ ಹನುಮ ನಿನ್ನ ಅಡಿಗಳಿಗೆ ಶಿರವ ಬಾಗಿ |
ದೃಡಭಕ್ತಿ ಸುಜ್ಞಾನವನ್ನು ತಡಮಾಡದೆ ನೀ ಕೊಡುವ ತನಕ ||ಅ.ಪ||

ಹಸ್ತವ ಮೇಲಕ್ಕೆತ್ತಿದರೇನು | ಹಾರಕಾಲ ಹಾಕಿದರೇನು -೨ |
ಭೃತ್ಯನೋ ನಿನ್ನವನು ನಾನು | ಹಸ್ತಿವರದನ ತೋರುವ ತನಕ ||೧||

ಡೊಂಕು ಮಾರಿ ಬಾಲವ ತಿದ್ದಿ | ಹೂಂಕರಿಸಿದರೆ ಅಂಜುವನಲ್ಲ -೨ |
ಕಿಂಕರನೋ ನಿನ್ನವನು ನಾನು |ಪಂಕಜನಾಭನ ತೋರುವ ತನಕ||೨||

ಹಲ್ಲು ಮುಡಿಯ ಕಚ್ಚಿದರೇನು | ವಾರಿ ಧುಮುಕಿದರಂಜುವನಲ್ಲ -೨ |
ಪುಲ್ಲಭನಾಭ ಶ್ರೀ **ಪುರಂದರವಿಠಲನ** |
ಇಲ್ಲಿಗೆ ತಂದು | ತೋರುವ ತನಕ ||೩||

### 127) ಕೂಸಿನ ಕಂಡೀರಾ :-

ಕೂಸಿನ ಕಂಡೀರಾ | ಗುರು ಮುಖ್ಯಪ್ರಾಣನ ಕಂಡೀರಾ ||ಪ||

ಬಾಲನ ಕಂಡೀರಾ । ಬಲವಂತನ ಕಂಡೀರಾ ॥ಅ.ಪ ॥

ಅಂಜನೆಯುದರದಿ ಪುಟ್ಟಿತು ಕೂಸು ।
ರಾಮರ ಚರಣಕೆ ಎರಗಿತು ಕೂಸು -೨ ।
ಸೀತಗೆ ಉಂಗುರ ಕೊಟ್ಟಿತು ಕೂಸು -೨ ।
ಲಂಕಾಪುರವನೆ ಸುಟ್ಟಿತು ಕೂಸು ॥೧॥

ಭಂಡಿ ಅನ್ನವನುಂಡಿತ ಕೂಸು ।ಬಕನ ಪ್ರಾಣವ ಕೊಂದಿತು ಕೂಸು೨ ।
ವಿಷದ ಲಡ್ಡುಗೆ ಮೆದ್ದಿತು ಕೂಸು ।
ಮಡದಿಗೆ ಪುಷ್ಪವ ಕೊಟ್ಟಿತು ಕೂಸು ॥೨॥

ಮಾಯಾವಾದಿಗಳ ಗೆದ್ದಿತು ಕೂಸು ।
ದ್ವೈತಮತವನುದ್ಧರಿಸಿತು ಕೂಸು -೨ ।
ಮಧ್ವರಾಯರೆಂಬ ಪೆಸರಿನ ಕೂಸು ।
**ಪುರಂದರ ವಿಠಲನ** ಪ್ರೇಮದಿ ಕೂಸು ॥೩॥

**128) ಹನುಮ ಭೀಮ ಮಧ್ವಮುನಿಯ :-**

ಹನುಮ ಭೀಮ ಮಧ್ವಮುನಿಯ ನೆನೆದು ಬದುಕಿರೋ ॥ಪ॥
ಅನುಮಾನಂಗಳಿಲ್ಲದೆಲಿ ಮನೋಭೀಷ್ಟಂಗಳ ಕೊಡುವ ॥ಅ.ಪ॥

ಪ್ರಾಣಿಗಳ ಪ್ರಾಣಾಧಾರ ಪ್ರಾಣಿಗಳಲ್ಲಿ ಉತ್ತಮನು ।
ಪ್ರಾಣೋಪಾನ ವ್ಯಾನೋದಾನ ಸಮಾನಗಳಲಿ ಉತ್ಕೃಷ್ಠ ॥
ಕಾಣಿರೇನೋ ಕಾರ್ಯ ಕರ್ಮ ಚಕ್ಷುರಿಂದ್ರಿಯಂಗಳಿಗೆ ।
ತ್ರಾಣ ಕೊಟ್ಟ ಸಲಹುವ ಜಾಣ ಗುರು ಮುಖ್ಯಪ್ರಾಣ ॥೧॥

ಕಾಮಧೇನು ಚಿಂತಾಮಣಿ ಕಲ್ಪವೃಕ್ಷನಾದ ಸ್ವಾಮಿ ।
ಪ್ರೇಮದಿಂದ ಭಜಿಸುವರ ಪುಣ್ಯವೆಂತೊ ಭಾಗ್ಯವೆಂತೊ ॥
ಸಾಮಾನ್ಯವಲ್ಲ ಮೋಕ್ಷದಾದಿ ಸಂಪ್ರದಾತ ।
ಆ ಮಹಾಽಪರೋಕ್ಷಜ್ಞಾನ ತಾರಕ್ಕೆ ತಾರಕ್ಕೆ ಕೊಡುವ ॥೨॥

ಅವತಾರತ್ರಯಂಗಳಿಂದ ಶ್ರೀಹರಿಯ ಸೇವಿಪನು ।
ತವಕದಿಂದ ಪೂಜಿಪ ಮಹಾ ಮಹಿಮೆಯುಳ್ಳವನು ॥
ಕವಿತೆ ವಾಕ್ಯವಲ್ಲವಿದು ಸುವಿವೇಕದಿ ಕೇಳುವುದು ।
ಭವ ಬಂಧನ ಕಳೆದು ಕಾವ **ಪುರಂದರ ವಿಠಲ**ನ ದಾಸ ॥೩॥

**129) ವೀರ ಹನುಮ ಭಹು :-**

ವೀರ ಹನುಮ ಭಹು ಪರಾಕ್ರಮ ॥ಪ॥
ಸುಜ್ಞಾನವಿತ್ತು ಪಾಲಿಸೆನ್ನ ಜೇವರೋತ್ತಮ ॥ಅಪ॥

ರಾಮಧೂತನೆನಿಸಿಕೊಂಡೆ ನೀ । ರಾಕ್ಷಸರ ವನವನೇಲ್ಲ ಕಿತ್ತು ಬಂದೆ ನೀ -೨॥ ಜಾನಕಿಗೆ ಮುದ್ರೇಯಿತ್ತು । ಜಗತಿಗೆಲ್ಲಾ ಹರುಷವಿತ್ತು -೨। ಚೂಡಾಮಣೀ ರಾಮಗಿತ್ತು । ಲೊಕಕೆ ಮುದ್ದೆನಿಸಿ ಮೆರೆವ ॥೧॥

ಗೋಪಿಸುತನ ಪಾದ ಪೂಜಿಸಿ । ಗಧೆಯ ಧರಿಸಿ ಬಕಾಸುರನ ಸಂಹರಿಸಿದೆ -೨॥ ದ್ರೌಪದಿಯ ಮೊರೆಯ ಕೇಳಿ । ಮತ್ತೆ ಕಿಚಕನ್ನ ಕೊಂದು-೨ । ಭೀಮನೆಂಬ ನಾಮ ಧರಿಸಿ । ಸಂಗ್ರಾಮಧೀರನಾಗಿ ಜಗದಿ ॥೨॥

ಮಧ್ಯಗೆಹದಲ್ಲಿ ಜನಸಿ ನೀ | ಬಾಲ್ಯದಲ್ಲಿ ಮಸ್ಕರಿಯ ರೂಪಗೊಂಡೆ

ನೀ -೨|| ಸತ್ಯವತಿಯ ಸೂತನ ಭಜಿಸಿ | ಸಮ್ಮುಖದಿ ಭಾಷ್ಯಮಾಡಿ೨|

ಸಜ್ಜನರ ಪೊರೆವ ಮುದ್ದು ಪುರಂದರ ವಿಠಲ ದಾಸ ||೩||

**130) ಗೆದ್ದೆಯೋ ಹನುಮಂತ :-**

**ರಾವಣನು ರಥವೇರಿ ರಣಕೆ ಬಂದೀರಲಾಗಿ -೨|**

**ನೀವು ಪಾದ ಚಾರಿಯಾಗಿ ಭೂಮಿಯಲ್ಲಿರಲು ||**

**ನಮ್ಮ ಹನುಮಂತನು ನಿಮ್ಮನು ಕಂಡು ಚಾಲ್ವರಿದು |**

**ಬೊಬ್ಬಿರಿದು ಕುಣಿಕುಣಿದಾಡಿ || ಸುಖವ ಸೂರೆಯಮಾಡಿ ಎತ್ತಿರಽಽಲು |**

**ನಮ್ಮ ಹೀರಿಯ | ನಿಮ್ಮ ವೇಳೆಗೆ ಒದಗಿರಲಾಗಿ-೨||**

**ನಮ್ಮ ನೀಽಽ ಮರೆಯಲಾಗದೋ | ಪುರಂದರವಿಠಲ ಽಽಽಽ||**

ಗೆದ್ದೆಯೋ ಹನುಮಂತ | ಅಸುರರ ಒದ್ದೆಯೋ ಬಲವಂತ ಽಽ ||ಪ||

ಬದ್ಧಾಂಜಲಿಯಿಂದ | ರಘುಪತಿ ಪಾದವ -2

ಹೃದ್ಯದಿ ಭಜನೆಯ | ಹಾಡುವ ಬುದ್ಧಿವಂತ - ||ಅಪ||

ಅಂಜನಿ ಸುತನೀತ | ಲಂಕಾಽಪುರದಿ ಅಕ್ಷಯನ ಕೊಂದಾತ -2

ಸಂಜಾಕ್ಷ ಸೀತೆಗೆ | ತಂದು ಮುದ್ರಿಕೆಯಿತ್ತು -2

ಮಂಜುಳ ವಾರ್ತೆಯ | ತಂದ ರಾಮನ ದೂತ ||1||

ಈರೇಳು ಜಗದೊಳಗೆ | ಇನ್ನು ಮತ್ತೆ ಆರು ಸರಿಯೋ ನಿನಗೆ -2

ಹನುಮಂತ ಹನುಮಂತ ಆರು ಸರಿಯೋ ನಿಮಗೆ**-2**

ಧೀರಮಹಾಬಲ | ಶೂರ ಪರಾಕ್ರಮ-2

ವೀರ ಸಮೀರ ಉದಾರ ಗಂಭೀರನ ||2||

ವಾಂಛಿತ ಫಲವೀವನಾತ | ಮುಖ್ಯಪ್ರಾಣ ಮಹಾನುಭಾವ-2
ಇಂತಿಂತು ಕಷ್ಟವ | ಪಡಲೀಸ ಭಕ್ತರಿಗೆ-2
ಪಾಂಚಜನ್ಯ | **ಪುರಂದರ ವಿಠಲ** ದಾಸ ||3||

**131) ಅಂಜಿಕಿನ್ಯಾತಕಯ್ಯ ಸಜ್ಜನರಿಗೆ :-**

ಅಂಜಿಕಿನ್ಯಾತಕಯ್ಯ ಸಜ್ಜನರಿಗೆ | ಭಯವು ಎನ್ಯಾತಕಯ್ಯ ||ಪ||
ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ ||ಅಪ||

ಕನಸಿಲಿ ಮನಸಿಲಿ ಕಳವಳವಾದರೆ |
ಹನುಮನ ನೆನೆದರೆ ಹಾರಿ ಹೋಗ್ವುದು ಪಾಪ ||೧||

ರೋಮ ರೋಮಕೆ ಕೋಟಿ ಲಿಂಗ ಉದರಿಸಿದ |
ಭೀಮನ ನೆನೆದರೆ ಬಿಟ್ಟು ಹೋಗ್ವುದು ಪಾಪ ||೨||

**ಪುರಂದರ ವಿಠಲ**ನ ಪಾದಪೂಜೆಯ ಮಾಳ್ಪ |
ಗುರುಮಧ್ವರಾಯರ ಸ್ಮರಣೆ ಮಾಡಿದ ಮೇಲೆ ||೩||

**132) ಹನುಮನ ಮತವೆ :-**

ಹನುಮನ ಮತವೆ ಹರಿಯ ಮತವೊ ||ಪ||
ಹರಿಯ ಮತವೆ ಹನುಮನ ಮತವೊ ||ಅಪ||

ಹನುಮನ ನಂಬಿದ ಸುಗ್ರೀವ ಗೆದ್ದ -೨|
ಹನುಮನ ನಂಬದ ವಾಲಿಯು ಬಿದ್ದ -೨ || ೧ ||

ಹನುಮನ ನಂಬಿದ ವಿಭೀಷಣ ಗೆದ್ದ -೨ ।
ಹನುಮನ ನಂಬದ ರಾವಣ ಬಿದ್ದ -೨ ॥೨॥

ಹನುಮ **ಪುರಂದರವಿಠ್ಠಲನ** ದಾಸ =೨ ।
ಪುರಂದರವಿಠ್ಠಲನು ಹನುಮನೋಲ್ಲಾಸ -೨ ॥೩॥

## ಶ್ರೀ ಲಕ್ಷ್ಮೀ ದೇವಿಯರು

### 133) ಬಾರೇ ನಮ್ಮನಿತನಕ :-

ಬಾರೇ ನಮ್ಮನಿತನಕ ಭಾಗ್ಯದಾ ದೇವಿ ॥ಪ॥
ಬಾರೆ ನಮ್ಮನಿತನಕ ಬಹಳ ಕರುಣದಿಂದ ।
ಜೋಡಿಸಿ ಕರಗಳ ಎರಗುವೆ ಚರಣಕ್ಕೆ ॥ಅ.ಪ॥

ಜರದ ಪೀತಾಂಬರ ನಿರಿಗೆಗಳಲೆಯುತ ।
ತರಳನ ಮ್ಯಾಲೆ ತಾಯಿ ಕರುಣಿಸಿ ಬೇಗನೆ ॥೧॥

ಹರಡಿ ಕಂಕಣದುಂಡು ಕರದಲ್ಲೆ ಹೊಳೆಯುತ ।
ಸರಗಿಸರವು ಚಂದ್ರಹಾರಗಳಲೆಯುತ ॥೨॥

ಮಂದಗಮನೆ ನಿನಗೊಂದಿಸಿ ಬೇಡುವೆ ।
**ಇಂದಿರೇಶನ** ಕೂಡಿ ಇಂದು ನಮ್ಮನಿತನಕ ॥೩॥

### 134) ಬಾರೇ ವೇಂಕಟರಮಣಿ :-

ಬಾರೇ ವೇಂಕಟರಮಣಿ ಶ್ರೀಶ್ರೀ ದೇವಿ । ಬಾರೆ ವೇಂಕಟರಮಣಿ ॥ಪ॥
ಬಾರೆ ವೇಂಕಟರಮಣಿ ಪಾರಾಯಣ ಕೇಳಿ ।

ಚಾರುವದನೆ ಉಪಹಾರಕಾಲಕ್ಕೆ ನಿತ್ಯ ||ಅ.ಪ||

ಏನು ಪುಣ್ಯವೇ ಎನ್ನದು ಪಾರಾಯಣ ನೀನೆ ಕೇಳುವೆ ಬಂದು -೨ |
ಹೀನ ಮಾನವನರಿಯೆ ನೀನು ಬರುವೇ ಎಂದು -೨ ||
ಜ್ಞಾನವಿಲ್ಲದೆ ಉಚ್ಚಸ್ಥಾತದೋಳಗೆ  ಕಾಣೆ ||೧||

ಸ್ವಪ್ನದೊಳಗೆ ಬರುವೆ ಶ್ರೀ ಶ್ರೀ ದೇವಿ ಕ್ಷಿಪ್ರತನದಿ ಪೊಗುವೆ -೨ |
ಸರ್ಪಶಯನ ನಮ್ಮಪ್ಪ ಗೋಕುಲ ಬಾಲ -೨
ನಪ್ಪಿಕೊಂಬುವ ಸುಖ ಒಪ್ಪಿಸು ಬೇಗನೆ ||೨||

ಎಲ್ಲದೇವತೆಗಳನು ಪಡೆದಿಹೆ ಪುಲ್ಲವಾರಿಜ ನಯನೆ -೨ |
ಗೊಲ್ಲಬಾಲನ ಪಾದ ಪಲ್ಲವಿಗಾಣದೆ -೨
ನಿಲ್ಲಲೊಲ್ಲದು ಮನಸೊಲ್ಲ ಲಾಲಿಸು ಬೇಗ ||೩||

ಮಂಗಳಾಂಗಿಯೆ ನಿನ್ನ ಕಾಣದೆ ಬಹು ಭಂಗ ಪಡುವೆನಮ್ಮ -೨ |
ಗಂಗಾಜನಕ ಸಿರಿರಂಗ ನಿನ್ನಯಕುರಿತು -೨ |
ಭೃಂಗ ತುಂಗಳೆ  ಭೃಗಯಾಂಗನದೊಳಗಾಣಿ ||೪||

**ಇಂದಿರೇಷನ** ರಾಣಿ ಎನ್ನಯ ಮನ ಮಂದಿರದೋಳುಬಾರೆ -೨ |
ನಂದಗೋಕುಲ ಬಾಲ ಅಂದು ಕರದೊಳೋಪ್ಪಿ -೨
ತಂದು ತೋರಿಸೆ ಅರವಿಂದನಯನ ಲಕ್ಷ್ಮೀ ||೫||

**135) ಸುಂದರಿ ರಂಗನ ತಂದು ತೋರ :-**

ಸುಂದರಿ ರಂಗನ ತಂದು ತೋರ | ಒಂದಾರ ಘಳಿಗ್ಯಾಗ ||ಪ||

ಮಽತ್ಸ್ಯನಾಗಿ ಮೊದಲಿನಲ್ಲಿ । ಕೂರ್ಮನಾಗಿ ಬಂದುಽಽಽ।
ಕೋರೆಲಿ ಕಾಯ್ದ ದೈತ್ಯರ ಕೊಂದು । ಬಹು ಕ್ರೋಽಧದಿಂದಽಽಽ ॥
ದುರುಳ ಹಿರಣ್ಯಕನ ಕರಳು ಬಗೆದು ತೋಡಿ ।
ಕೊರಳೊಳಗೆ ಧರಿಸಿದಾನು ಸರಗಳನ್ನೇ ಮಾಡಿ ॥
ಕೊರಳು ಕೊಯ್ದು ಎಲ್ಲಮ್ಮನ ಪುತ್ರನಾಗಿ ಕಾದಿ ।
ಸರಳು ಬಾಣವನ್ನೇ ಹೂಡಿ ಲಂಕಾ ಮಥನ ಮಾಡಿ ॥
ಎರಳೆ ಗಂಗೆಳೆ-ಪತಿವೃತೆಯರ ಕೆಡಿಸಿದನು ಕೂಡಿ ।
ಮರಳು ತನದಿಂದ ಸೆಗೆದ ಹಯವನೇರಿ ಓಡಿಽಽಽ ॥೧॥

ನೀರೊಳು ಮೀನನಾಗಿ ಒಲಿವ । ಧರೆಭಾರವನ ಹೋರುವಽಽ।
ವರಹಽನಾಗಿ ನರಕಾಸುರನ ತರೆವ । ಕೋರೆಲಿ ಮಣ್ಣು ಬಗೆವಾಽಽ॥
ಒಡಮೂಡಿ ಕಂಬದಿಂದ ಘುಡಿಘುಡಿಸುತ ಬರುವ ।
ದೃಡವುಳ್ಳ ಬಲಿಚಕ್ರವರ್ತಿ ಪಾಲಿಸಿದ ವರವಾ॥
ಕೊಡಲಿ ಪಿಡಿದು ಹಡೆದ ತಾಯಿ ಕಡಿತಾನಿರುವಾ ।
ಮಡದಿ ಒಯ್ದ ರಾವಣನ ಹೊಡೆದು ದಶ ಶಿರವಾ ॥
ಧುಡಿಬಿಟ್ಟು ತಿರುಗುವಂಥ ತ್ರಿಪುರಂತ ಪುರವಾ ।
ಏರಿಸಿದ ಅಶ್ವಮೇಧ ಅರ್ಥಿಯಿಂದ ಮೆರೆವಾಽಽಽ ॥೧॥

ಬ್ರಹ್ಮಗೆ ಒಲಿದು ವೇದವ ತರುವ । ಬ್ರಹ್ಮಾಂಡವನ್ಹೋರವಽಽಽ।
ಗಮ್ಮೀಲಿ ಕಾಯ್ದುವನಾಗಿರುವ । ಸುಮ್ಮನೆ ಹೋಗಿ ಬರುವಾಽಽಽ॥
ಸಿಟ್ಟಿನಿಂದ ನಾರಸಿಂಹ ರೂಪನಾಗಿ ಬಂದ।

ಸೃಷ್ಟಿಯೊಳು ಪರಶುರಾಮ ರೇಣುಕೆಯ ಕಂದ ||
ಕಷ್ಟಚರಿಸಿದಾನು ರಾಮ ವನವಾಸದಿಂದ |
ಕೃಷ್ಣಾವತಾರ ಬೌದ್ಧ ಕಲ್ಕಿ ರೂಪ ಒಂದೊಂದಾ ||
ಇಷ್ಟುಪರಿ ವರ್ಣಿಸ್ತಾರ ಹತ್ತಾವತಾರ ಚೆಂದ |
ಸೃಷ್ಟಿಯೊಳು **ಕಾಗಿನೆಲೆಆದಿಕೇಶವ**ನಿಂದಾಽಽ||೩||

### 136) ಕಾಯೆ ಶ್ರೀ ಕಮಲಾಲಯೆ

ಕಾಯೆ ಶ್ರೀ ಕಮಲಾಲಯೆ | ಕಲ್ಹೂರ ನಿಲಯೇ ||ಪ||
ಕಾಯೆ ಕಮಲನಿವಾಸ ರಸಿಕಳೆ | ಮಾಯೆಯಿಂದಲಿ ಜಗವನಾಳುವ |
ತಾಯೆ ನಿನ್ನ ಕೃಪಕಟಾಕ್ಷದ | ಛಾಯೆಯನು ಎನ್ನಲ್ಲಿ ತೋರೆ ||ಅಪ||

ನೊಂದಿರುವೆ ಸಂಸಾರದಿ | ಸತಿಸುತರ-ಸಂದಣಿಯಿಂದ ಬೆಂದೆನೊ ಮನದಿಽಽ | ಮಂದರ ಧರಽನರ್ಧಾಂಗಿ | ಬಂದೆನೊ ನಿನ್ನಲ್ಲಿ | ಇಂದು ಅತಿದೈನ್ಯದಲಿಽಽಽ || ಕಂದನೆಂದು ತಿಳಿದು ಎನ್ನನು | ಮುಂದೆ ಬಾಬಾ ಎಂದು ಕರೆಯುತ | ಬೆಂದು ಹೃದಯಕೆ ಅಮೃತರಸವನು | ಸಂಧಿಸ್ಯೆ ಕಂದರ್ಪ ಮಾತೆ ||೧||

ಶೃತಿ ತತಿಗಳು ನಿನ್ನನು | ಬಗೆ ಬಗೆಯಿಂದಲಿ ಸುತ್ತಿಸುತಲಿರುತಿಽಽಹವು | ಮತಿಹೀನನಾದ ನಾನು | ಸ್ತುತಿಸಲರಿಯೇ ಪೋತ ವಿಷ್ಟಂಽಽಭರಿಯೇ- || ಭವಾಬ್ಧಿತರಿಯೆ | ವಿತತ ಮಹಿಮನ ವೃಕ್ಷ ಸ್ಥಳದಲಿ ಸತತ ವಾಸಿಪ ಭಾಗ್ಯವಂತಳೆ | ಚತುರ ವದನನ ಮಾತೆ ದೇವತ ತತಿನುತಳೆ | ಮೃಗಶಾವ ನೇತ್ರಳೆ ||೨||

ಶ್ರೀ ಭೂದುರ್ಗಾऽऽ ರೂಪಿಣಿ | ಅಂಭೃಣಿ ಭಾಸ್ಕರ ಶೋऽಭೆ ಕಮಲऽಧಾರಿಣಿऽऽ | ಭಾಭಾ ಸೀತಾಲಂಕಾರೆ | ಸೌಭಾಗ್ಯ ನಿಧಿಯೇ | ದೇವಿ ದುರ್ಜನ ಧಾರಿಣಿ || ಕೋಕಿಲವಾಣಿ | ನಾಭಿಜನ್ಮಕೆ ಭೋದ ವಿತ್ತ | ಪ್ರಭಾವ **ಶ್ರೀ ಹಯವದನ ವ್ಯಾಸನ**| ಶೋಭಿಸುವ ಮೂರ್ತಿಯನು ಮನದಿ | ವಿಭಾಸಿಸ್ಯೆ ಶಾಣಾಶ್ಮ ಬಿಂಬಿತೆ ||೩||

**137) ವೇಣಿ ಮಾಧವನ ತೋರಿಸೇ**

ವೇಣಿ ಮಾಧವನ ತೋರಿಸೇ ||ಪ|| ಕಾಣುತ ಭಕುತರ ಕರುಣದಿ ಸಲಹುವ | ಜಾಣೆ ತ್ರಿವೇಣಿ ನೀ ಕಾಣದೆ ನಿಲ್ಲಲಾರೆ ||ಅಪ||

ಬಂದೆನೆ ಬಹಳ ದೂರದಿ | ಭವಸಾಗರ ತರಣಿ | ನಿಂದೆನೇ ನಿನ್ನ ತೀರದಿ-೨ || ಒಂದುಘಳಿಗೆ ನೀ ಹರಿಯ ಬಿಟ್ಟಿರಲಾರೆ | ಮಂದಗಮನೆ ಎನ್ನ ಮುಂದಕ್ಕೆ ಕರೆಯೇ ||೧||

ಶರಣಾಗತರ | ಪೊರೆವುದು ಇದು ನಿನ್ನ ಬಿರುದು | ಕರುಣದಿಂದೆನ್ನ ಪೊರೆವುದು-೨ || ಸ್ಮರಣೆ ಮಾತ್ರದಿ ಭವ ತಾಪವ ಹರಿಸುವ | ಸ್ಮರನ ಪಿತನ ಮುರಹರನ ಕರುಣದಿ ||೨||

ಸುಜನರಿಗೆಲ್ಲಾ ದಾತಳೇ ಸುಶೀಲೇ ಕೇಳೇ | ಕುಜನರ ಸಂಗ ದೂರಳೇ-೨|| ನಿಜ ಪದವಿಯನಿತ್ತು ಸಲಹುವ ನಮ್ಮ-೨ || **ವಿಜಯ ವಿಠ್ಠಲನ** ನಿಜ ಪದ ತೋರಿಸೇ ||೩||

## 138) ಇಂಥವಗ್ಯಾಂಗೆ :-

ಇಂಥವಗ್ಯಾಂಗೆ ಮನಸೋತೆ । ಬಲು ಪಂತವನಾಡಿದ ಜಗನ್ಮಾತೆ।ಪ॥

ಆವಾಗ ನಾರುವ ಮೈಯ ।ಮಾರಿ ತೋರಿ ಆಡುವ ಕಾಲ ಕೈಯ -೨ ।
ಕೋರಿಯಿಂದೆತ್ತುತ್ತ ಕೊಸರಿಕೊಂಡಸುರನ -೨ ।
ಪೋರನಿಗಾಗಿ ದೊಡ್ಡ ಧೀರನ ಸೀಳಿದ ॥೧॥

ಬಡ ಬ್ರಾಹ್ಮಣನೆಂದು ಬೇಡಿದ । ತನ್ನ ಹಡೆದ ತಾಯಿಯ ಶಿರ ಕಡಿದ೨
। ಮಡದಿ ತಮ್ಮರು ಕೂಡಿ ಅಡವಿಯ ಸೇರಿದ -೨ ॥
ಕಡು ಗೋಪಿಗೊಲ್ಲರ ಭಾಧೆಯನಳಿಸಿದ ॥೨॥

ಬತ್ತಲೆ ನಿಂತಿದ್ದನಾಗ । ತೇಜಿಹತ್ತಿ ಮೆರೆವ ನೀವ ಹೀಂಗ -೨ ।
ಸಂತತ ಭಕುತರ ಸಲಹುವ **ಹೆಳವನ ಕಟ್ಟೆ** -೨ ॥
ಇಂಥ ರಂಗಯ್ಯನಿಗೇನೆಂದು ಮನ ಕೊಟ್ಟೆ ॥೩॥

## 139) ಜಯ ಕೊಲ್ಹಾಪುರ ನಿಲಯೇ :-

ಜಯ ಕೊಲ್ಹಾಪುರ ನಿಲಯೇ ಭಜದಿಷ್ಟೇತರ ನಿಲಯೇ ।
ತವ ಪಾದೌ ಹೃದಿ ಕಲಯೇ ರತ್ನ ರಚಿತ ವಲಯೇ ॥ಪ॥

ಜಯಜಯ ಸಾಗರ ಜಾತೆ ಕುರು ಕರುಣಾಂಮಯಿ ಭೀತೇ ।
ಜಗದಂಬಾ ಭಿದಯಾತೇ ಜೀವತಿ ತವಪೋತೇ ॥೧॥

ಜಯ ಜಯ ಸಾಗರ ಸದನಾ ಜಯ ಕಾಂತ್ಯಾಜಿತ ಮದನಾ ।
ಜಯ ದುಷ್ಟಾಂತಕ ಕದನಾ ಕುಂದ ಮುಕುಲರದನಾ ॥೨॥

ಸುರ ರಮಣಿನುತ ಚರಣೇ  ಸುಮನಃ ಸಂಕಟ ಹರಣೇ ।
ಸುಸ್ವರ ರಂಜಿತ ವೀಣೇ ಸುಂದರ ನಿಜ ಕಿರಣೇ ॥೩॥

ಭಜದಿಂದೀವರ ಸೋಮ ಭವ ಮುಖ್ಯಾಮರ ಕಾಮಾ ।
ಭಯಮೂಲಾಳಿವಿರಾಮಾ ಭಂಜಿತ ಮುನಿ ಭೀಮಾ ॥೪॥

ಕುಂಕುಮ ರಂಜಿತ ಫಾಲೇ ಕುಂಜರ ಬಾಂಧವ ಲೋಲೇ ।
ಕಲಧೌತಾಮಲ ಚೇಲೇ ಕೃಂತ ಕುಜನ ಜಾಲೇ ॥೫॥

ಧೃತ ಕರುಣಾ ರಸಪೂರೇ ಧನ ಧಾನ್ಯೋತ್ಸವ ಧೀರೇ ।
ಧ್ವನಿಲವ ನಂದಿತ ಕೀರೇ ಧೀರೇ ದನುಜ ದಾರೇ ॥೬॥

ಸುರ ಹೃತ್ಪಂಜರ ಕೀರಾ ಸುಮಗೇಹಾರ್ಪಿತ ಹಾರಾ ।
ಸುಂದರ ಕುಂಜ ವಿಹಾರಾ ಸುರವರ ಪರಿವಾರಾ ॥೭॥

ವರಕಬರೀ ಧೃತಕುಸುಮೇ ವರಕನಕಾಧಿಕ ಸುಷಮೇ ।
ವನ ನಿಲಯಾ ದಯ ಭೀಮೇ ವದನ ವಿಜಿತ ಸೋಮೇ ॥೮॥

ಮದಕಲಭಾ ಲಸಗಮನೇ ಮಧು ಮಥನಾ ಲಸನಯನೇ ।
ಮೃದು ಲೋಲಾಲಕ ರಚನೆ ಮಧುರ ಸರಸ ಗಾನೇ ॥೯॥

ವ್ಯಾಘ್ರಪುರೀ ವರನಿಲಯೇ ವ್ಯಾಸ ಪದಾರ್ಪಿತ ಹೃದಯೇ ।
ಕುರು ಕರುಣಾಂ ಮಹಿ ಸದಯೇ ವಿವಿಧ ನಿಗಮ ಗೇಹೇ ॥೧೦॥

**140) ರಮಾ ಸಮುದ್ರನ**

ರಮಾ ಸಮುದ್ರನ ಕುಮಾರಿ ನಿನ್ನ ಸರಿಸಮಾನರಾರಮ್ಮ॥ಪ॥

ಉಮೇಶ ಮೊದಲಾದ ಅಮರನಿಕರವು ।

ಭ್ರಮಿಸಿ ನಿನ್ನ ಪಾದಕಮಲ ತುತಿಪರೊ ॥ಅಪ॥

ಕರುಣ ವಾರಧಿ ಎಂದು ಶರಣ ಜನರು ನಿನ್ನ ಸ್ಮರಣೆಯ ಮಾಡುವರೆ।

ಹರಿಣಾಕ್ಷಿ ಕೇಳಲೆ ಹರುಷದಿಂದಲಿ ಹರಿ -೨॥

ಚರಣವ ತೋರಿ ಅಘ ಹರಣವ ಮಾಡಮ್ಮ ॥೧॥

ಅಪಾರ ಮಹಿಮನ ವ್ಯಾಪಾರಂಗಳ ತಿಳಿದು ಕಾಪಾಡುವಿ ಜಗವ ।

ಕೋಪ ರಹಿತಳಾಗಿ ಶ್ರೀಪತಿಯೊಳು ನಮ್ಮ-೨॥

ತಾಪತ್ರಯವ ತಿಳಿದು ಪೋಷಿಸಬೇಕಮ್ಮ ॥೨॥

ವಾಸವಂದಿತ **ಶ್ರೀಶೇಷ ವಿಠ್ಠಲ**ನೊಳು ವಾಸವ ಮಾಡುವಳೇ ।

ಘಾಸಿಗೊಳಿಸದಲೆ ಈ ಸಮಯದಲಿ -೨॥

ವಾಸುದೇವಗೆ ಪೇಳಿ ಪೋಷಿಸಬೇಕಮ್ಮ ॥೩॥

## 141) ನಿಲ್ಲೆ ನಿಲ್ಲೆ ಕೊಲ್ಹಾಪುರ:-

ನಿಲ್ಲೆ ನಿಲ್ಲೆ ಕೊಲ್ಹಾಪುರ ದೇವಿಯೆ । ಇಲ್ಲೆ ಬಾರೆ **ಗೆಜ್ಜೆ-ಘಿಲ್ಲೆನುತ**-೪॥ಪ॥

ಕರುಣಾಸಾಗರ ಹರಿತರುಣಿಯೆ ನೀ । ಕೋಟಿ ತರಣ ಕಿರಣ

ರತ್ನಾಭರಣವಿಟ್ಟು ।ಮಣಿಕೌಸ್ತುಭ ವಕ್ಷಸ್ಥಳದೊಳು ಹೊಳೆಯುತು -೨ ॥

ಸುಪರಣವಾಹನ ರಾಣಿ ಶರಣ ವಂದಿತಳೆ ॥1॥

ಪಂಕಜಾಕ್ಷಿ ಪಂಕಜೋದ್ಭವ ಜನನಿ ಪಂಕಜಮುಖಿ ಪಾಲಿಸೆ ಎನ್ನ ।

ಪಂಕಜನಾಭನ ಅಂಕದೊಳೊಪ್ಪುವ -೨ ॥

ಪಂಕಜೆ ನಿನ್ನ ಪಾದ ಪಂಕಜಕ್ಕೆರಗುವೆ -
ಇಲ್ಲೆ ಬಾರೆ ಗೆಜ್ಜೆ ಘಿಲ್ಲೆನುತ ॥೨॥

ಮುಗುಳುನಗೆಯ ಮುತ್ತು ಜಡಿತ ಕರ್ಣಗಳ।
ವಾಲೆಯು ಕದಪಿನೊಳ್ ಹೊಳೆಯುತ ॥
ಬಗೆ ಬಗೆ ಸರ ಬಂಗಾರವನಿಟ್ಟು -೨ ।
ಮೂರ್ಜಗ ಮೋಹಿಸೋ ಜಗದಾಧಿಪತಿಯೆ ರಾಣಿ -
ಇಲ್ಲೆ ಬಾರೆ ಗೆಜ್ಜೆ ಘಿಲ್ಲೆನುತ ॥೩॥

ಸಾಗರದೊಳ್ ಹುಟ್ಟಿ ಆಗ ಶ್ರೀನಾಥನ ಬೇಗ ನೋಡಿ
ಪರಮೋತ್ಸಹದಿ ।
ನಾಗಶಯನ ನಾಗಾರಿ ವಾಹನನ -೨ ॥
ಅರ್ಧಾಂಗಿ ಎನಿಸಿದ ಅನಂತಮಹಿಮಳೆ -
ಇಲ್ಲೆ ಬಾರೆ ಗೆಜ್ಜೆ ಘಿಲ್ಲೆನುತ ॥೪॥

ಶೇಷಯನ ಶ್ರೀನಿವಾಸನ ಎದೆಯಲ್ಲಿ ವಸವಾಗಿಅತಿ ಪ್ರೇಮದಲಿ ।
ಈಶ ನಾರದ ಬ್ರಹ್ಮಾದಿಗಳೊಡೆಯ -೨ ।
ಭೀಮೇಶಕೃಷ್ಣನ ನಿಜದಾಸವರ ನೀಡೆ -
ಇಲ್ಲೆ ಬಾರೆ ಗೆಜ್ಜೆ ಘಿಲ್ಲೆನುತ ॥೫॥

**142) ಬಾರೆ ಭಾಗ್ಯದ ನಿಧಿಯೆ :-**

ಬಾರೆ ಭಾಗ್ಯದ ನಿಧಿಯೆ । ಕರವೀರ ನಿವಾಸಿನಿ ಸಿರಿಯೆ ।
ಬಾರೆ ಬಾರೆ ಕರವೀರ ನಿವಾಸಿನಿ ।

ಬಾರಿ ಬಾರಿಗೂ ಶುಭ ತೋರೆ ನಮ್ಮನಿಗೆ ||ಪ||

ನಿಗಮವೇದ್ಯಳೆ ನೀನು ನಿನ್ನ ಪೊಗಳಲಾಪೆನು ನಾನು |
ಮಗನಪರಾಧವ ತೆಗೆದೆಣಿಸದೆ ನೀ -೨||
ಲಗುಬಗೆಯಿಂದಲಿ ಪನ್ನಂಗ ವೇಣಿ ||೧||

ಲೋಕ ಮಾತೆಯು ನೀನು ನಿನ್ನ ತೂಕನಲ್ಲವೇ ನಾನು |
ಆಕಳು ಕರುವಿನ ಸ್ವೀಕರಿಸುವ ಪರಿ -೨||
ನೀ ಕರುಣದಿ ಕಾಲ್ಹಾಕೆ ನಮ್ಮನಿಗೆ ||೨||

ಕಡೆಗೂ ನಮ್ಮನಿವಾಸ ಎನ್ನೊಡೆಯ **ಅನಂತಾದ್ರೀಶ** |
ಒಡೆಯನ್ನಿದ್ದಲ್ಲಿಗೆ ಮಡದಿ ಬಾಹುದು -೨ ||
ರೂಢಿಗುಚಿತವಿದು ನಡೆ ನಮ್ಮನಿಗೆ ||೩||

**143) ಕಂಡೇನೊ ಹರಿ :-**

ಕಂಡೆನೊ ಹರಿ ಸತಿಯ | ಸುರ ಚಿರ ದುಂಡು ಕಂಕಣ ಕೈಯ್ಯಾ ||ಪ||
ಮಂಡೆಯೊಳ್ ಮಲ್ಲಿಗೆಯಾ | ಹೆರಳಲಿ ದಂಡೆ ಮುಡಿದ ಪರಿಯ ||ಅಪ||

ಕಾಲ ಕಡಗ ರುಳಿಯು | ಕಲಕಲ ಹೇಮ ಪೈಜಣ ಧ್ವನಿಯು |
ಮ್ಯಾಲೆ ಅಂಚಿನ ಸಿರಿಯು | ಪುತ್ತಳಿ ಮಾಲೆ ತೂಗವ ಕಟಿಯು||೧||

ಸುಂದರ ಶುಭಗಾತ್ರೆ | ಸುಖಮಯ ಇಂದು ಮುಖಿಯನೇತ್ರೇ|
ಮುಂದೆ ಫಲದ ಪಾತ್ರೆ | ತಂದಿಟ್ಟಳು ಸರಸಿಜಗಳ ನೇತ್ರೇ ||೨||

ಪೈಠಣಿ ಉಟ್ಟಿಹಳು | ಗಳದಿ ಕಟ್ಟಾಣಿಯ ಕಟ್ಟಿಹಳು |

ಆಟಕೆ ಹಾರಗಳು । ನೋಽಳ್ಪರ ನೋಟಕೆ ಹಬ್ಬಗಳು ॥೩॥

ಸರಸಿಜ ಸಮಮುಖಿಯು । ನಾಶದಿ ಸರಳ ಮುತ್ತಿನ ಗೊನೆಯು ।
ಹರಳ ವಾಲಿಯ ಪ್ರಭೆಯು । ಕರ್ಣದಿ ಸ್ವರ್ಣಲೋಕದ ಪ್ರಭೇಯು ॥೪॥

ನಂದ ಬಾಲನ ಮಡದಿ । ಸ್ವಪ್ನದಿ ಬಂದು ತೋರಿದೆ ಭರದಿ ।
ಆನಂದವಯ್ತೆ ಮನದಿ । ನಾ ಕಂಡೆನು ಇಂದಿರೇಶನ ದಯದಿ॥೫॥

**144) ಭಾಗ್ಯದ ಲಕ್ಷ್ಮೀ :-**

ಭಾಗ್ಯದ ಲಕ್ಷ್ಮೀ ಬಾರಮ್ಮ । ನಮ್ಮಮ್ಮ ನೀ ಸೌಭಾಗ್ಯದ
ಲಕ್ಷ್ಮೀಬಾರಮ್ಮ ॥ಪ॥

ಹೆಜ್ಜೆಯ ಮೇಲೊಂದ್ಹೆಜ್ಜೆಯ ನಿಕ್ಕುತ । ಗೆಜ್ಜೆಯ ಕಾಲಿನ ನಾದವ
ತೋರುತ ॥ ಸಜ್ಜನ ಸಾಧು ಪೂಜೆಯ ವೇಳಗೆ ।
ಮಜ್ಜಿಗೆಯೊಳಗಿನ ಬೆಣ್ಣೆಯಂತೆ ॥೧॥

ಕನಕ ವೃಷ್ಟಿಯ ಕರೆಯುತ ಬಾರೆ ಮನ । ಕಾಮನೆಯ ಸಿದ್ಧಿಯ
ತೋರೆ ॥ ದಿನಕರ ಕೋಟಿ ತೇಜದಿ ಹೊಳೆಯುವ ।
ಜನಕರಾಯನ ಕುಮಾರಿ ಬೇಗ ॥೨॥

ಅತ್ತಿತ್ತಗಲದೆ ಭಕ್ತರ ಮನೆಯೊಳು । ನಿತ್ಯ ಮಹೋತ್ಸವ ನಿತ್ಯ
ಸುಮಂಗಲ ॥ ಸತ್ಯವ ತೋರುತ ಸಾಧು ಸಜ್ಜನರ ।
ಚಿತ್ತದಿ ಹೊಳೆಯುವ ಪುತ್ಥಳಿ ಗೊಂಬೆ ॥೩॥

ಸಂಖ್ಯೆಯಿಲ್ಲದ ಭಾಗ್ಯವ ಕೊಟ್ಟು । ಕಂಕಣ ಕೈಯ ತಿರುವುತ ಬಾರೆ ॥

ಕುಂಕುಮಾಂಕಿತೆ ಪಂಕಜ ಲೋಚನೆ ।

ವೆಂಕಟರಮಣನ ಬಿಂಕದ ರಾಣಿ ॥೪॥

ಸಕ್ಕರೆ ತುಪ್ಪದ ಕಾಲುವೆ ಹರಿಸಿ । ಶುಕ್ರವಾರದ ಪೂಜೆಯ ವೇಳೆಗೆ ॥

ಅಕ್ಕರೆಯುಳ್ಳ ಅಳಗಿರಿರಂಗನ ।ಚೊಕ್ಕ **ಪುರಂದರ ವಿಠಲನ** ರಾಣಿ ॥೫॥

**145) ಯಲ್ಲಮ್ಮಯನಬೇಡಿರೊ :-**

ಯಲ್ಲಮ್ಮಯನಬೇಡಿರೊ ಸಿರಿದೇವಿ ಎಲ್ಲಾರ ಅಮ್ಮನಲ್ಲವೆ ॥ಪ॥

ಬಲ್ಲಿದರಾಗಿಪ್ಪ ಬ್ರಹ್ಮಾದಿಗಳಿಗೆಲ್ಲ-೨ ।

ಶ್ರೀ ಲಕುಮಿಯೇ ಅಮ್ಮನಲ್ಲದೆ ॥ಅ.ಪ॥

ಆಲದೆಲೆಯಮೇಲೆ ಪರಮ ಪುರುಷನು ಅಂದು ।

ಕಾಲವರಿತು ಬಂದು ಪವಡಿಸಲು -೨ ॥

ವಾಲಗವನು ಮಾಡಿ ಕೊಂಡಾಡಿ ಜೀವರ -೨।

ಮೂಲ ಕರ್ಮಂಗಳ ತಿರುವಂತೆ ಮಾಡಿದ -೨ ॥೧॥

ಆಮೋಘವೀರ್ಯವ ಗರ್ಭದಿ ಧರಿಸಿ ।

ಬ್ರಹ್ಮಾಂಡವೆ ಪೆತ್ತ ಲೋಕ ಮಾತಾ -೨॥

ಸುಮನಸರಿಗೆ ಕಡೆಗಣ್ಣ ನೋಟದಿ -೨ ।

ಆ ಮಾಹಾ ಪದವಿಯ ಕೊಡುವ ಭಾಗ್ಯವಂತೆ॥೨॥

ಎರಡೊಂದು ಗುಣದಿಂದ ಪ್ರವಿಷ್ಟಳಾಗಿ ।

ಜೀವರ ಯೋಗ್ಯತೆಯಂತೆ ಪಾಲಿಪಳು -೨॥

ಪರಮ ಪುರಷ ನಮ್ಮ **ವಿಜಯ ವಿಠ್ಠಲ**ನ -೨ ।
ಕರುಣದಿಂದಲಿ ಅನಂತ ಕಲ್ಪಕೆ ನಿತ್ಯ ॥೩॥

**146) ವೆಂಕಟಾದ್ರಿ ನಿಲಯನ :-**

ವೆಂಕಟಾದ್ರಿ ನಿಲಯನ । ಪಂಕಜ ನಾಭನ ತೋರವ್ವಾ ಲಕುಮಿ ॥ಪ॥
ಶೇಷಾದ್ರಿ ನಿಲಯನ । ದೋಷವಿಧುರನ ತೋರವ್ವಾ ಲಕುಮೆ ।
ಅಂಜನಾದ್ರೀ ನಿಲಯನ । ಕಂಜಜ ನಾಭನ ತೋರವ್ವಾ ಲಕುಮಿ ॥
ಪುಂಡಲಿಕ ವರದನ । ಪಂಡರಿರಾಯನ ತೋರವ್ವಾ ಲಕುಮಿ ॥ಅಪ॥

ವಸುದೇವ ದೇವಕಿ ಕಂದಾ । ನಮ್ಮ ಶೆಷಿಮುಖ ರೋಡೆಯಾನಂದ೨॥
ಪಶುಗಳ ಕಾಯ್ದ ಗೋವಿಂದ೨। ನಮ್ಮ ವಿಸಜನಾಭ ಮುಕುಂದನ ॥೧॥

ಸಾಮಜರಾಜನ ವರದಾ । ಬಲು ಪ್ರೇಮದಿ ಭಕುತರ ಪೊರೆದಾ -೨ ॥
ಆ ಮಹಾ ಧೀತಿಜರ ಕರಿದಾ೨।ನಿಸ್ಸಿಮ ಮಹೀಮನಾಗಿ ಮೆರೆದವನ।2।

ಉರಗಾಗೀರಿ ಎಲ್ಲಿಪ್ಪಾ । ನಮ್ಮ ಮರುತನ ಪೆಗಲೆರಿ ಬಪ್ಪಾ -೨ ॥
ಶರಣರಿಗೆ ವರವಿದು ತಪ್ಪಾ೨। ಶಿರಿ **ಮೋಹನ ವಿಠಲ** ತಿಮ್ಮಪ್ಪನ ॥೩॥

**147) ಹೊಸಕಣ್ಣು ಎನಗೆ :-**

ಹೊಸಕಣ್ಣು ಎನಗೆ ಹಚ್ಚಲಿಬೇಕು ಜಗದಂಬಾ ।
ವಸುದೇವ ಸುತನ ಕಾಂಬುದಕೆ ॥ಪ॥

ಘಸಣೆಯಾಗಿದೆ ಭವ ವಿಷಯ ವಾರಿಧಿಯೊಳು ।
ಶಶಿಮುಖಿ ಕರುಣದಿ ಕಾಯೇ ॥ಅಪ॥

ಪರರ ಅನ್ನವನುಂಡು । ಪರರ ಧನವ ಕಂಡು । ಪರಿಪರಿ ಕ್ಲೇಶಗಳಿಂದ
ವರಲಕ್ಷ್ಮಿ ನಿನ್ನ ಚಾರು । ಚರಣವ ಮೊರೆಹೊಕ್ಕೆ ॥
ಕರುಣದಿ ಕಣ್ಣೆತ್ತಿ ನೋಡೇ ॥೧॥

ಮಂದಹಾಸಿನಿ ಭವ । ಸಿಂಧುವಿನೊಳಗಿಟ್ಟು । ಛಂದವೇ ಅಮ್ಮ
ನೋಡುವದು । ಕಂದನೆಂತೆಂದೆನ್ನ ಕುಂದುಗಳೆಣಿಸದೆ ॥
ಮಂದರೋದ್ಧರನ ತೋರಮ್ಮ ॥೨॥

ಅಂದಚಂದಗಳೊಲ್ಲೆ । ಬಂಧು ಬಳಗವನೊಲ್ಲೆ । ಬಂಧನಕ್ಕೆಲ್ಲ
ಕಾರಣವೋ । **ಇಂದಿರೇಶನ** ಪಾದ ದ್ವಂದ್ವವ ತೋರಿ ॥
ಹೃನ್ಮಂದಿರದೊಳು ಬಂದು ನಿಲ್ಲೆ ॥೩॥

## ದರ್ಶನ ಕುತೂಹಲ ಯಾಚನೆ

### 148) ಎಂದಿಗಾವುದೋ ನಿನ್ನ ದರುಶನ :-

ಎಂದಿಗಾವುದೋ ನಿನ್ನ ದರುಶನ । ಇಂದಿರೇಶ ಮುಕುಂದ ಕೇಶವ ।ಪ।
ಗಾನ ಲೋಲ ಶ್ರೀ । ವತ್ಸಲಾಂಛನ ।ದಾನವಾಂತಕ ದೀನ ರಕ್ಷಕ ॥೧॥

ಆರಿಗೆ ಮೊರೆ ಇಡಲೋ ದೇವನೆ ।
ಸಾರಿ ಬಂದು ನೀ ಕಾಯೋ ಬೇಗನೆ ॥೨॥

ಗಜವ ಪೊರೆದೆಯೋ ಗರುಡಗಮನನೆ ।
ತ್ರಿಜಗಭರಿತ ಶ್ರೀ**ವಿಜಯ ವಿಠಲ** ॥೩॥

### 149) ಪಿಳ್ಳಂಗೋವಿಯ ಚಲ್ವ ಕೃಷ್ಣನ

ಪಿಳ್ಳಂಗೋವಿಯ ಚಲ್ವ ಕೃಷ್ಣನ - ಎಲ್ಲಿ ನೋಡಿದಿರಿ ||ಪ||

ಎಲ್ಲಿ ನೋಡಿದರಲ್ಲಿ ತಾನಿಲ್ಲ -ದಿಲ್ಲವೆಂದು ಬಲ್ಲ ಜಾಣರು-೨ ||ಅಪ||

ನಂದಗೋಪನ ಮಂದಿರಂಗಳ - ಸಂದುಗೊಂದಿನಲಿ |
ಚೆಂದ ಚೆಂದದ ಗೋಪಬಾಲರ - ವೃಂದವೃಂದದಲಿ ||
ಸುಂದರಾಂಗದ ಸುಂದರೀಯರ - ಹಿಂದುಮುಂದಿನಲಿ |
ಅಂದದಾಕಳ ಕಂದಕರುಗಳ - ಮಂದೆ ಮಂದೆಯಲಿ ||೧||

ಶ್ರೀಗುರೂಕ್ತಽಽಸದಾ ಸುಮಂಗಳ - ಯೋಗಯೋಗದಲಿ |
ಆಗಮಾಽಽರ್ಥದೊಳಗೆ ಮಾಡುವ - ಯಾಗಯಾಗದಲಿ||
ಶ್ರೀಗೆ ಭಾಗ್ಯನಾಽಽಗಿ ವರ್ತಿಪ - ಭೋಗ ಭೋಗದಲಿ |
ಭಾಗವತರು ಸದಾಬಾಗಿ ಪಾಡುವ - ರಾಗ ರಾಗದಲಿ ||೨||

ಈ ಚರಾಚರ ದೊಳಗೆ ಜನಗಳ - ಆಚೆ ಈಚೆಯಲಿ |
ಖೇಚರೇಂದ್ರನ ಸುತನ ರಥದ - ಅಚ್ಚಪೀಠದಲಿ ||
ನಾಚದೆ ಮಾಧವ ಕೇಶವ ಎಂಬ - ವಾಚಕಂಗಳಲಿ |
ವೀಚುಕೊಂಡದ **ಪುರಂದರ**ವಿಠಲನ - ಲೋಚನಾಗ್ರದಲಿ ||೩||

**150) ಎಂದು ನೋಡುವೆ ನಿನ್ನ :-**

ಎಂದು ನೋಡುವೆ ನಿನ್ನ ಶ್ರೀ ಪಾಂಡುರಂಗ
ಎಂದು ನೋಡುವೆ ನಿನ್ನ ||ಪ||

ಎಂದು ನೋಡುವೆ ನಿನ್ನ ಪಾದದ್ವಯ ಚಂದ್ರಭಾಗ ನಿವಾಸ ಕರುಣ |
ಸಿಂಧೂ ಭಕುತರ ಬಂಧು ಅಜಭವರಿಂದ ಪೂಜಿತ ಪಾದಪೂರ್ಣ|ಅ.ಪ|

ವಾಸವಾದ್ಯರ ನಾಥ । ವಸುಧೇಯೋಳ್ ಪುರಂದರ ದಾಸರಲಿ ಅತಿ ಪ್ರೀತಾ । ಪುಂಡಲೀಕ ವರದ ಶೇಷ ಶಾಯಿ ಪ್ರಖ್ಯಾತಾ । ದುರ್ಬಲರದಾತಾ ॥ ಕಾಸು ವಿಷಯಕೆ ಆಸೆ ಪಡೆದಲೆ ಪೋಷಿಸುವಿ ನಿಜ ಭಕುತರನುದಿನ । ಶ್ರೀಶ ನಿಮ್ಮ

ವಿಶೇಷ ದರುಷನ ದಾಸೆ ಪೂರೈಸೊ । ತಂದೆ ॥೧॥

ಗಜವರದ ಗಂಭೀರ । ರುಕ್ಮಿಣಿ ಮನೋಹರ ಸುಜನರಿಗೆ ಮಂದಾರಾ । ತರುವಂತೆ ಇರುತಿರೆ । ವಿಜಯಸಾರಥಿ ಧೀರ । ಕರುಣಾ ಅಪಾರಾ ॥ ತ್ರಿಜಗಧೀಶ್ವರ ತ್ರಿಗುಣವಿರಹಿತ । ಧ್ವಜ ವಜ್ರಾಂಕಿತ ಪಾದ ಪದ್ಮನೆ । ವಿಜಯರಾಯರ ಭಜನೆಗೊಲಿದು ।

ಹೃದಯದಲಿ ನಿಜ ರೂಪ । ತೋರಿದಿ ॥೨॥

ಸೃಷ್ಟಿಗೊಡೆಯನೇ ನಿನ್ನ । ಎಷ್ಟೆಂದು ಭಜಿಸಲಿ ಕಷ್ಟವನೆ ಕಳೆ ಮುನ್ನ । ನಿನ್ನವರ ಪದದಲಿ ನಿಷ್ಠೆಯನು ಕೊಡುಚನ್ನಾ । ನಾಗಾರಿಗಮನಾ ॥ ವಿಠ್ಠಲಾ ನಿನ್ನ ಬಿಟ್ಟು ಸುಖವನು ಎಷ್ಟಕೊ ಕಾಣೆನೋ, ಕರುಣವ ಇಟ್ಟು ಪಾಲಿಸಬೇಕು । **ಶ್ರೀವರ ವಿಠ್ಠಲಾ** ಕರ ಕಟಿತ ಶೋಭಿತ ॥೩॥

**<u>ಭತವಂತನನ್ನು ಕರೆಯುವುದು</u>**

**151) ಬೇಗ ಬಾ ಬೇಗ ಬಾ:-**

ಬೇಗ ಬಾ ಬೇಗ ಬಾ ಬೇಲಾಪುರ ಚನ್ನ ॥ಅ.ಪ॥

ಬೇಗ ಬಾ ಬೇಗ ಬಾ ನಿಲಮೇಘಶ್ಯಾಮ ॥ಪ॥

ಇಂದಿರೆ ರಮಣ ಗೋವಿಂದ ಬೇಗ ಬಾ -೨ ।

ನಂದನ ಕಂದಾ ಮುಕುಂದಾ ಬೇಗ ಬಾ ||೧||

ಧೀರಾ ಉದಾರಾ ಗಂಭೀರಾ ಬೇಗ ಬಾ -೨ |
ಹಾರಾಲಂಕೃತ ರಘುವೀರಾ ಬೇಗ ಬಾ ||೨||

ಶುದ್ಧ ಅಘರುದ್ಧ ಅನಿರುದ್ಧ ಬೇಗ ಬಾ -೨ |
ಹದ್ದನೇರಿದ ಪ್ರಸಿದ್ಧ ಬೇಗ ಬಾ ||೩||

ರಂಗ ಉತ್ತುಂಗ ನರಸಿಂಗ ಬೇಗ ಬಾ -೨ |
ಗಂಗೆಯ ಪಡೆದಾ ಪಾಂಡುರಂಗಾ ಬೇಗ ಬಾ ||೪||

ಅಯ್ಯಾ ಸಹಯ್ಯಾ ವಿಜಯ್ಯಾ ಬೇಗ ಬಾ -೨ |
ಅಯ್ಯಾದ್ರಿವಾಸ **ಹಯವದನಾ** ಬೇಗ ಬಾ ||೫||

**152) ಬಾರೋ ನಮ್ಮ ಮನೆಗೆ :-**

ಬಾರೋ ನಮ್ಮ ಮನೆಗೆ ಗೋಪಾಲಕೃಷ್ಣ ||ಪ||
ಗೊಲ್ಲ ಬಾಲಕರನ್ನು ನಿಲ್ಲಿಸಿ ಪೆಗಲೇರಿ |
ಗುಲ್ಲು ಮಾಡದೆ ಮೊಸರೆಲ್ಲಾ ಕುಡಿದಂಥ ಸ್ವಾಮಿ ||ಅಪ||
ಕಸ್ತೂರಿ ತಿಲಕವ ಶಿಸ್ತಾಗಿ ಫಣಿಯೊಳಿಟ್ಟು |
ಮಸ್ತಕದಲ್ಲಿ ಪರವಸ್ತು ಧರಿಸಿದ ಕೃಷ್ಣಾ ||೧||

ನಾರೇರು ನಾವೆಲ್ಲಾ ನೀರಿಗೆ ಪೋಗುವಾಗ|
ದಾರಿಯೊಳಡ್ಡಗಟ್ಟಿ ಬಾರೆಂದು ಕರೆದು ಕೃಷ್ಣಾ ||೨||

ನಾರೇರು ಬಿಚ್ಚಿಟ್ಟ ಸೀರೆಗಳನ್ನೆ ಕದ್ದು ।
ಮೇರೆನಿಲ್ಲದೆ ಕರ ತೋರೆಂದ ಶ್ರೀ ಕೃಷ್ಣ ॥೩॥

ಮೂರ್ಜಗವನ್ನು ತನ್ನ ಬೊಜ್ಜಿಯೊಳಿಟ್ಟುಕೊಂಡು ।
ಗೆಜ್ಜೆಯ ಕಟ್ಟಿ ತಪ್ಪೆಜ್ಜೆಯನಿಕ್ಕುತ ಕೃಷ್ಣ ॥೪॥

ಅಂಗನೆಯರ ವೃತ ಭಂಗವ ಮಾಡಿದ ।
**ರಂಗವಿಠಲ** ಭವಭಂಗ ಬಿಡಿಸೋ ಸ್ವಾಮಿ ॥೫॥

**153) ವೇಣುನಾದ ಬಾರೋ :-**

ವೇಣುನಾದ ಬಾರೋ । ವೆಂಕಟರಮಣನೆ ಬಾರೋ ॥ಪ॥
ಬಾಣನ ಭಂಗಿಸಿಧಂಥ । ಭಾವಜನಯ್ಯನೆ ಬಾರೋ ॥ಅ.ಪ॥

ಪೂತನಿಯ ಮೊಲೆಯುಂಡ । ನವನೀತ ಚೋರನೆ ಬಾರೋ ।
ಭೀತರಾವಣನ ಸಂಹರಿಸಿದ । ಸೀತಾನಾಯಕ ಬಾರೋ ॥೧॥

ಬಿಲ್ಲು ಮುರಿದು ಮಲ್ಲರ ಗೆದ್ದ । ಫುಲ್ಲನಾಭನೆ ಬಾರೋ ।
ಗೊಲ್ಲತಿಯರೊಡನೆ ನಲಿವ । ಚೆಲುವ ಮೂರುತಿ ಬಾರೋ ॥೨॥

ಮಂದರಗಿರಿ ಎತ್ತಿದಂಥ । ಇಂದಿರೆ ರಮಣನೆ ಬಾರೋ ।
ಕುಂದದೆ ಗೋವುಗಳ ಕಾಯ್ದ । ಪುಂಡರೀಕಾಕ್ಷನೆ ಬಾರೋ ॥೩॥

ನಾರಿಯರ ಮನೆಗೆ ಪೋಗುವ । ವಾರಿಜನಾಭನೆ ಬಾರೋ ।
ಈರೇಳು । ಭುವನವ ಕಾಯುವ । ಮಾರನಯ್ಯನೆ ಬಾರೋ ॥೪॥

ಶೇಷಯನ ಮೂರತಿಯಾದ । ವಾಸುದೇವನೆ ಬಾರೋ ।

ದಾಸರೊಳು । ದಾಸನಾದ । **ಪುರಂದರ ವಿಠಲನೆ** ಬಾರೋ ॥೫॥

**154) ಬಾರಯ್ಯಾ ಮನೆಗೆ :-**

ಬಾರಯ್ಯಾ ಮನೆಗೆ ಭರತಾಗ್ರಜ ॥ಪಲ್ಲ॥

ನಂದ ನಂದನ । ನವನೀತ ಚೋರ ಕೃಷ್ಣ -೨

ಮಂದರೋಧಾರ ಆನಂದ ಇಂದೀರೆ ರಮಣ-೨ ॥೧॥

ಗೋಕುಲ ದೊಳುಹುಟ್ಟಿ । ಗೋಪಿಕೆ ರೋಡಗುಡಿ -೨

ಲೋಕವ ಈ ರೇಳು ಸಾಕುಮಾಡಿದೆ ರಂಗ / ಕೃಷ್ಣ -೨ ॥೨॥

ಹಳ್ಳಿಪೊಳ್ಳಿಗಳಲ್ಲಿ ಎಲ್ಲಾ ಹಾಲು ಮೊಸುರು ಬೆಣ್ಣೇ -೨

ಕೊಳ್ಳೇಯಾಡಿ ಗೋಪಿ ಕರವ ಪಿಡಿದೊ ರಂಗ / ಕೃಷ್ಣ -೨ ॥೩॥

ಅನಂತ ಪದ್ಮಭನಾಬ ಅಪ್ರಮೇಯ ಹೃಷಿಕೇಶ -೨

ದಾನವಾಂತಕ ರಂಗ ದಶರಥ ಕುವರ ರಾಮ -೨ ॥೪॥

ಪರಮ ಪವಿತ್ರ ರಾಮ ಭಾಗವತರ ಪ್ರೀಯ -೨

**ಶ್ರೀರಾಮ ಜೈರಾಮ ।ಮಾಧವಾ । ಹೇ ಮುಕುಂದ । ನಾರಾಯಣ ।**

**ಸತ್ಯ ನಾರಾಯಣ ವೀರ ನಾರಾಯಣ । ಬದರಿ ನಾರಾಯಣ**

ವರದ **ಪುರಂದರ ವಿಠ್ಠಲನೆ** ರಾಮ -೨ ॥೫॥

**155) ರಂಗ ಮನೆಗೆ ಬಾರೋ :-**

ರಂಗ ಮನೆಗೆ ಬಾರೋ । ರಂಗಯ್ಯಾ ರಂಗ ॥ಪ॥ ರಂಗ
ಕಲುಷವಿಭಂಗ ಗರುಡ ತುರಂಗ ನವ ಮೋಹನಾಂಗ ಶ್ರೀರಂಗ ॥ಅಪ॥

ಪಚ್ಚೆ ಬಾವುಲಿಗಳು ನಿನ್ನ ಕಿವಿಯೊಳಗಿಟ್ಟು ।
ಮೆಚ್ಚಿ ಮುದ್ದಾಡುವೆನೊ । ರಂಗಯ್ಯಾ ರಂಗ -೧ ॥

ಹೆಚ್ಚಿದ ವಾಲಿಯನು ಬಾಣದಿ ಚುಚ್ಚಿದ ।
ಸಪ್ತ ತಾಳಗಳನು ಕೊಚ್ಚಿದ । ಸಮುದ್ರವನು ಮುಚ್ಚಿದ॥
**ಎಚ್ಚರಿಕೆಯಿಂ ಪೊಕ್ಕು ಲಂಕೆಯ ಕಿಚ್ಚುಗಳ ಹಚ್ಚಿದ ಹನುಮನ ।**
**ಮೆಚ್ಚಿದಾಚ್ಯುತಾನಂತ ಖರದೂಷಣಪ್ರಿಯ ಮೋಹನಾಂಗ ॥೧॥**

ಮುತ್ತಿನ ಹಾರಗಳ ನಿನ್ನ ಕೊರಳಿಗ್ಹಾಕಿ ।
ಎತ್ತಿ ಮುದ್ದಾಡುವೆನೊ । ರಂಗಯ್ಯಾ ರಂಗ ॥

ಹತ್ತಿದ ರಥವನು ಮುಂದಕ್ಕೊತ್ತಿದ ಕೌರವರ ಸೇನೆಗೆ ।
ಮುತ್ತಿದ ಉಭಯರಿಗೆ ಕಲಹವ ಬಿತ್ತಿದ ।
**ಮತ್ತೆ ಮಾತಂಗಗಳನೆಲ್ಲವ ಉತ್ತರಿಸಿ ಮುಂದೊತ್ತಿ ನಡೆಯುತ ।**
**ಇತ್ತೆರದಿ ಮುಂದೊತ್ತಿ ರಥಿಕರ ಕತ್ತರಿಸಿ ಕಾಳಗವ ಮಾಡಿದ ॥೨॥**

ಉಂಗುರಗಳ ನಿನ್ನ ಬೆರಳಿಗೆ ಇಟ್ಟು ।
ಕಂಗಳಿಂದಲಿ ಕಾಂಬುವೆ । ರಂಗಯ್ಯಾ ರಂಗ ॥
ಹೆಂಗಳ ಉತ್ತುಂಗದ ಕುಚಂಗಳ ಆಲಂಗಿಸಿದ ಭುಜಂಗಳ

ಕಮಲ ಸಮ ಪದಂಗಳ ।

**ಹಿಂಗದೆ ಮಾತಂಗನ ಭವ ಭಂಗವನು ಓಡಿಸಿ ಪೊರೆದ ।**

**ಮಂಗಳಪ್ರದ ಸ್ವರ್ಗವಿತ್ತ ಉತ್ತುಂಗವಿಕ್ರಮ ರಂಗವಿಠಲ ॥೩॥**

**156) ಬಾ ಬಾ ಭಕುತರ :-**

ಬಾ ಬಾ ಭಕುತರ ಹೃದಯ ಮಂದಿರ । ಬಾ ಬಾ ಜಗದೋದ್ಧಾರ ।

ಬಾ ಬಾ ವೆಂಕಟಾಚಲ ವಿಹಾರ ।

ಬಾ ಬಾ ಅನೇಕಾವತಾರ ಧೀರ ಶೂರ ॥ಪ॥

ದಕ್ಷ ಕಮಲಾಕ್ಷ ರಾಕ್ಷಸಕುಲ ಶಿಕ್ಷ ಲಕ್ಷ್ಮಣಾಗ್ರಜ ಲಕ್ಷ್ಮೀವಕ್ಷ -೨ । ಪಕ್ಷಿ ವಾಹನ ಪೂರ್ಣ ಲಕ್ಷಣ ಸರ್ವೇಶ ಮೋಕ್ಷದಾಯಕ ಪಾಂಡವ ಪಕ್ಷ ॥ ಅಕ್ಷಯವಂತಾ ಸೂಕ್ಷ್ಮಾಂಬರಧರಾಧ್ಯಕ್ಷ ಪ್ರತ್ಯಕ್ಷತ ದೈವ । ಅಕ್ಷತ ನಾರೇರ ತಕ್ಷಣದಲಿ ತಂದ ಅಕ್ಷರ ಪುರುಷ ಗೋವಿಂದ ॥೧॥

ಬಂಗಾರ ರಥದೊಳು ಶ್ರಿಂಗಾರವಾದ ಶ್ರೀ ಮಂಗಳಾಂಗ ಕಾಳಿಂಗ-೨। ಭಂಗ ನರಸಿಂಗ ಅಂಗಜ ಜನಕ ಶಾರ್ಙ್ಗಂಗ ರಥಾಂಗ ಪಾಣಿ ॥ ಸಂಗ ನಿಃಸಂಗಮತಂಗವಿಹಂಗ ಪ್ಲವಂಗನಾಯತಿ ಪರಿಪಾಲ । ಸಂಗೀತ-ಲೋಲ ಗೋಪಾಂಗನೆಯರ ಅಂತರಂಗಸಂತಾಪ ವಿದೂರ ॥೨॥

ತಾಳ ಜಾಗಟೆ ಮದ್ದಳೆ ದುಂದುಭಿ ಭೇರಿ ತಾಳೆ ಹೆಗ್ಗಾಳೆ ತಮ್ಮಟೆ -೨। ನಿಃಸಾಳೆ ಪಟಹ ತಂಬೂರಿ ಪಣವ ಕಂಸಾಳೆ ಕಂಬು ಢಕ್ಕ ವಾದ್ಯ ॥ ಸೂಳೈಸುತಲಿರೆ ಭಾಗವತರ ಸಮ್ಮೇಳನ ಕುಣಿದೊಲಿದಾಡೆ । ಸಾಲು ಪಂಜಿನ ಗುಂಪು ಛತ್ರ ಚಾಮರ ಧ್ವಜ ಢಾಳುಗಳು ಒಪ್ಪಿಹರೋ ॥೩॥

ಹತ್ತಾವತಾರದ ಹರಿಯೇ ಘನ ಸಿರಿಯೇ ನಾನು ಮತ್ತೊಬ್ಬರನು ಹೀಗೆ ಕರೆಯೆ -೨। ಭೃತ್ಯರ ಸಂಗದೋಡ್ಯಾಡುವ ದೊರೆಯೇ ಎನ್ಹತ್ತಿಲಿ ಆಡುವ ಮರಿಯೇ ॥ ಚಿತ್ತದೊಲ್ಲಭ ನಮ್ಮ **ವಿಜಯ ವಿಠಲರೇ**ಯ ಎತ್ತ ನೋಡಲು ನಿನಗೆ ಸರಿಯೇ । ಅತ್ತಿತ್ತ ಪೋಗದೆ ಇತ್ತ ಬಾರಯ್ಯ ಎನ್ಹತ್ತಿ ನೀ ವೆಂಕಟ ದೊರೆಯೇ ॥೪॥

**157) ಸಾಗಿ ಬಾರಯ್ಯಾ ಭವರೋಗದ :**

ಸಾಗಿ ಬಾರಯ್ಯಾ ಭವರೋಗದ ವೈದ್ಯನೆ ।
ಬಾಗುವೆ ನಿನಗೆ ಚೆನ್ನಾಗಿ ತುತಿಪೆ ಇಂದು ॥ಪ॥

ಭಾಗೀರಥಿಪಿತ । ಭಾಗವತರ ಸಂಯೋಗ ।
ರಂಗ ಉರಗಗಿರಿ ವೆಂಕಟ ॥ಅಪ॥

ರಥದ ಮಧ್ಯದಲ್ಲಿಪ್ಪನೆ ರಥಾಂಡಜವಾಹನನೆ -೨ ।
ರಥಾಂಗಪಾಣಿಯೆ ದಶರಥ-ನೃಪ ಬಾಲಽಽ ॥
ಪಾರ್ಥಗೆ ಒಲಿದವನ ರಥವ ನಡೆಸಿ ।
ಅಧಿರಥಮಹಾರಥರ ವಿರಥರ ಮಾಡಿಸಿ ಗೆಲಿದೆ ॥
ಪ್ರಥಮದೈವವೆ ಮನ್ಮಥಪಿತದೈತ್ಯರ- ।
ಮಥನ ಭಕ್ತರ ಮನೋರಥನೆ ಬಾರಾ ॥
ಪಥವರ್ಣನೆ ತವ ಕಥಾಶ್ರವಣದಲಿಸು ।
ಪಥವನು ತೋರಿಸು ಪ್ರಥಮಾಂಗ-ದೊಡೆಯಾ ॥೧॥

ನಿಲ್ಲದೆ ಬರುವುದು ಪುಲ್ಲಲೋಚನ ಸಿರಿ ।

ವಲ್ಲಭ ಸರ್ವರಿಗು ಬಲ್ಲಿದನೆ । ಅಪ್ರತಿ-॥

ಮಲ್ಲ ಮುರವಿರೋಧಿ ಮೆಲ್ಲ ಮೆಲ್ಲನೆ ।

ಪಾದ ಫಲ್ಲವ ತೋರುತಾ ಎಲ್ಲ ಕಾಲದಿ। ನಮ್ಮ- ॥

ನೆಲ್ಲರ ಉದ್ದರಿಪ ಎಲ್ಲಿ ನಿನಗೆ ಸರಿ -

ಯಿಲ್ಲವೋ ನೋಡಲು ಸಲ್ಲುವುದೊ ಬಿರು- ।

ದಲ್ಲಿ ಗಲ್ಲಿಗೆ ಗುಣ ಬಲ್ಲವರರಿನ್ನು -

ನೆಲ್ಲ ಕೋಟಿ ಕೊನೆಯಲಿಪ್ಪ ವಿಶ್ವ ॥೧॥

ಬೊಮ್ಮ ಮೊದಲು ಮನುಜೋತ್ತಮರು ಕಡೆಯಾಗಿ ।

ನಿಮ್ಮ ದಾಸರು ಅವರ ಸಂಬಂಧಿಗಳ ಪಾದ-೧ ॥

ನಮ್ಮಿಕೊಂಡಿಪ್ಪಂತ್ತೆ ಧಮನು ನಾ । ಸರ್ವೋತುಮ್ಮಾನೇಽಽಕ ।

ಗುಣ ಮಹಿಮ ವಿಭೂಷಿತ ॥

ರೆಮ್ಮೆ ಧರಣಿ ದೇವಿ ಕಿಮ್ಮ ಇಶರ ಕೂಡಿ ।

ಸಮ್ಮುಖನಾಗುತ ಸುಮ್ಮನೆ ಬಾ ಬಾ ॥

ಹಿಮ್ಮೆಟ್ಟಿದೆ ಸಿರಿ**ವಿಜಯವಿಠಲ ।** ಅನುಪಮ್ಮ -

ಚರಿತ ಪರಬೊಮ್ಮ ತಿರುಮಲೇಶ ॥೩॥

**158) ಬಾರಯ್ಯ ಬಾ ಬಾ ಬಾಬಾ :-**

ಬಾರಯ್ಯ ಬಾ ಬಾ ಬಾಬಾ । ಭಕುತರ ಪ್ರೀಯಾ । ಶ್ರೀನಿವಾಸರಾಯ ।

ಮಾರಜನಕ ಮುಕುತರೊಡೆಯ ದೇವಯ್ಯ ಜೀಯಾ ॥ಪ॥

ವಾರಿಜಲಯಪತೆ । ವಾರಿಜನಾಭನೆ । ವಾರಿಜಭವಪಿತ ।
ವಾರಿಜನೇತ್ರನೆ । ವಾರಿಜಮಿತ್ರ । ಅಪಾರ-ಪ್ರಭಾವನೆ ವಾರಿಜ
ಝೊಂಡದ ಕಾರಣ ದೊರೆಯೆ ॥ಅ.ಪ॥

ಸ್ಯಂದನ ವೇರಿ ಬಾಪ್ಪರಂಗ । ದೇವೋತ್ತುಂಗ ನಂದ ನಂದನ-
ಅರಿಮದಭಂಗ । ಕಾರುಣ್ಯಪಾಂಗ ।
ಸಿಂಧುಶಯನ ಸುಂದರಾಂಗ - ಹೇನಾರಸಿಂಗ -೨ ॥
ಕಂದ ವಿರಂಚಿಯು । ನಂದಿವಾಹನ- ಅಮರೇಂದ್ರ ಸನಕ
ಸನಂದನಾದಿ ಮುನಿ ವೃಂದ ಬಂದು ನಿಂದು ಧಿಂ ಧಿಂ ಧಿಮಿಕೆಂದು
ನಿಂದಾಡಲು । ಆನಂದದಿ ಮನಕೆ ॥೧॥

ಜಗಜ್ಜನ್ಮಾದಿ ಕರ್ತಽಽಗೋವಿಂದ । ಉದರದಿಲೋಕ ಲಘುವಾಗಿ
ಧರಿಸಿದ ಮುಕುಂದ । ಭಕ್ತರ ಮನಕೆ । ಝುಗಝುಗಿಸುತ
ಪೊಳೆವಾನಂದ । ನಿಗಮಾವಳಿಯಿಂದ -೨ ॥
ಅಗಣಿತ ಮುನಿಗಣ । ನಗಖಗ ಮೃಗಶಶಿ ।
ಗಗನ ಮಣಾದ್ಯರು ಸೊಗಸಾಗಿ ಬಗೆ ಬಗೆ ।
ಪೊಗಳುತಲೀ ಬೇಗ ಚಿಗಿಚಿಗಿದಾಡಲು ।
ಮುಗುಳನಗೆಯ । ಮಹೋರಗ ಗಿರಿವಾಸಾ ॥೨॥

ತಡ ಮಾಡಬೇಡವೊ ಹೇನಲ್ಲ । ವಾಕುಲಾಲಿಸು ಎನ್ನೊಡೆಯ
**ಶ್ರೀಗೋಪಾಲವಿಠ್ಠಲ** । ದೇವಪರಾಕು ಅಡಿಗಳ ನಿಡು ಭಕ್ತ ವತ್ಸಲ್ಲ ।
ಶ್ರೀಲಕುಮಿನಲ್ಲ -೨ ॥

ಮಡುವಿನೊಳಗೆ ಗಜಮೊರೆಯಿಡಲಾಕ್ಷಣ ।
ಮಡದಿಗೆ ಹೇಳದೆ ದುಡದುಡನೇ ಬಂದು
ಹಿಡಿದು ನಕ್ರನ ಬಾಯ್ ಕಡಿದು ಬಿಡಿಸಿದನೆ ।
ಸಡಗರದಲಿ ರಮೆ ಪೊಡವಿಯೊಡನೆ ಕೂಡಿ ॥೩॥

**159) ಕರ್ತಾ ಕೃಷ್ಣಯ್ಯ**

ಕರ್ತಾ ಕೃಷ್ಣಯ್ಯ ನೀ ಬಾರಯ್ಯ ॥ಅ॥
ಎನ್ನಾರ್ತಽಽ ಧ್ವನಿಗೊಲಿದು ನೀ ಬಾರಯ್ಯ ॥ಅಪ॥

ಸುಗುಣದ ಖಣಿಯೇ ನೀ ಬಾರಯ್ಯ । ಎಮ್ಮಽಘವ ಓಡಿಸಲು ನೀ ಬಾರಯ್ಯ । ಧಗೆ ಏರಿತು ತಾಪ ನೀ ಬಾರಯ್ಯ ।
ಸದಾ ಮುಗುಳ್ನಗೆಯ ಮಳೆಗರೆಯೆ ನೀ ಬಾರಯ್ಯ ॥೧॥

ವೈರಿ ವರ್ಗದಿ ನೊಂದೆ ನೀ ಬಾರಯ್ಯ । ಮತ್ತಾರು ಗೆಳೆಯರಿಲ್ಲ ನೀ ಬಾರಯ್ಯ । ಸೇರಿದೆ ನಿನ್ನಯ ಕರುಣೆಗೆ ಬಾರಯ್ಯ ॥
ಒಳ್ಳೆ ದಾರಿಯ ತೋರಲು ನೀ ಬಾರಯ್ಯ ॥೨॥

ವೈರಾಗ್ಯ ಭಾಗ್ಯವ ಕೊಡು ಬಾರಯ್ಯ । ನಾನಾ ರೋಗದ ಭೇಷಜ ನೀ ಬಾರಯ್ಯ । ಜಾರುತದಾಯುಷ್ಯ ಬೇಗ ಬಾರಯ್ಯ ॥
ಉದಾರ ಪ್ರಸನ್ವೆಂಕಟ ನೀ ಬಾರಯ್ಯ ॥೩॥

**160) ಬಾರೋ ಮನೆಗೆ ಗೋವಿಂದಾ**

ಬಾರೋ ಮನೆಗೆ ಗೋವಿಂದಾ ।

ನಿನ್ನಂಘ್ರಿ ಕಮಲವ ತೋರೋ ಎನಗೆ ಮುಕುಂದಾ ||
ನಲಿದಾಡು ಮನದಲಿ ಮಾರಪಿತ ಆನಂದ | ಆನಂದ ಕಂದಾ ||ಪ||

ಚಾರುತರ ಶರೀರ ಕರುಣಾ ವಾರಿನಿಧಿ ಭವ ಘೋರ ನಾಶನ |
ವಾರಿಜಾಸನವಂದ್ಯ ನೀರಜ ಸಾರ ಸದ್ಗುಣ ಹೇ ರಮಾಪತೇ ||ಅಪ||

ನೋಡೋ ದಯದಿಂದೆನ್ನ | ಕರಪದುಮ ಶಿರದಲಿ | ನೀಡು ಭಕ್ತ ಪ್ರಸನ್ನ | ನಲಿದಾಡು ಮನದಲಿ | ಬೇಡಿಕೊಂಬೆನೊ ನಾ ನಿನ್ನ || **ಆನಂದ ಘನ್ನ** | ಮಾಡದಿರು ಅನುಮಾನವನು ಕೊಂಡಾಡುವೆನು ತವ ಮಹಿಮೆಗಳನ| ಜೋಡಿಸುವೆ ಕರಗಳನು ಚರಣಕೆ |
ಕೂಡಿಸೋ ತವ ದಾಸ ಜನರೊಳು ||೧||

ಹೇಸಿ ವಿಷಯಗಳಲ್ಲಿ | ತೊಳಲಾಡಿ ನಾ ಬಲು | ಕ್ಲೇಶಪಡುವುದು ಬಲ್ಲಿ | ಘನ ಯುವತಿಯರ ಸುಖ ಲೇಸು ಎಂಬುದು ಕೊಲ್ಲಿ || **ಆಸೆ ಬಿಡಿಸಿಲ್ಲಿ** | ಏಸು ಜನುಮದ ದೋಷದಿಂದಲಿ ಈಸುವೆನು ಇದರೊಳಗೆ ಇಂದಿಗೆ | ಮೋಸವಾಯಿತು ಆದುದಾಗಲಿ ಶ್ರೀಶ ನೀ ಕೈಪಿಡಿದು ರಕ್ಷಿಸು ||೨||

ನೀನೇ ಗತಿ ಎನಗಿಂದು | ಉದ್ಧರಿಸೋ ದೇವನೇ | ದೀನ ಜನರಿಗೆ ಬಂಧು | ನಾ ನಿನ್ನ ಸೇವಕ ಶ್ರೀನಿವಾಸ ಎಂದೆಂದೂ || **ಕಾರುಣ್ಯ-ಸಿಂಧು** | ಪ್ರಾಣಪತಿ ಹೃದಯಾಬ್ಜಮಂಟಪ
ಸ್ಥಾನದೊಳಗಭಿ-ವ್ಯಾಪ್ತ ಚಿನ್ಮಯ |
ಧ್ಯಾನ ಗೋಚರನಾಗು ಕಣ್ಣಿಲಿ | ಕಾಣುವೆನು **ಶ್ರೀರಂಗವಿಠ್ಠಲ** ||೩||

## ದೇವರು ಬಂದದ್ದು

### 161) ಗರುಡ ಗಮನ ಬಂದನೋ

ಗರುಡ ಗಮನ ಬಂದನೋ ನೋಡಿರೋ ಬೇಗ ।
ಗರುಡ ಗಮನ ಬಂದನೋ ॥ಪ॥
ಗರುಡ ಗಮನ ಬಂದ ಧರಣಿಯಿಂದೊಪ್ಪುತ ।
ಕರೆದು ಬಾರೆನ್ನುತ ವರಗಳ ಬೀರುತ ॥ಅಪ॥

ಎನ್ನ ರಕ್ಷಿಪ ದೊರೆ ಇಲ್ಲಿಗೆ ತಾ ಬಂದಾ -೨।
ಚೆನ್ನವ ಪೋಲುವ ವಿಹಂಗದ ರಥದಲ್ಲಿ ॥
ಘನ್ನ ಮಹಿಮ ಬಂದ ಅಭಿನ್ನ ಮೂರುತಿ ಬಂದ-೨।
ಸಣ್ಣ ಕೃಷ್ಣ ಬಂದಾ ಬೆಣ್ಣೆ ಕಳ್ಳ ಬಂದ ॥೧॥

ಪಕ್ಷಿ ವಾಹನ ಬಂದ ಲಕ್ಷ್ಮೀಪತಿಯು ಬಂದ-೨।
ಕುಕ್ಷಿಯೊಳಗೆ ಜಗವ ಇಟ್ಟವ ತಾ ಬಂದ॥
ಸೂಕ್ಷ್ಮ ಸ್ಥೂಲದೊಳು ಇಪ್ಪನು ತಾ ಬಂದ-೨।
ಸಾಕ್ಷೀಭೂತ ಅವ ಸರ್ವೇಶ್ವರಾ ಬಂದ-೨॥೨॥

ತಂದೆ **ಪುರಂದರ ವಿಠ್ಠಲ** ರಾಯಾ ಬಂದ-೨।
ಬಂದು ನಿಂದು ನಲಿದಾಡಿದನೊ॥
ಸಿಂಧು ಶಯನ ಬಂದ ಅಂದು ಸಾಂದೀಪನ-೨।
ನಂದನ ತಂದಿತ್ತ ಆನಂದ ಮೂರುತಿ ಬಂದ ॥೩॥

## 162) ಬಂದ ಕೃಷ್ಣ ಚಂದದಿಂದ

ಬಂದ ಕೃಷ್ಣ ಚಂದದಿಂದ ಬಂದ ನೋಡೆ ।
ಗೋಪ ವೃಂದದಿಂ-ದಾನಂದಿಸುತಾ ಬಂದನೋಡೆ ॥ಪ॥

ಗೋವಮೇವ ನೀವದೇವ ಬಂದನೋಡೆ ।
ದೇವ ತಾ ವಾದ್ಯಗಳಿಂದ ಬಂದನೋಡೆ ॥೧॥

ಪಾಪ ಪೋಪ ಗೋಪ ರೂಪ ಬಂದನೋಡೆ ।
ತಾಪ ಲೋಪಾ ಲಾಪಾ ಟೋಪ ಬಂದನೋಡೆ ॥೨॥

ಭೂಸುರ ಸುಖ ಸೂಸುತಾ ಬಂದನೋಡೆ ।
**ವಾಸುದೇವ ವಿಠಲ** ತಾ ಬಂದನೋಡೆ ॥೩॥

## 163) ಏನಿದು ಕೌತುಕ

ಏನಿದು ಕೌತುಕ ಪಂಡರಿಯನೆ ಬಿಟ್ಟು। ನೀನಿಲ್ಲಿಗೆ ಬಂದ್ಯಾ ವಿಠ್ಠಲಾ॥ಪ॥

ಮಿಥ್ಯವಾದಿಗಳು ನಿನ್ನನು । ಸುತ್ತುಮುತ್ತಿಕೊಂಡಿಹರೋ -೨ ॥
ಅತ್ತುಕರೆದು ಕೂಗುತ್ತಿರೆಬಲು -೨ ॥
ಬ್ಯಾಸತ್ತು ಬಂದೆಯಾ ವಿಠ್ಠಲ ವಿಠ್ಠಲ ॥೧॥

ಮಧ್ವ ದ್ವೇಶಿಗಳು ಮಾಡುವ । ಪದ್ಧತಿಯನೆ ಕಂಡು -೨ ।
ಹೃದ್ಯವಾಗದೆ ಕದ್ದ ಕಳ್ಳನಂತೆದ್ದು -೨॥
ಎದ್ದೊಡಿ ಬಂದೆಯಾ ವಿಠ್ಠಲ ವಿಠ್ಠಲ ॥೨॥

**ಶ್ರೀಧ ವಿಠ್ಠಲ** ನಿನ್ನ ಸುಗುಣವೇದ ಶಾಸ್ತ್ರದಲ್ಲಿ ।

ಶೋಧಿಸಿ ನೋಡಲು ಭೂದೇವರಿಗೊಲಿದು ||
ಆದರಿಸ ಬಂದೆಯಾ ವಿಠ್ಠಲಾ ವಿಠ್ಠಲಾ ||೩||

**164) ದೇವಬಂದಾ ನಮ್ಮ ಸ್ವಾಮಿ**

ದೇವಬಂದಾ ನಮ್ಮ ಸ್ವಾಮಿ ಬಂದಾನೊ ||
ದೇವರ ದೇವ ಶಿಖಾಮಣಿ ಬಂದಾನೊ ||ಪ||

ಉರಗಶಯನ ಬಂದ ಗರುಡಗಮನ ಬಂದ |
ನರಗೊಲಿದವ ಬಂದ ನಾರಾಯಣ ಬಂದನೊ ||೧||

ಮಂದರೋದ್ಧರ ಬಂದ ಮಾಮನೋಹರ ಬಂದ |
ಬೃಂದಾವನ ಪತಿ ಗೋವಿಂದ ಬಂದನೋ ||೨||

ನಕ್ರಹರನು ಬಂದ ಚಕ್ರಧರನು ಬಂದ |
ಅಕ್ರೂರಗೊಲಿದ ತ್ರಿವಿಕ್ರಮ ಬಂದನೊ ||೩||

ಪಕ್ಷಿವಾಹನ ಬಂದ ಲಕ್ಷ್ಮಣಾಗ್ರಜ ಬಂದ |
ಅಕ್ಷಯ ಫಲದ ಶ್ರೀಲಕ್ಷ್ಮೀ ರಮಣ ಬಂದನೋ ||೪||

ನಿಗಮ ಗೋಚರ ಬಂದ ನಿತ್ಯ ತೃಪ್ತನು ಬಂದ |
ನಗೆ ಮುಖ **ಪುರಂದರ ವಿಠ್ಠಲ** ಬಂದನೋ ||೫||

**165) ಬಂದಾನೊ ಗೋವಿಂದ**

ಬಂದಾನೊ ಗೋವಿಂದ ಚಂದದಿ ಆನಂದ |
ಸುಂದರಿಯ ಮಂದಿರಕ್ಕೆ ನಂದನ ಕಂದ ||ಪ||

ಸುಂದರಾಕಾರ ನಂದ ಕಂದ ಗಂಭೀರ ।

ಇಂದು ವದನೆಯರ ಮುಖಗಳಂದ ನೋಡಿದ -೨॥

ತಂದ ಕುಸುಮ ಮುದದಿಂದ ಮುಡಿಸಿದ -೨ ।

ಬಂದಾನೋ ಗೋವಿಂದಾನೋ ಅರವಿಂದನಯನ ॥೧॥

ಕಾನನದಲಿ ಬಲು ದೀನನಾಗಲ್ಲಿ ।

ವೇಣು ನಾದವೋ ತಾ ಕೂಡಿ ವೋದವೋ -೨।

ಜಾಣ ನಿವನು ಸುಮ ಬಾಣ ಪಿತನು -೨॥

ಮಾನಿನಿ ಮನಗಳೊಲಿಯುವ ಗಾನ ಮಾಡುತಾ ॥೨॥

ಓಡಿ ಬಂದಾರೋ ಬಲು ಬೇಡಿಕೊಡಾರೋ ।

ಗಾರುಡಿಕಾರನು ಅವರ ನೋಡಿ ಮೆರೆದನೋ -೨।

ಮಾಡಿದ ಜಾಲಾ **ವಾಸುದೇವ ವಿಠ್ಠಲ** -೨ ॥

ಮಾಡಿದ ಮನ ಮಾಡಿದ ತಾ ಕೂಡಿದನಾಗ ॥೩॥

**166) ಆನೆ ಬಂದಿತಮ್ಮ ಮರಿ**

ಆನೆ ಬಂದಿತಮ್ಮ ಮರಿ ಆನೆ ಬಂದಿತಮ್ಮ ॥ಪ॥

ತೊಲಗಿರೆ ತೊಲಗಿರೆ ಪರಬ್ರಹ್ಮ ।

ಬಲು ಸರಪಳಿ ಕಡಕೊಂಡು ಬಂತಮ್ಮ ॥ಅಪ॥

ಕಪಟ ನಾಟಕದ ಹಿರಿಯಾನೆ ನಿಕಟ ಸಭೆಯಲಿ ನಿಂತಾನೆ -೨ ।

ಶಕಟನ ಬಂಡಿಯ ಮುರಿದಾನೆ -೨ ॥

ಕಪಟನಾಟಕದಿಂದ ಸೋದರ ಮಾವನ ಅಕಟಕಟೆನ್ನದೆ ಕೊಂದಾನೆ ॥೧॥

ಎಳು ಭುವನವನುಂಡಾನೆ । ಸ್ವಾಮಿ ಬಾಲಕನೆಂಬ ಚೆಲ್ವಾನೆ -೨।
ಗೊಲ್ಲ ಗೋವುಗಳ ಕೂಡ ನಲಿದಾನೆ -೨ ॥
ಚೆಲುವ ಕಾಳಿಂಗನ ಹೆಡೆಯಲ್ಲಾಡುತ ಸೊಬಗ್ಹೆಚ್ಚಿ ಬರುತಾನೆ ॥೨॥

ಭೀಮಾರ್ಜುನರನು ಗೆಲಿಸ್ಯಾನೆ ಪರಮ ಭಾಗವತರ ಪ್ರಿಯದಾನೆ -೨।
ಮುದದಿಂದ ಮಥುರೆಲಿ ನಿಂತಾನೆ -೨॥
ಮದುಮುಖ ಸುರರು ದಿಗಿಲಿಟ್ಟುಕೊಂಡು **ಪುರಂದರವಿಠಲ**ನೆಂಬಾನೆ ॥೩॥

**167) ಬಂದಾ ಗೋವಿಂದಾ**

ಬಂದಾ ಗೋವಿಂದಾ ಮುಕುಂದಾ ।
ನಿತ್ಯಾನಿಂದ ಬಂದ ಶ್ರೀಹರಿ ತಾ ಬಂದಾ ॥ಪ॥

ಬಂದ ದುರಿತಗಳ ಪರಿಹರಿಸಲು ನಮ್ಮ ।
ಇಂದಿರೇಶ ಸ್ವಾಮಿ ಶ್ರೀ ವೆಂಕಟೇಶನು ।
ಬಂದನು ಭರದಿಂದ ಗರುಡವಾಹನನಾಗಿ ।
ಬಂದ ಬಂದ ಭಕ್ತ ವೃಂದವ ನೋಡುತ ಬಂದಾ ॥ಅಪ॥
ಅರಗಿನ ಮನೆಯಲಿ ಪಾಂಡುಕುಮಾರರು ।
ಇರುತಿರೆ ಅವರಿಗೆ ಬಂದ ವಿಪತ್ತನು ।
ಪರಿಹಾರವ ಮಾಡಿ ದ್ರುಪದನ ಪುರದೊಳು ।
ಪರಮ ಹರುಷದಿಂದ ಮದುವೆಯ ಮಾಡಿದವ ॥೧॥

ದುರಳನಾದ ದುಶ್ಯಾಸನ ಸಭೆಯೊಳು ।
ತರುಣಿ ದ್ರೌಪತಿಯ ಸೀರೆಯ ಸೆಳೆಯಲು ।
ಪರಮ ಕರುಣದಿಂದ ತರುಣಿಗಕ್ಷಯವಿತ್ತ ।
ದ್ವಾರಕಾಧಿಪತಿ ಶ್ರೀಪತಿ ಒಲಿಯುತ ಬಂದಾ ॥೨॥

ಗುಣನಿಧಿ **ಪ್ರಾಣೇಶವಿಠಲ**ನು ಬಂದಾ ।
ಘನತರ ವಾದ್ಯ ವಿಶೇಷಗಳಿಂದ ।
ಝುಣ ಝುಣಕೆನ್ನುವ ಗೆಜ್ಜೆ ನಾದಗಳಿಂದ ।
ತದ್ಧಿಮಿ ಧಿಮಿಕೆಂದು ಕುಣಿಯುತ ಬಂದಾ ॥೩॥

## ದೇವರು ನಿಂತದ್ದು

### 168) ಬಂದು ನಿಂತಾ ಭಾಗವತರ

ಬಂದು ನಿಂತಾ ಭಾಗವತರ ಪ್ರೀಯ ॥ಪ॥
ಕಂದರ್ಪ ಜನಕ ಶ್ರೀ ಕರುಣ ಸಾಗರ ಮೂರ್ತಿ ॥ಅ.ಪ॥
ಬಂದು ನಿಂತಾ ಕಣ್ಣಾಮುಂದೆ ಬಂದು ನಿಂತಾ ।

ಕುಟಿಲ ಕುಂತಳದೇವ ವಟು ವೇಷದಿಂದಲಿ -೨ ।
ನಟನೆ ಮಾಡುತ ದಿವ್ಯ -೩ । ಪಟುತರದಲಿ ತಾನು ॥೧॥

ಮುರಲಿಯನೂದುತ್ತ ಮರುಳಗೊಳಿಸಿಜನರ -೨ ।
ಕೊರಳ ಪದಕ ಹಾರ -೩ । ಧರಿಸುತಾ ನಲಿಯುತ್ತ ॥೨॥

ಸುಜನರ ಪೊರೆಯುವ ಕುಜನರ ತರಿಯುವ -೨ ।
ವಿಜಯಸಾರಥಿ ನಮ್ಮ -೩ । **ವಿಜಯ ವಿಠ್ಠಲರಾಯ** ॥೩॥

### 169) ಇಟ್ಟಿಗೆ ಮೇಲೆ ನಿಂತಾ

ಇಟ್ಟಿಗೆ ಮೇಲೆ ನಿಂತಾ ನಮ್ಮ ವಿಠ್ಠಲ ತಾನು ।
ಪುಟ್ಟಪಾದ ಊರಿನಿಂತಾ ದಿಟ್ಟ ತಾನು ॥ಪ॥

ಪುಟ್ಟ ಪಾದ ಊರಿನಿಂತಾ ಗಟ್ಟಿಯಾಗಿ ನಿಂತಾ ನಮ್ಮ ।
ಟೊಂಕದ ಮೇಲೆ ಕೈಯನ್ನಿಟ್ಟು ।
ಭಕ್ತರ ಬರುವುದು ನೋಡುವನಮ್ಮ ॥ಅಪ॥

ಪಂಢರ ಪುರದಲಿ ಇರುವನಂತೆ । ಪಾಂಡುರಂಗ ಎಂಬುವನಂತೆ -೨ ।
ಚಂದ್ರ ಭಾಗ ಪಿತ ಇವನಂತೆ । ಅರಸಿ ರುಕ್ಮಿಣಿ ಪತಿ ಇವನಂತೆ ॥೧॥

ಕನಕದಾಸೆ ಇವಗಿಲ್ಲವಮ್ಮ । ಹಣದ ಆಸೆ ಬೇಕಿಲ್ಲವಮ್ಮ -೨ ।
ನಾದಬ್ರಹ್ಮ ಎಂಬುವನಮ್ಮ । ಭಕುತರ ವಚನಕೆ ಕಾದಿಹನಮ್ಮ ॥೨॥

ಕರಿಯ ಕಂಬಳಿ ಹೊದ್ದಿಹನಮ್ಮ । ಹಣೆಗೆ ನಾಮ ಹಚ್ಚಿಹನಮ್ಮ -೨ ।
ತುಳಸಿಮಾಲೆ ಹಾಕ್ಯಾನಮ್ಮ **ಪುರಂದರ ವಿಠ್ಠಲ**ನ ಒಲಿದಿಹನಮ್ಮ ॥೩॥

## <u>ದೇವರು ನೋಡಿದ್ದು</u>

### 170) ಕನಸು ಕಂಡೇನೆ ಮನದಲಿ

ಕನಸು ಕಂಡೇನೆ ಮನದಲಿ ಕಳವಳಗೊಂಡೇನೇ ॥ಪ॥
ಎನು ಹೇಳಲಿ ತಂಗಿ ತಿಮ್ಮಯ್ಯನ ಪಾದವನು ಕಂಡೆ ॥ಅ.ಪ॥

ಪೊನ್ನದ ಕಡಗನಿಟ್ಟು । ತಿಮ್ಮಯ್ಯ ತಾ । ಪೋಲ್ವನಾಮವಿಟ್ಟು -೨ ।
ಅಂದಿಗೆ ಘಲುಕೆನುತ ಎನ್ನ ಮುಂದೆ । ಬಂದು ನಿಂತಿದ್ದನಲ್ಲೆ ---॥೧॥

ಮಕರಕುಂಡಲವಿಟ್ಟು । ತಿಮ್ಮಯ್ಯ ತಾ । ಕಸ್ತೂರಿ ತಿಲಕವಿಟ್ಟು -೨ ।
ಗೆಜ್ಜೆ ಘಲುಕೆನುತ ಸ್ವಾಮಿ ತಾ । ಬಂದು ನಿಂತಿದ್ದನಲ್ಲೆ ---॥೨॥

ಮುತ್ತಿನ ಪಲ್ಲಕ್ಕಿ । ಯತಿಗಳು । ಹೊತ್ತು ನಿಂತಿದ್ದರಲ್ಲೆ -೨ ।
ಛತ್ರ ಚಾಮರದಿಂದ ರಂಗಯ್ಯನ । ಉತ್ಸವ ಮೂರುತಿಯಾ ---॥೩॥

ತಾವರೆ ಕಮಲದಲ್ಲಿ । ಕೃಷ್ಣಯ್ಯ ತಾ । ಬಂದು ನಿಂತಿದ್ದನಲ್ಲೆ -೨।
ವಾಯು ಬೊಮ್ಮಾದಿಗಳು ರಂಗಯ್ಯನ । ಸೇವೆಯ ಮಾಡುವರೆ--॥೪॥

ನವರತ್ನ ಕೆತ್ತಿಸಿದ । ಸ್ವಾಮಿ ಎನ್ನ । ಹೃದಯ ಮಂಟಪದಲ್ಲಿ -೨।
ಸರ್ವಾಭರಣದಿಂದ **ಪುರಂದರ ವಿಠಲನ** ಕೂಡಿದೆನೆ ॥೫॥

## 171) ನಿನ್ನ ನೋಡಿ ಧನ್ಯನಾದೆನೋ

ನಿನ್ನ ನೋಡಿ ಧನ್ಯನಾದೆನೋ ಹೇ ಶ್ರೀನಿವಾಸ ॥ಪ॥
ಪಕ್ಷಿ ವಾಹನ ಲಕ್ಷ್ಮೀ ರಮಣ ಲಕ್ಷ ವಿಟ್ಟು ನೋಡೋ ।
ಪಾಂಡವ ಪಕ್ಷ ದೈತ್ಯ ಶಿಕ್ಷಕ ರಕ್ಷಿಸೆನ್ನನು ಕಮಲ ಕಟಾಕ್ಷ ॥೧॥
ದೇಶ ದೇಶ ತಿರುಗಿ ನಾನು ಆಸೆ ಬದ್ದ ನಾದೆ ಸ್ವಾಮಿ ।
ದಾಸನು ನಾನಲ್ಲವೇನೋ ಶ್ರೀಶ ಜಗದೀಶ ಶ್ರೀನಿವಾಸ ॥೨॥

ಕಂತು ಜನಕನೆ ಕೇಳೋ ಎನ್ನ ಅಂತರಂಗ ದಾಸೆ ಎನ್ನ ।
ಅಂತರ ವಿಲ್ಲದಲೆ ಪಾಲಿಸೋ ಶ್ರೀಕಾಂತ **ಪುರಂದರ ವಿಠಲ** ॥೩॥

## 172) ನೋಡಿದೆ ವೆಂಕಟ

ನೋಡಿದೆ ವೆಂಕಟ ರಮಣನ ।ದ್ವಾರವಾಡ ಗ್ರಾಮದಿ ನಿಂತ ದೇವನ॥

ರೂಢಿಪ ದಾಸರಿಗೆ ನೀಡಲು ದರುಶನ ।
ಗೂಢ ಪದಾದ್ರಿಯಿಂ ಬಂದ ಮಾಹತ್ಮನ ॥ಅ.ಪ॥

ಈತನೆ ವೈಕುಂಠನಾಥನು । ನಿಜ ಶಾತ ಕುಂಭೋಧರ ತಾತನು ।
ಮಾತಂಗ ವರದಾತ ಶ್ವೇತವಾಹನ ಸೂತ -೨
ಜಾತ ರಹಿತ ದನುಜಾತ ಕುಲಾಂತಕನ ॥೧॥

ತೋಂಡಮಾನನಿಗೊಲಿದಾತನು । ತನ್ನ ತೋಂಡ ಜನಕೆ
ಸುಖದಾತನು ।
ಅಂಡಜ ಪಿತ ಪ್ರಕಾಂಡ ವರೂಢ । ಬ್ರಹ್ಮಾಂಡ ನಾಯಕನಾದ
ಪಾಂಡವ ಪಾಲನ ॥೨॥

ಇಂದುಧರಾಮರ ವಂದ್ಯನ **ಶ್ಯಾಮ । ಸುಂದರ ವಿಠಲ** ಮುಕುಂದನ ।
ಸಂದರುಶನ ಮಾತ್ರದಿ ಹಿಂದೆ ಮಾಡಿದ ದೋಷ -೨
ವೃಂದಗಳೆಲ್ಲವು ಇಂದು ಬೆಂದು ಪೋದವು ಘನ ॥೩॥

**173) ಇಕ್ಕೋ ನೋಡೆ**

ಇಕ್ಕೋ ನೋಡೆ ರಂಗನಾಥನ ಪುಟ್ಟ ಪಾದವ ॥ಪ॥
ಸಿಕ್ಕಿತೆ ಶ್ರೀ ಲಕ್ಷ್ಮೀಪತಿಯ ದಿವ್ಯಪಾದವ ॥ಅಪ॥

ಶಂಖ ಚಕ್ರ ಗದಾಪದ್ಮ ಅಂಕಿತ ಪಾದವ ।
ಅಂಕುಶ ಕುಲಿಶ ಧ್ವಜರೇಖಾ ಅಂಕಿತ ಪಾದವ ॥
ಪಂಕಜಾಸನನ ಹೃದಯದಲ್ಲಿ ನಲಿಯುವ ಪಾದವ ।
ಸಂಕಟಹರಣ ವೆಂಕಟೇಶನ ದಿವ್ಯ ಪಾದವ ॥೧॥

ಲಲನೆ ಲಕ್ಷ್ಮಿಯಂಕದಲ್ಲಿ ನಲಿಯುವ ಪಾದವ ।
ಜಲಜಾಸನನ ಅಭೀಷ್ಟವೆಲ್ಲ ಸಲಿಸುವ ಪಾದವ ॥
ಮಲ್ಲರ ಗೆಲಿದು ಕಂಸಾಸುರನ ಕೊಂದ ಪಾದವ ।
ಬಲಿಯ ಮೆಟ್ಟಿ ಭಾಗೀರಥಿಯ ಪಡೆದ ಪಾದವ ॥೨॥

ಬಂಡೆಯ ಬಾಲೆಯ ಮಾಡಿದ ಉದ್ದಂಡ ಪಾದವ ।
ಬಂಡಿಯೊಳಿದ್ದ ಶಕಟಾಸುರನ ಒದ್ದ ಪಾದವ ॥
ಅಂಡಜ ಹನುಮರ ಭುಜದೊಳೊಪ್ಪುವ ಅಂದದ ಪಾದವ ।
ಕಂಡೆನೆ ಶ್ರೀರಂಗವಿಠ್ಠಲನ ದಿವ್ಯಪಾದವ ॥೩॥

## ದೇವರ ಹಾಡುಗಳು

### 174) ದರುಶನಕೆ

ನಿನ್ನ ದರುಶನಕೆ ಬಂದವನಲ್ಲವೋ ।
ಪುಣ್ಯವಂತರ ದಿವ್ಯಚರಣನೋಡಲು ಬಂದೆ । ಮಹಾ ॥ಪ॥
ಎಲ್ಲಿ ನೋಡಲು ನೀನೇ ವ್ಯಾಪ್ತನಾಗಿರಲಿಕ್ಕೆ । ಇಲ್ಲಿಗೆ ಬಾಹ
ಕಾರಣವಾವುದೋ ॥ ಸೊಲ್ಲಿಗೆ ಕಂಬದೊಳು ತೋರಿದ
ಮಹಾಮಹಿಮ । ಅಲ್ಲಿ ಇಲ್ಲೇನಯ್ಯ ಬಲ್ಲ ಭಕುತ ಜನರಿಗೆ ॥
ಕರೆದಾಗಲೇ ಓಡಿ ಬಂದೊದಗು ಓ ದೇವ । ಮರಳಿಗಾವುದ ವೆಣಿಸಿ
ಬರಲ್ಯತಕೋ ॥ ನೆರೆನಂಬಿದವರಿ ಗಾವಲ್ಲಿ ಆದರೆ ಏನು ।
ಅರಿತವರ ಮನದಲ್ಲಿ ನಿಂದಾಡುವೊ ಚೆಂದವಾ ॥೧॥

ಧ್ಯಾನಕ್ಕೆ ಸಿಲುಕುವೆ ನಿನ್ನ ಕಾಣಲಿಬಹುದು। ಜ್ಞಾನಿಗಳು ಎನಿತು ಬರುವರಲ್ಲಿಗೆ ॥ ಅನಂತ ಜನುಮದಲಿ ಜಪ ತಪ ವೃತ ಹೋಮ। ಏನು ಮಾಡಿದರಿಷ್ಟು ಜನ ಕೂಡುವದೋ ದೇವ ॥ ನೀನಿದ್ದ ಸ್ಥಾನದಲಿ ಸರ್ವ ಪುಣ್ಯಕ್ಷೇತ್ರ। ನೀನಿದ್ದ ಸ್ಥಾನದಲಿ ಸಕಲ ತೀರ್ಥ ॥ ನೀನಿದ್ದ ಸ್ಥಾನದಲಿ ಸಮಸ್ತ ಸಾತ್ವಿಕರು। ನಾನಿದ್ದ ಬರುವದೊ ನಿನಗೆ ತಿಳಿಯದೆ ಸ್ವಾಮಿ ॥೨॥

ಇದನೆ ಲಾಲಿಸು ಜೀಯ ನಿನ್ನದೊಂದೇ ಮೂರ್ತಿ। ನಿದರುಶನವಲ್ಲದೆ ಮಿಗಿಲಾಗುದೋ ॥ ಪದೇ ಪದೇ ಮಧ್ವಮತ ಪೊಂದಿದ ಸುಜನರ। ಹೃದಯದಲಿ ಒಂದೊಂದು ಪರಿ ನಿನ್ನ ರೂಪಂಗಳ ॥ ಭಳಿರೆ ತಿರುಮಲರಾಯ ನಿನ್ನ ಕರುಣಾ ರಸಕೆ। ನೆಲೆಗಾಣೆ ನೆಲೆಗಾಣೆ ನೆರೆ ಹೊರೆಯಲಿ ॥ ಒಲಿದು ಭಕುತರಿಗಾಗಿ ಮದುವೆ ಹವಣಿಸಿಕೊಂಡೆ। ಸುಲಭ ದೇವರ ದೇವ **ವಿಜಯವಿಠಲ** ವೆಂಕಟ ॥

### 175) ಆವಕುಲವೊ ರಂಗಾ

ಆವಕುಲವೊ ರಂಗಾ ಅರಿಯಲಾಗದು ॥ಪ॥

ಆವಕುಲವೆಂದರಿಯಲಾಗದು ಗೋವಕಾವ ಗೊಲ್ಲನಂತೆ। ದೇವಲೋಕದ ಪಾರಿಜಾತ ಹೂವ ಸತಿಗೆ ತಂದನಂತೆ ॥ಅಪ॥

ಗೋಕುಲದಲ್ಲಿ ಪುಟ್ಟಿದನಂತೆ ಗೋವುಗಳನ್ನು ಕಾಯ್ದನಂತೆ। ಕೊಳಲನೂದಿ ಮೃಗ ಪಕ್ಷಿಗಳ ಮರಳು ಮಾಡಿದನಂತೆ ॥ ತರಳತನದಿ ಒರಳ ನಿಗಹಿ ಮರವ ಮುರಿದು ಮತ್ತೆ ಹಾರಿ।

ತೆರೆದು ಬಾಯೊಳಗಿರೇಳು ಲೋಕವ ಇರಿಸಿ ತಾಯಿಗೆ ತೋರ್ದನಂತೆ

ಗೊಲ್ಲತಿಯರ ಮನೆಯ ಪೊಕ್ಕು ಕಳ್ಳ ತನವ ಮಾಡಿದನಂತೆ ।
ಬಲ್ಲಿದ ಪೂತನಿ ವಿಷವನುಂಡು ಮೆಲ್ಲನೆ ತೃಣನಾ ಕೊಂದನಂತೆ ॥
ಪಕ್ಷಿ ತನ್ನ ವಹಾನವಂತೆ ಹಾವು ತನ್ನ ಹಾಸಿಗೆಯಂತೆ ।
ಮುಕ್ಕಣ್ಣ ತನ್ನ ಮೊಮ್ಮಗನಂತೆ ಮುದ್ದು ಮುಖದ ಚಲ್ವನಂತೆ ॥೨॥

ಕರಡಿ ಮಗಳ ತಂದನಂತೆ ಶರಧಿ ಮಗಳು ಮಡದಿಯಂತೆ ।
ಧರಣಿಯನ್ನು ಬೆಡಿದನಂತೆ ಎರಡೆಳು ಲೋಕದ ವಡೆಯನಂತೆ ॥
ಹಡಗಿನಿಂದಲಿ ಬಂದನಂತೆ ಕಡಲ ದಡೆಯಲಿ ನಿಂದನಂತೆ ।
ವಡನೆ ಮಧ್ವರಿಗೊಲಿದನಂತೆ ವಡೆಯ **ಹಯವದನ**ನಂತೆ ॥೩॥

### 176) ಆಡಿದನೋಕುಳಿಯ

ಆಡಿದನೋಕುಳಿಯ । ನಮ್ಮ ರಂಗ । ಆಡಿದನೋಕುಳಿಯ ।ಪ।
ರಂಬಿಸಿ ಕರೆದು ಚುಂಬಿಸಿ ಒಗೆದನು ರಂಭೇರಿಗೋಕುಳಿಯ ॥ಅ.ಪ॥
ಕದಂಬ ಕಸ್ತುರಿಯ ನಮ್ಮರಂಗ । ಅಳಿಗಂಧದ ಓಕುಳಿಯ -೨
ಬಂದರು ಹೊರಗಿನ್ನಾರೇರಾಡುತ । ಚಂದದ ಓಕುಳಿಯ -೨ ॥೧॥

ಪಟ್ಟಿಮಂಚದ ಮೇಲೆ ನಮ್ಮರಂಗ । ಇಟ್ಟ ಮುತ್ತಿನ ಹಾರ -೨
ಬಟ್ಟಕುಚಕ್ಕೆ ಕಣ್ಣಿಟ್ಟೊಗೆದನು । ಕುಟ್ಟಿದನೋಕುಳಿಯ -೨ ॥೨॥

ಹತ್ತಾರುಸಾವಿರ ಗೋಪಿ । ಸ್ತ್ರೀಯರೆಲ್ಲರು ಕೂಡಿ -೨
ಮಾರನಯ್ಯ **ಶ್ರೀ ಪುರಂದರ ವಿಠ್ಠಲನು** ಹಾರಿಸಿ ಓಕುಳಿಯ ॥೩॥

## 177) ಎಷ್ಟು ಹೇಳಲಿ ವೆಂಕಟಗಿರಿಯ

ಎಷ್ಟು ಹೇಳಲಿ ವೆಂಕಟಗಿರಿಯ ಸೃಷ್ಟಿಗೆ ಬಹು ಸಿರಿಯಾ ||ಪ||
ಬೆಟ್ಟವನೆ ಮನಸ್ಸು ಇಟ್ಟೇರಲು | ಬೇಡಿದ
ಇಷ್ಟಾರ್ಥಗಳ ಈಡಾಡುವ ದೊರೆಯ ||ಅಪ||

ಚಿತ್ರ ವಿಚಿತ್ರದ ಮಹಾದ್ವಾರ | ಚಿನ್ನದ ಗೋಪುರ | ಸ್ವಚ್ಛವಾದ ಸ್ವಾಮಿ
ಪುಷ್ಕರಣಿ ತೀರ ಸುತ್ತಲು ಪ್ರಕಾರ || ಹೆಚ್ಚಿನ ತೀರಥವೇ ಮನೋಹರ
ಮಾರುವ ವಿಸ್ತಾರ | ಚಿತ್ತಜನಯ್ಯನ ಶೈಲವೇ ದೂರದ್ಮಿಂ ಹತ್ತಿ
ಬರುವುದೀತನ ಪರಿವಾರ ||೧||

ರತ್ನ ಮಾಣಿಕ್ಯದ ಕೇಯುರ ಕಟ್ಟಿದ ಉಡಿದಾರ | ಉಟ್ಟಿದ್ದ ನೀಲಜರಿ
ಪೀತಾಂಬರ ಕೌಸ್ತುಭ ಮಣಿಹಾರ || ಗಟ್ಟಿ ಕರ ಕಂಕಣ ಕುಂಡಲಧರ
ಚತುರ್ಭುಜದ ಅಲಂಕಾರ | ವಕ್ಷಸ್ಥಳದಲಿ ಹೊಂದಿದ ಶ್ರೀ ಮಹಾಲಕ್ಷ್ಮೀ
ದೇವಿಯರಿಂದೊಲಿವ ಶೃಂಗಾರ ||೨||

ಆಕಾಶ ರಾಜನ ಕಿರೀಟ ಚಿತ್ರವು ಬಹು ಮಾಟ | ಹಾಕಿದ್ದ ಹರಿ
ಕಡೆಗಣ್ಣಿನ ನೋಟ ಭಕ್ತರ ಒಡನಾಟ || ಬೇಕಾದ ಭಜಕರ
ಭವಪರಿಪಾಠ ಬಿಡಿಸುವ ಯಮಕಾಟ | ಕೋಟಿ ಜನರ ಓಡ್ಯಾಟವೆ
ನಮ್ಮ ಕಿರೀಟಿಯ ಸಖ ಕೇಶವನ ಮಂದಿರದೊಳ್ ||೩||

ಕಪ್ಪು ಕಾಣಿಕೆಯ ಬೇಡುವ ಸರ್ಪಶೈಲದ ತಿಮ್ಮಪ್ಪ | ಕಪ್ಪು ಕಾಸು
ಕವಡೆಯ ಮುಡುಪು ಹಾಕದೆ ತಾನೊಪ್ಪ || ಒಪ್ಪಿಸಿ ನೋಡುವ

ಜನರತಪ್ಪು ಹುಡುಕ್ಯಾಡುತಲಿಪ್ಪ । ಅಪ್ಪ ಮಹಿಮ ಅನಂತ ಮೂರುತಿ
ತಾನೊಪ್ಪಿದರೊಲಿದು ಕೊಡುವ ಸಮಿಪ್ಯ ||4||

ದೇಶ ದೇಶದೊಳು ಈತನ ವಾರ್ತೆಯು ತುಂಬಿದ ಕೀರುತಿಯು ।
ಆಸೆಯ ದೈವ ಈ ಮುರುತಿಯು ಫಲ್ಗುಣ ಸಾರಥಿಯು || ಲೇಸಾಗಿ
ಜನರ ನೋಡುವ ರತಿಯು ಕರ್ಪೂರದಾರತಿಯು । ವಾಸವಾಗಿರುವ
ಈ ಶೇಷಾದ್ರಿಯಲಿ **ಭೀಮೇಶ ಕೃಷ್ಣ** ಶ್ರೀನಿವಾಸ ಕೃಪಾಳೋ ||5||

**178) ಕರುಣಿಸೋ ರಂಗಾ**

ಕರುಣಿಸೋ ರಂಗಾ ಕರುಣಿಸೋ ಹಗಲು ಇರಳು ನಿನ್ನ-೨ ।
ಸ್ಮರಣೆ ಮರೆಯದಂತೆ ||ಪ||

ರುಕುಮಾಂಗದನಂತೆ ವೃತವ ನಾನರಿಯೆನೊ-2। ಶುಕ ಮುನಿಯಂತೆ
ಸ್ತುತಿಸಲು ಅರಿಯೆ || ಬಕ ವೈರಿಯಂತೆ ಧ್ಯಾನವ ಮಾಡಲರಿಯೆ ।
ದೇವಕಿಯಂತೆ ಮುದ್ದಿಸಲರಿಯೆನೊ । ರಂಗ ||೧||
ಗರುಡನಂದದಿ ಪೊತ್ತು ತಿರುಗಲು ಅರಿಯೆ-೨ । ಕರೆಯಲು ಅರಿಯೆ
ಕರಿ ರಾಜನಂತೆ || ವರ ಕಪಿಯಂತೆ ದಾಸ್ಯವ ಮಾಡಲರಿಯೇ ||
ಸಿರಿಯಂತೆ ಕರೆದು ಮೋಹಿಸಲರಿಯೆನೊ । ರಂಗ ||೨||

ಬಲಿಯಂತೆ ದಾನವ ಮಾಡಲು ಅರಿಯೆ -೨ । ಭಕ್ತಿ ಛಲವನು ಅರಿಯೆ
ಪ್ರಲ್ಹಾದನಂತೆ || ಒಲಿಸಲು ಅರಿಯೆ ಅರ್ಜುನನಂತೆ ಸಖನಾಗಿ ।
ಸಲಹೋ ದೇವರ ದೇವಾ **ಪುರಂದರ ವಿಠಲ** ||೩||

## 179) ಅನುದಿನಾ ಭವಾಬ್ಧಿಯಲಿ

ಅನುದಿನಾ ಭವಾಬ್ಧಿಯಲ್ಲಿ ಭವ ತರಂಗ ರಾಶಿಯಲ್ಲಿ ।
ಮುಳುಗುತಿಹೆ ಕೈ ಪಿಡಿಯೋ-೨ । ಜನಕಾ ಕೃಷ್ಣಯ್ಯ ॥ಪ॥

ಶ್ರೀನಿವಾಸ ನಿನ್ನ ಭಕುತಿ । ಮಾಡದಘಾವಂತನೆಂದು -೨ ।
ಹೀನ ಜನರು ಪಾಡುತಿರ್ಪಽರೇನೋ ಹೇಳಲೋ ॥
ನೀನು ಪಾಲಿಪ ರಾಜ್ಯದಲ್ಲಿ । ಅಜ್ಞಾನಿ ದೇಶಿಗ ನೊಽಬ್ಬ ಕೆಡಲು -೨।
ಹಾನಿ ಹೆಚ್ಚಳ ನಿನ್ನದಲ್ಲ ದೀನ ದಯಾಽಳೋಽಽ ॥೧॥

ಚಿತ್ತ ವೇಗಕವಧಿಯಿಲ್ಲ ಹೊತ್ತುಕೊಂಡು ಕಂಡ ಕಡೆಗೆ -೨।
ಸುತ್ತುತಿದೆಽ ತನ್ನ ದಳವಾ ಕೂಡಿ ರಂಽಽಗಯ್ಯ ॥
ಕರ್ತಾ ನಿಮ್ಮ ಪಾದದೆಡಿಗೆ ಎತ್ತಿ ಇದನ್ನಾಳಬೇಕು -೨।
ಹೆತ್ತತಾಯಿ ನೀನೆ ಗಡಽನೆಽತ್ತಿಕೊಳ್ಳಽಽಬೆಕೋ ॥೨॥

ಹಳುವಿನೋಳ ದಾರಿಕಾಣೆ ಸೆಳುವಿನೊಳಾಶ್ರಯವ ಕಾಣೆ -೨।
ನಳಿನ ನೇತ್ರ ನೀನೇ ಕಾಯೋ ಸುಲಭರೊಡೆಯನೆ ॥
ನೆಲೆಯ-ತೋರಾಂತಕಽಹಾರಿ ಒಲಿದು ವರ ಅಭಯವ ನೀಡಿ -೨।
ಒಲಿಯೋ ಪ್ರಸನ್ನ ವೆಂಕಟಾದ್ರಿ ನಿಲಯ ಉದಾರಿ ॥೩॥

## 180) ಎನ್ನ ಸರ್ವಾಪರಾಧವನು

ಸರ್ವಾಪರಾಧವನು ಕ್ಷಮಿಸಯ್ಯಾ । ಎನ್ನ ॥ಪ॥
ಗರ್ವಾಂಧಕಾರವನು ಬಿಡಿಸಿ ರಕ್ಷಿಸೋ ॥ಅಪ॥

ಎಂದೆಂದು ಹಿರಿಯರ ನಿಂದಿಸಿದೆನು ಚಲ್ವ।
ಚಂದನ-ಗಂಧಿಯರೊಳೊಡು ಸರಸವಾಡಿದೆऽऽऽ-೨॥
ಬಂದು ಬಂದರೆ ಎನ್ನ ಬಿಗುವ ಭಿಂಕವ ತೋರೆ।
ಬಂದೊಡ್ವರೆ ಬೇಕೆಂದು ಕೋರದೆऽऽऽ॥
ಕುಂದು-ಕುಡಲ-ದಂಢ ಚಂದ-ರಂದನ।
ಗೋವಿಂದನ ಪಾದಾರವಿಂದವ ಸ್ಮರಿಸೇನು॥
**ಒಂದು ದಿನವು ನಾನು ಮಿಂದು ಮಡಿಯನುಟ್ಟು।**
**ಗಂಧ ಪುಶ್ಪಾರ್ಚನೆಗಳ ಮಾಡೆನಾ -೨॥**ಎನ್ನ॥೧॥

ಅನ್ನದಾನವ ಮಾಡಲರಿಯೆ ನಾ ಮುನ್ನ-೨ ।
ಸ್ವರ್ಣದಾನದ ಮಾತು ಸೊಗಸಾದು ಕಿವಿಗೆऽऽऽ-೨॥
ಕನ್ಯಾದಾನದ ಮಾತು ಕನಸಿನಲಿ ನಾ ಕೇಳೆ।
ಮುನ್ನರಿಯದ ಮಹಾ ಮುರ್ಧ ಕಣಯ್ಯ ॥
ಉನ್ನತ ಗೋದಾನ ಭೂದಾನ ಮೊದಲಾದದ್ದು।
ಸನ್ಮತಿಯಲಿ ಕೊಟ್ಟು ಸುಖಿಸುವುದರಿಯೇನು॥
**ಅನ್ಯಾಯವ ಮಾಡಿ ಹರಿ ನಿನ್ನ ಮೊರೆಹೊಕ್ಕೆ ।**
**ಬೆಣ್ಣೆ ಕಳ್ಳನೆ ಮುದ್ದು ಚಿನ್ನ ಕೃಷ್ಣಯ್ಯऽऽऽ-೨॥**ಎನ್ನ॥೨॥

ಪಾಪಿಯರೊಳು ಅತಿ ಪಾಪಿಯೆಂತೆಂಬರು ।
ಕೋಪಿಯರೊಳು ಉಗ್ರ ಕೋಪಿಯು ನಾನೇ ऽऽऽ-೨॥
ಕೋಪತಾಪದಿ-ವ್ಯಾದಿಗಳನೆಲ್ಲ ಗುಣಮಾಡಿ।

ಶ್ರೀಪತಿಯೇ ನೀ ಸಲಹೋ ಕರುಣದಿ ||

ಈ ಪರಿಯಲಿ ಮೇಲು ಕೊಟಿ ಇಂದಿರೇವರ |

ಆಪದ್ಭಂದುವೆ ಭಕ್ತರನ ಹರನೆ||

**ತಾಪತ್ರಯಗಳ ಬಿಡಿಸಿ ಚಲ್ವರಾಯ|**

**ಗೋಪಾಲ ಮೂರುತಿ ಪುರಂದರ ವಿಠಲ-೨||ಎನ್ನ||೩||**

**181) ಧಣಿಯ ನೋಡಿದೆನಾ ವೆಂಕಟನಾ**

ಧಣಿಯ ನೋಡಿದೆನಾ ವೆಂಕಟನ ||ಪ||

ಮನದಣಿಯ ನೋಡಿದೆನೋ-೨ | ಶಿಖಾಽಮಣಿ ತಿರುಮಲನ ||ಅಪ||

ಚರಣ ದಂದುಗೆ ಗೆಜ್ಜೆಯವನ | ಪಿತಾಂಬರ ಉಡಿಗೆ ಒಡ್ಯಾನ

ವಿತ್ತಿಹನ-೨| ಮೆರೆಯುವ ಮಾಣಿಕ್ಯ ವದನ -೨|

ಚನ್ನ ಸರ ಹಾರ ಪದಕ | ಕೌಸ್ತುಬ ಧರಿಸಿಹನ-೨ ||೧||

ಕೊರಳೊಳು ವೈಜಯಂತಿ ಧರಿಸಿಹನ | ಕಿರು ಬೆರಳ ಮುದ್ರಿಕೆ - |

ಭುಜ ಕೀರ್ತಿ ಒಪ್ಪುವನ-೨|| ಅರಳು ಕಂಗಳ ನೋಟದವನ -೨|

ಸುಳಿಗುರುಳು ನೋಸಲಾಪಟ್ಟಿ | ನಾಮ ಇಟ್ಟಿಹನ-೨ ||೨||

ಶಂಕ ಚಕ್ರವ ಪಿಡಿದಿಹನ | ಕೈ ಕಂಕಣ ತೋಳ್ಬಂದಿ ಬಾಪುರಿಯವನ೨|

ಶಂಕನೂದವ ಸರ್ವೋತ್ತಮನ-೨||

ಭೂವೈಕುಂಠ-|ವಿದೆಂದು ಹಸ್ತದಿ ತೋರಿಸುವನ-೨||೩||

ಕೇಸಕ್ಕಿ ಅನ್ನ ಉಂಬುವನಾ । ಬಡ್ಡಿ ಕಾಸುऽऽ ಬಿಡದೆ ಹಾಗೆ ಕೂಡಿ
ಹಾಕುವನ-೨॥ ಘೋಷ ನಾದಕ್ಕೆ ಒಲಿದಿಹನ -೨ । (ಹರೆ ಶ್ರೀನಿವಾಸ)
(ಗೋವಿಂದ ಗೋವಿಂದ)
ಮೈಯೊಳು ಸೂಸುವ ಗಂಧ ಕಸ್ತುರಿ ಲೇಪಿತನ-೨ ॥೪॥

ನೀಟಾದ ವಲ್ಲಿ ಹೊದ್ಧಿಹನ । ಹೊರ ಬೇಟೆಯಾಡಿ ಅಂದದಿಂದ
ಬರುವನ-೨॥ ನೋಟದಿ ಬಂದು ನಿಂತಿಹನ-೨॥
ಈ ಸೃಷ್ಟಿಗೊಡೆಯ **ಪುರಂದರ ವಿಠಲನ್ನ** -೨॥೫॥

**182) ಧಣಿಯ ನೋಡಿದೆನಾ**

ಧಣಿಯ ನೋಡಿದೆನಾ ವೆಂಕಟನಾ । ಮನದಣಿಯ ನೋಡಿದೆನಾ ॥ಪ॥
ಮನದಣಿಯ ನೋಡಿದೆ ಶಿಖಾಮಣಿ ತಿರುಮಲನ ॥ಅಪ॥

ಕೇಸಕ್ಕಿ ಅನ್ನ ಉಂಬವನಾ । ಬಡ್ಡಿ ಕಾಸು ಬಿಡದೆ
ಹೊನ್ನಗಳಿಸುವವನಾ । ದೋಸೆ ಅನ್ನವ ಮಾರಿಸುವನ -೨।
ತನ್ನ ದಾಸರ ಮ್ಯಾಳದಿ ಕುಣಿದಾಡುತಿಹನ-೨॥೧॥

ಗಂಟೆನೊಲ್ಲಿ ಹೊರುವವನ । ಹೊರ ಹೊಂಟು ಹೋಗಿ ಬೇಟೆ-
ಯಾಡುವವನ ॥ ಗಂಟೆನಾದಕ್ಕೆ ನಲಿಯುವನ -೨।
ಭೂ- ವೈಕುಂಠವಿದೆಂದು ಹಸ್ತವ ತೋರುತಿಹನ ॥೨॥

ಬೆಟ್ಟದೊಳಗೆ ಇರುತಿಹನ । ಮನ ಮುಟ್ಟಿ ಭಜಿಪರಿಗೆ ಇಷ್ಟವ
ಸಲಿಸುವನ । ಕೊಟ್ಟ ವರವ ತಪ್ಪದವನ -೨॥

ಸೃಷ್ಟಿಗಧಿಕ **ಶ್ರೀ ಪುರಂದರ ವಿಠ್ಠಲ**ರಾಯನ ||೩||

**183) ಇದೇ ಸಮಯ**

ಇದೇ ಸಮಯ ರಂಗ ಬಾರೆಲೊ |

ಇದೇ ಸಮಯ ಕೃಷ್ಣ ಬಾರೆಲೊ ||ಪ||

ಅತ್ತಿಗೆ ಲಕ್ಷ ಬತ್ತಿ ಶೀಲಳೋ | ಅಷ್ಟು ಆಗದೆ ಅವಳು ಲೋಲಳೊ |

ಮತ್ತೆ ಪುರಾಣದಿ ಲೋಲಳೊ -೨|

ಸರಿ ಹೊತ್ತಿನ ವೇಳಗೆ ಬರುವಳೊ-೨||೧||

ಮಾವ ಎನ್ನಲ್ಲಿ ಅವಿಶ್ವಾಸಿಯೋ | ಮದುವೆಯಾದ ಗಂಡ ಬಲು

ಉದಾಸಿಯೊ || ಭಾವನು ಎನ್ನ ಸೇರ ಹೇಸಿಯೊ -೨|

ನೀ ವೇಳೆಗೆ ಬಂದರೆ ವಾಸಿಯೊ -೨||೨||

ತಂದೆ ತಾಯಿ ಆಸೆ ಮಾಡೆನೊ | ಎನ್ನ ಕಂದನ ಮೇಲೆ

ಮನಸಿಡೆನೋ || ಮಂದರಧರ **ಶ್ರೀ ಪುರಂದರ ವಿಠಲ**ನ -೨|

ನೀ ಬಂದರೆ ಚರಣ ಸೇವೆ ಮಾಳ್ಪೆನೊ ||೩||

**184) ಸೆರಗಬಿಡೋ ರಂಗ**

ಸೆರಗಬಿಡೋ ರಂಗ | ಸೆರಗ ಬಿಡೋ |

ಕರವ ಮುಗಿವೆ ನೊಮ್ಮ ಸೆರಗ ಬಿಡೋ ||ಅ||

ಅತ್ತೆ ಕಂಡರೆ ಎನ್ನ ಹತ್ತಿರ ಸೇರಳೊ |

ಚಿತ್ತದೊಲ್ಲಭ ಕೃಷ್ಣ ಸೆರಗ ಬಿಡೊ ||೧||

ಮಾವ ಕಂಡರೆ ಎನ್ನ ಜೀವ ಬಿಡೆನೊ ಹರಿಯೇ ।
ಜೀವದೊಲ್ಲಭ ಕೃಷ್ಣ ಸೆರಗ ಬಿಡೋ ॥೨॥

ಗಂಡ ಕಂಡರೆ ಎನ್ನ ಗುಂಡಿಗಿಕ್ಕುವ ಹರಿಯೇ ।
ಪುಂಡರಿಕಾಕ್ಷ ಶ್ರೀ **ಪುರಂದರ ವಿಠಲ** ಸೆರಗ ಬಿಡೋ ॥೩॥

**185) ಕುರುಡುನಾಯಿ ಸಂತೆಗೆ**

ಕುರುಡುನಾಯಿ ಸಂತೆಗೆ ಬಂತಂತೇ । ಅದು ಯಾಕೆ ಬಂತೋ ॥ಪ॥

ಖಂಡ ಸಕ್ಕರೆ ಹಿತವಿಲ್ಲವಂತೆ । ಖಂಡ ಎಲುಬು ಕಡದೀತಂತೆ -೨।
ಹೆಂಡಿರ ಮಕ್ಕಳ ನೆಚ್ಚಿತಂತೆ ।ಕೊಂಡು ಹೋಗುವಾಗ ಯಾರಿಲ್ಲವಂತೆ॥

ವೇದವಾದಗಳೊದಿತಂತೆ । ಗಾದೆ ಮಾಡಿ ಬಿಟ್ಟಿತಂತೆ -೨।
ಹಾದಿ ತಪ್ಪಿ ನಡೆದು ಯಮನ । ಬಾಧೆಗೆ ತಾ ಗುರಿಯಾಯಿತಂತೆ ॥೨॥

ಮಂಗನ ಕೈಯ ಮಾಣಿಕ್ಯವಂತೆ । ಹಾಂಗು ಹೀಂಗೂ ಕೇಳಿತಂತೆ -೨।
ರಂಗ **ಪುರಂದರ ವಿಠಲ**ನ ಮರೆತು-೨। ಭಂಗ ಬಹಳ ಪಟ್ಟಿತಂತೆ ॥೩॥

**186) ಪಾಲಿಸಯ್ಯ ಪವನನಯ್ಯ**

ಪಾಲಿಸಯ್ಯ ಪವನನಯ್ಯ ಪಾಲ ವಾರಿಧಿಶಯ್ಯ । ವೇಂಕಟರೇಯ ॥ಪ॥

ಶ್ರೀಶ ಸಂಸಾರವೆಂಬ । ಸೂಸುವ ಶರಧಿಯೋಳ್-೨ ।
ಈಸಲಾರೆನೊ ಹರಿಯೇ ಏ ಧೋರೆಯೇ ॥
ದಾಸನೆಂತೆಂದ ಮೇಲೆ ಘಾಸಿ ಮಾಡುವರೇನೊ-೨।
ಲೇಸು ನಿನಗಲ್ಲವೆಂದು ನಾ ಬಂದು ॥

ದೋಷರಾಶಿಗಳೆಲ್ಲ ನಾಶನಮಾಡಿ । ವಿಶೇಷ ಜ್ಞಾನ ಭಕ್ತಿ-
ವೈರಾಗ್ಯವನಿತ್ತು । ಆಸೆಯ ಬಿಡಿಸಿನ್ನು ಮೀಸಲ ಮನ ಮಾಡಿ।
ನೀ ಸಲುಹಿದಿ ಶ್ರೀನಿವಾಸ ಕೃಪಾಳೋ ॥೧॥

ಮೂರು ಗುಣಗಳಿಂದ ಮೂರು ತಾಪಗಳಿಂದ-೨ ।
ಮೂರು ಅವಽಽಸ್ಥೆಯಿಂದ ಮುಕುಂದ ॥
ಮೂರು ಐದಽಽರಿಂದ ಮೂರು ಏಳಽಽರಿಂದ -೨।
ಮೂರಾರು ದಾರಿ ಕಾಣದೆ ಮೂರಾದೆ ॥
ಮೂರು ಹಿಡಿಸಿ ಮ್ಯಾಲ್ಮೂರೆರಡೋಡಿಸಿ । ಮೂರು ಮೂರು ಭಕ್ತಿ-
ಮೂರು ಕಾಲಕ್ಕೆ ಇತ್ತು । ಮೂರು ರೂಪನಾಗಿ ಮೂರು ಲೋಕವನೆಲ್ಲ-
ಮೂರು ಮಾಡಿದ ಬಿಂಬ ಮೂರುತಿ ವಿಶ್ವ ॥೨॥

ಕರುಣಾಸಾಗರ ನಿನ್ನ । ಸ್ಮರಣೆ ಮಾತ್ರದಿ ಸಕಲ -೨।
ದುರಿತ ಪರಿಹಾರವೆಂದು ನಾ ಬಂದು ॥
ಮೋರೆಹೊಕ್ಕ ಮೇಽಽಲಿನ್ನು ಪೊರೆಯಬೇಕಲ್ಲದೆ-೨।
ಜರಿದು ನೀ ದೂರ ನೋಡುವರೇ ಮುರಾರೆ ॥
ಮರುತಾಂತರ್ಗತ **ಗೋಪಾಲ ವಿಠ್ಠಲ** । ಈ ಶರೀರ ನಿನ್ನ ಚರಣ-
ಕರ್ಪಿಸಿದೆನೊ । ಸರಿ ಬಂದದ್ದು ಮಾಡೊ ಬಿರುದು ನಿನ್ನದು ದೇವಾ-
ಪರಮ ದಯಾನಿಧೆ ಉರಗಾದ್ರಿ ವಾಸ ॥೩॥

**187) ಹೊನ್ನು ತಾಽಗುಬ್ಬಿ ಹೊನ್ನುತಾಽ**

ಹೊನ್ನು ತಾಽಗುಬ್ಬಿ ಹೊನ್ನುತಾಽ ॥ಅ॥

ಚೆನ್ನಗೋಪಾಲ ಶ್ರೀ ಚೆಲುವ ಕೃಷ್ಣನ ಕೈಗೆ ||ಅಪ||

ಆಗಮವನು ತಂದು ಅಜಗಿತ್ತಕೈಗೆ |
ಸಾಗರವನುತ್ತಿಕ್ಕಿ ಸುಧೆಯಿತ್ತ ಕೈಗೆ ||
ತೂಗಿ ಮಾತಾಡುವ ಸ್ಥೂಲ ಕಾಯನಕೈಗೆ |
ನಾಗಶಯನ ಶ್ರೀ ರಂಗನ ಕೈಗೆ ||೧||

ಬಲಿಯದಾನವ ಬೇಡಿ ಬಂದಂಥ ಕೈಗೆ |
ಛಲದಿಂದ ಕ್ಷತ್ರೀಯರ ಅಳಿದಂಥ ಕೈಗೆ ||
ಕಲಿ ವಿಭೀಷಣಗೆ ಅಭಯ ವಿತ್ತ ಕೈಗೆ |
ಬಲು ಬೆಟ್ಟ ಬೆರಳಿಂದ ಎತ್ತಿದ ಕೈಗೆ ||೨||

ಪತಿವೃತೆಯರ ವೃತ ಅಳಿದಂಥ ಕೈಗೆ |
ಅತಿವಾಜಿಯನೇರಿ ಮರ್ದಿಸಿದಕೈಗೆ ||
ಸತಿ ಶಿರೋಮಣಿ ಲಕ್ಷ್ಮೀ ಕಾಂತನ ಕೈಗೆ |
ಚತುರ **ಹೆಳವನಕಟ್ಟೆ** ರಂಗನ ಕೈಗೆ ||೩||

**188) ಈ ಪರಿಯ ಸೊಬಗಾವ ದೇವರಲಿ**

ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ
ಗೋಪಿಜನಪ್ರೀಯ ಗೋಪಾಲಗಲ್ಲದೆ ||ಪ||

ದೊರೆಯತನದಲಿ ನೋಡೆ ಧರಣಿದೇವಿಗೆ ರಮಣಾ |
ಸಿರಿಯತನದಲಿ ನೋಡೆ ಶ್ರೀಕಾಂತನು||
ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯಾ|

ಗುರುವುತನದಲಿ ನೋಡೆ ಜಗದಾದಿ ಗುರುವು ||೧||

ಪಾವನತ್ವದಿ ನೋಡೆ ಅಮರ ಗಂಗಾಜನಕ |
ದೇವತ್ವದಲಿ ನೋಡೆ ದಿವಿಜರೊಡೆಯ ||
ಲಾವಣ್ಯದಲಿ ನೋಡೆ ಲೋಕಮೊಹಕನಯ್ಯಾ|
ಆವ ಧೈರ್ಯ್ಯದಿ ನೋಡೆ ಅಸುರಾಂತಕನೋ ||

ಗಗನದಲಿ ಸಂಚರಿಪ ಗುರುಡ ದೇವನೆ ತುರಗ |
ಜಗತಿಧರ ಶೇಷ ಪರಿಯಂಕ ಶಯನ ||
ನಿಗಮಗೋಚರ ನಮ್ಮ **ಪುರಂದರ ವಿಠ್ಠಲ**ಗಲ್ಲದೆ |
ಮಿಗಿಲಾದ ದೈವಗಳಿಗೆ ಈ ಭಾಗ್ಯ ಉಂಟೆ ||

**189) ದಾಸನೆಂತ ಆಗುವೆನೋ**

ದಾಸನೆಂತ ಆಗುವೆನೋ ಧರಯೊಳಗೆ ನಾನು ||ಪ||
ವಾಸುದೇವನಲೀ ಲೇಶ ಭಕುತಿಯ ಕಾಣೆ ||ಅಪ||

ಘುಟ ನಾಮವ ಹೊಡೆದು ಗುಂಡು ತಂಬಿಗೆ ಹಿಡಿದು |
ಘುಟಂಚು ಮಡಿಯ ಧೊತರವ್ಽಽನುಟ್ಟು -೨||
ಧಾಟುಗಾಲಯಿಡುತನಾ ಧರೆಯೊಳಗೆ ಬರಲೆನ್ನ -೨|
ಘುಟಕತ್ತನ ನೋಡಿ ಭ್ರಮಿಸದಿರೆ ಜನರೆ ||೧||

ಅರ್ಥದಲಿ ಮನಸು ಆಸಕ್ತವಾಗಿದ್ದು |
ವೆರ್ಥವಾಯಿತು ಜನ್ಮ ವಸುಧೆಯೊಳಗೆ -೨||

ಅರ್ಥಿಯಿಂದಲಿ ಹರಿಯ ಅರ್ಚಿಸಿದಿಲ್ಲ ನಾ -೨।
ಸತ್ಯ ಶೌಚಗಳರಿಯೆ ಸಜ್ಜನರು ಕೆಳಿ ॥೨॥

ಇಂದಿರೇಶನ ಪೂಜೆ ಒಂದು ದಿನ ಮಾಡಿಲ್ಲ।
ಸಂಧ್ಯಾನ ಜಪತಪಗಳ ಒಂದನರಿಯೆ -೨॥
ಒಂದು ಸಾಧನೆ ಕಾಣೆ **ಪುರಂದರ ವಿಠಲನ**।
ದ್ವಂದ ಪಾದವ ನಂಬಿ ಅರಿತು ಭಜಿಸದಲೆ ॥೩॥

**190) ಎಲ್ಲಿ ಭಯಗಳು**

ಎಲ್ಲಿ ಭಯಗಳು ಹರಿಯ ಭಕುತರಿಗೆ ॥ಪ॥
ಇಲ್ಲ ಇಲ್ಲಽವೊ-ಕಾಣೆ । ಎಂದಿಗಾಽದರುಽ ಮರುಳೆಽಽ ॥ಅ.ಪ॥

ಹುಲಿ ಇಲಿ ಆಽಗುವುದು । ತೋಽಳ ಕೋಽಽಳ್ಯಾಆಗುವುದು -೨।
ಕಲಿಬಂದ ಹಿತ್ತಲನಽನ್ನೀಗ ಬಳಿವಾ ॥
ಖಳಮಹಾ ಚೋರಾ । ಚೊಚ್ಚಿಲ ಗೌಡಿಮಗನಾಹ-೨।
ಜಲಜನಾಭನ ಕೃಪೆಯ । ಪಡೆದ ದಾಸರಿಗೆಽಽ ॥೧॥

ಕರಡಿ ಕರುವಾಗುವದು । ಉರಿಮಂಜುಆಗುವದು -೨।
ಕರಿ ನಾಯಿ ಆಗುವದು ಕಂಡವರಿಗೆ ॥
ಭರದಿಂದ ಸುರಿವಮಳೆ । ನಿಲ್ಲೆನಲು ನಿಲ್ಲುವದು-೨।
ನರಹರಿಯೆ ನಿನ್ನ ನಾಮ । ನಂಬಿ ಭಜಿಪರೀಗೆಽಽ ॥೨॥
ಕ್ಷುತೆ-ತೃಷೆಯಾಗದು । ಕ್ಷುದ್ರ-ಸಂಗವಾಗದು-೨।
ಪದೆ ಪದೆಗೆ ರೋಽಗಗಳು । ಬೆನ್ನಾಟವು ॥

ಉದಯಾ-ಸ್ತಮಾನಗಳೆಂಬಾ |ಭಯಸುಳಿಯದುಽಽ-೨|
ಪದುಮನಾಭನ ಕೃಪೆಯ | ಪಡೆದ ದಾಸರಿಗೆಽಽ ||೩||

ಫಣಿಸರಿವೆ-ಯಾಗುವದು | ದಣಿವಾಗುತಿಹ ಮಾರ್ಗ |
ಕ್ಷಣದೊಳಗೆ ಪೋದಂತೆ |ಕಾಣಿಸುವದು ||
ಘನಪಾಶಾಣಗಳು | ತೃಣಸಮವು-ಯನಿಸುವವು-೨|
ವನಜನಾಭನ ಕೃಪೆಯ | ಪಡೆದ ದಾಸರಿಗೆಽಽಽ ||೪||

ಭಾರವು ಭಯಗಳುಽಽಽ | ಬಂದರು ನಿಲ್ಲವೂ -೨|
ಹಾರೀ ಹೋಗುವವು ದಶ ದಿಕ್ಕುಗಳಿಗೆ ||
ಘೋರ ದುರಿತಾರಿ **ಶ್ರೀ | ವಿಜಯವಿಠಲ**ನಂಘ್ರೀ-೨|
ಸೇರಿದಾ ಮನುಜರಿಗೆ | ನರಕ ಭಯ ಉಂಟೇಽಽ

**191) ತಾತ್ತತ ಧಿಮಿತ**

ತಾತ್ತತ ಧಿಮಿತ | ತಾತ್ತ ಧಿಮಿತ | ತತ್ತತತ ಧಿಮಿತ |
ಧಿಮಿಕಿಯೆನುತ ಹರಿಆಽಽಡಿದನೆ | ಹರಿಆಽಽಡಿದನೆ ||ಪ||
ಚಿತ್ತಜ ಪಿತನುತ್ತಮ ಮುತ್ತಿನ |
ಗೋತ್ತುಗಳ್ ಕುತ್ತಿಗೆಯೊಳ್ ಎತ್ತ್ಯಾಡುತ ಹರಿಯೆ ||ಅಪ||

ಹಾರ ಪದಕ ಕೇಯೂರ ಕಿರೀಽಟವು |
ವೀರ ಬಹುಳಿಯೊಳು | ಧೀರ ಹೊಳೇಯುತಿರೆ-೨||
ಮಾರ ಜನಕ ಸುಕುಮಾರ ಸಾರಗುಣಽಽಽ -೨|
ಸಾಂದ್ರಮಹಿಮಾ ಹರಿಯೇ ||೧||

ಮಂದಗಮನೆಯರು ಸಾನಿ ಧನಿ ಗಮ ಗಸಾ-೨(ಆ)|
ವೃಂದ ವೃಂದದಲಿ ಚಂದವ ನೋಡುತಿರೆ |
ಆ ನಂದಗೋಪನ ಕಂದ ನೆನೆದು | ನಿತ್ಯಾನಂದ ಹರೀ ||೨||

ಕಂಕಣ ವಂಕಿಯು ಕಂಕಿಣಿ ರವಗಳು |
ಶಂಖ ಚಕ್ರ ದಿವ್ಯ ಪಂಕಜ ಮಾಲೆಗಳು-೨ ||
ಶಂಖದಳಾ **ಶ್ರೀ ಪುರಂದರ ವಿಠಲ ಽಽಽ-೨|**
ವೇದಾಂತ ವೇದ್ಯ ಶ್ರೀ ಕೃಷ್ಣಾ ||೩||

### 192) ಕಲ್ಲಿನಿಂದ ಸರ್ವಫಲ

ಕಲ್ಲಿನಿಂದ ಸರ್ವಫಲ ಬಾಹುದೋ ||ಪ||
ಕಲ್ಲು ಭಜಿಸದರೆ ಕೈವಲ್ಯ ತೋರುವದು ||ಅಪ||

ಕಲ್ಲು ಕಡೆಯಿತ್ತಿರಲು ಅಮೃತವೆ ಪುಟ್ಟಿತೋ |
ಕಲ್ಲು ಎತ್ತಲು ಮಳೆಯೋಳ್ ಎಲ್ಲಾರು ಉಳಿದರೊ -೨||
ಕಲ್ಲು ಹರಿಪಾದವನು ಸೋಽಕಿ ಹೆಣ್ಣಾಯ್ತು-೨|
ಕಲ್ಲು ಲಂಕೆಗೆ ಮಾರ್ಗ ಚನ್ನಾಗಿ ಶೋಭಿಸಿತು ||೧||

ಕಲ್ಲಿನೊಳಗೆ ದೇವ ಒಡಮುಡಿ ಕಾಣಿಸುವ |
ಕಲ್ಲು ಕೊರೆಯಲು ಮುರ್ತಿ ಮುಂತಾವುದೊ-೨||
ಕಲ್ಲು ದೇವರ ಗುಡಿಗೆ ಗರುಡಗಂಭವೆ-ಆಯಿತೋ-೨|
ಕಲ್ಲು ಕೋಟ್ಯನು ಕೋಟಿಗೆಲ್ಲ ಬೆಲೆಽಆಯಿತೋ ||೨||

ಕಲ್ಲೆಂದು ಪೆಕ್ಷಿಸದೆ ಕಾಲ ಕಾಲದಿ ನಿಮ್ಮ ।
ಕಲ್ಲು ಮನಸನು ಬಿಟ್ಟು ಪೂಜೆ ಮಾಽಡಿ-೨॥
ಕಲ್ಲಿನೋಳಗಿದ್ದ ಸಿರಿ **ವಿಜಯವಿಠಲ** ಒಳ್ಳೆ-೨।
ಕಲ್ಲು ಪದವಿಯ ಕೊಟ್ಟು ಸತತ ಪಾಲಿಪನೊ॥೩॥

**193) ಬಿಡುಮನ ಭವಾಖ್ಯ**

ಬಿಡುಮನ ಭವಾಖ್ಯ ಉರಗದ ಸಂಗ ॥ಪ॥
ತಿಳಿ ನೀ ಮಡಿದು ಪೊಪುದು ಈ ಅಂಗ ॥ಅಪ॥

ಅಚ್ಯುತ ನಾಮವ ಉಚ್ಚರಿಽಸಿದವನ-೨ ।
ಕಚ್ಚದೇಽ ಬಿಡದೀ ಭುಜಂಗ -೩॥೧॥

ವಿಷಮಯ ವಿಷಯಕೆ ವಶನಾಗದೆ ನೀ -೨।
ವಸುಧೆಯೊಳು ನೀ ಸಂಘ -೩॥೨॥
ಸಿರಿ **ಗೋವಿಂದ ವಿಠಲನ** ಸ್ಮರೀಸೆ ನೀ -೨।
ಹರಿ ಪೊರೆವ ತ್ವರದಿ ದಯಪಾಂಗ -೩॥೩॥

**194) ಗೋವಿಂದ ಹರಿ ಗೋವಿಂದ**

ಗೋವಿಂದ ಹರಿ ಗೋವಿಂದ ॥ಪ॥
ಕೇಶವ ಕೃಷ್ಣ ಜನರ್ಧಾನ ॥ಅಪ॥

ಮತ್ಸ್ಯಾವತಾರದೊಳ್ ಆಡಿದನೆ ।
ಮಂದರಾಚಲ ಬೆನ್ನೆಳು ತಾಳಿದನೇ-೨ ॥

ಅಚ್ಚ ಸುಕರನಾಗಿ ಬಾಳಿದನೆ-೨।
ಮದಹೆಚ್ಚೆ ಹಿರ್ಯ್ಯಣ್ಣಕನ ಸಿಳಿದನೆ-೨॥೧॥

ಕುಂಭೀಣಿ ದಾನವನು ಬೇಡಿದನೆ।
ಛಾತ್ರರೆಂಬುವರನು ಹತ ಮಾಡಿದನೆ -೨॥
ಅಂಭುದಿಗೆ ಶರ ಹೂಡಿದನೆ-೨।
ಕಮಲಾಂಬಕ ಗೊಲ್ಲರೊಳ್ ಆಡಿದನೆ-೨॥೨॥

ವಸುದೇವನೂದರದಿ ಪುಟ್ಟಿದನೆ।
ಫಲ್ ಮಸೆವದನುಜರ ಒಡೆಗ್ ಹುಟ್ಟಿದನೆ -೨॥
ಯೆಸೆವ ಕಾಳಿಂಗನ ಮೆಟ್ಟಿದನೆ -೨।
ಭಾಽದಿಸುವರ ಯಮಪುರ ಕಟ್ಟಿದ್ದನೆ -೨॥೩॥

ಪೂತನಿಯ ಮೈಯ ಸೊಕಿದನೆ।
ಮಹಾಘಾತಕ ಮೊಲೆಯುಂಡು ತೇಗಿದನೆ -೨॥
ಘಾತಕಿಯ್ಽನ್ನತ್ತ ನೂಕಿದನೆ-೨।
ಗೋಪವ್ರಾತ ಗೋವ್ಗಳನೆಲ್ಲ ಸಾಕಿದನೆ -೨॥೪॥

ಸಾಧಿಸಿ ತ್ರಿಪೂರರ ಗೆಲಿದವನೆ।
ಬ್ಲೆಚರ। ಭೇದಿಸಿ ಹಯವೇರಿ ಮೆರೆದವನೆ -೨॥
ಸಾಧಿಸಿ ಸಕಲವ ತಿಳಿದವನೆ-೨।
ಬಾಡದ **ಆದಿಕೇಶವ** ಭಕ್ತಿಗೊಲಿದವನೆ-೨॥೫॥

## 195) ಹ್ಯಾಂಗೆ ಮಾಡಲಯ್ಯ ಕೃಷ್ಣಾ

ಹ್ಯಾಂಗೆ ಮಾಡಲಯ್ಯ ಕೃಷ್ಣಾ ಪೋಗುತಿದೆ ಆಯುಷ್ಯ ||ಪ||
ಮಂಗಳಾಂಗ ಭವ ಬಂಧನ ಬಿಡಿಸಿ |
ನಿನ್ನ ಡಿಂಗರಿಗನ ಮಾಡೋ | ಅನಂಗ ಜನಕ ||ಅಪ||

ಏಸು ಜನುಮದ ಸುಕೃತದ ಫಲವೋ ತಾನು ಜನಿಸಲಾಗಿ- |
ಭೂಸುರ ದೇಹದ ಜನುಮವು ಎನಗೆ ಸಂಭವಿಸಿದೆಯಾಗಿ-೨||
ಮೋದತೀರ್ಥಮತ ಚಿನ್ಹಿತನಾಗದೆ ದೋಷಕೆ ಒಳಗಾಗಿ |
ಲೇಶ ಸಾಧನವ ಕಾಣದೆ ದುಃಸಹವಾಸದಿಂದಲೆ ದಿನದಿನ ಕಳೆದೆ ||೧||

ಶಶಿಮುಖಿ ಕನಕದ ಆಸೆಗೆ ಬೆರೆತು ವಸುಪತಿ ನಿನ್ನಡಿಯ |
ಹಸನಾಗಿ ನಿನ್ನ ನೆನೆಯದೆ ಕೃಪೆಯ ಗಳಿಸದೆ ಕೆಟ್ಟೆನಯ್ಯ ||
ನಿಶಿಹಗಲು ಸ್ಥಿರವೆಂದು ತನುಮನು ಪೋಷಿಸಲಾಶಿಸಿ ಜೀಯ |
ಉಸಿರಿದೆನೆಲವೋ ಸರ್ವಕಾಲ
ನಿನ್ನೋಡೆತನವೆಂಬುವ ಬಗೆಯನು ಅರಿಯದೆ ||೨||

ನೆರೆನಂಬಿದ ಪಾವಟಿಗಳು ಎಲ್ಲ ಸರಿದು ಹೋದವಲ್ಲ |
ಮರಳಿ ಈ ಪರಿ ಜನುಮವು ಬರುವ ಭರವಸೆಯಂತೂ ಇಲ್ಲ ||
ಪರಿಪರಿ ವಿಷಯದ ಆಸೆಯು ಎನಗೆ ಹಿರಿದು ಆಯಿತಲ್ಲ |
ಹರಿಯೇ ಜಗದಿ ನೀನೊಬ್ಬನಲ್ಲದೇ ಪೊರೆವರಿನ್ನಾರು ಇಲ್ಲವಲ್ಲ ||೩||

ಅವನಿಯೊಳಗೆ ಪುಣ್ಯಕ್ಷೇತ್ರಚರಿಸುವ ಹವಣಿಕೆ ಎನಗಿಲ್ಲ |
ಪವನಾತ್ಮಕ ಗುರು ಮಧ್ವಶಾಸ್ತ್ರದ ಪ್ರವಚನ ಕೇಳಲಿಲ್ಲ ||

ತವಕದಿಂದ ಗುರುಹಿರಿಯರ ಸೇವಿಸಿ ಅವರ ಒಲಿಸಲಿಲ್ಲ ।
ರವಿನಂದನ ಕೇಳಿದರುತ್ತರಕೊಡೆ ವಿವರ ಸರಕು ಒಂದಾದರಿಲ್ಲ ॥೪॥

ಭಾಗವತರೊಡಗೂಡಿ ಉಪವಾಸ ಜಾಗರ ಒಂದಿನ ಮಾಡಲಿಲ್ಲ ।
ರಾಗದಿ ಶುಕಮುನಿ ಪೇಳ್ದ ಹರಿಕಥೆ ಸಂಯೋಗವೆಂಬುದಿಲ್ಲ ॥
ನೀಗುವಂಥ ಭವಭಯವ ಭಕುತಿ ವೈರಾಗ್ಯವೆಂಬುದಿಲ್ಲ ।
ಯೋಗಿವಂದ್ಯ **ಗೋಪಾಲವಿಠ್ಠಲ** ತಲೆಬಾಗಿ ನಿನ್ನನೇ ಬೇಡಿಕೊಂಬೆ॥೫॥

**196) ಗೋಪಿ ಕೆಳ್ ನಿನ್ನ ಮಗ**

ಗೋಪಿ ಕೆಳ್ ನಿನ್ನ ಮಗ ಜಾರ । ಇವ ಚೋರ ಸುಕುಮಾರ ॥ಪ॥
ಮುದದಿ ಮುಕುಂದ ಸದನಕ್ಕೆ ಬಂದ । ದಧಿಯ ಮೀಸಲು ಬೆಣ್ಣೆಯ
ತಿಂದ । ನಿನ್ನ ಕಂದ । ಆನಂದ ॥ಅಪ॥

ಮಾರನ ಪಿತ ತಾ ಮನೆಯೊಳು ಪೊಕ್ಕ ।
ಹಿಡಿಯ ಹೋದರೆ ಅವ ಸಿಕ್ಕ । ನೋಡಿ ನಕ್ಕ । ಭಾರಿ ಠಕ್ಕ ॥೧॥

ಹರೆಯದ ಪೋರಿ ಜರದ ಕಂಗೋರಿ ।
ಭರದಿಂದ ಸೀರೆಯ ಸೆಳೆದ । ಕರವ ಪಿಡಿದ । ಮಾನ ಕಳೆದ ॥೨॥

ಬಹಳ ದಿನವಾಯ್ತು ಹೇಳುವುಧ್ಯಾಂಗ ।
ಮಹಿಪಾಲನ ಮನಸೊಮ್ಮೆ ಹಾಂಗೆ । ಒಮ್ಮೆ ಹೀಂಗೆ ।
ಹೇಳುವುಧ್ಯಾಂಗೆ ॥೩॥

ರಾಧೆಯ ಮನದ ಮೋದ ಮುಕುಂದ ।

ಶ್ರೀದವಿಠ್ಠಲನಾಟ ಚೆಂದ । ನಯನಾನಂದ । ಆನಂದ ॥೪॥

## 197) ದಯಮಾಽಡೋ ಹರೀಯೆ

ದಯಮಾಽಡೋ ಹರೀಯೆ ದಯಮಾಡೋ ॥ಪ॥

ದಯಮಾಡ ಹರೀಯೆ ಅಭಯ ಕೊಡುಯಂದು -೨।

ಪರಿಪರಿಯಿಂದ ನಿನ್ನ ಬೇಡಿಕೊಂಬೆ ॥ಅಪ॥

ನಾರಸಿಂಹನೆ ನಿನ್ನ ಮೊರೆಗಂಜುವನಲ್ಲ ।

ಕ್ರೂರವಾದ ನಿನ್ನ ಕೋರೆಗಂಜುವನಲ್ಲ -೨॥

ಶ್ರೀರಮಣನೆ ಸಂಸಾರ ಚಕ್ರ-2।

ಕ್ಷುರಧಾರೆಗಂಜುವೆನು ಪಾರುಮಾಡೋ ॥೧॥

ಹುಂಕೃತಿ ನಿನ್ನ ಭಯಂಕರ ರೂಪಕೆ ।

ಶಂಕಿತನಾಗಿ ಭಯಾಂಕಿತನಲ್ಲವೋ -೨॥

ನಾರಸಿಂಹನೆ ನಿನ್ನ ಹುಂಕೃತಿಯಿಂದಲಿ -೨।

ಶಂಕಿತನಾದೆನೋ ಹೇ ದಯಾನಿಧೆ ॥೨॥

ಹೃದಯ ಭೇದಿಸುವ ಶಡುವಿಧ ವೈರಿಯು ।

ಎದುರಿಗೆ ಬೀಳದೆ ಕದನ ಮಾಡುವುವಯ್ಯಾ -೨॥

ಎದೆ ಬಡಿದಂಜಿನಾ ಗದಗದ ನಡುಗುವೆ-೨।

ಒದಗಿದೆ ಗನೆ ಬಂದು ಬದಿಯಲ್ಲಿ ಕೂಡು ॥೩॥

ಹಿರಿಯರದಯದಿಂದ ಮೆರೆವ ಮಕ್ಕಳು ಮಾಳ್ಪ ।

ಪರಮಪರಾಧವ ಸ್ಮರಿಸುವರೇನವರು -೨॥
ಧರೇಯೊಳಗೆಲ್ಲರಿಗೆ ಹಿರಿಯನ ನಾ ನಿನ್ನ -೨।
ಮರೆತರು ನೀ ಎನ್ನ ಮರೆಯಬೇಡವೊ ॥೪॥

ಸ್ಮರಣೇ ಇಲ್ಲದೆ ಸ್ಮರಿಸಿ ವಿಷಯಂಗಳ ।
ಮರಗುವೆ ಮನದೊಳಗೆ **ಅನಂತಾದ್ರೀ-೨॥**
ದೊರೆಯ ಎಂದೆಂದಿಗು ಮರೆಯದಂತ ವರ-2 ।
ತ್ವರಿತದಿ ನೀಡೋ ನಾರಸಿಂಹನೆ ॥೫॥

**198) ಶ್ರೀನಿವಾಸಾ ನೀನೇ**

ಶ್ರೀನಿವಾಸಾ ನೀನೇ ಪಾಲಿಸೋ ಶ್ರಿತಜನಪಾಲಾ ।
ಗಾನಲೋಲ ಶ್ರೀಮುಕುಂದನೆ ॥ಪ॥
ಧ್ಯಾನ ಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಪ। ವೇಣುಗೋಪಾಲ
ಗೋವಿಂದ ವೇದವೇದ್ಯ ನಿತ್ಯಾನಂದ ॥ಅಪ॥

ಎಷ್ಟುದಿನ ಕಷ್ಟಪಡುವದೋ ।
ಯಶೋದೆ ಕಂದ ದೃಷ್ಟಿಯಿಂದ ನೋಡಲಾಗದೆ-೨ ॥
ಮುಟ್ಟಿನಿನ್ನ ಭಜಿಸಲಾರೆ ಕೆಟ್ಟ ನರ ಜನ್ಮದೊಳು-೨।
ದುಷ್ಟ ಕಾರ್ಯ ಮಾಡಿದಾಗೂ ಇಷ್ಟನಾಗಿ ಕೈಯ ಪಿಡಿದು ॥೧॥

ಎಂದಿಗೆ ನಿನ್ನ ಪಾದಾಬ್ಜವ । ಪೊಂದುವ ಸುಖ ಎಂದಿಗೆ ಲಭ್ಯವೋ
ಮಾಧವ -೨॥ ಅಂಧಕಽಽರಣ್ಯದಲ್ಲಿ ನಿಂದು ತತ್ತರಿಸುತಿಹೆನೋ -೨।
ಅಂದದ ಭವಾಬ್ಧಿಯಲ್ಲಿ ಮಿಂದು ನೊಂದೆನೊ ಮುಕುಂದನೆ ॥೨॥

ಅನುದಿನ ಅನೇಕ ರೋಗಗಳ । ಅನುಭವಿಸಿದೆನೋ ಘನ್ನಮಹಿಮ
ನೀನೇ ಕೇಳಯ್ಯ -೨॥ ತನುವಿನಲ್ಲಿ ಬಲವಿಲ್ಲ ನೆನೆದ ಮಾತ್ರ
ಸಲಹುವ। ಹನುಮಧೀಶ **ಪುರಂದರ ವಿಠ್ಠಲನೆ** ನೀ ಕೈಯ ಪಿಡಿದು ॥೩॥

**199) ಕಾಯೋ ಕಾವೇರಿ ರಂಗ**

ಕಾಯೋ ಕಾವೇರಿ ರಂಗ ಕಾರುಣ್ಯಪಾಂಗಾ ॥ಪ॥
ಕಾಯೋ ಕಾಯೋ ಕಾವೇರಿ ನಿಲಯನೆ ಕಾಯೋ ವಾಙ್ಮನ
ಪೂರ್ಣಜರಿದು। ತೋಯಜಾಂಘ್ರಿಯ ನಂಬಿದೆನೊ ಭವ
ಮಾಯಗೆಲುವ ಉಪಾಯ ತೋರಿ ॥ಅಪ॥

ದೇವಾಧಿದೇವ ನೀನು ಪ್ರಣತ ಜನರಿಗೆ । ದೇವತರುಮಣಿಧೇನು ।
ಎಂದರಿತು ನಿಷ್ಠಿಲಿ ಧಾವಿಸಿ ಬಂದೆ ನಾನು । ರಘುವಂಶ ಭಾನು ॥
ಕಾವನಯ್ಯ ನೀನೊಲಿದು ಕರುಣದಿ ಪಾವಮಾನಿಯ ಶಾಸ್ತ್ರವರಿತು ।
ಭಾವಭಕುತಿಲಿ ನಿನ್ನ ಪಾಡುವಕೋವಿದರ ಸೇವಕನ ಮಾಡಿ ॥೧॥

ಪನ್ನಂಗಪತಿ ಶಯನ ಶಿರಬಾಗಿ ಪ್ರರ್ಥಿಪೆ ಪನ್ನಂಗರಿಪುವಾಹನ ।
ಎನ್ನಪರಾಧವ ಮನ್ನಿಸೋ ಹಯವದನ । ವೈಕುಂಠಸದನ ॥
ನಿನ್ನನುಗ್ರಹ ಪೂರ್ಣಪಡೆದು ಧನ್ಯರೆನಿಸಿದ ಮಾನ್ಯ ಮಾನವಿ ।
ಘನ್ನ ಗುರುಜಗನ್ನಾಥದಾಸರ ಸನ್ನಿಧಾನದಿ ಬಂದೆ ಪ್ರಭುವೇ ॥೨॥

ನೇಸರ ಕುಲ ಜಾತ ವೇದೋಕ್ತ ಕ್ರಮದಿಂ ಭೂಸುರ ಕರಪೂಜಿತ ।
ಕೌಶಿಕನ ಯಜ್ಞವ ಪೋಷಕ ಪವನಪಿತ । ಪಾವನ್ನ ಚರಿತ ॥

ವಾಸುದೇವಾನಂತ ಮಹಿಮನೆ ವಿಭೀಷಣ ಪ್ರಿಯ ದೋಷ ಕಳೆಯುವ ।
ಭೇಶ ಪುಷ್ಕರಣೀಶ ಕೇಶವ ದಾಶರಥಿ ಶ್ರೀ **ಶ್ಯಾಮಸುಂದರ** ॥೩॥

## 200) ಸಾಧನಕೆ ಬಗೆಗಾಣೆ

ಸಾಧನಕೆ ಬಗೆಗಾಣೆ ಎನ್ನಬಹುದೇ । ಸಾದರದಿ ಗುರುಕರುಣೆ-೨ ।
ತಾ ಪಡೆದ ಬಳಿಕ ॥ಪ॥

ಕಂಡಕಂಡದೆಲ್ಲ ಕಮಲನಾಭನ ಮೂರ್ತಿ ।
ಉಂಡು ಉಟ್ಟಿದ್ದೆಲ್ಲ ವಿಷ್ಣುಪೂಜೆ -೨॥
ತಂಡತಂಡದ ವಾರ್ತೆ ಕಮಲನಾಭನ ಕೀರ್ತಿ ।
ಹಿಂಡು ದೈವಗಳೆಲ್ಲ ಹರಿಯ ನಾಮ ॥೧॥

ವಾಗತ್ಯಪಡುವದೇ ವಿಧಿ ನಿಷೇಧಾಚರಣೆ ।
ರೋಗಾನುಭವವೆಲ್ಲ ಉಗ್ರತಪವು -೨॥
ಆಗದವರಾಡಿಕೊಂಬುವುದೇ ಆಶೀರ್ವಾದ ।
ಬೀಗರುಪಚಾರವೇ ಭೂತದಯವು ॥೨॥

ಮೈಮರೆತು ಮಲಗುವುದೆ ಧರಣಿಗೆ ನಮಸ್ಕಾರ-೨।
ಕೈಮೀರಿ ಹೋದದ್ದೆ ಕೃಷ್ಣಾರ್ಪಣ-೨॥
ಮೈಮನೋವೃತ್ತಿಗಳೆ ವಿಷಯದಲಿ ವೈರಾಗ್ಯ ।
ಹೊಯ್ಮಾಲಿತನವೆಲ್ಲ ಹರಿಯ ವಿಹಾರ ॥೩॥

ಹಿಡಿದ ಹಠ ಪೂರೈಸಲದು ಹರಿಯ ಸಂಕಲ್ಪ ।

ನಡೆದಾಡುವೋದೆಲ್ಲ ತೀರ್ಥಯಾತ್ರೆ -೨॥
ಬಡತನವು ಬರಲದೇ ಭಗವದ್ ಭಜನೆಯ ಯೋಗ ।
ಸಡಗರದಲ್ಲಿಪ್ಪುದೇ ಶ್ರೀಶನಾಜ್ಞೆ ॥೪॥

ಬುದ್ಧಿಸಾಲದೇ ಸುಮ್ಮನಿರುವುದೇ ಸಮ್ಮತವು ।
ಯದೃಚ್ಛಾ ಲಾಭವೇ ಸುಖವು ಎನಲು-೨॥
ಮಧ್ವಾಂತರ್ಗತ ಶ್ರೀ **ವಿಜಯವಿಠ್ಠಲರೇ**ಯ ।
ಹೃದ್ಗತಾಽರ್ಥವ ತಿಳಿದು ಒಪ್ಪಿಕೊಳ್ಳನೆ ॥೫॥

**201) ರಾಮ ನಾಮ ಎಂಬೆರಡಕ್ಷರ**

ರಾಮ ನಾಮ ಎಂಬೆರಡಕ್ಷರ ಪ್ರೇಮದಿ ಸಲಹಿತು ಸುಜನರನು ॥ಪ॥
ಹಾಲಾಹಲವನ್ನೇ ಪಾನವ ಮಾಡಿದ । ನೀಲಕಂಠನೇ ಬಲ್ಲವನು ।
ಆಲಾಪಿಸುತ ಶಿಲೆಯಾಗಿದ್ದ -೨। ಬಾಲೆ ಅಹಲ್ಯೆಯ ಕೇಳೇನು-೨॥೧॥

ಅಂಜಿಕೆ ಇಲ್ಲದೆ ಗಿರಿ ಹಾರಿದ ಕಪಿ । ಕುಂಜರ ರವಿಸುತ ಬಲ್ಲವನು ।
ಎಂಜಲ ಫಲಗಳ ಹರಿಗೆರ್ಪಿಸಿದ-೨।ಕುಂಜಲೋಚನೆಯ ಕೇಳೇನು॥೨॥

ಕಾಲವರಿತು ಸೇವೆಯ ಮಾಡಿದ । ಲೋಲ ಲಕ್ಷ್ಮಣನೇ ಬಲ್ಲವನು ।
ಲೋಲ ಶ್ರೀ **ವಿಜಯ ವಿಠಲ** ರಾಯನ। ಲೀಲೆಯ ಶರಧಿಯ ಕೇಳೇನು3।

**202) ಶ್ರೀ ರಾಮ ರಾಮ**

ಶ್ರೀ ರಾಮ ರಾಮ ಜಯರಾಮ । ಜಯರಾಮ ರಘುರಾಮ ॥ಪ॥

ರಾಮ ರಾಮ ರಘುನಂದನ ತೋಷಣ| ಅಮಿಷ ಪದಾಂಬುಜ
ಪಾವನಾ-೨ || ನಾಮ ವಿಮಲ ಕಮಲಾಯತಲೋಚನ-೨ |
ಭೂಮಿಜಾ ರಮಣ ಸದಾಽಶುಭ ಮಹಿಮನೆ ||೧||

ದಂಡ ಕುಖಹ ಹರವಂದಿತ ಸುಜಟಾ |
ವಂದಿತಮೌಳಿ ಮುನೀಂಽಽದ್ರ ಕರಾರ್ಚಿತ-೨ ||
ಚಂದ್ರಕುಳೇಶಾ ಖಽಳ ನಿಶಾಚಲ-೨ |
ದಂಡಿನವರದ ಕೋದಂಡ ವಿಹಾರಿ ||೨||

ವಾರಿದ ಶ್ಯಾಮ ದಯಾಂಬುಧಿ ಭಕ್ತ |
ಸಮೀರಜ ಸೇವ್ಯ ವಿಭೀಷಣ ವರದಾ-೨ ||
ಸುಸ್ಮಿರ ವದನ ಸಾಮ್ರಾಜ್ಯ ಪಾರಾಯಣ-೨ |
ಭೂರಿ **ಪ್ರಸನ್ವೇಂಕಟ ಕೃಷ್ಣನೆ** ನಮೋ ||೩||

**203) ರಾಮ ನಾಮವ ನುಡಿ ನುಡಿ**

ರಾಮ ನಾಮವ ನುಡಿ ನುಡಿ | ಕಾಮ ಕ್ರೋಧಗಳ ಬಿಡಿ ಬಿಡಿ ||ಪ||

ಗುರುಗಳ ಚರಣವ ಹಿಡಿ ಹಿಡಿ | ಹರಿ ನಿರ್ಮಾಲ್ಯವ ಮುಡಿ ಮುಡಿ ||
ಪರಮಾತ್ಮ ರಸ ಕುಡಿ ಕುಡಿ೨| ಬಂದ ದುರಿತಗಳೆಲ್ಲ ಹೊಡಿ ಹೊಡಿ೧||

ಸಜ್ಜನ ಸಂಗವ ಮಾಡೋ ಮಾಡೋ | ದುರ್ಜನ ಸಂಗವ ಬಿಡೋ
ಬಿಡೋ-೨||ಅರ್ಜುನ ಸಾರಥಿಯ ನೋಡೋ ನೋಡೋ -೨ | ಹರಿ
ಭಜನೆಯಲಿ ಮನ ಇಡೋ ಇಡೋ ||೨||

ಕರಿರಾಜ ವರದನ ಸಾರೋ ಸಾರೋ । ಶ್ರಮಪರಿಹರಿಸೆಂದು
ಹೊರೋ ಹೊರೋ -೨॥ ವರದ ಭೀಮೇಶನ ದೂರದಿರೋ -೨ ।
ನಮ್ಮ ಪುರಂದರವಿಠಲನ ಸೇರೋ ಸೇರೋ ॥೩॥

**203)(a) ಧನು ಮುರಿದ ಶ್ರೀ ರಾಮ**

ಧನು ಮುರಿದ ಶ್ರೀ ರಾಮ । ಶೌರ್ಯವನೇ ತಾ ತೋರಿ ॥ಪ॥
ಜನಕನಾ ಸಭೆಯಲ್ಲಿ ಜಾನಕಿಯ ಮನಸೆಳೆದು ॥ಅಪ॥

ವಸುಧೀಶರೆಲ್ಲರು ಹಸಗೆಟ್ಟು ಕುಳಿತಿರಲು -೨।
ದಶಕಂಠ ಧನುವೆತ್ತಿ ಬಸವಳಿದು ಬಿದ್ದ ॥
ಪಸರಿಸಿತು ಹಾಸ್ಯ ಧ್ವನಿ ನೆರೆದ ಸಭೆಯೊಳಗೆಲ್ಲ ।
ನಸುನಕ್ಕು ವಿಶ್ವಾಮಿತ್ರ ರಾಮನೆಬ್ಬಿಸಿದ ॥೧॥

ಶ್ಯಾಮಸುಂದರನೆದ್ದು ಪ್ರೇಮದಿಂದ ಮುನಿಗೆರಿಗಿ-೨।
ಆ ಮಹಾ ಧನುವಿದ್ದ ಸ್ಥಳಕೆ ತಾ ಬಂದ ॥
ಕೋಮಲ ಕರಗಳಿಂದ ಧನುವೆತ್ತಿ ತಾ ಪಿಡಿದ ।
ಸಾಮರ್ಥ್ಯದಿಂದೆಳೆದ ಧನು ಮುರಿದು ಎರಡಾಯ್ತು ॥೨॥

ಜಯವಾಯ್ತು ರಾಮಗೆಂದು ಜಯಬೇರಿ ಮೊಳಗಲು-೨।
ಜಯ ಜಯ ಜಯವೆಂದು ಸುರರು ಹೂವ ಮಳೆಗೆರೆದು ॥
ಜಯಮಾಲೆ ಹಾಕಿದಳು ಜಾನಕಿಯು ಓಡಿ ಬಂದು-೨।
ಜಯ ಪಡೆದು ನಿಂತಿಹ **ಪುರಂದರ ವಿಠ್ಠಲ** ॥೩॥

## 204) ಹರಿಗೆರಗದ ತಲೆ

ಹರಿಗೆರಗದ ತಲೆ | ಹಾವಿನ ವಿಶ ತಲೆ | ದುರ್ಯೋಧನ ತಲೆ
ದುರ್ಜನರಾ ತಲೆ | ವಿಧವೆಯ ಬೈತಲೆಯೋ ऽऽ ರಂಗಯ್ಯ || ಪಲ್ಲ ||
ಹರಿ ಹರಿ ಗೋವಿಂದ ರಂಗಯ್ಯ - ||2|| (ಅ.ಪ)

ಅಚ್ಯುತ ಕಥೆಗಳ ಕೇಳದ ಕಿವಿಗಳು | ಬಚ್ಚಲಲಿರುವೋ ಮಚ್ಚದ
ಕಿವಿಗಳು -2 |ತುಚ್ಚ ವಾರ್ತೆಯಾ ಕೇಳುವ ಕಿವಿಗಳು |
ಬಚ್ಚಲ ಗುಣಿಗಳೋ ऽऽ ರಂಗಯ್ಯ |
ಹರಿ ಹರಿ ಗೋವಿಂದ ರಂಗಯ್ಯ -2 ||1||
ಹರಿ ಮೂರ್ತಿಯನೇ ನೋಡದ ಕಣ್ಣು | ಕೆಲಸಕೆ ಬಾರದ ಹೊಲಸಿನ
ಕಣ್ಣು -2 |ಬಾರಿ ಬಾರಿಗೂ ಬೀಳುವ ಮಣ್ಣು |
ನವಿಲಿನ ಗರಿ ಕಣ್ಣು ऽऽ ರಂಗಯ್ಯ | ಹರಿ ಹರಿ ಗೋವಿಂದ ರಂಗಯ್ಯ|2|

ಹರಿ ನಿರ್ಮಾಲ್ಯವನೊಲ್ಲದ ಮೂಗು | ಉಳ್ಳಾ ಮೂಲಂಗಿ ತಿಂಬುವ
ತೇಗು - ||೨|| ನರಕಾಸುರನ ಅರದಾ ಮೂಗು |
ದಿಕ್ಕಿಲ್ಲದ ಕೂಗು ऽऽ ರಂಗಯ್ಯ | ಹರಿ ಹರಿ ಗೋವಿಂದ ರಂಗಯ್ಯ2||3||

ಹರಿನೈವೇದ್ಯವನೊಲ್ಲದ ಹೊಟ್ಟೆ |ಅಗಸರ ಮನೆಯ ಮೈಲಿಗೆ ಬಟ್ಟೆ -2
ಹರಿಯ ಬಿಟ್ಟರೆ ನೀ ಕೆಟ್ಟೆ | ನರಕದ ಆ ಮೊಟ್ಟೆ ऽऽ ರಂಗಯ್ಯ |
ಹರಿ ಹರಿ ಗೋವಿಂದ ರಂಗಯ್ಯ -2 ||4||

ಹರಿಯಾತ್ರೆಯನೆ ಮಾಡದ ಕಾಲು | ಗೋಪುರದೊಳಗಿನ ಗೊಂಬೆಯ
ಕಾಲು -2| ಎರಡು ಜೋಡು ನವಿಲಿನ ಕಾಲು |

ಶುನಕದ ಹಿಂಗಾಲು ऽऽ ರಂಗಯ್ಯ lಹರಿ ಹರಿ ಗೋವಿಂದ ರಂಗಯ್ಯ|5|

ಹರಿ ನೈವೇದ್ಯಕೆ ಅರವಿ ಸೊಪ್ಪು lಮಕ್ಕಳಿಗ್ಹಾಕುವ ಪಾಯಸ ತುಪ್ಪ -2
**ಪುರಂದರ ವಿಠಲನ** ಪಾಡುತಿರಪ್ಪ l ಬೇಡಿದ ವರಗಳ ಕೊಡುವ
ತಿಮ್ಮಪ್ಪ l ಹರಿ ಹರಿ ಗೋವಿಂದ ರಂಗಯ್ಯ -2 ||6||

**205) ಸದಾ ಎನ್ನ ಹೃದಯದಲ್ಲಿ**

ಸದಾ ಎನ್ನ ಹೃದಯದಲ್ಲಿ l ವಾಸ ಮಾಡೋ ಶ್ರೀಹರಿ || ಪ ||
ನಾದ ಮೂರ್ತಿ ನಿನ್ನ ಪಾದ l ಮೊದದಿಂದ ಭಜಿಸುವೆ ||ಅಪ||

ಜ್ಞಾನವೆಂಬ ನವರತ್ನದ l ಮಂಟಪದ ಮಧ್ಯದಲ್ಲಿ -೨ l
ವೇಣುಲೋಲನ ಕುಳ್ಳಿರಿಸಿ l ಧ್ಯಾನದಿಂದ ಭಜಿಸುವೆ ||೧||

ಭಕ್ತಿ ರಸವೆಂಬ ಮುತ್ತು l ಮಾಣಿಕ್ಯದ ಹರಿವಾಣದಿ -೨ l
ಮುಕ್ತನಾಗಬೇಕು ಎಂದು l ಮುತ್ತಿನಾರುತಿ ಎತ್ತುವೆ ||೨||

ನಿನ್ನ ನಾನು ಬಿಡುವನಲ್ಲ l ಎನ್ನ ನಿನು ಬಿಡಲು ಸಲ್ಲ -೨l
ಘನ್ನ ಮುರುತಿ **ವಿಜಯ ವಿಠಲ** l ಕೇಳೋ ನಿನ್ನ ಭಕ್ತರ ಸೊಲ್ಲ ||೩||

**206) ನಾನೇಕೆ ಬಡವನೋ**

ನಾನೇಕೆ ಬಡವನೋ ನಾನೇಕೆ ಪರದೇಶಿ l
ಶ್ರೀನಿಧಿ ಹರಿಯೆನಗೆ ನೀನುರುವತನಕ ||ಪ||

ಪುಟ್ಟಿಸಿದ ತಾಯ್ತಂದೆ ಇಷ್ಟಮಿತ್ರನು ನೀನೇ -೨l
ಅಷ್ಟ ಬಂಧು ಸರ್ವ ಬಳಗ ನೀನೇ ||

ಪೆಟ್ಟಿಗೆಯೊಳಗಿನ ಅಷ್ಟಾಭರಣ ನೀನೇ -೨ ।
ಶ್ರೇಷ್ಠಮೂರುತಿ ಕೃಷ್ಣ ನೀನಿರುವತನಕ ॥೧॥

ಒಡ ಹುಟ್ಟಿದವ ನೀನೇ । ಒಡಲಿಗ್ಹಾಕುವ ನೀನೇ -೨ ।
ಉಡಲು ಹೊದಿಯಲು ವಸ್ತ್ರ ಕೊಡುವವನು ನೀನೇ ॥
ಮಡದಿ ಮಕ್ಕಳನ್ನೆಲ್ಲ ಕಡೆಹಾಯ್ಸುವವ ನೀನೇ ।
ಬಿಡದೆ ಸಲಹುವ ಒಡೆಯ ನೀನಿರುವ ತನಕ ॥೨॥

ವಿದ್ಯೆ ಹೇಳುವ ನೀನೇ ಬುದ್ದಿ ಕಲಿಸುವ ನೀನೇ -೨ ।
ಉದ್ಧಾರ ಕರ್ತೃ ಮಮ ಸ್ವಾಮಿ ನೀನೇ ॥
ಕರ್ತೃ ಶ್ರೀಪುರಂದರವಿಠಲ ನಿನ್ನಡಿಮ್ಯಾಲೆ ।
ಬಿದ್ದುಕೊಂಡಿರುವ ಎನ-ಗೇತರ ಭಯವು ॥೩॥

**207) ಆವ ರೋಗವೊ ಎನಗೆ**

**ನಿನ್ನ ಎಂಜಲನುಂಡು । ನಿನ್ನ ಬೆಳ್ಳೊಡಿಉಟ್ಟು ।ಮುನ್ನ ಮಾಡಿದ ಕರ್ಮ ಬೆನ್ನು ಬಿಡದಿದ್ದರೆ ।ನಿನ್ನ ಓಲ್ಯೆಸಲೆ-ಬೇಕೋ ಕೃಷ್ಣ । ದಿನಕರನುದಿಸಿ ಕತ್ತಲೆ ಪೋಗದಿದ್ದರೆ । ಹಗೆಲೇನಾ । ಇರುಳೇನಾ । ಕುರಡನೀಗೆ ।ಶ್ರೀ ಕೃಷ್ಣ । ಶ್ರೀ ಕೃಷ್ಣ । ಶ್ರೀ ಕೃಷ್ಣ**

ಆವ ರೋಗವೊ ಎನಗೆ ದೇವಧನ್ವಂತ್ರಿ ॥ಪ॥
ಸಾವಧಾನದಿ ಎನ್ನ ಕೈಪಿಡಿದು ನೋಡಯ್ಯ ॥ಅಪ॥

ಹರಿ ಮೂರ್ತಿಗಳು ಎನ್ನ ಕಂಗಳಿಗೆ ಕಾಣಿಸವು ।

ಹರಿಯ ಕೀರ್ತನೆಯು ಕೇಳಿಸದೋ ಕಿವಿಗೆ -೨॥

ಹರಿ ಮಂತ್ರ । ಸ್ತೋತ್ರ ಬಾರದು ಎನ್ನ ನಾಲಿಗೆಗೆ-೨ ।

ಹರಿ ಪ್ರಸಾದವೆಯನಗೆ ರುಚಿಯಾಗದಯ್ಯ -೨ ॥೧॥

ಹರಿಪಾದ ಸೇವೆಗೆನ್ನ ಹಸ್ತಗಳು ಚಲಿಸವು । ಗುರುಹಿರಿಯರಂಘ್ರಿಗೆ ಶಿರ ಬಾಗದೋ -೨ ॥ ಹರಿಯ ನಿರ್ಮಾಲ್ಯವಾಘ್ರಾಣಿಸದು ನಾಸಿಕವು । ಹರಿಯಾತ್ರೆಗಳಿಗೆನ್ನ ಕಾಲೇಳದಯ್ಯ -೨ ॥೨॥

ಅನಾಥಬಂಧು **ಗೋಪಾಲವಿಟ್ಠಲ**ರೇಯ -೨।

ಎನ್ನ ಭಾಗದ ವೈದ್ಯ ನೀನೆಯಾದೆ -೨॥

ಅನಾದಿ ಕಾಲದ ಭವರೋಗ ಕಳೆಯಯ್ಯ -೨।

ನಾನೆಂದಿಗು ಮರೆಯೆ ನೀ ಮಾಡಿದುಪಕಾರ -೨॥೩॥

## 208) ರಂಗ ಕೊಳಲನೂದಲಾಗಿ

ರಂಗ ಕೊಳಲನೂದಲಾಗಿ । ರಂಗಯ್ಯ ಕೊಳಲನೂದಲು ॥ಪ॥

ಮಂಗಳಮಯವಾಯಿತು ಧರೆಯ । ಜನಂಗಳು ಜೀವನ ಚೇತನ ಮರೆತು । ಶ್ರೀರಂಗ ಧ್ಯಾನಪರರಾದರು ॥ಅ.ಪ॥

ಬಾಡಿದ ಬಳ್ಳಿ ಮರಗೊನೆ ಒಡೆದು । ತೀಡುವ ಮಂದ ಮಾರುತನ ಕೂಡಿ -೨ । ತೂಗ್ಯಾಡುವ ವನದಿ ಗೊಂಚಲಗಳು । ಕಾಣಲೊಲ್ಲವು ಅಳಿ ಕುಲಗಳು ॥ ಹೇಡಿಗೊಂಡಾವು ಜಾಣಕ್ಕಿ ಗಿಳಿಯು ಮಾತಾಡದೆ । ಕಳೆಗುಂದಿದವು ಕೋಕಿಲೆ -೨। ಓಡಾಟ ವೈರಾಟ ಜರೆದು ಖಗಮೃಗ । ಗಾಢನಿದ್ರೆಗೆ ವಶವಾದರೊ ॥೧॥

ತೆಳಗಿನೋದಕ ಉಕ್ಕೇರಿ ಬಂದಾವು | ಮ್ಯಾಲೆ ಚೆಲ್ಲಾಡಿ ನಿಂತಳು ಯಮುನ -೨ | ಮೆಲೆ ಮಾಡೊಡ್ಡಿ ಮೇಘಾಳು ಭೋರಿಟ್ಟವು ಕಲ್ಲು ಕರಗಿ ನೀರಾದವು || ನಳಿನ ಚಂಪಕನಾಗ ಪುನ್ನಾಗ ಪಾಟಲ | ಶ್ಯಾವಂತಿಗೆ ಬಕುಲಾವು -೨ | ಮಾಲತಿ ಜಾಜಿಯ ಪರಿಮಳಂಗೂಡಿ | ನೀಲಾಂಗನಂಘ್ರಿಗೆ ಎರಗಿದವೊ ||೨||

ಕೆಚ್ಚಲ ಬಿಗಿದು ತೊರೆದು ಮೊಲೆಯ | ವತ್ಸ ವಡಲಾಸೆ ಜರೆದೆಳೆ ಹುಲ್ಲು -೨ | ಕಚಿ ಅಲ್ಲಲ್ಲಿಗೆ ನಿಂತಾವು ತೆಲೆಯಮೆಲೆ | ಪುಚ್ಚವನೆಗಹಿಸಿ ನೀಂಟಿಸಿ || ಅಚ್ಯುತನಂದದಿ ನೋಡಲು ಸುರರಿಗಚ್ಚರಿ | ಆಯಿತು ಅವು ಕಂಡಾನಂದ -೨ | ಮೆಚ್ಚಿಮುಕುಂದನ ಲೀಲಾ ವಿನೋದಕೆ | ಅಚ್ಚ ಕುಸಮವ ಸುರಿದರು ||೩||

ಮುದ್ದು ಮೋಹನನ ಮಧುರ ಸಂಗೀತವ | ಸದ್ದಲಾಲಿಸಿ ಗೋಪಾಂಗನೆರೆಲ್ಲರು -೨| ಬುದ್ಧಿ ಸೂರಾಡಿದ ರಂಗಽನ ಶರೆಗೆ ಬಿದ್ದು ಪರವಶರಾದರು || ಸಿದ್ಧ ಮುನಿಜನರು |
ಇದ್ದ ಸಮಾಧಿಯೊಳೆ-ದ್ದೆದ್ದು ಕುಣಿ ಕುಣಿದಾಡಿದರೊ -೨|
ಗದ್ದುಗೆ ಅರಸನ ವಲಿಸಿ ಕೊಂಡರು | ಗೆದ್ದರು ಭವ ಸಮುದ್ರವ ||೪||

ಶ್ರೀ ಮನೋಹರ ಗೋಪಾಲನು | ಆ ಮಧು ಕುಂಜರವನ ದತ್ರಿ ಬಂಗಿಲಿ -೨ | ಹೇಮಾಂಬರನುಟ್ಟು ಗೀರ್ಗಂದ ಕಸ್ತೂರಿ | ನಾಮ ಮುಖಟವು ಧರಿಸಿದನೋ || ಧಾಮ ವನಮಾಲಿ ರತುನಾಭರಣ |

ಸ್ವಾಮಿ ಪ್ರಸನ್ನ ವೆಂಕಟ ಕೃಷ್ಣನ -೨ I ನಾಮ ಪುಂಡಕ್ರಿಯ
ಮೇಘರಾಗವ ಮಾಡಿ I ಸಾಮಗಾಯನದಿ ನಮೋ ಎಂದರೋ ॥೫॥

### 209) ನಿನ್ನ ಒಲುಮೆಯಿಂದ

ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು I
ಮನ್ನಿಸುವರೋ ಮಹರಾಯ॥ಪ॥

ಎನ್ನ ಪುಣ್ಯಗಳಿಂದ ಈ ಪರಿ ಉಂಟೆನೋ I
ನಿನ್ನದೆ ಸಕಲ ಸಂಪತ್ತು ॥ಅಪ॥

ಜೀರ್ಣ ಮಲಿನ ವಸ್ತ್ರ I ಕಾಣದ ಮನುಜಗೆ I ಊರ್ಣ ವಿಚಿತ್ರ ವಸನಾ।
ವರ್ಣವರ್ಣದಿಂದ ಬಾಹೋದೇನೊ-೨॥
ಸಂಪೂರ್ಣ ಗುರ್ಣಾವ ದೇವಾ ॥೧॥

ಸಂಜೀತನಕ ಇದ್ದು ಸಣ್ಣ ಸೌಟಿನ ತುಂಬಾ I ಗಂಜೀ ಕಾಣದೆ
ಬಳಲಿದೆನೊ ॥ ವ್ಯಂಜನ ನಾನಾ ಸುಭಕ್ಷ್ಯ ಭೋಜ್ಯಂಗಳ-೨।
ಭುಂಜಿಸುವುದು ಮತ್ತೇನೋ ॥೨॥

ಒಬ್ಬ ಹೆಂಗಸಿಗೆ ಅನ್ನ ಹಾಕುವುದಕ್ಕೆ I ತಬ್ಬಿಬ್ಬುಗೊಂಡೆ ನಾ ಹಿಂದೆ ॥
ನಿಬ್ಬರದಲಿ ಸರ್ವರ ಕೂಡಿನ್ನು -೨ ।ಹಬ್ಬವನುಂಡೇನೊ ಹರಿಯೇ ॥೩॥

ಮಧ್ಯಾನ್ಹ ಕಾಲಕ್ಕೆ ಅತಿಥಿಗಳಿಗೆ ಅನ್ನ I ಮೆದ್ದೆನೆಂದರೆ ಇಹಗಾಣೆ ॥
ಈ ಧರೆಯೊಳು ಸತ್ಪಾತ್ರರ ಕೂಡುಂಬೋ -೨।
ಪದ್ದತಿ ನೋಡೋ ಪೂಣ್ಯಾತ್ಮಾ ॥೪॥

ಮನೆಮನೆ ತಿರುಗಿದರು ಕಾಸುಪುಟ್ಟದೆ। ಸುಮ್ಮನೆ ಚಾಲವರಿದು

ಬೊಬ್ಬಿರಿದೆ ॥ ಹಣ ಹೊನ್ನು ದ್ರವ್ಯ ಒಮ್ಮೆಂದೊಮ್ಮೆ ಈಗ -೨।

ಎನಗೆ ಪ್ರಾಪುತಿ ನೋಡೊ ಜೀಯಾ ॥೫॥

ನೀಚೋಚ್ಚ ತಿಳಿಯದೆ ಸರ್ವರ ಚರಣಕ್ಕೆ।ಚಾಚಿದೆ ನೊಸಲ ಹಸ್ತಗಳ ॥

ಯೋಚಿಸಿ ನೋಡಲು ಸೋಜಿಗವಾಗಿದೆ -೨।

ವಾಚಕೆ ನಿಲುಕದೊ ಹರಿಯೇ॥೬॥

ವೈದಿಕ ಪದವಿಯ ಕೊಡುವನಿಗೆ ಲೌಕಿಕ ।ನೈದಿಸುವದು ಬಹುಖ್ಯಾತೆ ॥

ಮೈದುನ ಗೊಲಿದ **ಶ್ರೀ ವಿಜಯವಿಠಲ** ನಿನ್ನ-೨।

ಪಾದ ಸಾಕ್ಷಿ ಅನುಭವವೋ ॥೭॥

## 210) ಸಜ್ಜನರ ಸಂಗ

ಸಜ್ಜನರ ಸಂಗ ಎಂದಿಗಾಹುದೋ ॥ಪ॥

ದುರ್ಜನರ ಸಂಗದಿಂದ ನೊಂದೆ ಹರಿಯೇ ॥ಅ.ಪ॥

ತಾವೆ ತಮ್ಮನ್ನು ಸ್ತುತಿಸಿಕೊಂಬ್ಬರೋ -೨ ।

ಹೇಯವಿಲ್ಲದೆ ಜರಿವರು ಪರರ ॥

ಭಾವಿಸಲರಿಯರು ಗುರುಹಿರಿಯರ -೨ ।

ಇಂಥ ಠಾವಳಿ ಜನರಿಂದ ನೊಂದೆ ಹರಿಯೆ -೨ ॥೧॥

ಬಡವರ ಬಡಿದಂಜಿಸಿ ಕೊಲ್ಲುವರೊ -೨।

ಕೆಡನುಡಿಯೊಡನೆ ತಪ್ಪಿಸಿ ಕೊಂಬರೊ ॥

ಹಿಡಿದ ಬಳಿಕ ಬಿಡರನ್ಯಾಯವ -೨ ।

ಇಂಥ ಕಡುಗೇಡಿಗರಿಂದ ನೊಂದೆ ಹರಿಯೆ -೨ ||೨||

ಮುನ್ನ ಮಾಡಿದ ದುಷ್ಕರ್ಮದಿಂದ -೨ |
ಬೆನ್ನ ಬಿಡದು ದುರ್ಜನರ ಸಂಗ ||
ಇನ್ನು ನಿನ್ನವರೊಳಗಿಟ್ಟು ಸಲಹೋ -೨|
ಪ್ರಸನ್ನ **ಶ್ರೀ ಪುರಂದರ ವಿಠಲ**ರಾಯ -೨ ||೩||

**211) ಕಂಗಳಿದ್ಯಾತಕೊ ಕಾವೇರಿರಂಗನ**

ಕಂಗಳಿದ್ಯಾತಕೊ ಕಾವೇರಿರಂಗನ ನೋಡದಾ ||ಪ||
ಜಗಂಗಳೋಳಗೆ ಮಂಗಳ ಮುರುತಿ |
ರಂಗನ ಶ್ರೀಪಾದಂಗಳ ನೋಡದ ||ಅಪ||

ಎಂದಿಗಾದರೊಮ್ಮೆ ಜನರು | ಬಂದು ಭೂಮಿಯಲ್ಲಿ ನಿಂದು -೨ ||
ಚಂದ್ರ ಪುಷ್ಕರಣಿ ಸ್ನಾನವ ಮಾಡಿ |
ಆನಂದದಿಂದಲಿ ರಂಗನ ನೋಡದ ||೧||

ಹರಿಪಾದೋದಕ ಸಮ ಕಾವೇರಿ| ವಿರಜಾನದಿಯ ಸ್ನಾನವ ಮಾಡಿ ||
ಪರಮ ವೈಕುಂಠ ರಂಗನ ಮಂದಿರ |
ಪರವಾಸು ದೇವನ ನೋಡದ ||೨||

ಹಾರಹೀರ ವೈಜಯಂತಿ | ತೋರ ಮುತ್ತಿನ ಹಾರ ಪದಕ -೨ ||
ತೇರನೇರಿ ಬಿದಿಲಿ ಬರುವ |**ಶ್ರೀರಂಗ ವಿಠಲ** ರಾಯನ ನೋಡದ ||೩||

## 212) ನರಸಿಂಹ ಪಾಹಿ ಲಕ್ಷ್ಮೀ

ನರಸಿಂಹ ಪಾಹಿ ಲಕ್ಷ್ಮೀ ನರಸಿಂಹ ||ಪ||

ನರಸಿಂಹ ನಮಿಪೆ ನಾ ನಿನ್ನ | ಚಾರು ಚರಣ ಕಮಲಕೆ ನೀ ಎನ್ನ |ಆಹಾ| ಕರವ ಪಿಡಿದು ನಿಜ ಶರಣನೆಂದೆನಿಸು ಭಾಸುರ ಕರುಣಾಂಬುಧಿ | ಗರುಡವಾಹನ ಲಕ್ಷ್ಮೀನರಸಿಂಹ ||ಅ.ಪ||

ತರಳ ಪ್ರಲ್ಹಾದನ ನುಡಿಯ ಕೇಳಿ | ತ್ವರಿತದಿ ಬಂದ್ಯೋ ಎನ್ನೊಡೆಯ | ಏನು ಕರುಣಾಳು ಭಕ್ತರ ಬಿಡೆಯ | ಮೀರಲರಿಯನೆಂದೆಂದು ಕೆಂಗಿಡಿಯ | ಆಹಾ ||ಭರದಿಂದುಗುಳುತ ಬೊಬ್ಬಿರಿದು ಬೆಂಬತ್ತಿ | ಕರ್ಬುರಕಶ್ಯಪುವಿನ | ಮುಂಗುರುಳ ಪಿಡಿದೆ ಲಕ್ಷ್ಮೀನರಸಿಂಹ ||೧||

ಪ್ರಳಯಾಂಬುನಿಧಿ ಘನ ಘೋಷ ದಂತೆ ಘುಳಿಘುಳಿಸುತಲಿ ಪ್ರದೋಷ |ಕಾಲ ತಿಳಿದು ದೈತ್ಯನಲ್ಲತಿ ರೋಷ | ದಿಂದ ಅಪ್ಪಳಿಸಿ ಮೇದಿನಿಗೆ ನಿರ್ದೋಷ | ಆಹಾ || ಸೆಳೆದೆಳೆಯುತ ಚರ್ಮಸುಲಿದು ಕೆನ್ನೆತ್ತರೋ-ಕುಳಿಯನಾಡಿದೆ | ದಿಶಾವಳಿಗಳೊಳಗೆ ಲಕ್ಷ್ಮೀನರಸಿಂಹ ||೨||

ಕ್ರೂರ ದೈತ್ಯನ ಘೋರಗರುಳ | ತೆಗೆದ್ಹಾರ ಮಾಡಿದೆ ನಿಜ ಕೊರಳ | ಕಂಡು ವಾರಿಜಾಸನ ಮುಖ್ಯರರಳ | ಪುಷ್ಪ ಭೂರಿಗರಿಯೆ ವೇಗ ತರಳ | ಆಹಾ || ಧೀರ ಪ್ರಲ್ಹಾದಂಗೆ ತೋರಿತ್ವದಂಘ್ರಿ | ಸರೋರುಹವನೆ ಕಾಯ್ದೆ | ಕಾರುಣ್ಯ ನಿಧಿ ಲಕ್ಷ್ಮೀನರಸಿಂಹ ||೩||

ಜಯ ಜಯ ದೇವ ವರೇಣ್ಯ | ಮಹದ್ಭಯ ನಿವಾರಣ ಅಗ್ರಗಣ್ಯ | ಗುಣತ್ರಯ ದೂರ ದುರಿತಾರಣ್ಯ ಧನಂ-ಜಯ ಜಗದೇಕ ಶರಣ್ಯ |

ಆಹಾ ॥ ಲಯ ವಿವರ್ಜಿತ ಲೋಕತ್ರಯವ್ಯಾಪ್ತ ನಿಜಭಕ್ತ । ಪ್ರಿಯ
ಘೋರಾಮಯ ಹರ ದಯ ಮಾಡೆನ್ನೊಳು ಲಕ್ಷ್ಮೀನರಸಿಂಹ ॥೪॥

ಕುಟಿಲ ದ್ವೇಷದವ ನೀನಲ್ಲ ನಿನ್ನಾರ್ಭಟಕಂಜಿದರು ಸುರರೆಲ್ಲ । ನರ
ನಟನೆ ಮಾಡಿದ್ಯೋ ಲಕ್ಷ್ಮೀನಲ್ಲ । ನಾಪಾ-ಸಟಿಗಾಣೆನಪ್ರತಿಮಲ್ಲ ।
ಆಹಾ ॥ ವಟಪತ್ರಶಯನ ಧೂರ್ಜಟಿ ವಂದ್ಯ **ಜಗನ್ನಾಥ ವಿಠ್ಠಲ**
ಕೃತಾಂಜಲಿ । ಪುಟದಿ ಬೇಡುವೆ ಲಕ್ಷ್ಮೀನರಸಿಂಹ ॥ ೫ ॥

**213) ಸಿಂಹ ರೂಪನಾದ**

ಸಿಂಹ ರೂಪನಾದ ಶ್ರೀ ಹರಿ । ಶ್ರೀ ನಾಮ ಗಿರೀಶನೆ ॥ಪ॥
ಒಮ್ಮನದಿಂದ ತನ್ನನು ಭಜಿಪರ
ಸಮ್ಮತದಿಂದ ಕಾಯ್ವನೆಂದ ಹರಿ ॥ಅಪ॥

ತರುಳನು ಕರೆಯೆ ಸ್ತಂಭವು ಬಿರಿಯೆ । ತುಂಬ ಉಗ್ರವಾ
ತೋರಿದನು-೨॥ ಕರುಳನು ಬಗೆದು-೨ ಕೊರಳೊಳು ಇಟ್ಟು ।
ತರಳನ ಸಲಹಿದ ಶ್ರೀ ನರಸಿಂಹನೇ ॥೧॥

ಭಕ್ತರೆಲ್ಲ ಕೂಡಿ ಬಹುದೂರ ಓಡಿ ಪರಮ ಶಾಂತವನು ಪೇಳಿದರು।
ಕರೆತಂದು ಸಿರಿಯ-೨ ತೊಡೆಯೊಳು ಕುಳಿಸಲು -೨॥
ಪರಮ ಹರುಷವನು ತೋರಿದ ಶ್ರೀಹರಿ ॥೨॥

ಜಯ ಜಯ ಜಯವೆಂದು ಹೂವನು ತಂದು । ಹರಿ ಹರಿ ಹರಿಯೆಂದು
ಸುರರೆಲ್ಲ ಸುರಿಸಿ -೨॥ ಭಯ ನಿವಾರಣಾ-೨ ಭಾಗ್ಯ ಸ್ವರೂಪನೆ ।
ಪರಮ ಪುರುಷ ಶ್ರೀ **ಪುರಂದರವಿಠ್ಠಲನೆ** ॥೩॥

## 214) ನಾರಸಿಂಹನೆಂಬ ದೇವನು

ನಾರಸಿಂಹನೆಂಬ ದೇವನು ।
ನಂಬಿದಂಥ ನರರಿಗೆಲ್ಲ ವರವ ಕೊಡುವನು ॥ಪ॥

ಓಂ ನಮಃ ಶಿವಾಯ ಎನುತಲಿ । ಅಸುರ ತನ್ನ ಸುತನ ಬರೆದು
ತೋರು ಎಂದಾಗ -೨॥ ನರಹರಿಯ ನಾಮವನ್ನು ।
ನಗುನಗುತಲೆ ಬರೆಯುತ್ತಿರಲು -೨ ।
ಎಡದ ತೊಡೆಯ ಮೇಲೆ ಶಿಶುವ ಧರೆಗೆ ಒದೆದು ನೂಕಿದನು ॥೧॥

ಸುತ್ತು ಜನರ ಕರೆಸಿ ಬೇಗದಿ ।
ಅಸುರ ತನ್ನ ಸುತನ ಕೊಲ್ಲಿಸಬೇಕೆಂದಾಗ -೨ ॥
ಅಟ್ಟ ಅಡವಿಯೊಳು ವಿಷವನಿಟ್ಟು ಭೋಜನಂಗಳು ಮಾಡಿ-೨ ।
ಹರಿಯ ಸ್ಮರಣೆ ಮಾಡುತಲೇ ಕುಂಜಿ ತಿಳಿದ ಜಟ್ಟಿ ಹಾಂಗೆ ॥೨॥

ಅಂಬುಧಿಯೊಳು ಮಗನ ಮಲಗಿಸಿ ।
ಮೇಲೆ ದೊಡ್ಡ ಬೆಟ್ಟವನ್ನು ಇಟ್ಟು ಬನ್ನಿರೋ -೨॥
ಹರಿಯ ಕೃಪೆಗೆ ವಶನಾದ ತರಳನೆಂದು ವರುಣದೇವ -೨ ।
ಮರಣ ಇಲ್ಲದ್ಹಾಗೆ ಮಾಡಿ ಮನೆಗೆ ಕೊಟ್ಟು ಕಳುಹಿಸಿದನು ॥೩॥

ಬೆಟ್ಟದಿಂದ ಕಟ್ಟಿ ಉರುಳಿಸಿ ।
ಅಸುರ ತನ್ನ ಪಟ್ಟದಾನೆ ಕಾಲಿಲಿ ಮೆಟ್ಟಿಸಿ -೨ ॥
ಹರಲು ಮನೆಯ ಮಾಡಿ ಸುಟ್ಟು ಹುಲಿಯ ಬೋನಿನಲ್ಲಿ ಇಟ್ಟು-೨ ।

ಯತ್ನವಿಲ್ಲದೆ ಸುತನ ಕೊಲ್ಲಲಿಕ್ಕೆ ಶಕ್ತನಲ್ಲದೆ ಪೋದನಂತೆ ॥೪॥

ನಿನ್ನ ದೇವ ಇದ್ದ ಎಡೆಯನು ।
ಎನುತ ಪಿತನು ತನ್ನ ಸುತನ ಕೋರಲು-೨ ॥
ಎನ್ನ ದೇವ ಇಲ್ಲದಂಥ ಎಡಗಳುಂಟೆ ಲೋಕದಲ್ಲಿ-೨ ॥
ಕಂಭದಲ್ಲು ಇರುವನೆಂದು ಕೈಯ ಮುಗಿದ ತೋರ್ದನಾಗ ॥೫॥

ವರಕಂಭವನ್ನು ಒದೆಯಲು ।
ನರಹರಿಯು ಉಗ್ರಕೋಪವನ್ನು ತಾಳಿದ -೨ ॥
ಕಟಕಟೆಂಬ ಧ್ವನಿಯ ಮಾಡಿ ನಖಗಳಿಂದ ಪಿಡಿದು ಒತ್ತಿ -೨ ।
ಕರುಳ ಬಗಿದು ಮಾಲೆ ಹಾಕಿ ಕಂದ ಭಕ್ತನಪ್ಪಿಕೊಂಡು ॥೬॥

ಅಂತರಿಕ್ಷದಲ್ಲಿ ಅಮರರು ।
ನೋಡಿ ಆಗ ಪುಷ್ಪವೃಷ್ಟಿಯನ್ನೆ ಕರೆಯಲು -೨ ॥
ಅಜನ ಪಡೆದ ದೇವಿ ಬಂದು ತೊಡೆಯ ಮೇಲೆ ಕುಳಿತುಕೊಂಡು-೨ ।
ಅಮರಪತಿಯರೆಲ್ಲ ನೋಡಿ ಅಂಜಬೇಡೆಂದಭಯ ಕೊಟ್ಟ ॥೭॥

ಲಕ್ಷ್ಮಿ ನಾರಸಿಂಹ ಚರಿತೆಯ ।
ಉದಯಕಾಲ ಪಠಿಸುವಂಥ ನರರಿಗೆಲ್ಲ -೨॥
ಪುತ್ರಸಂತಾನಂಗಳಿತ್ತು ಮತ್ತು ಬೇಡಿದ್ದಾಗೆ ಕೊಟ್ಟು -೨।
ಭಕ್ತವತ್ಸಲ ಮುಕ್ತಿ ಕೊಡುವ **ಪುರಂದರವಿಠಲ**ರಾಯ ॥೮॥

**215) ಪರಮ ಪುರುಷ ಹರಿ ಗೋವಿಂದ**

ಪರಮ ಪುರುಷ ಹರಿ ಗೋವಿಂದ । ಕರಿವರದ ನಾರಾಯಣ ಗೋವಿಂದ ||ಪ|| ನಾರಾಯಣ ನಾರಾಯಣ । ನಾರಾಯಣ |ಹರಿ| ನಾರಾಯಣ ನಾರಾಯಣ । ನಾರಾಯಣ ||ಅಪ||

ನಿಶಿಪೆಸರಸುರನ ಉಸುರ ತೊಲಗಿಸಿದ ಕುಸುಮಶರನ ಪಿತ ಗೋವಿಂದ -೨ । ರಸಪೂರಿತ ಶೃತಿ ಮಸುಳಿಸದಲೆ ತಂದು । ಬಿಸಜಸಂಭವಗಿತ್ತೆ ಗೋವಿಂದ ||೧||

ಜತನ ತಪ್ಪದೆ ಅಮೃತಮಥನದಿ ಪರ್ವತವನುದ್ಧರಿಸಿದೆ ಗೋವಿಂದ-೨ । ಶತಕ್ರತುವಿನ ಶಿರಿ ಹಿತವಾಗೆ ಕಡಲನು ಮಥಿಸಿ ನಿಲ್ಲಿಸಿ ಕೊಟ್ಟೆ ಗೋವಿಂದ ||೨||

ಭೂತಳವೆರಸಿ ರಸಾತಳಕಿಳಿದನ ಪಾತಾಳದಿ ಕಂಡೆ ಗೋವಿಂದ -೨ । ಆತನೊಡನೆ ಕಾದಿ ಖ್ಯಾತಿಲಿ ಮಡುಹಿ ಮಹೀತಳವನು ತಂದೆ ಗೋವಿಂದ ||೩||

ದುರುಳ ದೈತ್ಯನ ಸೀಳಿ ಕರುಳ ಮಾಲೆಯ ಮುಂಗೊರಳೊಳು ಧರಿಸಿದೆ ಗೋವಿಂದ -೨| ಗರಳ ಕಂಧರ ವಿಧಿ ಕರವೆತ್ತಿ ಪೊಗಳಲು ತರಳಗಭಯವಿತ್ತೆ ಗೋವಿಂದ ||೪||

ವಾಮನನಾಗಿ ನಿಸ್ಸೀಮ ಬಲಿಯ ಕೈಯ್ಯ ಭೂಮಿಯೆಳೆದುಕೊಂಡೆ ಗೋವಿಂದ -೨ । ತಾಮರಸೋದ್ಭ-ವಾಂಡ ಒಡೆದು ನಿಂದು ವ್ಯೋಮಗಂಗೆಯ ಪೆತ್ತೆ ಗೋವಿಂದ ||೫||

ವರ ಪರಶುಧರನಾಗಿ ಭೂಪರ ಧಿಕ್ಕರಿಸಿ ಸಂಹರಿಸಿದೆ ಗೋವಿಂದ೧ । ತರಹರಿಸದೆ ವಸುಂಧರಿಯನೆಲ್ಲವ ಭೂಸುರರಿಗೊಪ್ಪಿಸಿಕೊಟ್ಟೆ ಗೋವಿಂದ ॥೬॥

ತ್ರಿನಯನೊಲಿಸಿದ ರಾವಣನನು ರಣಾಂಗ-ದೊಳಗೊರಸಿದೆ ಗೋವಿಂದ -೧ ॥ ಕ್ಷಣವೆನಿಸದೆ ಮಣಿಪುರದಲಿ ವಿಭೀಷಣಗೆ ಶಾಶ್ವತವಿತ್ತೆ ಗೋವಿಂದ ॥೭॥

ವಾರಣದಂತವಿಧಾರಣ ಕಂಸ ಸಂಹಾರಣ ಭುಜಬಲ ಗೋವಿಂದ-೧ । ವಾರಣಪುರಪತಿ ದಾರಣಪ್ರಿಯ ಭೂಭಾರೋತ್ತಾರಣ ಗೋವಿಂದ ॥೮॥

ಕಥೆಯ ನಿರ್ಮಿಸಿ ಪತಿವೃತೆಯರ ಬಲು ವೃತಗಳ ಕೆಡಿಸಿದೆ ಗೋವಿಂದ -೧ । ಜತನದಿಂದ ತ್ರಿಪುರವನರುಹಿ । ದೇವತೆಗಳ ಸಲಹಿದೆ ಗೋವಿಂದ ॥೯॥

ವಾಜಿಯ ಮರುಕದಿ ತೇಜದಲೇರಿ ಕಾನೋಜು ರಾವುತನಾದೆ ಗೋವಿಂದ -೧ । ವಾಜಿಯ ಬೆನ್ನೊಳು ರಾಜಿಪ ಗುಣದಂತೆ ಈ ಜಗದೊಳಗಿಪ್ಪೆ ಗೋವಿಂದ ॥೧೦॥

ಮೇದಿನಿಗೋಸುಗ ಕಾದಿ ಕಲಹದಿ ವಿರೋಧಿಗಳನು ಕೊಂದೆ ಗೋವಿಂದ -೧ । ಸಾಧುಗಳಿಗೆ ಸುಖವೈದಿಪ **ಕಾಗಿನೆಲೆಯಾದಿ ಕೇಶವ** ರಾಯ ಗೋವಿಂದ ॥೧೧॥

## 216) ನಾರಾಯಣನ ನೆನೆ ಮನವೆ

ನಾರಾಯಣನ ನೆನೆ ಮನವೆ । ನಾರಾಯಣನ ನೆನೆ ॥ಪ॥

ನಾರಾಯಣನ ಮನ್ನಿಸು ವರ್ಣಿಸು। ಆರಾಧನೆಗಳ ಮಾಡುತ ಪಾಡುತ

ನೀರಾಂಜನದಿಂದ ಅರ್ಚಿಸು ಮೆಚ್ಚಿಸು

ಪಾರಾಯಣ ಪ್ರಿಯನ ।ವೇದ ॥ಅಪ॥

ಆವನ ಶ್ರವಣ ಮನ ಧ್ಯಾನ ದರ್ಶನ ।

ಸುಸ್ತಿರ ಮಹಾ ಭಕ್ತಿ ಮಹಾ ಪ್ರಸಾದಂಗಳು ।

ಕೈವಲ್ಯ ಪದಕೆ ಸ್ಥಿರ ನಿಚ್ಚಣಿಕೆಯಂತೆ । ಭಾವಜ್ಞರು ಪೇಳ್ವರು ॥

ಜೀವಕೆ ಜವನ ಬಾಧೆಗಳನ್ನು ತಪ್ಪಿಸಿ ।

ಪಾವನ ವೈಕುಂಠ ಪುರದೊಳಗ ಎಂದೆಂದೂ ।

ಆವಾಸವ ಮಾಡಿ ಸುಖಿಸ ಬೇಕಾದರೆ ಸೇವಿಸು ವೈಷ್ಣವರ ॥೧॥

ದ್ವಾರವತಿಯ ಗೊಪೀ ಚಂದನದಿಂದ ।

ಶ್ರೀರಮಣನ ವರ ನಾಮವ ನೆನೆದು-ಎರೆಡಾರು ॥

ಊರ್ಧ್ವ ಪುಂಡ್ರಂಗಳ ಧರಿಸೆಂದು । ವೀರವೈಷ್ಣವ ಗುರುವ ।

ಸೇರಿ ಸಂತಪ್ತ ಸುದರುಶನ ಶಂಖವ ॥

ಧಾರಣವನು ಭುಜಯುಗದೊಳು ಮಾಡಿ ।

ಮುರಾರಿಯ ಮಂತ್ರಗಳವರಿಂದಲಿ ಕೇಳಿ ಓರಂತೆ ಜಪಿಸುತಿರು॥

ನೀ ಮನದಲಿ ಜಪಿಸುತಿರು ॥೨॥

ಹರಿ ನಿರ್ಮಾಲ್ಯವ ಶಿರದಿ ಧರಿಸುತಿರು ।

ಹರಿ ನೈವೇದ್ಯವ ಭುಂಜಿಸುತಿರು ನಿತ್ಯ ।
ಇರುಳು ಹಗಲು ಹರಿ ಸ್ಮರಣೆಯ ಬಿಡದಿರು । ದುರುಳರ ಕೂಡದಿರು ॥
ಹರಿಪದತೀರಥ ನೇಮವ ಬಿಡದಿರು ।
ಹರಿಪರದೇವತೆ ಎಂದ್ಽಒಪ್ಪುತಲಿರು ।
ಗುರುಮುಖದಿಂದ ಸಚ್ಛಾಸ್ತ್ರ ಪುರಾಣವ ನಿರುತದಿ ಕೇಳುತಿರು ॥೩॥

ತುಷ್ಟನಹುದೊ ಎಳ್ಳಷ್ಟು ಮುಂದಿಟ್ಟರೆ ।
ಅಷ್ಟಿಷ್ಟೆನ್ನದೇ ಸಕಲೇಷ್ಟಂಗಳ । ಕೊಟ್ಟು
ಕಾವನು ಶಕ್ರನಿಗೆ ತ್ರಿವಿಷ್ಟಪ । ಪಟ್ಟವ ಗಟ್ಟಿದವ ॥
ನಿಷ್ಠುರನಲ್ಲ ವಿಶಿಷ್ಟರಿಗೊಲಿದ । ದುಷ್ಟರ ತರಿದಟ್ಟಿದ ಜಗಜಟ್ಟಿ ।
ಅರಿಷ್ಟ-ಮುಷ್ಟಿಕಾದ್ಯರ ಹುಡಿಗಟ್ಟಿದ । ವಿಠ್ಠಲ ಬಲುದಿಟ್ಟ ॥೪॥

ಆವನ ಪಕ್ಷ ಬಲೆಕ್ಕಿದಿರಿಲ್ಲ । ಕೇಳಾವನ ಕುಕ್ಷಿಯೊಳಕ್ಕು ಜಗತ್ರಯ ।
ಆವನು ರಕ್ಷಿಪ ಶಿಕ್ಷಿಪನೋ । ಮತ್ತಾವನು ಪಾವನನೋ ॥
ಆವನ ಶಿಕ್ಷಗೆಽ ಮಿಕ್ಕವರಿಲ್ಲ । ಕೇಳಾವನಪೇಕ್ಷೆಗೆ ಕುಲಕ್ಷಯವೆನಿಪುದು ।
ಆವನು ರುಕ್ರಮ ತ್ರಿವಿಕ್ರಮನೆನಿಸಿದ । ದೇವನಿಗಾವಗಣೆ ॥೫॥

ಕಂದ ಬಾರೆಂದರೆ ನಂದನಿಗೊಲಿದು ।
ಕುಂದು ಕೊರತೆ ಬಂದ್ಽರೆ ನೊಂದಿಕೊಳ್ಳದೆ ।
ಇಂದಿರೆಯರಸ ಮುಕುಂದನೆ ಮುಕುತಿಯಾ । ನಂದವನೀವ ದೇವಾ ॥

ಸಂದೇಹವಿಲ್ಲದೆ ಒಂದೇ ಮನದಿ ಗೋವಿಂದನ

ನೆನೆದ ಗಜೇಂದ್ರನಿಗೊಲಿದ । ಉಪೇಂದ್ರನ ಶುಭಗುಣ ಸಾಂದ್ರನ

ಯದುಕುಲ ನಂದನಿಗ ವಂದಿಸಿರೋ ॥೬॥

ಓಡುವ ನಡಗುವ ದೇವರೆ ಬಲ್ಲರು । ಕಾಡುವ ಬೇಡುವ ಮುನಿಗಳೆ

ಬಲ್ಲರು॥ ನೋಡುವ ಮುರಿವ ಮುಕುತರೇ ಬಲ್ಲರು ।

ಒಡನಾಡುವ ರಮೆ ಬಲ್ಲಳು ॥

**ಕೂಡುವ ಪಾಡುವ ಯಶೋದೆ ಬಲ್ಲಳು ।**

**ಕಾಡುವ ಖೂಳರನು ಆಡುತ ಕೆಡಹಿದ ॥**

**ನಾಡೊಳು ಶರಣರ ಕೇಡುಕಳೆದ ಕೃಷ್ಣ - ಗೀಡೆನ್ನದಿರು ಮೂಢ ॥೭॥**

ಸಿರಿದೇವಿಯಾವನಿ-ಗರಸಿ ಸುರರ-ಗುರು

ವಿರಿಂಚಿ ಪವನರು ಆವನ ಕುವರರು ।

ಉರಗಾಧಿಪ-ಗಾಽವನ ಮಂಚ । ವಿಹಃಗೇಶ್ವರನಾ-ವನ ವಾಹನ ॥

ಪುರಹರನಾವನಂಗುಟ ನೀರಪೊತ್ತ ।

ನಿರ್ಜರ ಪತಿ ಯಾವನ ಚರಣ ಸೇವಕ ।

ಸುರರೊಳಗೆ**ಹಯವದನ**-ಗಿನ್ನಾರನು ।ಸರಿಯೆಂದುಸುರುವೆನಯ್ಯ ॥೮॥

**217) ನಾರಾಯಣ ನಾರಾಯಣ ಗೋವಿಂದ**

ನಾರಾಯಣ ನಾರಾಯಣ ಗೋವಿಂದ ।

ಹರಿ ನಾರಾಯಣ ನಾರಾಯಣ ಗೋವಿಂದ ॥ಪ॥

ನಾರಾಯಣ ಗೋವಿಂದ ಗೋವಿಂದ ಮುಕುಂದ ।

ಪರತರ ಪರಮಾನಂದ ||ಅ.ಪ||

ಮೊದಲು ಮತ್ಸ್ಯನಾಗಿ ಉದಿಸಿ ಸೋಮನ | ಸದೆದು ವೇದಗಳ ತಂದ
-೨ || ಮಂಧರ ಧರ ತಾ ಸಿಂಧುವಿನೊಳಮೃತ-೨ |
ತಂದು ಭಕ್ತರಿಂಗುಣಲೆಂದ ||೧||

**ಮತ್ಸ್ಯ - ನಾರಾಯಣ ನಾರಾಯಣ ಗೋವಿಂದ | ಕೂರ್ಮ -**
**ನಾರಾಯಣ ನಾರಾಯಣ ಗೋವಿಂದ**

ಭೂಮಿಯ ಕದ್ದಾ ಖಳನ ಮರ್ದಿಸಿ | ಆ ಮಹಾಸತಿಯಳ ತಂದ -೨ ||
ದುರುಳ ಹಿರಣ್ಯನ ಕರಳು ಬಗೆದು ತನ್ನ -೨ |
ಕೊರಳೊಳಗಿಟ್ಟಾ ಬಗೆಯಿಂದ ||೨||

**ವರಹ - ನಾರಾಯಣ ನಾರಾಯಣ ಗೋವಿಂದ | ಹರಿ -**
**ನಾರಾಯಣ ನಾರಾಯಣ ಗೋವಿಂದ**

ಪುಟ್ಟನಾಗಿ ಮಹಿಕೊಟ್ಟ ಬಲಿಯ ತಲೆ |
ಮೆಟ್ಟಿ ತುಳಿದ ದಯದಿಂದ -೨ ||
ಧಾತ್ರಿಯೊಳು ಮುನಿ ಪುತ್ರನಾಗಿ ಬಂದು -೨ |
ಕ್ಷತ್ರಿಯರೆಲ್ಲರ ಕೊಂದ ||೩||

**ವಾಮನ - ನಾರಾಯಣ ನಾರಾಯಣ ಗೋವಿಂದ |**
**ಭಾರ್ಗವ - ನಾರಾಯಣ ನಾರಾಯಣ ಗೋವಿಂದ**

ಮಡದಿಗಾಗಿ ಸೆರಗಡಲನೆ ಕಟ್ಟಿ | ಹಿಡಿದು ರಾವಣನ ಕೊಂದ -೨|
ಗೋಕುಲದಿ ಪುಟ್ಟಿ ಗೋಪ್ಗ ಳನೇ ಕಾಯ್ದು -೨ |

ಗೋಪಾಲಕೃಷ್ಣ ತಾ ಬಂದ ||೪||

**ರಾಮ - ನಾರಾಯಣ ನಾರಾಯಣ ಗೋವಿಂದ |**

**ಕೃಷ್ಣ - ನಾರಾಯಣ ನಾರಾಯಣ ಗೋವಿಂದ**

ಛಲದಲಿ ತ್ರಿಪುರರ ಸತಿಯರ ವೃತದ |ಫಲವನಳಿದ ಮುದದಿಂದ-೨ |

ಧರೆಯೊಳು ಪರಮ ನೀಚರ ಸವರಿ-೨|

ಕುದುರೆಯೇರಿದ ಕಲಿಚಂದ ||೫||

**ಬುದ್ಧ - ನಾರಾಯಣ ನಾರಾಯಣ ಗೋವಿಂದ |**

**ಕಲ್ಕಿ - ನಾರಾಯಣ ನಾರಾಯಣ ಗೋವಿಂದ**

ದೋಷ ದೂರ ಶ್ರೀ **ಪುರಂದರ ವಿಠ್ಠಲ** | ಪೋಷಿಪ ಭಕ್ತ ಸುವೃಂದ ||

ದೋಷ ದೂರ ಶ್ರೀ **ಪುರಂದರ ವಿಠ್ಠಲ**-೨ | ಪೋಷಿಪ ಭಕ್ತ ಸುವೃಂದ ||

**ಬದರಿ - ನಾರಾಯಣ ನಾರಾಯಣ ಗೋವಿಂದ |**

**ಪಂಡರಿ - ನಾರಾಯಣ ನಾರಾಯಣ ಗೋವಿಂದ**

**ಉಡುಪಿ - ನಾರಾಯಣ ನಾರಾಯಣ ಗೋವಿಂದ |**

**ರಂಗ - ನಾರಾಯಣ ನಾರಾಯಣ ಗೋವಿಂದ**

**ತಿರುಮಲ - ನಾರಾಯಣ ನಾರಾಯಣ ಗೋವಿಂದ |**

### 218) ಜೈಜೈ ರಾಮ ಹರೇ

ಜೈಜೈ ರಾಮ ಹರೇ ! ಜೈ ಜೈ  ಕೃಷ್ಣ ಹರೇ ||ಪ||

ರಾಮ ರಾಮ ಹರೇ ! ಕೃಷ್ಣ ಕೃಷ್ಣ ಹರೇ ||ಅಪ||

ಕೌಸಲ್ಯಜ ವರ ವಂಶೋದ್ಭವಸುರ |

ಸಂ ಸೇವಿತ ಪದ ಶ್ರೀ ರಾಮ ಹರೇ -2 ‖ ಕಂಸಾದ್ಯಸುರರ ।
ಧ್ವಂಸಗೈದ-ಯದು ವಂಶೋದ್ಭವ ಶ್ರೀ ಕೃಷ್ಣ ಹರೇ ‖1‖

ಮುನಿಮುಖರಕ್ಷಕ । ದನುಜರ ಶಿಕ್ಷಕ ।
ಫಣಿಧರ । ಸನ್ನುತ ರಾಮ ಹರೆ -2‖ ಘನ ವರ್ಣಾಂಗ ।
ಸುಮನಸರೊಡೆಯ ಶ್ರೀ । ವನಜಾಸನ ಪಿತ ಕೃಷ್ಣ ಹರೇ ‖2‖

ಶಿಲೆಯ ಪದರಜ । ದಲಿ ಸ್ತ್ರೀ ಮಾಡಿದ ।
ಸುಲಲಿತ ಮಹಿಮ ಶ್ರೀ ರಾಮ ಹರೇ -2 ‖ ಬಲು ವಕ್ರಾಗಿದ್ದ ।
ಅಬಲೆಯ ಕ್ಷಣದಲಿ ಚೆಲುವೆಯ ಮಾಡಿದ ಕೃಷ್ಣ ಹರೇ ‖3‖

ಹರಧನು ಭಂಗಿಸಿ । ಹರುಷದಿ ಜಾನಕಿ ।
ಕರವ ಪಿಡಿದ ಶ್ರೀ ರಾಮ ಹರೇ -2 ‖ ಸಿರಿ ರುಕ್ಮಿಣಿಯನು । ತ್ವರದಲಿ
ವರಿಸಿದ । ಕರುಣಾಕರ ಶ್ರೀ ಕೃಷ್ಣ ಹರೇ ‖4‖

ಜನಕ ಪೇಳೆ । ಲಕ್ಷ್ಮಣ ಸೀತಾ ಸಹ ।
ವನಕೆ ತೆರಳಿದ ಶ್ರೀ ರಾಮ ಹರೇ -2‖ ವನಕೆ ಪೋಗಿ । ತನ್ನ
ಅನುಜರೊಡನೆ । ಗೋ ವನು ಪಾಲಿಪ ಶ್ರೀ ಕೃಷ್ಣ ಹರೇ ‖5‖

ತಾಟಕೆ ಖರಮಧು । ಕೈಟಭಾರಿ ಪಾಪಾಟ-
ವಿಸುರಮುಖ ರಾಮ ಹರೇ -2 ‖ ಆಟದಿ ಫಣಿಮೇಲ್ । ನಾಟ್ಯವ
ನಾಡಿದ । ಖೇಟವಾಹ ಶ್ರೀ ಕೃಷ್ಣ ಹರೇ ‖6‖

ಚದುರೆ ಶಬರಿಯಿತ್ತ । ಬದರಿಯ ಫಲವನು ।

ಮುದದಿ ಸೇವಿಸಿದ ರಾಮ ಹರೇ-2 || ವಿದುರನ ಕ್ಷೀರಕೆ | ಒದಗಿ
ಪೋದ ನಮ್ಮ | ಪದುಮನಾಭ ಶ್ರೀ ಕೃಷ್ಣ ಹರೇ ||7||

ಸೇವಿತ ಹನುಮ | ಸುಗ್ರೀವನ ಸಖ |
ಜಗತ್ಪಾವನ | ಪರತರ ರಾಮ ಹರೇ -2 || ದೇವಕಿ ವಸುದೇ-
ವರಸೆರೆಬಿಡಿಸಿದ | ದೇವ ದೇವ ಶ್ರೀ ಕೃಷ್ಣ ಹರೇ ||8||

ಗಿರಿಗಳಿಂದ ವರ | ಶರದಿ ಬಂಧಿಸಿದ |
ಪರಮ ಸಮರ್ಥ ಶ್ರೀ ರಾಮ ಹರೇ -2 || ಗಿರಿಯನ್ನು ತನ್ನ |
ಕಿರಿಬೆರಳೆಲ್ಲೆತ್ತಿ ಗೋಪರನ ಕಾಯ್ದ ಶ್ರೀ ಕೃಷ್ಣ ಹರೇ ||9||

ಖಂಡಿಸಿ ದಶಶಿರ | ಚಂಡಾಡಿದ |
ಕೋ-ದಂಡ ಪಾಣಿ ಶ್ರೀ ರಾಮ ಹರೇ -2 || ಪಾಂಡು ತನಯರಿಂ |
ಚಂಡಕೌರವರ | ದಿಂಡು ಗೆಡಹಿಸಿದ ಕೃಷ್ಣ ಹರೇ ||10||

ತವಕದಲಯೋಧ್ಯಾ | ಪುರಕೈದಿದ ತನ್ಯ-
ವತಿಯೊಡನೆ ಶ್ರೀ ರಾಮ ಹರೇ -2 ||ರವಿಸುತ ತನಯಗೆ | ಪಟ್ಟವ
ಗಟ್ಟಿದ ಭವತಾರಕ ಶ್ರೀ ಕೃಷ್ಣ ಹರೇ ||11||

ಭರತನು ಪ್ರಾರ್ಥಿಸಲರ | ಸತ್ವವ ಸ್ವೀಕರಿಸಿದ |
ತ್ವರದಲಿ ಶ್ರೀ ರಾಮ ಹರೇ -2 || ವರಧರ್ಮಾದ್ಯರ | ಧರೆಯೋಳು
ಮೆರೆಸಿದ | ಪರಮ ಕೃಪಾಕರ ಕೃಷ್ಣ ಹರೇ ||12||

ಧರೆಯೋಳಜ್ಞ | ಜನರನು ಮೋಹಿಪುದಕೆ |

ಹರನ ಪೂಜಿಸಿದ ರಾಮ ಹರೇ -2 ॥ ಹರನ ಪ್ರಾರ್ಥಿಸಿ । ವರವನು
ಪಡೆದ । ಚರಿತೆಯಗಾಧವು ಕೃಷ್ಣ ಹರೇ ॥13॥

ಅತುಳ ಮಹಿಮ । ಸದ್ಯತಿಗಳ ಹೃದಯದಿ ।
ಸತತ ವಿರಾಜಿಪ ರಾಮ ಹರೇ -2 ॥ ಸಿತವಾಹನ । ಸಾऽರಥಿ
ಎನಿಸಿದ । ಸುರ ತತಿ ಪೂಜಿತ ಪದ ಕೃಷ್ಣ ಹರೇ ॥14॥

ರಾಮ ರಾಮ ಎಂದು । ನೇಮದಿ ಭಜಿಪರ ।
ಕಾಮಿತ ಫಲದ ಶ್ರೀ ರಾಮ ಹರೇ -2 ॥ ಪ್ರೇಮದಿ ಭಕ್ತರ । ಪಾಲಿಪ
ಶ್ರೀ । **ವರಃದೇಶ ವಿಠಲ** । ಶ್ರೀ ಕೃಷ್ಣ ಹರೇ ॥15॥

**219) ಆವ ರೀತಿಯಿಂದ ನೀ**

ಆವ ರೀತಿಯಿಂದ ನೀ ಎನ್ನ ಸಲಹುವಿ । ಶ್ರೀ ವಿಭು ಹಯವದನ ॥ಪ॥
ಈವಿಧ ಭವದೋಳ್ ಇಷ್ಟು ಬವಣೆಪಟ್ಟೆ ।
ತಾವರೆದಳ ನಯನಾ ಹಯವದನ ॥ಅ ಪ॥

ಅಂಗನೆಯರಲ್ಲಿ ಅಧಿಕ ಮೋಹದಿಂದ ಅಂಗ ಶೃಂಗಾರವ ಮಾಡಿ ।
ಮಂಗಳಾಂಗನೆ ನಿನ್ನ ಮಹಿಮೆಯ ಪೊಗಳದೆ ।
ಭಂಗಕ್ಕೆ ಗುರಿಯಾದೆನೋ । ಹಯವದನ ॥೧॥

ಕಾಮನ ಬಾಧೆಯ ತಾಳಲಾರದೆ ಕಂಡ ಕಾಮಿನಿಯರನೆ ಕೂಡಿ ।
ನೇಮ ನಿಷ್ಠೆಯಿಂದ ನಿನ್ನನು ಭಜಿಸದೆ ॥
ಪಾಮರ ನಾನಾದೆನೋ । ಹಯವದನ ॥೨॥

ಹೀನ ಗುಣಗಳೆಲ್ಲ ಹಯಮುಖ ದೇವನೆ । ವರ್ಜಿಸುವಂತೆ ಮಾಡೋ ।
ಜ್ಞಾನಿಗಳರಸನೆ ದಯವಿತ್ತು ನಿನ್ನನ್ನೇ ॥
ಧ್ಯಾನಿಸುವಂತೆ ಮಾಡೋ । **ಹಯವದನ** ॥೩॥

## 220) ಪರಾಕು ಮಾಡಿದೆ

ಪರಾಕು ಮಾಡದೆ ಪರಾಂಭರಿಸಿ ।ಎನ್ನ ಅಪರಾಧಂಗಳ ಕ್ಷಮಿಸೊ ॥ಪ॥
ಧರಾ ರಮಣ ಫಣಿ ಧರಾ ಧರಾರ್ಚಿತ ।
ಸುರಾಧಿಪತಿ ವಿದಿ ಹರಾದಿ ವಂದಿತ ॥ಅಪ॥

ನರರೊಳಗೆ ಪಾಮರನು ನಾನಾಗಿಹ ।
ಪರಕೆ ಸಾಧನವಱ ಅರಿಯೆ ಶ್ರೀ ಹರಿಯೆ -೨॥
ಶರಣುಹೊಕ್ಕೆನು ನಿನ್ನ ಚರಣ ಕಮಲಕೆ -೨।
ಕರುಣೆದಿಂದ ನಿನ್ನ ಸ್ಮರಣೆ ಎನಗಿತ್ತು ॥೧॥

ಜಪವನರಿಯೆನೋ ತಪವ ನಾ ನರಿಯೆನೋ ।
ಉಪವಾಸ ವೃತಗಳನಾ ನರಿಯೆ ಶ್ರೀ ಹರಿಯೆ -೨॥
ಕೃಪಾವ ಲೋಕನದಿಂದ ಆ ಪಾಪಗಳೆಲ್ಲಾ -೨।
ಅಪಹಾತವ ಮಾಡೊ । ಅಪಾರ ಮಹಿಮನೆ-೨ ॥೨॥

ಕರಿಯ ರಕ್ಷಿಸಿ ದ್ರೌಪದಿ ಮೊರೆಲಾಲಿಸಿ ।
ತರಳಗೊಲಿದು ನೀ ।ಪೊರೆದೆಱ ದಯದಿ-೨ ॥
ಸಿರಿಯರಸನೆ ನಿನ್ನಾ ಸರಿಯಾರು ಕಾಣೆನು -೨।
ಕರುಣಿಸಯ್ಯಾ **ಶ್ರೀ ಪುರಂದರ ವಿಠ್ಠಲ** ॥೩॥

## 221) ಸಾಧನದ ಚಿಂತೆ

ಸಾಧನದ ಚಿಂತೆ ಎನಗ್ಯಾಕೊದೇವಾ ||ಪ||
ಮಾಧವನೆ ಮನ್ನಾಮ ಧರಿಸಿ ಮಾಡುವೆ ನೀನೆ ||ಅಪ||

ನಿನ್ನ ಚಿತ್ತಕೆ ಬಂದ ಅನುಭವವೇ ಸಾಧನವು -೨|
ಅನ್ಯಥಾ ಬೇರಿಲ್ಲ ಪರಮ ಪುರುಷ ||
ಎನ್ನ ತನುಮನ ಕರಣ ತ್ರಯಗಳಲಿ ನೀ ಮಾಳ್ಪೆ-೨|
ಅನ್ಯ ಸಾಧನವ್ಯಾಕೊ-೨, ಪಾವನ್ನ ಸುಚರಿತ ||೧||

ನಡೆವುದೆ ಯಾತ್ರೆಯು ನುಡಿವುದೇ ಸ್ತೋತ್ರವು -೨|
ಬಿಡದೆ ನೋಡುವುದೆಲ್ಲ ನಿನ್ನ ಮೂರ್ತಿ ||
ಒಡನೆ ಕೇಳುವ ಶಬ್ಧ ನಿನ್ನ ಮಂಗಳ ಕೀರ್ತಿ -೨|
ಪಡುವ ಭೋಗಗಳೆಲ್ಲ-೨ ನಿನಗೆ ಉಪಚಾರ ||೨||

ಪಾಪ ತೊಳೆವುದ ಕಿನ್ನು ದುಃಖಪ್ರಾಯಶ್ಚಿತ್ತ -೨| ತಾಪಯೋಚನೆ
ಯಲ್ಲಾ ತಪಸು ವಿಭುವೆ || ಗೋಪ ಚೂಡಾರತ್ನ **ಜಯೇಶ ವಿಠ್ಠಲ** -೨|
ಈ ಪಾತ್ರದೊಳು ನಿಂತು-೨ ನೀಮಾಳ್ಪೆ ಸಾಧನವ ||೩||

## 222) ಅಂಬಿಗ ನಾ ನಿನ್ನ

ಅಂಬಿಗ ನಾ ನಿನ್ನ ನಂಬಿದೆ | ಜಗದಂಬರಮಣ ನಿನ್ನ ನಂಬಿದೆ ||ಪ||

ತುಂಬಿದ ಹರಿಗೋಲಂಬಿಗ | ಅದಕೊಂಭತ್ತು ಛಿದ್ರಗಳಂಬಿಗ -೨|
ಸಂಭ್ರಮದಿಂದ ನೋಡಂಬಿಗ | ಅದರಿಂಬು ನೋಡಿ ನಡೆಸಂಬಿಗ ||೧||

ಹೊಳೆಯ ಭರವು ನೋಡಂಬಿಗ | ಇದಕೆ ಸೆಳವು ಘನವಯ್ಯ ಅಂಬಿಗ|
ಸುಳಿಯೊಳು ಮುಳುಗಿದೆ ಅಂಬಿಗ |
ಎನ್ನ ಸೆಳೆದು ಕೊಂಡೊಯ್ಯೋ ನೀಅಂಬಿಗ||೨||

ಆರು ಥೆರೆಯ ನೋಡಂಬಿಗ | ಅವು ಮೀರಿ ಬರುತಲಿವೆ ಅಂಬಿಗ -೨ |
ಯಾರಿಂದಲಾಗದು ಅಂಬಿಗ | ಅದನಿವಾರಿಸಿ ದಾಟಿಸ ಅಂಬಿಗ ||೩||

ಹತ್ತು ಮಂದಿಯ ನೋಡಂಬಿಗ | ಮ್ಯಾಲ್ ಹತ್ತುವರೈವರು ಅಂಬಿಗ|
ಮುತ್ತಿಗೆ ಒಳಗಾದೆ ಅಂಬಿಗ |
ಎನ್ನ ಹೊತ್ತು ಕೊಂಡೊಯ್ಯೋ ನೀ ಅಂಬಿಗ ||೪||

ಸತ್ಯವೆಂಬುದೆ ಹುಟ್ಟಂಬಿಗ | ಸದಾ ಭಕ್ತಿವೆಂಬುದೆ ಪಥವಂಬಿಗಾ -೨ |
ಸತ್ಯ ಮೂರುತಿ **ಪುರಂದರ ವಿಠಲ |** ನಮ್ಮನ್ ಮುಕ್ತಿ
ಮಂಟಪಕ್ಕೊಯ್ಯೋ ಅಂಬಿಗ ||೫||

**223) ಗಂಗದಿ ಸಕಲ ತೀರ್ಥಂಗಳ**

ಗಂಗದಿ ಸಕಲ ತೀರ್ಥಂಗಳ ಫಲವಿದು ಹರಿಯನಾಮ ||ಪ||
ಹಿಂಗದೆ ಜನರಿಗೆ ಮಂಗಳಕರ್ವಿದು ಹರಿಯ ನಾಮ ||ಅ.ಪ||

ವೇದ ಶಾಸ್ತ್ರಗಳ ಓದಲರಿಅಯದವಗೆ ಹರಿಯ ನಾಮ |
ಆದಿ ಪುರುಷನ ಪೂಜಿಸದವಗೆ ಹರಿಯ ನಾಮ -೨ ||
ಸಾಧಿಸಬೇಕು ಮೋಕ್ಷವೆಂಬುವರಿಗೆ ಹರಿಯ ನಾಮ -೨ |
ಶೋಧಿಸಿ ಇಟ್ಟ ಚಿನ್ನದ ಗಟ್ಟಿ ಕಾಣಿರೋ ಹರಿಯ ನಾಮ ||೧||

ಸ್ನಾನ ಸಂಧ್ಯಾವಂದನೆ ಮಾಡದವಗೆ ಹರಿಯ ನಾಮ ।
ಜ್ಞಾನವೂ ಇಲ್ಲದ ಮೂಢಾತ್ಮಜನರಿಗೆ ಹರಿಯ ನಾಮ -೨ ॥
ದಾನ ಧರ್ಮದನುಕೂಲವಿಲ್ಲದವಗೆ ಹರಿಯ ನಾಮ -೨ ।
ಮಾನುಷ ಜನುಮಸಫಲ ಮಾಡುವುದೀ ಹರಿಯ ನಾಮ ॥೨॥

ವ್ಯಾಳೆವ್ಯಾಳೆಕೆ ಎಚ್ಚರಿಕೆಯ ಕೊಡುವುದು ಹರಿಯ ನಾಮ ।
ಜಾಳಿಗೆ ಹೊನ್ನು ತುಂಬಿಟ್ಟಂತೆ ಕಾಣಿರೋ ಹರಿಯ ನಾಮ -೨॥
ಕಾಲನ ದೂತರಿಗಳುಕಿಸಲಿಪ್ಪುದು ಹರಿಯ ನಾಮ -೨ ॥
ಲೋಲ **ಶ್ರೀ ಪುರಂದರ ವಿಠ್ಠಲ**ರಾಯನ ದಿವ್ಯ ನಾಮ -೨ ॥

**224) ರಾಮನಾಮ ಪಾಯಸಕ್ಕೆ**

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ।
ವಿಠಲನಾಮ ತುಪ್ಪವ ಕಲಿಸಿ ಬಾಯಿ ಚಪ್ಪರಿಸಿರೋ॥ಪ॥

ಒಮ್ಮನ ಗೋದಿಯ ತಂದು ವೈರಾಗ್ಯ ಕಲ್ಲಲಿ ಬಿಸಿ।
ಸುಮ್ಮನೆ ಸಜ್ಜಗೆಯ ತೆಗೆದು-೨ ಸಣ್ಣಶಾವಿಗೆಯ ಮಸಿದು॥೧॥

ಹೃದಯವೆಂಬ ಮಡಿಕೆಯಲ್ಲಿ ಭಾವವೆಂಬ ಎಸರನಿಟ್ಟು।
ಬುದ್ಧಿಯಿಂದ ಪಾಕಮಾಡಿ-೨ ಹರಿ ವಾಣಕೆ ಬಡಿಸಿಕೊಂಡು॥೨॥

ಆನಂದ ಆನಂದವೆಂಬೋ ತೇಗು ಬಂತು ಕಾಣಿರೋ।
ಆನಂದ ಮೂರುತಿ ನಮ್ಮ-೨ । **ಪುರಂದರ ವಿಠಲನ** ನೆನಿಯಿರೋ॥೩॥

## 225) ಕರಿಸೋ ಧಿಕ್ಕರಿಸೋ ಆದರಿಸೋ

ಕರಿಸೋ ಧಿಕ್ಕರಿಸೋ ಆದರಿಸೋ ಹ್ಯಾಗಾದರೂ

ಬರುವೆ ನಿನ್ನಡಿಗೆ ನಾ ಬರುವೆ ||ಪ||

ತಿರುಮಲೇಶನೆ ನಿನ್ನ ಪದ ಸಂದರುಶನವು ಇಲ್ಲದಲೆ ಇಂದಿಗೆ |

ವರುಷ ಸಂಪೂರ್ತ್ಯಾಯ್ತು ಮನ ಎಧ್ಧರಿಧ್ಧರಿದು

ನಿನಗೆರುಗುತಿದೆ | ಮನ ಕರಿಸೋ ||ಅ.ಪ||

ಪಿಡಿದು ತಾಳಗಳ ತಮ್ಮಡಿಗಳೊಳಗೆ ಗೆಜ್ಜೆ ಕಟ್ಟಿ |

ಗೆಜ್ಜೆ ಕಟ್ಟಿ ಆರ್ಭಟಿಸಿ ಮನ ಮುಟ್ಟಿ -೨ |

ಜಡೆಗರಿಯೆ ಶುಕ ಭಾಷ್ಪಪುಲ್ಕಸ ಒಡಲಗಂಟಲ ಬಿಗಿದು ಮೃದು |

ತೊದಲ್ನುಡಿಗಳನು ನುಡಿಸುವರ ಕಾಣದೆ

ವಡವುತಿದೆ ಎನ್ನ ಕಂಗಳೀ ಕೊನೆ |ಕರಿಸೊ ||೧||

ದುರ್ವಾದಿಗಳು ನಿನ್ನ ಸರ್ವೋತ್ತ ಮತವ ಧಿಕ್ಕರಿಸೆ |

ಧಿಕ್ಕರಿಸೆ ದುರ್ಮತವ ಕಿಕ್ಕರಿಸೆ -೨| ಹರಿಯೇ ನೀ ಸರ್ವೋತ್ತಮನು

ಎಂದರಿದು ಡಂಗುರ ಹೊಯ್ಸಿ ಸಾರುವ | ಪರಮ ಭಾತವತರಂಘ್ರಿ

ಪಾಂಸಕೆ | ತ್ವರಬಡಿಸುತಿದೆಯನ್ನ ಈ ಸಿರ | ಕರಿಸೊ||೨||

ಬಗೆ ಬಗೆ ರತುನಗಳ್ ಬಿಗಿದ ವಾಹನಗಳನೇರಿ |

ರಥವೇರಿ ಊದಿಸಲು ತುತ್ತೂರಿ -೨| ಹಗಲು ಪಂಜಿನ ಬೆಳಕಿನಲಿ

ಝುಗಝುಗಿಪ ಹಾರಾವಳಿಯ ಬಿಳಿ | ಛತ್ರಿಗಳ ನೆರಳಲಿ ಬರುವ

ಚೆಲುವ ಚೆನ್ನಿಗನೆ ವೇಣು **ಗೋಪಾಲವಿಠಲನೆ** ||೩||

## 226) ಪಾಂಡುರಂಗ ತ್ವತ್ಪಾದ

ಪಾಂಡುರಂಗ ತ್ವತ್ಪಾದ ಪಾಲಿಸಯ್ಯ । ಕರುಣದಿ ಪಿಡಿಕೈಯಾ ॥ಪ॥
ಪುಂಡಲೀಕ ಮುನಿವರದ ನಮಿಪೆ ನಿನಗೆ ।ನೀ ತ್ವರಿತದಲೆನಗೆ ॥ಅಪ॥

ವನಜಭವಾದಿ ಸಮಸ್ತ ಸುರವ್ರಾತ । ವಂದಿತ ಶ್ರೀನಾಥಾ ।
ಪ್ರಣತಾರ್ತಿಹರನೆ ಕಾಮಿತ ಫಲದಾತಾ ಮುನಿಗಣ ಸಂಧ್ಯಾತಾ ॥
ನೆನೆವ ಜನರ ಮನದೊಳಗಿಹ ವಿಖ್ಯಾತಾ ಭುವನಾಧಿ ನಾಥಾ ।
ಘನ್ನಮಹಿಮ ಒಲಿದು ಪಾಲಿಸೆನ್ನ ಮಾತಾ ದಯಮಾಡಿ ತ್ವರಿತ ॥೧॥

ಸುರಚಿರ ಮಹಿಮನೆ ಭಜಕಾಮರಧೇನು ವಸುದೇವನ ಸೂನು ।
ಧರಣಿಯೊಳಗೆ ನಮ್ಮ ಹಿರಿಯರನುದ್ಧಾರ ಮಾಡಿದ ಗಂಭೀರಾ ॥
ದೊರೆಯೇ ನಿನ್ನೊರೆತನ್ಯರ ನಾನರಿಯೇ । ಕೇಳೆಲೋ ನರಹರಿಯೇ ।
ಕರಕರಿ ಭವದೊಳು ಬಿದ್ದು ಬಾಯಿ ಬಿಡುವೆ ಪೊರೆ ಎಂದು ನುಡಿವೆ ।೨॥

ಬಂದ ಜನರ ಭವ ಸಾಗರ ಪರಿಮಿತಿ ತೋರಿಸುತಿಹ ರೀತಿ ।
ಚೆಂದದಿಂದ ಕರವಿಟ್ಟು ಕಟಿಗಳಲ್ಲಿ ಈ ಸುಕ್ಷೇತ್ರದಲಿ ।
ನಿಂದಿಹ ಭೀಮಾ ತೀರ ಚಂದ್ರಭಾಗಾ । ಅಲ್ಲಿಯ ವೈಭೋಗ ।
ತಂದೆ ಶ್ರೀಪತಿ ವಿಠ್ಠಲ ಸುಖಸಿಂಧು ಅನಾಥ ಬಂಧೋ ॥೩॥

## 227) ವಿಠಲಾ ಪಿಡಿ ಎನ್ನ

ವಿಠಲಾ ಪಿಡಿ ಎನ್ನ ಕೈಯ್ಯಾ ॥ಅ॥
ಭಕ್ತ ವತ್ಸಲಾ ಪಂಡರಿರಾಯ । ವಿಠಲ ಹರಿ ವಿಠಲ ॥ಅ.ಪ॥

ದಿಟ್ಟ ಪುಂಡಲಿಕ ತನ್ನ ಪುಟ್ಟಿಸಿದವರ ಮನ ।
ಮುಟ್ಟಿ ಭಜಿಸಲು ಚಿತ್ತ ಕೊಟ್ಟು ಬಂದೆಯಾ ॥೧॥

ಬಿಟ್ಟು ಬರಲಾಗದೆ ನಿನಗೆ ನೆಟ್ಟ ನೇನೆಡಲು ಚಲುವ ।
ಇಟ್ಟಿಗೆ ಮೇಲಂಘ್ರಿ ಪದ್ಮ ವಿಟ್ಟು ನಿಂತೆಯಾ ॥೨॥

ನೆಟ್ಟ ನೆವದವ ತಂದು ಬೆಟ್ಟ ಎತ್ತಿ ಎಡೆಯ ಪೊತ್ತಿ ॥
ಸಿಟ್ಟುಕಾಣೆ ಬಟುವ ಕಡಲ ಸಿಟ್ಟಿನ್ನೆಡೆದೆಯೊ ॥೩॥
ಕಟ್ಟ ಕಡೆಯಲಿ ಜಗ ಜಟ್ಟಿ ಗೋಪನಾಗಿ ಬುದ್ಧ ।
ದಿಟ್ಟ ಕಲ್ಕ್ಯಾವತಾರಿ ಕೃಷ್ಣ ಪ್ರಸನ್ನ **ವೆಂಕಟ** ॥೪॥

**228) ಸಾರಿದೆನೋ ನಾ ನಿನ್ನ**

ಸಾರಿದೆನೋ ನಾ ನಿನ್ನ । ವೆಂಕಟರನ್ನ ॥ಪ॥
ನೀರಜ ನಯನನೇ ನಿರ್ಮಲ ಗುಣರನ್ನ ॥ಅ.ಪ॥

ಎನ್ನ ಕುಂದುಗಳನ್ನು ಎಣಿಸಲಾಗದೋ ದೇವಾ ।
**ಪನ್ನಗಾಚಲವಾಸಾ ।** ನೀ ಕಾಯೋ ನಿರ್ದೋಷಾ ॥೧॥

ಅನಾಥನೋ ನಾನು ಎನಗೆ ಬಂಧವು ನೀನು ।
**ನಿನ್ನವನೆಂದು ನೋಡೋ** । ನೀನಾಗಿ ದಯಮಾಡೋ ॥೨॥

ದೇಶ ದೇಶದವರ ಪೊರೆವಂತೆ ಪೊರೆ ಎನ್ನ ।
ಶೇಷಾಚಲ ಘನ್ನ । **ಶ್ರೀಶಾ ಸಿರಿ ಹಯವದನ ॥೩॥**

**229) ಶ್ರೀನಿಕೇತನ ಪಾಲಯ ಮಾಂ**

ಶ್ರೀನಿಕೇತನ ಪಾಲಯ ಮಾಂ । ಶ್ರೀ ನಿಕೇತನ ||ಪ||

ಜ್ಞಾನಗಮ್ಯ ಕರುಣಾ ನಿಧೇ । ನಿನ್ನಡಿ ಗಾನಮಿಸುವೆ ಪೊರೆ ।

ದೀನದಯಾಳೋ ||ಅ.ಪ||

ಜ್ಞಾನ ಮಾನದಾ । ಶರಣರ ಸುರಧೇನು ಸರ್ವದಾ -೨।

ನೀನೆಂದರಿತು ಸದಾನುರಾಗದಲಿ ।

ಧ್ಯಾನಿಪೆ ಮನದನು ಮಾನವ ಕಳಿಯೊ ||೧||

ಶ್ರೀ ಕರಾರ್ಚಿತ । ಪಾದಾಬ್ಜ ಪರಾಽಽಕು ಅಚ್ಯುತಾ -೨ ।

ಶೋಕ ನಾಶನ ವಿಶೋಕಸುಲಭ ।

ಹೃದ್ವ್ಯಾಕುಲ ಕಳೆಯೊ ಕೃಪಾಕರ ಒಲಿದು ||೨||

ಪನ್ನಗಾಚಲ । ನಿವಾಸ ಪ್ರಪನ್ನಽಽ ವತ್ಸಲಾ -೨।

ಬಿನ್ನಪ ಕೇಳೊ **ಜಗನ್ನಾಥ ವಿಠಲ** ।

ಧನ್ಯನ ಮಾಡೊ ಶರಣ್ಯ ಶರಣನ ||೩||

**230) ಎಂಥಾ ಪಾವನ ಪಾದವೊ**

ಎಂಥಾ ಪಾವನ ಪಾದವೊ ಕೃಷ್ಣಯ್ಯ ।

ನಿನ್ನೆಂಥ ಚೆಲುವ ಪಾದವೊ ||ಪ||

ಎಂಥಾ ಪಾವನ ಪಾದ ಇಂತು ಜಗದಿ ಕೇಳು ।

ಪಂಥದೊಳಿದ್ದ ಕುರುಪತಿಯ ಉರುಳಿಸಿದ ||ಅಪ||

ಹಲವು ಕಾಲಂಗ-ಳಿಂದಲಿ ಮಾರ್ಗದಿ ಶಿಲೆ ।

ಶಾಪವ ಪಡೆದಿರಲು ॥
ಒಲಿದು ರಜದಿ ಪಾವನಗೈದು ಕರುಣದಿ ।
ಶಿಲೆಯ ಬಾಲೆಯ ಮಾಡಿ ಸಲಹಿದ ಶ್ರೀಹರಿಯ ॥೧॥

ಬಲಿಯ ದಾನವ ಬೇಡಿ । ತ್ರೈಲೋಕ್ಯವನು-ಅಳಿದು ಏಕಾಂಘ್ರಿಯಲಿ ॥
ಬೆಳೆದು ಭೇದಿಸಲಾಗ । ನಳಿನಜಾಂಡವ ಸೋಕೆ ।
ಚೆಲುವ ಗಂಗೆಯ ಪೆತ್ತ ಜಲಜಾಸನಾರ್ಚಿತ ॥೨॥
ಚಂಡು ತರುವ ನೆವದಿ । ಕಾಳಿಂಗನ ।ಉದ್ದಂಡ ಮಡುವು ಧುಮುಕಿ ॥
ಚಂಡ ಕಾಳಿಂಗನ । ಮಂಡೆಯೊಳಗೆ ಪಾದ ।
ಪುಂಡರೀಕವನಿಟ್ಟು ತಾಂಡವನಾಡಿದ ॥

ಸಂತತ ಸೌಖ್ಯವೆಂಬ । ಕಾವೇರಿಯ । ಅಂತರಂಗದಿ ನೆಲೆಸಿ ॥
ಸಂತೋಷದಿಂದ ಅನಂತನ ಮೇಲೆ ।
ನಿಶ್ಚಿಂತೆಯೊಳ್ ಲಕುಮಿ ಭೂಕಾಂತೇರು ಸೇವಿಪ ॥

ಒಲಿದು ಗಯಾಸುರನ ಶಿರದೊಳಿಟ್ಟು । ಹಲವು ಭಕ್ತರ ಸಲುಹಿದಾ ॥
ನೆಲೆಸಿ ಉಡುಪಿಲಿ । ಎನ್ನ ಹೃದಯಕಮಲದಲ್ಲಿ ।
ತೊಲಗದೆ ಇರುತಿಪ್ಪ ಸುಲಭ **ಶ್ರೀ ಹಯವದನ** ॥

## 231) ದಾಸನ್ನ ಮಾಡಿಕೊ

ದಾಸನ್ನ ಮಾಡಿಕೊ ಎನ್ನ ಸ್ವಾಮಿ- ॥ಪ॥
ಸಾಸಿರ ನಾಮದ ವೆಂಕಟರಮಣ-॥ಅಪ॥

ದುರುಳ ಬುದ್ಧಿಗಳೆಲ್ಲ ಬಿಡಿಸೊ ನಿನ್ನ -।
ಕರುಣ ಕವಚವೆನ್ನ ಹರಣಕ್ಕೆ ತೊಡಿಸೊ-೨॥
ಚರಣ ಸೇವೆ ಎನಗೆ ಕೊಡಿಸೋ -೨।
ಅಭಯ । ಕರಪುಷ್ಪವೆನ್ನ ಶಿರದಲ್ಲಿ ಮುಡಿಸೊ ॥೧॥

ದೃಢ ಭಕ್ತಿ ನಿನ್ನಲ್ಲಿ ಬೇಡಿ ನಾ ।ನಡಿಗೆರಗುವೆನಯ್ಯ ಅನುದಿನ ಪಾಡಿ೨॥
ಕಡೆಗಣ್ಣಿಲೇಕೆನ್ನ ನೋಡಿ -೨ ।
ಬೆಡುವೆ । ಕೊಡು ನಿನ್ನ ಧ್ಯಾನವ ಮನ ಶುಚಿಮಾಡಿ ॥೨॥

ಮೊರೆ ಹೊಕ್ಕವರ ಕಾವಬಿರುದು ನೀ-।
ಮರೆಯದೆ ರಕ್ಷಣೆ ಮಾಡಯ್ಯ ಪೊರೆದು-೨॥
ದುರಿತ ರಾಶಿಗಳೆಲ್ಲವ ತರಿದು-೨।
ಸಿರಿ **ಪುರಂದರ ವಿಠ್ಠಲ** ಎನ್ನನು ಪೊರೆದು ॥೩॥

**232) ತಿಳಿಯದೋ ನಿನ್ನಾಟ**

ತಿಳಿಯದೋ ನಿನ್ನಾಟ ತಿರುಪತಿಯ ವೆಂಕಟ ॥ ಪ ॥
ಪೊಳೆವ ನೀರೊಳು ಗೆಲುವ ಮೋರೆಯ । ನೆಲವನೋಡುವ ಸುಳಿವ ಕಂಬದಿ । ಇಳೆಯ ನಳಿಯುವ ಭಳಿರೆ ಭಾರ್ಗವ । ಖಳನ ಛೇದಿಸಿ ಕೊಳಲ ಧ್ವನಿಗೆ । ನಳಿನ ಮುಖಿಯರ ನಾಚಿಸುವ ಬಲು । ಹಯದಳದ ಬಹು ಹವಣೆಗಾರನೆ ॥ಅ.ಪ॥

ಆರು ಬಲ್ಲರು ನಿನ್ನ ಶ್ರೀಲಕುಮಿ ಮನಸಿಗೆ ತೋರುವೆಯೋ ಪರಬೊಮ್ಮ ।ಉಳಿದವರು ಬಲ್ಲರೆ ನೀರಜಾಸನ ಬೊಮ್ಮ ಇದು ನಿನ್ನ

ಮರ್ಮ ॥ ನೀರೊಳಗೆ ಮನೆ ಭಾರ ಬೆನ್ನಲಿ ಕೋರೆದಾಡಿಯ
ನರಸಿಂಹನೆ । ಭೂಮಿ ಬೇಡಿದ ಧೀರ ಪುರುಷನೆ ವಾರಿಬಂಧನ
ಮಾರಜನಕನೆ ॥ ನಾರಿಯರ ವೃತವಳಿದು ಕುದುರೆಯನೇರಿ
ಮೆರೆಯುವ ಸುಂದರಾಂಗನೆ ॥೧॥

ಸಕಲ ಮಾಯವಿದೇನು ವೃಕನ ವಾಯು ಸಖನ ಸಲಹಿದೆ ನೀನು ।
ಭಕುತಿಯಿಂದಲಿ ತುತಿಪರಿಗೆ ಸುರಧೇನು ಸುರ ಕಾಮಧೇನು । ನಿಖಿಳ
ವೇದೋದ್ಧಾರ ಗಿರಿಧರ ಅಖಿಳ ಭೂಮಿಯ ತಂದ ನರಹರಿ ॥
ಯುಕುತಿಯಲಿ ನೆಲವಳಿದ ಭಾರ್ಗವ ಮುಕುತಿಗೋಸುಗ ಫಲವ
ಸವಿದನೆ । ರುಕುಮನನುಜೆಯ ರಮಣ ಚೋದ್ಯನೆ ಲಕುಮಿರಮಣನೆ
ಕಲ್ಕಿರೂಪಿಯೇ ॥೨॥

ನಿನ್ನ ರೂಪಿನ ಲೀಲಾ ನೋಡುವ ಜನಕೆ ಕಣ್ಣು ಸಾವಿರವಿಲ್ಲ ।
ನಾ ಪಾಡಿ ಪೋಗಳಲು ಪನ್ನಗಾಧಿಪನಲ್ಲ ನೀನರಿಯದಿಲ್ಲ ।
ಕಣ್ಣು ಮುಚ್ಚದೆ ಬೆನ್ನುತೋರುವಿ ಮಣ್ಣನೆಗೆದು ಚೆಣ್ಣಗೊಲಿದನೆ ॥
ಸಣ್ಣವಾಮನ ಅಣ್ಣರಾಮನೆ ಪೂಣ್ಯಪುರುಷನೆ ಬನ್ನಬಡಕನೆ ।
ಹೆಣ್ಣುಗಳ ವೃತಕೆಡಿಸಿ ತೇಜಿಯ ಬೆನ್ನನೇರಿದ **ವ್ಯಾಸ ವಿಠ್ಠಲ**

**233) ಅನದಿಕಾಲದ**

ಅನದಿಕಾಲದ ಋಣಾನುಬಂಧ। ಮನ ನಿನ್ನಲಿ ನಿಲ್ಲಿಸೋ ಮಾಧವ॥ಪ॥

ಅನಾದಿಕಾಲದಿ ನಿನ್ನ ಆಧೀನನಾಗಿ ।
ನೀನು ಕುಣಿಸಿದಂತೆ ನಾನು ಕುಣಿವನಯ್ಯಾ ॥

ಹಾನಿ ವೃದ್ಧಿಯೊಳ್ ಕ್ಲೇಶಗಳುಂಟೆ ।
ದೀನನು ನಾನು ದಯಾಮಯ ನೀನು ॥೧॥

ಹಿಂದೆ ದ್ರೌಪದಿಯ ಮಾನವ ಕಾಯ್ದೆ -೨ ।
ಅಂದು ಅಜಾಮಿಳಗೆ ಸದ್ಗತಿಯ ಇಟ್ಟೆ ॥
ಕಂದ ಧ್ರುವರಾಯ ಪ್ರಹ್ಲಾದನಿಗೊಲಿದೆ -೨ ॥
ತಂದೆ ಕೃಪೆ ಮಾಡಿ -೨ । ಬಂಧನವ ಬಿಡಿಸೋ ॥೨॥

ಸಾಧಿಸಿ ಶೋಧಿಸಿ ಭಹಳ ಯತ್ನದಿ -೨। ಆದರದಿಂದಲಿ ಪಾಡಿ
ಪೊಗುಳುವೆ ನಾ ॥ ಮೇದಿನಿಪತಿ **ಶ್ರೀ ವಂಕಟವಿಠಲ** ।
ಕಾದುಕೋ ಬಿಡದೆ ನಿನ್ನವರವನೆಂದು ॥

**234) ಏನು ಬೇಡಲಿ ನಿನ್ನ**

ಏನು ಬೇಡಲಿ ನಿನ್ನ ಬಳಿಗೆ ಬಂದು ।
ನೀನಿತ್ತ ಸೌಭಾಗ್ಯ ನಿಬಿಡವಾಗಿದೆ ಎನಗೆ ॥ಪ॥

ಜನನಿಯನು ಕೊಡು ಎಂದು ಜಗದೀಶ ಬೇಡುವನೆ।
ಜನನಿ ಏನಿತ್ತಳಾ ಧ್ರುವರಾಯಗೆ ॥
ಜನಕನಾ ಕೊಡು ಎಂದು ಜಯವಂತ ಬೇಡುವೆನೆ ।
ಜನಕನೇನಿತ್ತನಾ ಪ್ರಹ್ಲಾದಗೆ ॥೧॥

ಅನುಜನಾ ಕೊಡು ಎಂದು ಅತಿಶಯದಿ ಬೇಡುವೆನೆ ।
ಅನುಜನೇನಿತ್ತನೊ ಆ ವಾಲಿಗೆ ॥

ಧನವನ್ನೆ ಕೊಡು ಎಂದು ದೈನ್ಯದಲಿ ಬೇಡುವೆನೆ ।
ಧನಗಳಿಸಿದ ಸುಯೋಧನ-ನೇನಾದ ಕೊನೆಗೆ ॥೨॥

ಸತಿಯಳ ಕೊಡು ಎಂದು ಮತಿವಂತ ಬೇಡುವೆನೆ ।
ಸತಿಯಿಂದ ದ್ಯುನಾಮ ವಸು ಏನು ಕಂಡ ॥
ಸುತರನೆ ಕೊಡು ಎಂದು ಸುಖದಿ ನಾ ಬೇಡುವೆನೆ ।
ಸುತರಿಂದ ಧೃತರಾಷ್ಟ್ರ ಗತಿ ಏನು ಕಂಡ ॥೩॥
ಬಂಧುಗಳ ಕೊಡು ಎಂದು ಚಂದದಲಿ ಬೇಡುವೆನೆ ।
ಬಂಧುಗಳು ಸಲಹಿದರೆ ಗಜರಾಜನ ॥
ಅಂದಣವನೇರುವ ಭಾಗ್ಯವನು ಬೇಡುವೆನೆ ।
ಅಂದಣೇರಿದ ನಹುಷ ಏನಾದ ಕೊನೆಗೆ ॥೪॥

ಬೇಡುವೆನು ನಾನೊಂದು ಬೇಡತಕ್ಕದು ದೇವ ।
ನೀಡೆನೆಂಬುದು ನಿನ್ನ ಮನದೊಳಿತ್ತೆ ॥
ಮೂಡಲಾದ್ರೀಶ **ಗೋಪಾಲವಿಠ್ಠಲ**ರೇಯ ।
ಬೇಡದಂತೆ ಪರರ ಮಾಡಯ್ಯ ಹರಿಯೆ ॥೫॥

### 235) ತೋರಬಾರದೆ ಚರಿತೆಯ

ತೋರಬಾರದೆ ಚರಿತೆಯ ತೋರಬಾರದೆ ॥ಪ॥
ನರಲೋಕದೊಳು ನಗೆಗೀಡು ಮಾಡದೆ ॥ಅಪ॥

ಕಲ್ಲೊಳು ಕಾಂತೆಯ । ಮಾಡಿದೆ ಎಂದು ।
ಹೇಳುತಲಿಹರು । ಮೂರ್ಜಗದೊಳಗೆ - (2)

ಅಲ್ಲಿ ತೋರಿಸಿಧ್ಧಾಂಗೆ । ಇಲ್ಲಿ ತೋರಿಸಿದರೆ - (2)
ಹೌದು ಎನ್ನೊಡೆಯ । ದೊಡ್ಡವನೆಂದು ಹೆಳುವೆ - (2)

ಆಹಾಹ ಕುಬುಜೆಯ । ಆ ತನು ಎತ್ತಿ । ನವ-
ಯೌವ್ವನೆಯ । ಮಾಡಿದೆ ಎಂದು - (2)
ಬಹು ಪರಾಕ್ರಮವು । ಈಗ ತೋರಿಸಿದರೆ - (2)
ಬಲ್ಲಿದೆ ಎನ್ನೊಡೆಯ । ದೊಡ್ಡವನೆಂದು ಹೇಳುವೆ - (2)

ನೀನೇ ಗತಿ ಎಂದು । ನಂಬಿದ ಭಕ್ತಗೆ ।
ಕಣ್ಣನೋವ ತಿದ್ದಿ । ನಿಜ ತೋರಿಸಯ್ಯ - (2)
ದೀನದಯಾಳು । **ಹೆಳವನ ಕಟ್ಟೆರಂಗ** - (2)
ದಾನಿ ಎನ್ನೊಡೆಯ । ದೊಡ್ಡವನೆಂದು ಹೇಳುವೆ - (2)

**236) ಯಾರೇನಂದರೊ**

ಯಾರೇನಂದರೊ ರಂಗಯ್ಯಾ ।
ನಿನಗೆ ಯಾರಯಾರೇನೇನಂದರೊ ॥ಪ॥

ನೀರ ಪೊಕ್ಕವ ನೆಂದರೊ । ಬೆನ್ನೊಳು ಭಾರ ಪೊತ್ತವನೆಂದರೊ-೨ ।
ಕೋರೆದಾಡಿಲಿ ಭೂಮಿ ಬಗೆದವನೆಂದರೊ -೨॥
ಭಾರಿ ಕಂಭದಿ ಬಂದ ನರಮೃಗ ನೆಂದರೊ ॥೧॥

ಪುಟ್ಟ ಪಾದವನೆಂದರೊ । ಕೊಡಲಿಪಿಡಿದ ಗಟ್ಟಿಗ ನಿವನೆಂದರೊ -೨ ।
ಪಟ್ಟದರಸಿಗಾಗಿ ನಟ್ಟಡವಿಗೆ ಪೋದ -೨ ॥

ಮೀಸಲಿಟ್ಟ ಬೆಣ್ಣೆಯ ಕದ್ದು ಮೆದ್ದವನೆಂದರೊ ||೨||

ಬತ್ತಲೆ ನಿಂತವನೆಂದರೊ | ತೇಜಿಯನೇರಿ ಸುತ್ತಿಸುತ್ತುವ ನೆಂದರೊ|
ಹತ್ತು ಅವತಾರದ ಹರಿ ಎಂದರಲ್ಲದೆ -೨ ||
ಕೃರ್ತ **ಶ್ರೀ ಪುರಂದರ ವಿಠ್ಠಲನೆಂದರೊ** ||೩||

**237) ಮುಕುಂದಾ ಮರೆಯದಿರು**

ಮುಕುಂದಾ ಮರೆಯದಿರು ಮಮಸ್ವಾಮಿ ||ಪ||
ಭಕುತಿ ಯುಕುತಿಗಳ ನಾನರಿಯೆನು ||ಅ.ಪ||

ಮಮಸ್ವಾಮಿ ಸರ್ವಾಂತರ್ಯಾಮಿ -೨ |
ಕಮಲನಯನ ಧ್ರುವರಾಜನಿಗೊಲಿದೆ ||೧||

ಕಂದನಿಗೊಲಿದು ನೀ ಕಂಬದಿ ಬಂದೆ -೨ |
ಅಂದು ಅಜಾಮಿಳ ದ್ರೌಪದಿಗೊಲಿದೆ ||೨||

ಈಪರಿ ಧ್ಯಾನಿಸೆ ಪಾಪ ಸಂಚಿತನಾಶ -೨ |
**ಶ್ರೀಪತಿ ವೆಂಕಟ ವಿಠ್ಠಲ** ಧೊರೆಯೇ ||೩||

{ಮತ್ಸ್ಯಾವತಾರ ನಾಗಿ ಬಂದೆ ಮುಕುಂದ | ಕೂರ್ಮಾವತಾರ ನಾಗಿ ಬಂದೆ ಮುಕುಂದ | ವರಹಾವತಾರ ನಾಗಿ ಬಂದೆ ಮುಕುಂದ | ನರಸಿಂಹಾವತಾರ ನಾಗಿ ಬಂದೆ ಮುಕುಂದ | ವಾಮನವತಾರ ನಾಗಿ ಬಂದೆ ಮುಕುಂದ | ಭಾರ್ಗವತಾರ ನಾಗಿ ಬಂದೆ ಮುಕುಂದ | ರಾಮಾವತಾರನಾಗಿ ಬಂದೆ ಮುಕುಂದ | ಕೃಷ್ಣಾವತಾರನಾಗಿ ಬಂದೆ

ಮುಕುಂದ | ಬುದ್ಧಾವತಾರನಾಗಿ ಬಂದೆ ಮುಕುಂದ |

ಕಲ್ಕ್ಯವತಾರನಾಗಿ ಬಂದೆ ಮುಕುಂದ}

**238) ನಿನ್ಹೊರೆತು ಪೊರೆವರನು**

ನಿನ್ಹೊರೆತು ಪೊರೆವರನು ನಾ ಅರಿಯೆ ಹರಿಯೆ ‖ಪ‖

ಆದಿ ಮೂಲ ನಿನ್ನ ಪಾದ ನಂಬಿದೆ ।

ಭೇದ ವೆಣಿಸದೆ ಮೋದದಾಯಕ -೨‖

ಅದರದಿಂದಲಿ ಕಯೋ ಸೋದರ ಮಾವನ ವೈರಿ -೨।

ಮೇದಿನಿಪತಿ ನಿನ್ನಾರಧನೆ ಮಾಡಿಸೋ ಹರಿಯೆ ‖೧‖

ದಾನವಾಂತಕ ನೀನೆ ಗತಿ ಎಂದು ।

ಸಾನುರಾಗದಿ ಧ್ಯಾನ ಮಾಳ್ಪನು -೨ ‖

ಮಾನಾಪಮಾನವು ನಿನ್ನ ಅಧಿನ ವೆಂಕಟರಾಯ -೨ ।

ಭಾನುಕೋಟಿ ತೇಜ ನಿನ್ನಾರಧನೆ ಮಾಡಿಸೋ ಹರಿಯೆ ‖೨‖

ಪಂಕಜಾಕ್ಷ ಮುಕುಂದ ಮುರಹರ ।

ಕಿಂಕರಾ ಅಮರ ವಂದ್ಯ ಶ್ರೀಹರಿ -೨ ‖

ಸಂಕಟಗಳನ್ನು ಕಳೆದು ಭಿಂಕದಿಂ ಪರಿಪಾಲಿಸುವಾ -೨।

**ವೆಂಕಟ ವಿಠಲ** ನಿನ್ನಾರಧನೆ ಮಾಡಿಸೊ ಹರಿಯೆ ‖೩‖

**239) ಎನಗೂ ಆಣೆ ರಂಗ**

ಎನಗೂ ಆಣೆ ರಂಗ । ನಿನಗೂ ಆಣೆ ।

ಎನಗೂ ನಿನಗೂ ಇಬ್ಬರಿಗೂ ನಿನ್ನ ಭಕ್ತರಾಣೆ ||ಪ||

ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ ರಂಗ-೨|
ಎನ್ನ ನೀ ಕೈ ಬಿಟ್ಟು ಪೋದರೆ ನಿನಗೆ ಆಣೆ -೨||೧||

ತನುಮನಧನದಲಿ ವಂಚಕನಾದರೆ ಎನಗೆ ಆಣೆ ರಂಗ |
ಮನಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ ||೨||
ಕಾಽಕು ಮನುಜರ ಸಂಗ ಮಾಡಿದರೆನಗೆ ಆಣೆ ರಂಗ |
ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ ||೩||

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ ರಂಗ |
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ ||೪||

ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ ರಂಗ |
**ಪುರಂದರವಿಠಲ**ಽಽ ನೀಽನೊಲಿಯದಿದ್ದರೆ ನಿನಗೆ ಆಣೆ ||೫||

## 240) ನಂದೆನದೊ ಸ್ವಾಮಿ

ನಂದೆನದೊ ಸ್ವಾಮಿ ನಿಂದೆ ಇದೆಲ್ಲವು |ನಂದನಂದನ ಗೋವಿಂದ ||ಪ||

ಹಿಂದಿನ ಜನಮವು ಹೇಗಾದರು ಆಗಲಿ |
ಮುಂದೆನ್ನ ಕಾಯೋ ಮುಕುಂದಾ ಶ್ರೀ ಕೃಷ್ಣ ||ಅಪ||

ಜನನ ಮರಣ ನಿಂದೆ | ಜನುಮ ಸಾಧನೆ ನಿಂದೆ -೨|
ಅನುಕೂಲಾದರವು ನಿನ್ನದಯ್ಯಾ ||
ತನುಮನವೂ ನಿಂದೆ | ಕಾಯ ದೊರೆವುದು ನಿಂದೆ -೨|

ಚಿನುಮಯ ರೂಪನೇ | ಅನುಮಾನ ವ್ಯಾತಕಯ್ಯಾ ||೧||

ಕಾಯಕಷ್ಟವು ನಿಂದೆ | ದೇಹದ ಬಲ ನಿಂದೆ -೨|
ನ್ಯಾಯ ಅನ್ಯಾಯವು ನಿನ್ನದಯ್ಯಾ ||
ಬಾಯಿಮಾತು ನಿಂದೆ | ಬರುವ ಭಾಗ್ಯವು ನಿಂದೆ -೨|
ಕಾಯಜಪಿತನಿನ್ನ ಮಾಯ ತಿಳಿಯದಯ್ಯಾ ||೨||

ಯಾತ್ರ ತಿರ್ಥವು ನಿಂದೆ | ಕ್ಷೇತ್ರದ ಫಲ ನಿಂದೆ -೨|
ಸತ್ಪಾತ್ರ ದಾನ ನೇಮ ನಿನ್ನದಯ್ಯಾ ||
ಧಾತ್ರಿಯೊಳ್ ಪರಿಪೂರ್ಣ | ಕ್ಷೇತ್ರ **ವೆಂಕಟ ವಿಠಲ**-೨|
ಸ್ತೋತ್ರ ಮಾಡುವುದು ವಿಚಿತ್ರ ನಿನ್ನದಯ್ಯಾ |೩||

**241) ಋಣವೆಂಬ ಸೂತಕವು**

ಋಣವೆಂಬ ಸೂತಕವು ಬಹುಬಾಧೆ ಪಡಿಸುತಿದೆ |
ಗುಣ ನಿಧಿಯೆ ನೀ ಎನ್ನ ಋಣವ ಪರಿಹರಿಸೋ ||ಪ||

ಕೊಟ್ಟವರು ಬಂದ ಯನಗೆ ನಿಷ್ಠುರಂಗಳನಾಡಿ |
ಕೆಟ್ಟ ಬೈಗಳ ಬೈದು ಮನದಣಿಯಲು-೨||
ದುಷ್ಟತನವನು ಬಿಟ್ಟು ಕಳೆಗುಂದಿದೆನಯ್ಯಾ |
ಸೃಷ್ಟಿಗೊಡೆಯನೆ ಎನ್ನ ಋಣವ ಪರಿಹರಿಸೋ ||೧||

ಆಳಿದೊಡೆಯನ ಮಾತು ಕೇಳಿ ನುಡಿಯಲುಬಹುದು |
ಊಳಿಗವ ಮಾಡಿ ಮನ ದಣಿಯಬಹುದು -೨||

ಕಾಳಗದಿ ಪೊತ್ತು ಬಡಿದಾಡಿ ಜಯಸಬಹುದು ।
ಪೇಳಲಳವಲ್ಲ ಋಣದವನೊಂದು ಸೊಲ್ಲ ॥೨॥

ಹೆತ್ತಋಣ ಸೂತಕವು ಹತ್ತು ದಿನಕೆ ಪರಿಹಾರ ।
ಮೃತ್ಯುಸೂತಕವು ಹನ್ನೊಂದು ದಿನಕೆ -೨॥
ಮತ್ತೆ ಋಣಸೂತಕವು ಜನ್ಮಜನ್ಮಾಂತರಕೆ ।
ಎತ್ತ ಪೋದರು ಬಿಡದು ಬೆನ್ಹತ್ತಿಬಹುದು ॥೩॥

ಬಂದುಬಳಗದ ಮುಂದೆ ಬಹುಮಾನವು ಹೋಗಿ ।
ಅಂದವಳಿದೆನು ಈಽಽ ವಿಧ ಋಣದೊಳು -೨॥
ಇಂದಿರಾರಮಣ **ಶ್ರೀಪುರಂದರವಿಠ್ಠಲನೆ** ।
ಇಂದೆನ್ನ ಋಣವ ಪರಿಹರಿಸಯ್ಯ ಸ್ವಾಮಿ ॥೪॥

**242) ಕೇಳುವದರೊಳಗೆ**

ಕೇಳುವದರೊಳಗೆ ಕಳದೆಯಲ್ಲ ದಿನ ।
ಮಾಡುವುದೆಂದ್ ಹೆಳ್ ಎಲೆಮನವೆ ॥ಪ॥
ಮನನ ಮಾಡಿ ಮಾಧವನ ಮಹಿಮೆಯ-೨।
ಅನುಭವಕೆ ತಾರದೆ ಈ ಪರಿಯಲ್ಲಿದ್ದರೆ ॥ಅಪ॥

ಪರರ ಹರೆಟೆಗೆ ಪರವಶನಾಗುತ- ।ನಿರುತ ಈ ಪರೆ ಕಾಲಕಳೆವೆ -೨॥
ಮರಳಿ ಹರಿಸ್ಮರಿಸಿರೆಂದು -೨ ।
ಡಂಗುರ ಹೊಯ್ಯುವ ಗುರುಹಿರಿಯರ ನುಡಿಗಳನೇ ॥೧॥

ಹೆಣ್ಣು ಮಣ್ಣು ಹಣವನ್ನು ನಂಬಿ- ।ನೀ ಕೆಡದಿರಲೊ ಯಂದೆನುತಾ-೨।
ಚೆನ್ನಾಗಿ ಸರ್ವತ್ರ ಕೇಳಿ ನೀ-೨।
ಮುನ್ನಿನಂತೆ ಆಚರಿಸುತ್ತಿರುವೆಯಾ॥೨॥

ಧ್ಯಾನವಿಟ್ಟು ಪವಮಾನವಂದಿತನ- ।
ಗಾನ ಮಾಡೋ ಶ್ರೀ ಹರಿಗುಣವ-೨।
ಮಾನದ **ಸಿರಿ ಗೋವಿಂದ ವಿಠ್ಠಲ**ಗೆ-೨॥
ಹೀನಲೇಸುಗಳ ಅರ್ಪಿಸು ಮರೆಯದೆ ॥೩॥

**243) ಕೆಂಪೇರಿ ತಂಬರದಿ**

ಕೆಂಪೇರಿ ತಂಬರದಿ ತಂಪಿಳಿತು ಸಂಭ್ರಮದಿ ॥ಪ॥
ತಂಪನಾಗಿದೆ ಚಿತ್ತ ಕಯೋ ಕೃಷ್ಣಾ ॥ಅಪ॥

ಶಶಿಮುಖಿ ಇಟ್ಟಾಸೆ ಹೇಸಿ ಜೀವನದಾಸೆ ।
ಮೋಸ ಮಾಡದೆ ಎನ್ನ ಕಾಯೋ ಕೃಷ್ಣ -೨॥
ಪಶುಪತಿ ಸಖನಿನ್ನ ಹಸನಾಗಿ ಭಜಿಪಾಸೆ-೨।
ವಸುಧೆಯೊಳು ಎನಗಿಟ್ಟು ಕಾಯೋ ಕೃಷ್ಣ ॥೧॥

ಊರೊಳಗೆ ವ್ಯಾಪಿಸಿಹ ಘೋರಾಂಧಕಾರವನು ।
ಪಾರುಗಾಣಿಸಿ ಎನ್ನ ಕಾಯೋ ಕೃಷ್ಣ -೨॥
ಮೇರು ಬೆನ್ನಲಿಹೋತ್ತ ಸರಸಿಜೋದ್ಭವ ಜನಕ-೨।
ಭಾರವೆ ನಾ ನಿನಗೆ ಕಾಯೋ ಕೃಷ್ಣ ॥೨॥

ಅನ್ನ ವಸನಕ್ಕಾಗಿ ಅನುದಿನವು ಯಾಚಿಸುತಾ।
ಅನ್ಯರ ಮನೆ ದ್ವಾರ ಕಾಯ್ದೇ ಕೃಷ್ಣ-೨॥
ದೀನ ರಕ್ಷಕ ನಿನ್ನ ತೋಂಡರೋಳಿರಿಸಯ್ಯಾ-೨।
ದಾನವಾಂತಕನಂದ ವಿಠ್ಠಲ ಶ್ರೀ ಕೃಷ್ಣ ॥೩॥

**244) ವೇಣುನಾದಪ್ರಿಯ**

ವೇಣುನಾದಪ್ರಿಯ ಗೋಪಾಲಕೃಷ್ಣ ॥ಪ॥
ವೇಣುನಾದ ವೀನೋದ ಮುಕುಂದ ।
ಗಾನವಿನೋದ ಶೃಂಗಾರ ಗೋಪಾಲ ॥ಅಪ॥

ವಂದಿತ ಚರಣ ವಸುಧೆಯಾಭರಣ ।
ಇಂದಿರಾ ರಮಣ ಇನಕೋಟಿತೇಜ-೨ ॥
ಮಂಧರಧರ ಗೋವಿಂದ ಮುಕುಂದ-೨।
ಸಿಂಧುಶಯನ ಹರಿ ಕಂದರ್ಪಜನಕ ॥೧॥

ನವನೀತಚೋರ ನಂದಕುಮಾರ ।
ಭುವನ್ಯೆ ಕವೀರ ಬುದ್ಧಿ ವಿಸ್ತಾರ -೨॥
ರವಿಕೋಟಿತೇಜ ರಘುವಂಶ ರಾಜ-೨।
ದಿವಿಜವಂದಿತ ದನುಜಾರಿ ಗೋಪಾಲ ॥೨॥

ಪರಮ ದಯಾಳು ಪಾವನಮೂರ್ತಿ ।
ವರ ಕೀರ್ತಿಹಾರ ಶೃಂಗಾರಲೋಲ -೨॥
ಉರಗೇಂದ್ರ ಶಯನ ವರ ಹಯವದನ-೨।

ಶರಣರಕ್ಷಕ ಪಾಹಿ ಕೋದಂಡರಾಮ ||೩||

**245) ನೀನೇ ದಯಾಳು**

ನೀನೇ ದಯಾಳು ನಿರ್ಮಲ ಚಿತ್ತ ಗೋವಿಂದ |
ನಿಗಮ ಗೋಚರ ಮುಕುಂದ ||ಪ||
ಜ್ಞಾನಿಗಳರಸು ನೀ- | ನಲ್ಲದೆ ಜಗಕಿನ್ನು-೨ |
ಮಾನದಿಂದಲಿ ಕಾಯ್ವು -೨| ದೊರೆಗಳ ನಾಕಾಣೆ ||ಅಪ||

ಬಗೆ ಬಗೆಯಲಿ ನಿನ್ನ ಸ್ತುತಿಪೆನೋ ನಗಧರ-೨ |
ಖಗಪತಿ ವಾಹನನೆ -೨ ಮುಕುಂದ ||
ಮಗುವಿನ ಮಾತೆಂದು ನಗುತ ಕೇಳುತ ಬಂದು-೨|
ಬೇಗದಿಂದಲಿ ಕಾಯೊ-೨ | ಸಾಗರ ಶಯನನೇ ||೧||

ದಾನವಾಂತಕ ದೀನ ಜನಮಂದಾಽಽರನೇ-೨|
ಧ್ಯಾನಿಪರ ಮನ | ಸಂಚಾರನೆ-೨ ||
ಮೌನನಾದೆನು ನಿನ್ನ | ಧ್ಯಾನ ನಂದದಿ ಈಗ -೨|
ಸಾನುರಾಗದಿ ಕಾಯೊ-೨ | ಸನಕಾದಿ ವಂದ್ಯನೆ ||೨||

ಮಂದರ ಧರ ಅರವಿಂಽಽದ ಲೋಚನೆ ನಿನ್ನ -೨|
ಕಂದನೆಂದೆಣಿಸೋ ಎನ್ನ-೨ ಗೋವಿಂದ ||
ಸಂದೇಹವೇಕಿನ್ನು ಸ್ವಾಮಿ ಮುಕುಂದನೇ-೨|
ಬಂದೆನ್ನ ಕಾಯೊ-೨ | **ಶ್ರೀ ಪುರಂದರ ವಿಠಲನೆ** ||೩||

### 246) ನೋಡುವುದೇ ಕಣ್ಣು

ನೋಡುವುದೇ ಕಣ್ಣು ಕೇಳುವುದೇ ಕಿವಿ।

ಪಾಡುವುದೇ ಪದವ। ರಂಗಯ್ಯನ ॥ಪ॥

ಗಾಡಿಕಾರ ಶ್ರೀ ವೇಣುಗೋಪಾಲನ-೨।

ಕೂಡಿಕೊಂಡಾಡುವ ಸುಖದ ಸೊಬಗನು-೨ ॥ಅಪ॥

ಪೊಂಗೊಳಲೂದುತ ಮೃಗಪಕ್ಷಿಗಳನೆಲ್ಲ-೨।

ಸಂಗುಳಿಸುತಲಿಪ್ಪನ-೨ ರಂಗಯ್ಯನಾ ॥

ಅಂಗಜ ಜನಕ ಗೋಪಾಂಗನೆರೊಡನೆ-೨।

ಬೆಳದಿಂಗಳೊಳಗೆ ಸುಳಿದಾಡೋ ರಂಗಯ್ಯನ-೨ ॥೧॥

ನವಿಲಂತೆ ಕುಣಿಯುವ। ಹಂಸದಂತೆ ನಡೆಯುವ-೨।

ಮರಿಕೋಗಿಲೆಂತೆ ಕೂಗುವ-೨ ರಂಗಯ್ಯನಾ ॥

ಎರಳೆಯ ಮರಿಯಂತೆ ಜಿಗಿಜಿಗಿದಾಡುವ-೨।

ತುಂಬಿ ಝೇಂಕರಿಸುವಂದದಿ ಝೇಂಕರಿಪನ-೨ ॥೨॥

ಮುರುಡು ಕುಬ್ಜೆಯ ಡೊಂಕು ತಿದ್ದಿರೂಪಮಾಡಿ -೨।

ಸೆರೆಯ ಬಿಡಿಸಿಕೊಟ್ಟನ -೨ ರಂಗಯ್ಯನ ॥

ಗರುಡಗಮನ **ಶ್ರೀ ಪುರಂದರ ವಿಠಲನ** -೨।

ಶರಣಾಗತ ಸುರಧೇನು ರಂಗಯ್ಯನ-೨ ॥೩॥

### 247) ಬಿಡೆನೋ ನಿನ್ನಂಘ್ರಿ

ಬಿಡೆನೋ ನಿನ್ನಂಘ್ರಿ ಶ್ರೀನಿವಾಸ।

ಎನ್ನ ದುಡಿಸಿಕೊಳ್ಳೆಲೋ ಶ್ರೀನಿವಾಸ ||ಪ||

ನಿನ್ನ ನುಡಿಯ ಜಿತೆಲ್ಲೊ ಶ್ರೀನಿವಾಸ |

ಎನ್ನ ನಡೆತಪ್ಪು ಕಾಯೋ ಶ್ರೀನಿವಾಸ ||ಅಪ||

ಬಡಿಯೊ ಬೆನ್ನಲಿ ಶ್ರೀನಿವಾಸ | ಎನ್ನೊಡಲ ಹೊಯ್ಯದಿರು ಶ್ರೀನಿವಾಸ||

ನಾ ಬಡವ ಕಾಣೆಲೊ ಶ್ರೀನಿವಾಸ |

ನಿನ್ನೊಡಲ ಹೊಕ್ಕೆನೋ ಶ್ರೀನಿವಾಸ ||೧||

ಪಂಜುಪಿಡಿವೆನೊ ಶ್ರೀನಿವಾಸ | ನಿನ್ನೆಂಜಲ ಬಳಿದುಂಬೆ ಶ್ರೀನಿವಾಸ ||

ನಾ ಸಂಜೆ ಉದಯಕೆ ಶ್ರೀನಿವಾಸ |

ಕಾಳಂಜಿಯ ಪಿಡಿವೆ ಶ್ರೀನಿವಾಸ ||೨||

ಸತ್ತಿಗೆ ಚಾಮರ ಶ್ರೀನಿವಾಸ | ನಾನೆತ್ತಿ ಕುಣಿವೆನೋ ಶ್ರೀನಿವಾಸ ||

ನಿನ್ನ ರತ್ನದ ಹಾವಿಗೆ ಶ್ರೀನಿವಾಸ |

ನಾ ಹೊತ್ತು ನಲಿವೆನೋ ಶ್ರೀನಿವಾಸ ||೩||

ಹೇಽಳಿದಂತಾಲಿಹೇ ಶ್ರೀನಿವಾಸ | ನಿನ್ನಳಿಽಗಳಾಗಿಹೆ ಶ್ರೀನಿವಾಸ ||

ಅವರೂಳಿಗವ ಮಾಳ್ಪೆ ಶ್ರೀನಿವಾಸ |

ಎನ್ನ ಪಾಲಿಸೊ ಬಿಡದೆ ಶ್ರೀನಿವಾಸ ||೪||

ನಿನ್ನ ನಾಮ ಹೋಳಿಗೆ ಶ್ರೀನಿವಾಸ | ಕಳ್ಳ ಕುನ್ನಿ ನಾನಾಗಿಹೆ

ಶ್ರೀನಿವಾಸ || ಕಟ್ಟಿ ನಿನ್ನವರೊದ್ದರೆ ಶ್ರೀನಿವಾಸ |

ನನಗಿನ್ನು ಲಜ್ಜೇತಕೆ ಶ್ರೀನಿವಾಸ ||೫||

ಬೀಸಿ ಕೊಲ್ಲಲವರೆ ಶ್ರೀನಿವಾಸ। ಮುದ್ರೆ ಕಾಸಿ ಚುಚ್ಚಲವರೆ
ಶ್ರೀನಿವಾಸ ॥ ಮಿಕ್ಕ ಘಾಸಿಗಂಜೆನಯ್ಯ ಶ್ರೀನಿವಾಸ।
ಎಂಜಲಾಸೆಯ ಬಂಟನಾ ಶ್ರೀನಿವಾಸ ॥೬॥

ಹೇಸಿ ನಾನಾದರೆ ಶ್ರೀನಿವಾಸ ।ಹರಿದಾಸರೊಳು ಪೊಕ್ಕೆ ಶ್ರೀನಿವಾಸ ॥
ಅವರ ಭಾಷೆಯ ಕೇಳಿಹೆ ಶ್ರೀನಿವಾಸ।
ಆವಾಸಿಯ ಸ್ಯೆರಿಸೋ ಶ್ರೀನಿವಾಸ ॥೭॥

ತಿಂಗಳವನಲ್ಲ ಶ್ರೀನಿವಾಸ। ವತ್ಸರಂಗಳವನಲ್ಲ ಶ್ರೀನಿವಾಸ ॥
ರಾಜಂಗಳ ಸವಡಿಪೆ ಶ್ರೀನಿವಾಸ।
ಭವಂಗಳ ದಾಟುವೆ ಶ್ರೀನಿವಾಸ ॥೮॥

ನಿನ್ನವ ನಿನ್ನವ ಶ್ರೀನಿವಾಸ। ನಾ ಅನ್ಯವನರಿಯೆನೋ ಶ್ರೀನಿವಾಸ ॥
ಅಯ್ಯಾ ಮನ್ನಿಸೋ ತಾಯ್ತಂದೆ ಶ್ರೀನಿವಾಸ।
ಪ್ರಸನ್ನ ವೆಂಕಟಾದ್ರಿ ಶ್ರೀನಿವಾಸ ॥೯॥

**248) ರಾಮನಾಮ ಭಜಿಸಿದವಗೆ**

ರಾಮನಾಮ ಭಜಿಸಿದವಗೆ ಉಂಟೆ ಭವದ ಬಂಧನ।
ಕಾಮ ಹರನ ಸತಿಯು ಸದಾ-೨। ನೇಮದಿಂದ ಭಜಿಸುವಾ ॥ಪ॥

ಶಿವನು ಧನ್ಯನಾದ ಮೌನಿ। ಯುವತಿ ಪಾವನಿ ಯಾದಳು-೨।
ರವಿಯ ಸುತನು ಪದವಿ ಪಡೆದ। ಧ್ರುವನು ದಿವಿಜ ನೆನಿಸಿದ-೨ ॥೧॥

ಕರಿವರ ಪ್ರಹ್ಲಾದ ದ್ರೌಪದಿ। ವರ ವಿಭೀಷಣರೆಲ್ಲರೂ-೨।

ಹರಿಯ ಸ್ಮರಣೆ ಮಾಡಿ ಸುಖ-೨-| ಭರಿತರಾಗಲಿಲ್ಲವೇ ||೨||

ಗಿರಜೆ ರಾಮ ಮಂತ್ರದಿಂದ | ಪರಮ ಮಂಗಳೆಯಾದಳು-೨|
ವರದ **ಗೋಪಾಲ ವಿಠಲ** ನಾಮ-೨| ದುರಿತಕಾನನ ಪಾವಕ ||೩||

**249) ಧರ್ಮ ಏಕ ಸಹಾಯಃ**

ಧರ್ಮ ಏಕ ಸಹಾಯಃ |
ಪರಬ್ರಹ್ಮ ಮೂರುತಿಯ ಪಾದ ಭಜಿಪಾ ಸುಜನರಿಗೆಲ್ಲಾ ||ಪ||

ಹರಿ ಭಕುತಿಯನು ಮಾಳ್ಪ ಪರಮ ಭಾಗವತರಿಗೆ |
ಕರೆದೂ ಭೂಸುರರಿಗನ್ನವ ನಿತ್ತಾಽಽಗೆ-೨||
ಪರಸತಿಯರನು ಕಂಡು ಮನವೆಳೆಸಾದಿದ್ದವನೆ |
ಪರರುಪದ್ರವ ಬಿಡಿಸಿ ಪೊರೆವಾ ಸುಜನರಿಗೆಲ್ಲಾ ||೧||

ನಿತ್ಯ ನೇಮವ ಬಿಡದೆ ಸತ್ಯದಲಿ ನಡೆವವಗೆ |
ವ್ಯರ್ಥವಾಗಿ ಹೊತ್ತು ಕಳೆಯದವಾಗೆ-೨||
ಚಿತ್ರ ಶುದ್ಧಿಯಲೀ ವಿರವಸ್ತು ಹರಿಯನು ತನ್ನ |
ಹೃತ್ಕಮಲ ಮಧ್ಯದಲಿ ಇಟ್ಟು ಭಜಪರಿಗೆಲ್ಲಾ ||೨||

ಮಾತೃ ಪಿತೃಗಳನ್ನಾ ಪ್ರೀಯದಲಿ ಪೊರೆವವಗೆ |
ಯಾತ್ರೆಗಳ ಮಾಳ್ಪ ಪುಣ್ಯಾತ್ಮಗೆ-೨||
ಧಾತ್ರಿಯೊಳು **ಪುರಂದರ ವಿಠಲ**ನ ನಾಮವನ್ನು |
ಕೀರ್ತನೆಮಾಡಿ ಲೋಲಾಡುತಿಹ ಸುಜನರಿಗೆ ||೩||

## 250) ನಿನ್ನ ಮಗನ ಬಾಧೆ

ನಿನ್ನ ಮಗನ ಬಾಧೆ ಬಲು ಘನವಾಗಿದೆ ।
ಇನ್ನೆಷ್ಟು ತಾಳುವೆವೇ ಗೋಪಿ ಇನ್ನೆಷ್ಟು ಸೈರಿಪೆವೇ ॥ಪ॥

ಬಿನ್ನಣೆಯನು ಬಿಡು ಬಲು ದುಷ್ಟನೂ ಕೇಳೆ।
ಇನ್ನೆಷ್ಟು ಸೈರಿಪೆವೇ ಗೋಪಿ ॥ಅಪ॥

ಪಾಲು ಮೊಸರು ಮಜ್ಜಿಗೆ ಬಾಂಢಗಳನೆಲ್ಲಾ ।
ಸಾಲಾ ಕುಟ್ಟಿದನೇ ಗೋಪಿ -೨॥
ಹೇಳೂವು ದಿನ್ನೇನು ನಮ್ಮಂಥ ಬಡವರ ।
ಗೋಳಿನ್ನು ತಟ್ಟಾದೆನೇ ಗೋಪಿ ॥೧॥

ಸರಿಯಾ ಗೋಪ್ಯರ ಮುಂದೆ ಶಿರವನ್ನೇ ಬಾಗುವ ।
ತೆರೆನಾ ಮಾಡಿದನು ಕಾಣೆ-೨॥
ಧರೆಯೋಳಗಿರುವಂಥ ಜಾರ ಚೋರರಿಗೆಲ್ಲ ।
ಗುರುವು ತಾ ನೆನೆಸಿದನೇ ಗೋಪಿ ॥೨॥

ಎಷ್ಟು ಹೇಳುವುದಿನ್ನು ಈ ಬಗೆಯಾದರೆ ।
ನಿಷ್ಠೂರ ಬಹುದೂ ಕಾಣೆ-೨॥
ಸೃಷ್ಟೀಶ ಶ್ರೀ ರಂಗ ಧಾಮ **ಪುರಂದರ ವಿಠಲ** ।
ರಾಯ ಕಾಣೆ ಗೋಪಿ ॥೩॥

## 251) ಏನ್ಸವಿ ಏನ್ಸವಿ ಹರಿನಾಮ

ಏನ್ಸವಿ ಏನ್ಸವಿ ಹರಿನಾಮ | ಮನಸು ತೃಪ್ತಿಯಾಗ್ವದು ಪ್ರೇಮ ||ಅ||
ಜನರಿಗೆ ತಿಳಿಯದು ಇದರ ಮಹಿಮಾ |
ಘನ್ನ ಮಹಿಮ ವಿಷ್ಣು ಸಾಸಿರ ನಾಮ ||ಅಪ||

ಪ್ರಲ್ಹಾದಗೊಲಿದ ಹರಿ ನಾಮದಿಂದ ಅಲಲಲಲಲ-|
ಧ್ರುವ ರಾಜೇಂದ್ರ-೨ | ಫಲ್ಗುಣಗೆ ಫಲಿಸಿತು ಹೆಚ್ಚೆಂದು-೨||
ರಾಮ ರಾಮ ರಾಮ ರಾಮ ಸರ್ವ ಜಗತ್ತು ||೧||
ರಕ್ಷಣೆ ಮಾಡುವುದು ಹರಿನಾಮ | ಮೋಕ್ಷ ಪದವಿ ಕೊಡುವುದು
ನೇಮಾ-೨| ಕೃಷ್ಣ ಕೃಷ್ಣ ಶ್ರೀ ಹರಿ ಸರ್ವೋತ್ತಮ -೨||
ಸಾಕ್ಷಾತ್ ಶ್ರೀ ಕೃಷ್ಣ ಪರಮಾತ್ಮಾ-೨||೨||

ಹರಿ ಹರಿ ಹರಿ ಸ್ಮರಣೆ ಮಾಡಬೇಕು | ಹರ ಹರ ಹರ ಎಂದು-
ಅನ್ನಬೇಕು -೨ | ವೇದಗಳು ಸಾರುತಿವೆ ಇವು ನಾಲ್ಕು-೨|
**ಪುರಂದರ ವಿಠ್ಠಲನೆ** ಸರ್ವ ಜಗತ್ತು ||೩||

## ವೈರಾಗ್ಯ ಪದಗಳು

### 252) ನಂಬಿ ನೆಚ್ಚದಿರೆಲೋ

ನಂಬಿ ನೆಚ್ಚದಿರೆಲೋ ನರಲೋಕ ಸ್ಥಿರವೆಂಬು |ಅಂಬಲಿ ಪರಮಾನ್ನ||
ಹಂಬಲಿಸುತಲಿರು ಹರಿಲೋಕಾನಂದವೆಂಬೋ |
ಪೀಯುಷ ಪನಾ||ಅಪ||

ದುರುಳ ಜನರ ಸಂಗವೆಂಬೋದೆ ಎಂದಿಗು| ನೋಣಬೇರೆ ಸಿಗಲೂಟ ||
ಪರಮ ಭಾಗವತರ ಪದಸಂಗವೆಂಬೋದೆ | ಮಸ್ತಕ ಮಣಿಮುಖುಟ ||

ಮೆರೆ ಮೋಸಗೊಳಿಸುವ ಸತಿಸುತರೆಂಬೊರೆ | ಕೇವಲ ಯಮಕಾಟ |
ಪರತತ್ವನಾದ ಶ್ರೀ ಹರಿಯನೆ ಭಜಿಸೋದೆ | ವೈಕುಂಠಕೆ ಓಟ ||೧||

ಅಲ್ಪಾಯುಷ್ಯವೆ ಈ ಶರೀರವು ಗಾಳಿಕ್ಕಿದ ದೀಪ| ಅಲ್ಪ
ಸಂತೋಶನಾಗು ಅದು ನಿನಗೆ ನೋಡು ಹಾಲು ಸಕ್ಕರೆ ತುಪ್ಪ ||
ಬಲ್ಪಂಥಮಾಡದೀರು ಜನುಮ ಜನುಮಗಳಲಿ ಬೀಡದೀ ಸಂತಾಪ ||
ಸ್ವಲ್ಪಕಾಲಾದರು ಮಧ್ವಮತವೆ ಪೊಂದು | ಭವವೆ ನಿರ್ಲೆಪ ||೨||
ಭಾವವಿರಕುತೀಯ ಧರಿಸದ್ದರೆ ನೋಡು | ಆಗುವ ಧುಃಖೇದ ||
ಸಾವಿರಕೊಂದು ಹರಿದಾಸನೆನಿಸೋದೆ | ಪರಿಪರಿಯಲ್ಲಿ ಸ್ವಾದ ||
ದೇವಕಿಸುತನಮ್ಮ **ವಿಜಯವಿಠಲ** ನಂಘ್ರೀ | ತೀರಥ ಪ್ರಸಾದ ||
ಸೇವಿಸದ ನರ ನಿತ್ಯ ನರಕವಾಸಿ | ಎನ್ನುತ್ತಲಿದೆ ವೇದ ||೩||

### 253) ಏಕೆ ಚಿಂತಿಸುತಿರುವೀ

ಏಕೆ ಚಿಂತಿಸುತಿರುವೀ ನೀ ಕೋತಿ ಮನವೇ ||ಪ||
ಲೋಕ ನಾಥನ ನೆನೆದೂ ಸುಖಿಯಾಗೂ ಮನವೇ ||ಅಪ||

ಹುಟ್ಟುವಾಗಾಪಽತಿಗಾರು ಚಿಂತಿಸಿದವರೂ |
ಕಟ್ಟ ಕಡೆಯಲಿ ಲಯಕೇ ಯಾರ ಚಿಂತೇ ||
ನಟ್ಟ ನಡುವಿನ ಬಾಳಿಗೇಕೇ ಚಿಂತಿಸುತ್ತಿರುವೀ-೨|
ಹುಟ್ಟಿಸಿದ ದೇವನೂಽಽ ಹುಲ್ಲು ಮೇಯಿಸನೇನೋ ||೧||

ನವಿಲಿಂಗೆ ಚಿತ್ರಾ ಪತ್ರಗಳಾರು ಬರೆದವರೂ |
ಪವಳದಾ ಲತೆಗೇ ಕೆಂಪಿಟ್ಟವರೂ ಯಾರೋ ||

ಸವಿ ಮಾತಿನರಗಿಣಿಗೆ ಹಸಿರು ಬಳಿದವರಾರೋ-೨ ।
ಅವ ಮಾಡಿದವ ನಮ್ಮ ಮರೆತಿಹನೇ ಮರುಳೇ ॥೨॥

ಬಸಿರೊಳಗೇ ಶಿಶುವನ್ನು ಅದಾಽಽರು ಸಲಹುವರೋ ।
ವಸುಧೆಯನೂ ಬಸಿರೊಳಗೇ ಪೊತ್ತವರು ಯಾರೋ ॥
ವಸುಧೀಶ ನಮ್ಮ **ಶ್ರೀಪುರಂದರ ವಿಠ್ಠಲ**ನಾ-೨।
ಬಿಸಜ ಪಾದವ ನಂಬಿ ಸುಖಿಯಾಗೂ ಮನವೇ ॥೩॥

### 254) ಅಂತಕನ ದೂತರಿಗೆ

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ ।
ಚಿಂತೆಯನು ಬಿಟ್ಟು ಶ್ರೀ ಹರಿಯ ನೆನೆಯೋ ॥ಪ॥

ದಿನ ರಾತ್ರಿ ಎನ್ನದೆಲೆ ವಿಷಯ ಲಂಪಟನಾಗಿ-೨ ।
ಸವಿಯೂಟಗಳನುಂಡು ಭ್ರಮಿಸಬೇಡ ॥
ಅವನ ಕೊಂಽದಿವನಽ ಕೊಂದರ್ಥವನು ಗಳಿಸುವೊರೆ-೨।
ಯಮನ ದೂತರ ಬರುವ ಹೊತ್ತ ನೀನರಿಯೆ ॥೧॥

ಹೊಸಮನೆಯ ಕಟ್ಟಿದೆನು ಗೃಹಶಾಂತಿ ಮನೆಯೊಳಗೆ ।
ಬಸುರಿ ಹೆಂಡತಿ ಮಗನ ಮದುವೆ ನಾಳೆ ॥
ಹಸನಾಗಿದೆ ಬದುಕು ಸಾಯಲಾರೆನು ಎನಲು-೨।
ಕುಸುರಿದರಿಯದೆ ಬಿಡರು ಯಮನ ಭಟರು ॥೨॥

ಪುತ್ರ ಹುಟ್ಟಿದ ದಿವಸ ಹಾಲು ಊಟದ ಹಬ್ಬ-೨।
ಮತ್ತೊಬ್ಬ ಮಗನ ಉಪನಯನ ನಾಽಽಳೆ ॥

ಅರ್ಥಿಯಾಗಿದೆ ಬದುಕು ಸಾಯಲಾರೆನು ಎನಲು ।
ಮೃತ್ಯು ಹೆಡತಲೆಯಲ್ಲಿ ನಗುತಿರ್ಪುಳೋ ॥೩॥

ಅಟ್ಟಡಿಗೆ ಉಣಲಿಲ್ಲ ಇಷ್ಟ ದರುಶನವಿಲ್ಲ-೨।
ಕೊಟ್ಟ ಸಾಲವ ಕೇಳ್ವ ಹೊತ್ತನರಿಯೆ ॥
ಕತ್ತಲೆ ತುಂಬಿದ ಬಳಿಕ ಕ್ಷಣ ಮಾತ್ರ ಇರಲಿಲ್ಲ-೨ ।
ಅಷ್ಟರೊಳು **ಪುರಂದರವಿಠಲ** ನೆನೊ ಮನವೆ ॥೪॥

**255) ಆರೂ ಸಂಗಡ ಬಾಹೋರಿಲ್ಲ**

ಆರೂ ಸಂಗಡ ಬಾಹೋರಿಲ್ಲ ।
ನಾರಾಯಣನ ನಾಮ ನೆರ ಬಾಹೋದಲ್ಲದೇ ॥ಪ॥

ಹೊತ್ತ ನವಮಾಸ ಪರ್ಯಂತ ಗರ್ಭದಲ್ಲಿ ।
ಅತ್ಯಂತ ನೋವು ಬೇನೆಗಳಿಂದಲಿ-೨ ॥
ತುತ್ತು ವಸ್ತ್ರವನಿಕ್ಕಿ ಸಲುಹಿದ ತಾಯ್ತಂದೆ ।
ಹೊತ್ತು ಕಳೆವರಲ್ಲದೇ ಬೆನ್ಹತ್ತಿ ಬರುವರೇ ॥೧॥

ಮನೆ ಮಕ್ಕಳು ತಮ್ಮ ಧನಕೆ ಬಡಿದಾಡುವರು ।
ಧನಕ್ಕಾಗಿ ನಿನ್ನನ್ನೇ ನಂಬಿದವರೋ ॥
ಅನುಮಾನವೇಕೆ ಜೀವನ ತೊಲಗಿದಾಕ್ಷಣದಿ ।
ಮುನ್ನೊಂದು ಅರಘಳಿಗೆ ನಿಲ್ಲಗೊಡರು ॥೨॥

ಸುತ್ತಲೆ ಕುಳ್ಳಿರ್ದ ಮಿತ್ರ ಬಾಂಧವರೆಲ್ಲ ।
ಹೊತ್ತು ಹೋಯಿತು ಹೊರಗೆ ಹಾಕೆನುವರೋ ॥

ಹಿತ್ತಲಾ ಕಸಕ್ಕಿಂತ ಅತ್ತತ್ತ ಈ ದೇಹ ।
ಹೊತ್ತು ಕೊಂಡೊಯ್ದು ಅಗ್ನಿಯೊಳು ಬಿಸುಡುವರೋ ॥೩॥

ಹರಣ ಹಿಂಗದ ಮುನ್ನ ಹರಿಯ ಸೇವೆಯ ಮಾಡಿ ।
ಪರಗತಿಗೆ ಸಾಧನ ಮಾಡಿಕೊಳ್ಳೊ ॥
ಕರುಣನಿಧಿ **ಕಾಗಿನೆಲೆಯಾದಿ ಕೇಶವನ** ।
ನಿರುತದಿ ನೆನೆನೆನೆದು ಸುಖಿಯಾಗು ಮರುಳೆ ॥೪॥

**256) ಗೋವಿಂದಾ ನಮೋ ಗೋವಿಂದಾ**

ಗೋವಿಂದಾ ನಮೋ ಗೋವಿಂದಾ ನಮೋ ಗೋವಿಂದಾ ನಾರಯಣಾ
ಗೋವರ್ಧನ ಗಿರಿಯನೆತ್ತಿದ ಗೋವಿಂದಾ ನಮ್ಮನ್ ರಕ್ಷಿಸೋ ॥ಪ॥

ಮಂಚ ಬಾರದು ಮಡದಿ ಬಾರಳು ಕಂಚುಕನ್ನಡಿ ಬಾರದು ।
ಸಂಚಿತಾರ್ಥವ ದ್ರವ್ಯ ಬಾರದು ಮುಂಚೆ ಮಾಡಿರಿ ಧರ್ಮವ ॥೧॥
ಅರ್ಥವ್ಯಾರಿಗೆ ಪುತ್ರರ್ಯಾರಿಗೆ ಮಿತ್ರಬಾಂಧವರ್ಯಾರಿಗೆ ।
ಕರ್ತೃಯಮನವರೆಳೆದು ಒಯ್ವಾಗ ಅರ್ಥಪುತ್ರರು ಕಾಯ್ವರೆ ॥೨॥

ತಂದು ಬಂದರೆ ತನ್ನ ಪುರುಷಗೆ ಹಸಿದುಬಳಲಿದಿ ಎಂಬುವಳು ।
ಒಂದು ದಿನದಲಿ ತಾರದಿದ್ದರೆ ಹಂದಿನಾಯಾಗಿ ಬೊಗಳ್ವೊಳು ॥೩॥
ಪ್ರಾಣದೊಲ್ಲಭೆ ತನ್ನ ಪುರುಷನ ಕಾಣದೆ ನಿಲ್ಲಲಾರಳು ।
ಪ್ರಾಣಹೋಗಲು ಮುಟ್ಟಲಂಜುವಳು ಜಾಣ ಕರೆದರೆ ಬಾರಳು ॥೪॥

ಒಡವೆ ಆಶೆಗೆ ಒಡಲ ಕಿಚ್ಚಿಗೆ ಮಡದಿ ಬೆನ್ನಲಿ ಬಾಹೊಳು । ಜಡಿದು
ಯಮನೊರು ಎಳೆದು ಒಯ್ವಾಗ ಉಡುಗಿ ಬಿದ್ದಿತು ನಾಲಿಗೆ ॥೫॥
ದಿಟ್ಟತನದಲಿ ಪಟ್ಟವಾಳ್ದನ ಮೆಟ್ಟಿದೂಡಿದ ಪಾದವ ।
ಮುಟ್ಟಿ ಭಜಿಸಿರೋ ಸಿರಿ **ಪುರಂದರ ವಿಠ್ಠಲೇಶನ** ಪಾದವಾ ॥೬॥

### 257) ಡಿಂಬದಲ್ಲಿರುವ ಜೀವ

ಡಿಂಬದಲ್ಲಿರುವ ಜೀವ ಕಂಬ ಸೂತ್ರ ಗೊಂಬೆಯಂತೆ ।
ಎಂದಿಗಾದರೊಂದು ದಿನ ಸಾವು ತಪ್ಪದೋ ॥ಪ॥
ಹುಟ್ಟುತ್ತೇನೂ ತರಲಿಲ್ಲ ಸಾಯುತ್ತೇನೂ ಒಯ್ಯಲಿಲ್ಲ ।
ಸುಟ್ಟು ಸುಟ್ಟು ಸುಣ್ಣಧ್ಧರಳು ಆಯಿತೀದೇಹ -೨ ॥
ಹೊಟ್ಟೆ ಬಲು ಕೆಟ್ಟದೆಂದು ಎಷ್ಟು ಕಷ್ಟಮಾಡಿದರೂ ।
ಬಿಟ್ಟು ಹೋಗವಾಗ ಗೇಣು ಬಟ್ಟೆ ಕಾಣದೋ ॥೧॥

ಬೆಳ್ಳಿ ಬಂಗಾರ ಇಟ್ಟುಕೊಂಡು ಒಳ್ಳೆ ವಸ್ತ್ರ ಹೊದ್ದುಕೊಂಡು ।
ಚೆಳ್ಳೆಪಿಳ್ಳೆ ಗೊಂಬೆಯಂತೆ ಆಡಿಹೋದನೇ-೨॥
ಹಳ್ಳ ಹರಿದು ಹೋಗುವಾಗ ಗುಳ್ಳೆ ಬಂದು ಒಡೆಯುವಂತೆ ।
ಗುಳ್ಳೆ ಪೊರೆಯಂತೆ ಕಾಣೋ ಸಂಸಾರದಾಟ ॥೨॥

ವಾರ್ತೆ ಕೀರ್ತಿ ಎಂಬೋ ಎರಡು ಸತ್ತ ಮೇಲೆ ಬಂದವಯ್ಯ ।
ವಸ್ತು ಪ್ರಾಣನಾಯಕನು ಹ್ಯಾಂಗೆ ದೊರಕುವನೋ ॥
ಕರ್ತೃ **ಕಾಗಿನೆಲೆಯಾದಿ ಕೇಶವ**ನ ಚರಣ ಕಮಲ ।
ನಿತ್ಯದಲ್ಲಿ ಭಜಿಸಿ ಸುಖಿಯಾಗಿ ಬಾಳೆಲೋ ॥೩॥

**258) ಕೈ ಮೀರಿ ಹೋದ ಮಾತಿಗೆ**

ಕೈ ಮೀರಿ ಹೋದ ಮಾತಿಗೆ ಮರುಗಬಾರದು ।
ಮೈಮೇಲೆ ಎಚ್ಚರಿಲ್ಲದಲೆ ತಿರುಗಬಾರದು ॥ಪ॥

ತಂದೆ ತಾಯಿ ಮಾತು ಕೇಳದ ಮಕ್ಕಳಿರಲೇ ಬಾರದು ।
ಬಂಧು ಬಳಗದಲ್ಲಿ ಜಗಳವಾಡಬಾರದು ॥೧॥
ನಡತೆ ಹೀನಳಾಗಿ ಹೆಣ್ಣು ಬಾಳಬಾರದು ।
ಕಡು ವೈರತ್ವ ಮಾಡುವವನ ಮಾತು ಕೇಳಬಾರದು ॥೨॥

ಸತಿಸುತರಿಗೆ ಪುರಷ ವಂಚನೆ ಮಾಡಬಾರದು ।
ಅತಿ ಉನ್ಮತ್ತನಾಗಿ ಧರ್ಮ ಅಳಿಯಬಾರದು ॥೩॥
ಆಚಾರವಿಲ್ಲದವರ ಮನೆ ಊಟಮಾಡಬಾರದು ।
ವಿಚಾರವಿಲ್ಲದಾ ಸಭೆಯಲಿ ಕೂಡ್ರಬಾರದು ॥೪॥

ಪಂಕ್ತಿಯೊಳಗೆ ಭೇದ ಮಾಡಿ ಬಡಿಸಬಾರದು ।
ಬಿಂಕದಿಂದ ಪರರ ಮನಸು ನೋಯಿಸಬಾರದು ॥೫॥
ಸಾವುನೋವುಗಳಿಲ್ಲವೆಂದು ತಿಳಿಯಬಾರದು ।
ದೇವನೊಬ್ಬ ನಿರುವನೆಂದು ಮರೆಯಬಾರದು ॥೬॥

ಪರರ ಸಂಪತ್ತು ನೋಡಿ ಮನದಿ ಕೊರಗಬಾರದು ।
ಗುರು **ಪುರಂದರವಿಠ್ಠಲ**ರಾಯನ ಕೊಂಡಾಡದೇ ಇರಲೆಬಾರದು ॥೭॥

## 259) ಸಿರಿ ರಮಣ ತವ

ಸಿರಿ ರಮಣ ತವ ಚರಣ ದೊರಕುವುದು ಹ್ಯಾಂಗನ್ನು ಪರಮ ಪಾಪಿಷ್ಟ ನಾನು ||ಅ|| ನರಹಿರಿಯೆ ನಿನ್ನ ನಾಮಸ್ಮರಣೇ ಮಾಡದೆ | ನರಕದಲಿ ಗುರಿಯಾದೆನೋ ಹರಿಯೇ ||ಅಪ||

ಸಾಕಲ್ಯದಿಂದ ಶಾಲಿಗ್ರಾಮದ ಅಭಿಷೇಕ | ಆಕಳ ಹಾಲಲಿ ಮಾಡದೆ || ನಾಕೆಂಟು ನಾಯಿಗಳ ಸಾಕಿ ಮನಯೊಳು | ಬದುಕ ಬೆಕೆಂದು ಹಾಲ ಹೊಯ್ದೇ || ಕಾಕು ಬುದ್ದಿಗಳಿಂದ ಗುಡುಗುಡಿ ನಶ್ಯಪೂಡೀ | ಹಾಕಿ ಭಂಗಿಯ ಸೇದಿದೆ || ಲೋಕನಿಂದಕನಾಗಿ ಪಾತಕವನ ಹೆಚ್ಚಿ | ಅನೇಕ ಜೂಜುಗಳಾಡಿದೆ | ಹರಿಯೇ ||೧||

ಉತ್ತಮ ಭ್ರಾಹ್ಮಣರ ವೃತ್ತಿಯನೆ ತೆಗೆಸಿ | ಬ್ರಹ್ಮಹತ್ಯಗಾರನು ಎನಿಸಿದೆ || ಮತ್ತೆ ಮುಂಜಿ ಮದುವೆ ಸಮಯಕ್ಕೆ | ನಾ ಹೋಗಿ ಸತ್ತ ಸುದ್ದಿಯ ಕೇಳಿದೆ || ಬಿತ್ತಬಿದ್ದವರ ಬೆನ್ನ್ಹತ್ತಿ ಧೂತರ ಕಳುಹಿ | ಕುತ್ತಿಗೆಯ ನಾ ಕೊಯ್ಸಿದೆ || ಹತ್ತುಜನರಯಂದ ಹೆಣಕೆ ನಿತ್ಯ ಕಲ್ಲು ಹೋಡೆಯುತಿರೆ | ಮೃತ್ಯುದೇವತೆ ಎನಿಸಿದೆ||೨||

ಕ್ಷಿತೀಯೊಳಗೆ ಇನ್ನಾರು ಹಿತವ ಬಯಸುವರೆನಗೆ ಗತಿಯೇನೊ ಪೇಳೊ ಕೊನೆಗೆ | ಸತತ ತವ ಧ್ಯಾನದಲಿ ರತನಾಗಿಯಿರುವ ಸನ್ಮತಿಯನೆ ಪಾಲಿಸೀಗ || ಪತಿತ ಪಾವನನೆಂಬ ಬಿರುದು ಅವನಿಯಮೆಲೆ ಶ್ರುತಿ ಸಾರುತಿದೆಯೊ ಹೀಗೆ || ಕ್ಷಿತೀ ಕಂಠ ನುತ **ಜಗನ್ನಾಥ ವಿಠಲ** ನಿನಗೆ ನೂತಿಸಿ ಮೊರೆ ಹೊಕ್ಕೆ ಹರಿಯೇ|ಹರಿಯೇ

## 260) ಯಾರೇನು ಮಾಡುವರು

ಯಾರೇನು ಮಾಡುವರು ಅವನಿಯೊಳಗೆ ||ಪ||

ಪೂರ್ವಜನ್ಮದ ಕರ್ಮ -೨| ಹಣೆಯಲಿ ಬರೆದುದಕ ||ಅಪ||

ಮಾಡಿದ ಅಡುಗೆಯು ಕೆಡಲು | ಮನೆಯ ಗಂಡನು ಬಿಡಲು-೨

ಕೂಡಿದ್ದ ಸತಿತಾನು ಕುಣಿಸ್ಯಾಡಲು-೨

ಗೋಡಗೆ ಬರೆದ ಹುಲಿ ಗುಢು ಗುಢುಸಿ ತಿನ್ನ ಬರಲು

ಆಡದ ಮಾತುಗಳ-೨| ಅಖಿಳರು ನಿಜವೆನಲು ||೧||

ಹೆತ್ತತಾಯಿ ಮಕ್ಕಳಿಗೆ ಹಿಡಿದು ವಿಷ ಹಾಕಿದರೆ -೨|

ಮತ್ತೆ ತಂದೆಯು ಹೊರಗೆ ಮಾರಿದರೆ-೨||

ತೊತ್ತು ಅರಸಿಗೆ ಪ್ರತಿ ಉತ್ತರವ ನಾಡಿದರೆ-೨|

ಕತ್ತಲೆಯು ಬೆನ್ನಟ್ಟಿ -೨ | ಕರಡ್ಯಾಗಿ ಕಟ್ಟಿದರೆ ||೨||

ಹೊಲ ಬೆಲಿ ಮೆದ್ದರೆ | ಮೊಲವದ್ದು ಇರಿದರೆ-೨|

ತೆಲೆಗೆ ತನ್ನ ಕೈಪೆಟ್ಟು ತಾಕಿದರೆ -೨||

ಹೆರಳು ಹಾವಾಆದರೆ ಗೆಳೆಯರಿಪುವಾದರೆ -೨|

ಕಲಿಸಿದ ಅವಲಕ್ಕಿ -೨ | ಕಲಪರಟಿ ನುಂಗಿದರೆ||೩||

ಏರಿ ಕುಳಿತ ಕೊಂಬೆ ಎರಡಾಗಿ ಮುರಿದರೆ -೨|

ಮೆರೆ ತಿಪ್ಪಿ ವಿಧಿಯು ಮೀರಿದರೆ -೨||

ಆರಿದ್ದ ಇದ್ದಲಿಯು ಅನ್ನ್ಯಾಗಿ ಉರಿದರೇ |

ಧೀರ **ಪುರಂದರ ವಿಠ್ಠಲ**-೨ ನಿನ್ನ ದಯ ತಪ್ಪಿದರೆ ||೪||

## ಹರಿವಾಣ ಸೇವಾ

### 261) ರಂಗ ನಿನ್ನ ಕೊಂಡಾಡುವ

ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ
ಸಂಘ ಸುಖವಿತ್ತು ಕಾಯೋ ಕರುಣ ಸಾಗರ ||ಪ||

ಅರಿಯರೋ ನೀನಲ್ಲದೆ ಮತ್ತನ್ಯ ದೈವರ |
ಮರೆಯರೋ ನೀ ಮಾಡಿದನಿಮಿತ್ತುಪಕಾರವ |
ತೊರೆಯರೋ ನಿನ್ನಂಘ್ರಿ ಸೇವೆ ಪ್ರತಿವಾಸರ |
ಅರಿಯರೋ ಪರತತ್ವವಲ್ಲದೆ ಇತರ ವಿಚಾರ ||೧||

ಮೂಕ ಬಧಿರರಂತಿಪ್ಪರೋ ನೋಳ್ಪ ಜನಕೆ |
ಕಾಕು ಯುಕುತಿಗಳನು ತಾರರೋ ಮನಕೆ |
ಸ್ವೀಕರಿಸರನರ್ಪಿತ ಒಂದು ಕಾಲಕ್ಕೆ |
ಆ ಕೈವಲ್ಯ ಭೋಗ ಸುಖ ಅವರಿಗೆ ಬೇಕೇ ||೨||

ಜಯ-ಅಜಯ ಲಾಭ-ಅಲಾಭಾ ಮಾನ-ಅಪಮಾನ |
ಭಯ-ಅಭಯ ಸುಖ-ದುಃಖ ಲೋಷ್ಟ-ಕಾಂಚನ |
ಪ್ರಿಯ-ಅಪ್ರಿಯ ನಿಂದ-ಸ್ತುತಿಗಳನುದಿನ |
ಶ್ರೀಯರಸ ಚಿಂತಿಸುವರೋ ನಿನ್ನ ಅಧೀನ ||೩||

ಈಶಿತವ್ಯರಂತಿಪ್ಪರೋ ಏಕಾಂತ ಭಕ್ತರು |
ದೇಶ ಕಾಲೋಚಿತ ಧರ್ಮ ಕರ್ಮಾಸಕ್ತರು |
ಆಶಾಕ್ರೋಧ ಲೋಭ ಮೋಹ ಪಾಶ ಮುಕ್ತರು |

ಈ ಸುಜನರೇ ಶಾಪಾನುಗ್ರಹ ಶಕ್ತರು ||೪||

ಕಂಡಕಂಡಲ್ಲಿ ವಿಶ್ವ ರೂಪ ಕಾಂಬೋರೋ |
ಉಂಡು ಉಣಿಸಿದ್ದೆಲ್ಲ ನಿನ್ನ ಯಜ್ಞವೆಂಬೋರೋ |
ಬಂಡುಣಿಯಂದದಿ ನಾಮಾಮೃತವ ಸವಿವರೋ |
ಹೆಂಡಿರು ಮಕ್ಕಳು ನಿನ್ನ ತೊಂಡರೆಂಬೋರೋ ||೫||

ಬಿಡರು ತಮ್ಮ ಸ್ವಧರ್ಮಗಳೇನು ಬಂದರು |
ಬಡರೋ ದೈನ್ಯ ಒಬ್ಬರಿಗೂ ಲೋಕವಂದ್ಯರು |
ಪಿಡಿಯರೊ ನಿನ್ನ ದ್ವೇಶಿಗಳಿಂದೇನು ಬಂದರು |
ಕೊಡುವರೋಬೇಡಿದಿಷ್ಟಾರ್ಥ ನಿತ್ಯಾನಂದರು ||೬||

ನಗುವರೋ ರೋಧಿಸುವರೋ ನಾಟ್ಯವಾಡುವರೋ |
ಬಗೆಯರೊ ಬಡತನ ಭಾಗ್ಯ ಭಾಗವತರೊ |
ತೆಗೆಯರೊ ನಿನ್ನಲಿ ಮನ ಒಮ್ಮೆಯಾದರು |
**ಜಗನ್ನಾಥ ವಿಠಲ** ನಿನ್ನವರೇನು ಧನ್ಯರೋ ||೭||

## 262) ನೆರೆನಂಬಿದ ಮದ್ ಹೃದಯ

ನೆರೆನಂಬಿದ ಮದ್ ಹೃದಯ ಮಂಟಪದೊಳು |
ಪರಿಶೋಭಿಸುತಿರು ಪಾಂಡುರಂಗ ||ಪ||

ಶರಣ ಜನರ ಸಂಸಾರ ಮಹಾಭಯ |
ಹರಣ ಕರುಣ ಸಿರಿ ಪಾಂಡುರಂಗಾ ||ಅ.ಪ||

ನೆರೆದಿಹ ಬಹುಜನರೋಳಿದ್ದರು ಮನ | ಸ್ಥಿರವಿಡು ನಿನ್ನಲಿ ಪಾಂಡುರಂಗ -೨| ಪರಿಪರಿಕೆಲಸವು ನಿನ್ನ ಮಹಾ ಪೂಜೆ | ನಿರುತಯನಗೆ ಕೊಡು ಪಾಂಡುರಂಗ ||೧||

ಪರದೇವನೆ ನಿನ್ನ ಲೀಲಾ ಸ್ಮೃತಿಯನು |ನಿರುತ ಎನಗೆ ಕೊಡು ಪಾಂಡುರಂಗ | ಪರರಾಪೇಕ್ಷೆಯ ಬಿಡಿಸಿ ನಿರಂತರ | ಪರಗತಿ ಪಥ ತೋರೋ ಪಾಂಡುರಂಗ ||೨||

ಸುಖವಾಗಲಿ ಬಹು ದುಃಖವಾಗಲಿ |
ಸಖ ನೀನಾಗಿರು ಪಾಂಡುರಂಗ |
ನಿಖಿಲಾಂತರ್ಗತ ವ್ಯಾಸವಿಠ್ಠಲ ತವ |
ಮುಖ ಪಂಕಜ ತೋರೋ ಪಾಂಡುರಂಗ ||೩||

**263) ದಾಸೋಹಂ ತವ**

ದಾಸೋಹಂ ತವ ದಾಸೋಹಂ ||ಪ||
ವಾಸುದೇವ ವಿಗತಾಘ ಸಂಘತವ ||ಅ.ಪ||

ಜೀವಾಂತರ್ಗತ ಜೀವನಿಯಾಮಕ ಜೀವವಿಲಕ್ಷಣ ಜೀವನದ | ಜೀವಾಧಾರಕ ಜೀವರೂಪ ರಾಜೀವ ಭವ ಜನಕ ಜೀವೆಶ್ವರ ತವ ||೧||

ಕಾಲಾಂತರ್ಗತ ಕಾಲ ನಿಯಾಮಕ ಕಾಲಾತೀತ ತ್ರಿಕಾಲಜ್ಞ | ಕಾಲ ಪ್ರವರ್ತಕ ಕಾಲ ನಿವರ್ತಕ ಕಾಲೋತ್ಪಾದಕ ಕಾಲಮೂರ್ತಿ ತವ ||೨||

ಕರ್ಮ ಕರ್ಮ ಕೃತ ಕರ್ಮಕೃತಾಗಮ ಕರ್ಮಫಲ ಪ್ರದಕರ್ಮಜಿತ ।
ಕರ್ಮಬಂಧ ಮಹ ಕರ್ಮವಿಮೋಚಕ-
ಕರ್ಮನಿಗ್ರಹ ವಿಕರ್ಮ ನಾಶ ತವ ॥೩॥

ಧರ್ಮಯೂಪಮಹ ಧರ್ಮವಿವರ್ಧನ ಧರ್ಮವಿದುತ್ತಮ ಧರ್ಮನಿಧೇ ।
ಧರ್ಮಸೂಕ್ಷ್ಮಮಹ ಧರ್ಮಸಂರಕ್ಷಕ
ಧರ್ಮಸಾಕ್ಷಿ ಯಮಧರ್ಮಪುತ್ರ ತವ ॥೪॥

ಮಂತ್ರಯಂತ್ರಮಹ ಮಂತ್ರಬೀಜ ಮಹ ಮಂತ್ರ ರಾಜಗುರು
ಮಂತ್ರಜಿತ ।ಮಂತ್ರಮೇಯ ಮಹಮಂತ್ರ ಪರಗಮ್ಯ ಪರಮಂತ್ರದೇವ
**ಜಗನ್ನಾಥ ವಿಠಲ** ತವ ॥೫॥

**264) ಡಂಗುರವ ಸಾರಿರಯ್ಯ**

ಡಂಗುರವ ಸಾರಿರಯ್ಯ ಡಿಂಗರಿಗರೆಲ್ಲರು ।
ಭೂಮಂಡಲಕ್ಕೆ ಪಾಂಡುರಂಗ ವಿಠ್ಠಲನೇ ಪರದೈವ ವೆಂದು ॥ಪ॥

ಹರಿಯು ಮುಡಿದ ನಿರ್ಮಾಲ್ಯವ ಹರಿವಾಣದೊಳಗಿಟ್ಟುಕೊಂಡು ।
ಹರುಶದಿಂದ ಹಾಡಿಪಾಡಿ ಕುಣಿದು ಚಪ್ಪಳಿಕ್ಕುತ ॥೧॥

ಒಡಲು ಜಾಂಗಟೆಯ ಮಾಡಿ ನುಡಿವನಾಲಿಗೆ ಘಂಟೆ ಮಾಡಿ ।
ಬಿಡದೆ ಢಣ್ ಢಣ್ ಢಣ್ ಎಂದು ಹೊಡೆದು ಚಪ್ಪಳಿಕ್ಕುತಾ ॥೨॥

ಇಂತು ಈ ಜಗಕೆ ಲಕ್ಷ್ಮೀಕಾಂತನಲ್ಲದಿಲ್ಲವೆಂದು ।
ಸಂತತ ಶ್ರೀ **ಪುರಂದರ ವಿಠ್ಠಲನೆ** ಪರದೈವವೆಂದು ॥೩॥

**265) ಮದ್ವ ಮತದ ಸಿದ್ಧಾಂತದ**

ಮದ್ವ ಮತದ ಸಿದ್ಧಾಂತದ ಪದ್ಧತಿ ಬಿಡಬ್ಯಾಡಿ ||ಪ||

ಬಿಟ್ಟು ಕೆಡಬ್ಯಾಡಿ ಕೆಡಬ್ಯಾಡಿ ||ಅ.ಪ||

ಹರಿಸರ್ವೋತ್ತಮ ಅದೆಂಬ ಜ್ಞಾನವ ತಾರತಮ್ಯದಿಂದ

ತಿಳಿಯುವ ಮಾರ್ಗವ ||೧||

ಘೋರ ಯಮನ ಭಯ ದೂರ ಮಾಡುವ

ಮುರಾರಿಯ ಚರಣವ ತೋರವ ಮಾರ್ಗವ ||೨||

ಭಾರತೀಶ ಮುಖ್ಯಪ್ರಾಣಾಂತರ್ಗತ ನೀರಜಾಕ್ಷ

ನಮ್ಮ **ಪುರಂದರ ವಿಠ್ಠಲನ** ||೩||

**266) ಪರಿಪೂರ್ಣ ಪಾವನಗುಣ**

ಪರಿಪೂರ್ಣ ಪಾವನಗುಣ | ವಿಠಲ ||ಪ||

ನಾರಾಯಣನರ ಕಾಂತಕ ದೇವ -೨ |

ನರದಮುನಿ ಸನ್ನುತ ಚರಣ ||ಅಪ||

ಜಗದಧಾರ ಜನಾರ್ಧನಏ ವಾಮನ -೨ |ಖಗಶೇಖರ ಗಮನಾ

ವಿಠಲ || ಮೃಗಮದ ಪಾಲ ಮಹಿತ ಸುಶೀಲ -೨ |

ನಗಧರ ಗೋಪಾಲ ವಿಠಲ ||೧||

ಗೋವಿಂದಚ್ಯುತ ಗೋವತ್ಸಾರೆ -೨ | ದೇವ ದೇವ ಶೌರಿ ವಿಠಲ ||

ಶ್ರೀವರ ಭೂವರ ಅರಿವಾರಿಜಧರ -೨ |

ಗೋಪಿ ಜನಜಾರ ವಿಠಲ ||೨||

ಅನಿಮಿಷ ಪೂಜಿತ ಆನಂದಾಚ್ಯುತ -೨ । ಮುನಿಮಂಡಲಧ್ಯಾತ
ವಿಠಲ ॥ ಶ್ರೀನಿವಾಸ ಭೂಽವರಹ **ರಘುಪತಿ -೨** ।
**ವಿಠಲ** ವಿಧಿವಿನುತ ವಿಠಲ ॥೩॥

**267) ವಿಠಲಯ್ಯಾ ವಿಠಲಯ್ಯಾ**

ವಿಠಲಯ್ಯಾ ವಿಠಲಯ್ಯಾ ॥ತಟಿತ್ಕೋಟಿ ನಿಭಕಾಯ ಜಗನ್ನಾಥ ॥ಅ.ಪ॥
ಭಜಿಸುವೆ ನಿನ್ನನು ಅಜಭವಸುರನುತ ।
ಭಜಕಾಮರತರು ಕುಜನ ಕುಠಾರ ॥೧॥
ನೀ ಕರುಣಿಸದೆ ನಿರಾಕರಿಸಲು ಎನ್ನ
ಸಾಕುವರಾರೊ ದಯಾಕರ ಮೂರುತಿ ॥೨॥
ಶರಣಾಗತರನು ಪೊರೆವನೆಂಬತವ
ಬಿರುದು ಕಯೊ ಕರಿವರದ **ಜಗನ್ನಾಥ** ॥೩॥

**268) ವಿಠ್ಠಲ ಸಲಹೋ ಸ್ವಾಮಿ**

ವಿಠ್ಠಲ ಸಲಹೋ ಸ್ವಾಮಿ ನಮ್ಮನು ವಿಠ್ಠಲ ಜಗದಂತರ್ಯಾಮಿ ॥ಪ॥
ಎಡಕೆ ವಿಠ್ಠಲ ಬಲಕೆ ವಿಠ್ಠಲ ಎಡಕೆ ಬಲಕೆ ವಿಠ್ಠಲ ॥೧॥
ತಂದೆ ವಿಠ್ಠಲ ತಾಯಿ ವಿಠ್ಠಲ ತಂದೆ ತಾಯಿ ವಿಠ್ಠಲ ॥೨॥
ಬಂಧು ವಿಠ್ಠಲ ಬಳಗ ವಿಠ್ಠಲ ಬಂಧು ಬಳಗ ವಿಠ್ಠಲ ॥೩॥

ಹಗಲು ನಿನ್ನ ನೆನೆಯಲಿಲ್ಲಾ ಹಸಿವೆ ತೃಷೆಯಿಂದ । ರಂಗ
ಇರಳು ನಿನ್ನ ನೆನೆಯಲಿಲ್ಲ ನಿದ್ರೆ ಭರದಿಂದ ।
ಈ ಎರಡರ ಬಾಧೆಗೆ ನಾ ಒಳಗಾದೆನೊ **ಪುರಂದರ ವಿಠಲ** ॥

ರಾಮ ರಾಮ ರಾಮ ರಾಮ ರಾಮ ರಾಮ ರಾಮ ರಾಮ

ಸೀತರಾಮ ಸೀತರಾಮ ಸೀತರಾಮ ಸೀತರಾಮ ಸೀತರಾಮ

ಸೀತರಾಮ ಹರೇ ರಾಮ ಹರೇ ರಾಮ | ರಾಮ ರಾಮ ಹರೇ ಹರೇ |

ಹರೇ ಕೃಷ್ಣ ಹರೇ ಕೃಷ್ಣ | ಕೃಷ್ಣ ಕೃಷ್ಣ ಹರೇ ಹರೇ -೨ |

ರಾಧಾ ಕೃಷ್ಣಜಯ ಕುಂಜಮುರಾರಿ | ಮುರಲಿಧರ ಗೋವರ್ಧನಧಾರಿ|

**ಹರಿಸರ್ವೋತ್ತಮ ವಾಯು ಜೀವೋತ್ತಮ -೨ |**

ವಿಠ್ಠಲ ರುಕುಮಾಯಿ | ವಿಠ್ಠೋಬ ರುಕುಮಾಯಿ -೨ |

ಜಯ ಜಯ ವಿಠ್ಠಲ ಜಯ ಹರಿ ವಿಠ್ಠಲ -೨ |

ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ....................

**!! ಇಂದಿರಾ ರಮಣ ಗೋವಿಂದ ಗೋವಿಂದ !!**

## 269) ಜಯವಾಗಲಿ

ಜಯವಾಗಲಿ | ಸಜ್ಜನ ಸಂತತಿಗೆ

ಶುಭವಾಗಲಿ | ಸಜ್ಜನ ಸಂತತಿಗೆ - || ಪ ||

ದಯದಿಂದೆಮ್ಮಯ ತಾಪಗಳೋಡಿಸಿ

ಭಯಪರಿಹಾರ ಮಾಡಿ | ಶ್ರೀ ಹರಿಪೊರೆಯಲಿ || ಅ.ಪ ||

ಸ್ನಾನ ಧ್ಯಾನ ಜಪ ದೇವತಾರ್ಚನೆ ಬಲು |

ನೇಮದಿಂದಲಿ ಮಾಡಿ ಅತಿಥಿ ಸತ್ಕರಿಸುತ ||

ದಾನ ಧರ್ಮ ಏನೇನೆಸಗಿದ ಕಾರ್ಯ |

ದಾನವಾರ್ಯ ಪ್ರೀತಿ-ಗೊದಗಲೆಂಬುವಗೆ ||೧||

ಪತಿ ಸೇವೆಯೇ ಪರಗತಿಪ್ರದಾಯಕವೆಂದು |
ಇತರ ಹವ್ಯಾsಸವಿಲ್ಲದೆ ಮನೆಗೆಲಸ ||
ಅತಿ ಮುದದಲಿ ಮಾಡಿ | ಹರಿಪದ ಪಾಡುತ |
ಹಿತದಿಂದ ಹರಿಗರ್ಪಿತವೆಂಬ ಸಾಧ್ವಿಗೆ ||೨||

ಮಾಡುವ ಕರ್ಮದ ಮರ್ಮವನರಿತು | ಬೇಡದೈಹಿಕ ಸುಖ
ಸಾಮಗ್ರಿಗಳ || ಗಾಡಿಕಾರ **ಬಾದರಾಯಣ ವಿಠಲನ** |
ಹಾಡಿs ಪಾಡಿ ನಲಿದಾಡೋ ಮಹಾತ್ಮಗೆ ||೩||

**ಲಾಲಿ ಪದ -- ಭಗವಂತನಿಗೆ --**

**270) ಜೋ ಜೋ ಶ್ರೀ ಕೃಷ್ಣಾ**

ಜೋ ಜೋ ಶ್ರೀ ಕೃಷ್ಣಾ ಪರಮಾನಂದ |
ಜೋ ಜೋ ಗೋಪಿಯ ಕಂದ ಮುಕುಂದ - ||ಪ||

ಪಾಲಗಡಲೊಳು ಪವಡಿಸಿದವನೆ |
ಆಲದೆಲೆಯ ಮೇಲೆ ಮಲಗಿದ ಶಿಶುವೆ ||
ಶ್ರೀ ಲತಾಂಗಿಯರ ಚಿತ್ತದೊಲ್ಲಭನೆ |
ಬಾಲ ನಿನ್ನನು ಪಾಡಿ ತೂಗುವೆನಯ್ಯ ||೧||

ಹೊಳೆವಂಥ ರತ್ನದ ತೊಟ್ಟಿಲ ಮೇಲೆ |
ಥಳಿಥಳಿಸುವ ಗುಲಗಂಜಿಯ ಮಾಲೆ ||

ಅಳುವುದ್ಯಾತಕೋ ಎನ್ನಯ ಮುದ್ದು ಬಾಲ ।
ನಳಿನ-ನಾಭ ನಿನ್ನ ಪಾಡಿ ತೂಗುವೆನಯ್ಯ ॥೨॥
ಯಾರ ಕಂದ ನೀ ಯಾರ ನಿಧಿ ನೀ ।
ಯಾರ ರನ್ನವೋ ನೀ ನಾರ ಮಾಣಿಕವೋ ॥
ಸೇರಿತು ಎನಗೊಂದು ಚಿಂತಾಮಣಿ ಎಂದು ।
ಪೋರನೆ ನಿನ್ನನು ಪಾಡಿ ತೂಗುವೆನಯ್ಯ ॥೩॥

ಗುಣನಿಧಿಯೇ ನಿನ್ನ ಎತ್ತಿಕೊಂಡಿದ್ದರೆ ।
ಮನೆಯ ಕೆಲಸವನು ಯಾರು ಮಾಡುವರೋ ॥
ಮನಕೆ-ಸುಖನಿದ್ರೆ ತಂದುಕೋ ಬೇಗನೆ ।
ಫಣಿಶಯನನೆ ನಿನ್ನ ಪಾಡಿ ತೂಗುವೆನಯ್ಯ ॥೪॥

ಅಂಡಜ ವಾಹನ ಅನಂತ ಮಹಿಮ ।
ಪುಂಡರಿಕಾಕ್ಷ ಶ್ರೀ ಪರಮ ಪಾವನ್ನ ॥
ಹಿಂಡು ದೈವದ ಗಂಡ ಉದ್ದಂಡನೆ ।
ಪಾಂಡುರಂಗ ಶ್ರೀ **ಪುರಂದರ ವಿಠಲನೆ** ॥೫॥

**271) ಬ್ರಹ್ಮಮ್ಮಾದ್ರಿಗಳು**

ಬ್ರಹ್ಮಮ್ಮಾದ್ರಿಗಳು ಕ್ಷೀರಸಾಗರಕೆ ಪೋಗಿ ।
ಲಕ್ಷ್ಮೀ ನಾರಯಣರ ಪಾದಕ್ಕೆಯರಗಿ ॥ಪ॥
ಭೂಭಾರಹರಣವನು ಮಾಡಬೇಕಾಗಿ ।
ಇಳಿಯೊಳು ಮನುಜರ ಅವತಾರವಾಗಿ । ಜೋ ಜೋ ॥ಅಪ॥

ಸೂರ್ಯ್ಯ ವಂಶದಲ್ಲಿ ರಾಯ ದಶರಥನು ।
ಸಂತಾನವಾಗ ಬೇಕೆಂದು ಚಿಂತಿಸುತಾ ॥
ಆಶ್ರಮದಿಂದ ವಶೀಷ್ಠರನೆ ಕರೆಸಿ ।
ಪುತ್ರಕಾಮೇಷ್ಠಿಯಂಬೋ ಯಜ್ಞ ಮಾಡಿಸಿದಾ । ಜೋ ಜೋ ॥೧॥

ಚೈತ್ರ ಶುಧ ನವಮಿ ಗುರುವಾರದಲ್ಲಿ ।
ಶ್ರೀರಾಮ ಜನಿಸಿದನು ದಶರಥನಲ್ಲಿ ॥
ಸಂತೋಷವಾಯಿತು ಅಯೋಧ್ಯಯಲ್ಲಿ ।
ಸೂರ್ಯ್ಯಚಂದ್ರಾದಿಗಳು ಸ್ತುತಿಸಿದರಲ್ಲಿ । ಜೋ ಜೋ ॥೨॥

ಜಾತಕರ್ಮವ ಬರೆಸಿ ವಿಪ್ರರನೆ ಕರೆಸೀ ।
ಗುರು ದಕ್ಷಿಣೆಯ ಕೊಟ್ಟು ಭ್ರಾಹ್ಮಣರ ಕರೆಸಿ ॥
ಪುಣ್ಯವಾರ್ಚನೆ ಮಾಡಿ ಮಂತ್ರವನೆ ಜಪಿಸಿ ।
ಸುರರು ಪುಷ್ಪದ ಮಳೆಯ ಸುರಿಸಿದರಲ್ಲಿ ।ಜೋ ಜೋ ॥೩॥

ನಾಮಕರಣವ ಮಾಡಿ ಸಂತೋಷ ಪಡುತಾ ।
ಶ್ರೀರಾಮ ಚಂದ್ರನೆಂಬ ಹೆಸರನ್ನು ಇಡುತಾ ॥
ನಾಲ್ಕು ವೇದಗಳಿಂದ ವಿಸ್ತಾರ ಪಡಿಸುತ್ತಾ ।
**ಪುರಂದರ ವಿಠ್ಠಲನ್ನ** ಪಾಡಿ ತೂಗುತ್ತಾ ।ಜೋ ಜೋ ॥೪॥

**272) ಜೋ ಜೋ ಜೋ ಲಾಲಿ**

ಜೋ ಜೋ ಜೋ ಲಾಲಿ । ಲಾಲಿ ಸುವಾಲಿ ॥ಪ॥

ಭೂಮಿಯ ಚಿನ್ನದ ತೊಟ್ಟಿಲ ಮಾಡಿ ।
ಸೋಮ ಸೂರ್ಯ್ಯರೆಂಬ ಕಲಶವ ಮಾಡಿ ॥
ಆ ಮಹಾ ಆಕಾಶ ಚಂಡಾಟವಾಡಿ ।
ಜೋ ಜೋ ಜೋ ಜೋ । ಜೋ ಎಂದು ಹಾಡಿ ॥೧॥

ವಸುದೇವ ಸುತನಾದ ಮುದ್ದು ಮುರಾರಿ ।
ಅಸುರೆ ಪೂತನಿಯ ಪ್ರಾಣಪಹಾರಿ-೨॥
ಅಸಮ ಸಾಹಸ ಮಲ್ಲ ದೈತ್ಯರ ವೈರಿ -೨॥
ಶಿಶುವಾಗಿ ದೇವಕಿಗೆ ಆನಂದವ ತೋರಿ ॥೨॥

ಬುದ್ಧನಾಗಿ ದೈತ್ಯರ ಆಳಿದೆಯಲ್ಲೋ ।
ಮುದ್ದು ತುರಗವೇರಿ ಕಲ್ಕ್ಯಾದಿಯಲ್ಲಿ -೨॥
ಪದುಮನಾಭ ಶ್ರೀ ಭಕ್ತವತ್ಸಲನೇ -೨॥
ನಿದ್ದೆಯ ಮಾಡಯ್ಯ ಶ್ರೀರಂಗ ವಿಠ್ಠಲ ॥೩॥

**273) ತೂಗಿರೆ ರಂಗನ ತೂಗಿರೆ**

ತೂಗಿರೆ ರಂಗನ ತೂಗಿರೆ ಕೃಷ್ಣನ ।
ತೂಗಿರೆ ಅಚ್ಯುತಾನಂತನ ॥ಪ॥
ತೂಗಿರೆ ವರಗಿರಿ ಅಪ್ಪ ತಿಮ್ಮಪ್ಪನ ।
ತೂಗಿರೆ ಕಾವೇರಿ ರಂಗಯ್ಯನ ॥ಅ.ಪ॥

ನಾಗಲೋಕದಲ್ಲಿ ನಾರಾಯಣ ಮಲಗ್ಯಾನೆ ।
ನಾಗಕನ್ನಿಕೆಯರು ತೂಗಿರೆ ।

ನಾಗವೇಣಿಯರು ನೇಣು ಪಿಡಿದುಕೊಂಡು ।
ಬೇಗನೆ ತೊಟ್ಟಿಲ ತೂಗಿರೆ ॥೧॥

ಇಂದ್ರ ಲೋಕದಲ್ಲಿ ಉಪೇಂದ್ರ ಮಲಗ್ಯಾನೆ ।
ಇಂದು ಮುಖಿಯರೆಲ್ಲ ತೂಗಿರೆ ।
ಇಂದ್ರ ಕನ್ನಿಕೆಯರು ಚಂದದಿ ಬಂದು ।
ಮುಕುಂದನ ತೊಟ್ಟಿಲ ತೂಗಿರೆ ॥೨॥

ಆಲದೆಲೆಯ ಮೇಲೆ ಶ್ರೀ ಲೋಲ ಮಲಗ್ಯಾನೆ ।
ನೀಲಕುಂತಳೆಯರು ತೂಗಿರೆ ।
ವ್ಯಾಳಶಯನ ಹರಿ ಮಲಗು ಮಲಗು ಎಂದು ।
ಬಾಲಕೃಷ್ಣಯ್ಯನ ತೂಗಿರೆ ॥೩॥

ಸಾಸಿರ ನಾಮನೆ ಸರ್ವೋತ್ತಮನೆಂದು ।
ಸೂಸುತ್ತ ತೊಟ್ಟಿಲ ತೂಗಿರೆ ।
ಲೇಸಾಗಿ ಮಡುವಿನೊಳ್ ಶೇಷನ ತುಳಿದಿಟ್ಟ ।
ದೋಷವಿದೂರನ ತೂಗಿರೆ ॥೪॥

ಅರಳೆಲೆ ಮಾಗಾಯಿ ಕೊರಳ ಮುತ್ತಿನ ಹಾರ ।
ತರಳನ ತೊಟ್ಟಿಲ ತೂಗಿರೆ ।
ಸಿರಿದೇವಿ ರಮಣನೆ **ಪುರಂದರ ವಿಠ್ಠಲನ** ।
ಕರುಣದಿ ಮಲಗೆಂದು ತೂಗಿರೆ ॥೫॥

## 274) ತೂಗಿರೆ ರಾಯರ ತೂಗಿರೆ ಗುರುಗಳ

ತೂಗಿರೆ ರಾಯರ ತೂಗಿರೆ ಗುರುಗಳ ತೂಗಿರೆ ಯತಿಕುಲ ತಿಲಕರ ।
ತೂಗಿರೆ ಯೋಗೀಂದ್ರ ಕರಕಮಲ ಪೂಜ್ಯರ ।
ತೂಗಿರೆ ಗುರುರಾಘವೇಂದ್ರರ ॥ಪ॥

ಕುಂದಣಮಯವಾದ ಚಂದ ತೊಟ್ಟಿಲದೊಳ್ ।
ಅಂದದಿ ಮಲಗ್ಯಾರ ತೂಗಿರೆ ।
ನಂದನಂದನ ಗೋऽವಿಂದ ಮುಕುಂದ ।
ಆನಂದದಿ ಭಜಿಪರ ತೂಗಿರೆ ॥೧॥

ಯೋಗ ನಿದ್ರೆಯನ್ನು ಬೇಗನೆ ಮಾಡುವ
ಯೋಗೀಶವಂದ್ಯರ ತೂಗಿರೆ ।
ಭೋಗಿಶಯನನ ಪಾದ ಯೋಗದಿ
ಭಜಿಪರ ಭಾಗವತರನ್ನ ತೂಗಿರೆ ॥೨॥

ನೇಮದಿ ತಮ್ಮನ್ನು ಕಾಮಿಪ ಜನರಿಗೆ
ಕಾಮಿತ ಕೊಡುವವರ ತೂಗಿರೆ ।
ಪ್ರೇಮದಿ ನಿಜಜನರು ಆಮಯ ವನಕುಲ
ಧೂಮಕೇತೆನಿಪರ ತೂಗಿರೆ ॥೩॥

ಅದ್ವೈತ ಮತವನ್ನು ವಿಧ್ವಂಸ ಮಾಡಿದ
ಮಧ್ವಮತೋದ್ಧರನ ತೂಗಿರೆ ।

ಶುದ್ಧ ಸಂಕಲ್ಪದಿ ಬದ್ಧ ನಿಜ ಭಕ್ತರ
ಉದ್ಧಾರ ಮಾಳ್ಪರ ತೂಗಿರೆ ॥೪॥

ಭಜಕ ಜನರ ಭವ ತ್ಯಜನೆಯ
ಮಾಡಿಸಿ ನಿಜಗತಿ ಇಪ್ಪರ ತೂಗಿರೆ ।
ನಿಜಗುರು **ಜಗನ್ನಾಥ ವಿಠಲನ** ಪಾದವ
ಭಜನೆಯ ಮಾಳ್ಪರ ತೂಗಿರೆ ॥೫॥

**275) ಜಯ ಮಂಗಳಮ್ ನಿತ್ಯ ಶುಭ ಮಂಗಳಮ್**

ಜಯ ಮಂಗಳಮ್ ನಿತ್ಯ ಶುಭ ಮಂಗಳಮ್ ॥ಪ॥
ಇಂದಿವರಾಕ್ಷಗೆ ಇಹರಾಜವರದಗೆ।
ಇಂದಿರಾರಮಣ ಗೋವಿಂದ ಹರಿಗೆ ॥
ನಂದನ ಕಂದಗೆ ನವನೀತ ಚೋರಗೆ ।
ವೃಂದಾರಕೇಂದ್ರ ಉಡಪಿ ಕೃಷ್ಣಗೆ ॥೧॥

ಕ್ಷೀರಾಬ್ಧಿವಾಸಗೆ ಕ್ಷೀತಿಜನಪಾಲಗೆ ।
ಮಾರನ್ನ ಪಡೆದ ಮಂಗಳ ಮುರ್ತಿಗೆ ॥
ಚಾರು ಚರಣಗಳಿಂದ ಚಲುವ ಗಂಗೆಯ ಪಡೆದ ।
ಕಾರುಣ್ಯ ಮೂರ್ತಿ ಕೌಸ್ತುಬಧಾರಗೆ ॥೨॥

ವ್ಯಾಸಾವತಾರಗೆ ವೇದ ಉದ್ಧಾರಗೆ । ವಾಸಿತಾನಂದ ಪದ ಸಕಲೇಶ ಹರಿಗೆ ॥ ವಾಸುದೇವ ಮೂರ್ತಿ **ಪುರಂದರ ವಿಠಲಗೆ** ।
ದಾಸರನು ಕಾಯ್ವ ರುಕ್ಮಿಣೀರಮಣಗೆ ॥೩॥

**274) ಮಂಗಳಮ್ ಜಯ ಮಂಗಳಮ್**

ಮಂಗಳಮ್ ಜಯ ಮಂಗಳಮ್ ||ಪ||

ವರ ವೈಕುಂಠದಿ ಬಂದವಗೆ | ವರ ಗಿರಿಯಲಿ ಸಂಚರಿಸುವವಗೆ |
ವರಾಹ ದೇವನ ಅನುಸರಿಸಿ ಸ್ವಾಮಿ || ಪುಷ್ಕರಿಣಿ ತೀರದಲ್ಲಿರುವವಗೆ ||೧||

ಸರಸದಿ ಬೇಟೆಗೆ ಹೊರಟವಗೆ | ಸರಸಿಜಾಕ್ಷಿಯಳ ಕಂಡವಗೆ |
ಮರುಳಾಟದಿ ತಾ ಪರವಶನಾಗುತ ಕೊರವಿ ವೇಷ ಧರಿಸಿದವಗೆ ||೨||

ಗಗನ ರಾಜಪುರಕ್ಹೋದವಗೆ | ಬಗೆ ಬಗೆ ನುಡಿಗಳ ನುಡಿದವಗೆ |
ಅಗವಾಸಿಗೆ ನಿನ್ನ ಮಗಳನು ಕೊಡು ಎಂದು ||
ಗಗನ ರಾಜನ ಸತಿಗ್ಹೇಳ್ದವಗೆ ||೩||

ತನ್ನ ಕಾರ್‍ಯ್ಯ ತಾ ಮಾಡ್ದವಗೆ | ಇನ್ನೊಬ್ಬರ ಹೆಸರು ಹೇಳ್ದವಗೆ |
ಮುನ್ನ ಮದುವೆಯ ನಿಶ್ಚಯವಾಗಲು|| ತನ್ನ ಬಳಗ ತಾ ಕರೆಸಿದವಗೆ ||೪||

ಎತ್ತಿನಿಬ್ಬಣ ಹೊರಟವಗೆ | ನಿತ್ಯ ತೃಪ್ತನಾಗಿರುವವಗೆ |
ಉತ್ತರಣಿಯ ವಾಗರನುಂಡು | ತೃಪ್ತನಾಗಿ ತೇಗಿರುವವಗೆ ||೫||

ಒದಗಿ ಮುಹೂರ್ತಕ ಬಂದವಗೆ | ಸದಯ ಹೃದಯನಾಗಿರುವವಗೆ |
ಮುದದಿಂದಲೆ ಶ್ರೀ ಪದುಮಾವತಿಯಳ |
ಮದುವೆ ಮಾಡಿಕೊಂಡ ಮದುಮಗಗೆ ||೬||

ಕಾಂತೆಯಿಂದ ಸಹಿತಾದವಗೆ | ಸಂತೋಷದಿ ಕುಳಿತಿರುವವಗೆ |
ಸಂತತ **ಶ್ರೀಮದನಂತಾದ್ರೀಶಗೆ** ||

ಶಾಂತ ಮೂರುತಿ ಸರ್ವೋತ್ತಮಗೆ ||೭||

**276) ಜಯ ಮಂಗಳಂ ನಿತ್ಯ**

ಜಯ ಮಂಗಳಂ ನಿತ್ಯ ಶುಭ ಮಂಗಳಂ ||ಪ||

ವಸುದೇವ ತನಯನಿಗೆ ವೈಕುಂಠ ನಿಲಯನಿಗೆ | ಕುಸುಮನಾಭನಿಗೆ ಕೋಮಲರೂಪಗೆ | ಯಶೋದೆ ನಂದನಗೆ ವಸುಧೆಯ ರಮಣನಿಗೆ | ನಸುನಗೆಯೊಳೊಪ್ಪುವ ನರಸಿಂಹಗೆ ||೧||

ಕನಕಕಿರೀಟನಿಗೆ ಕಸ್ತೂರಿ ತಿಲಕನಿಗೆ | ಕನಕಕುಂಡಲನಿಗೆ ಕೌಸ್ತುಭಹಾರಗೆ | ಕನಕಾಂಬರನಿಗೆ ಕಾರುಣ್ಯರೂಪನಿಗೆ | ಸನಕಾದಿವಂದ್ಯನಿಗೆ ನರಸಿಂಹಗೆ ||೨||

ಪಂಕಜ ನಾಭನಿಗೆ ಪಾಂಚಾಲಿ ರಕ್ಷಕಗೆ | ಲಂಕೆಯನು ವಿಭೀಷಣ ನಿಗಿತ್ತವಗೆ | ಕುಂಕುಮಾಂಕಿತನಿಗೆ ಕುವಲಯ ನೇತ್ರನಿಗೆ | ಬಿಂಕದಿಂದಲಿ ಮೆರೆವ ನರಸಿಂಹಗೆ ||೩||

ಪಕ್ಷಿವಾಹನನಿಗೆ ಪರಮಪಾವನನಿಗೆ | ಕುಕ್ಷಿಯೊಳು ಜಗವನಿಂಬಿಟ್ಟವನಿಗೆ | ಲಕ್ಷುಮೀ ಕಾಂತನಿಗೆ ಲಕ್ಷಣವಂತನಿಗೆ | ಲಕ್ಷಣ ದೊಳೊಪ್ಪುವ ನರಸಿಂಹಗೆ ||೪||

ಭಕ್ತವತ್ಸಲನಿಗೆ ಭವದುಃಖದೂರನಿಗೆ | ಮುಕ್ತಿದಾಯಕಗೆ ಚಿನ್ಮಯ ರೂಪಗೆ | ಮಿತ್ರೆ ರುಕ್ಮಿಣಿಗೆ ಸತ್ಯಭಾಮೆಯರಸನಿಗೆ | ನಿತ್ಯ ಕಲ್ಯಾಣ **ಶ್ರೀಹಯವದನಗೆ** ||೫||

ಕಾಯೇನ ವಾಚಾ ಮನಸೇಂದ್ರಿಯೈರ್ವಾ ।
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವತ್ ॥
ಕರೋಮಿ ಯದ್ಯತ್ ಸಕಲಂ ಪರಸ್ಮೈ ।
ನಾರಾಯಣಾಯೇತಿ ಸಮರ್ಪಯಾಮಿ ॥

ಹರೆ ರಾಮ ಹರೆ ರಾಮ । ರಾಮ ರಾಮ ಹರೆ ಹರೆ
ಹರೆ ಕೃಷ್ಣ ಹರೆ ಕೃಷ್ಣ । ಕೃಷ್ಣ ಕೃಷ್ಣ ಹರೆ ಹರೆ

# ॥ ಶ್ರೀ ಕೃಷ್ಣಾರ್ಪಣಮಸ್ತು ॥

